THE BOOK WAS DRENCHED

TEXT LITE WITHIN THE BOOK ONLY

UNIVERSAL LIBRARY
OU_200117
UNIVERSAL LIBRARY

ಲಲಿತ ಸಾಹಿತ್ಯಮಾಲೆಯ ಮೂವತ್ತೇಳನೆಯ ಕುಡಿ
ಎಂಟನೆಯ ವರುಷದ ನಾಲ್ಕನೆಯ ಪ್ರಕಟನೆ

# ಈ ಪರಿಯ ಸೊಬಗು

ಕಾದಂಬರಿ

ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ

ವಿ. ಎಂ. ಇನಾಂದಾರ್

ಉತ್ತಮ ಪ್ರತಿ
೩-೦-೦

ಅಗಸ್ಟ್ ೧೯೫೩

ಸಾದಾ ಪ್ರತಿ
೨-೦-೦

ಸಂಪಾದಕರು-ಪ್ರಕಾಶಕರು
ಚುಳಕಿ ಗೋವಿಂದರಾಯರು
ಲಲಿತ ಸಾಹಿತ್ಯಮಾಲೆ, ಧಾರವಾಡ

ಮಾರಾಟಗಾರರು :
ಮನೋಹರ ಗ್ರಂಥ ಭಾಂಡಾರ, ಧಾರವಾಡ
ಕನ್ನಡ ಪುಸ್ತಕಾಲಯ, ಬೆಳಗಾವಿ

ಮುದ್ರಕರು :
ಎಸ್. ಎಮ್. ಕುಲಕರ್ಣಿ
ಲಲಿತ ಮುದ್ರಣಾಲಯ, ಧಾರವಾಡ

# ಸಂಪಾದಕರ ಮಾತು

‘ಈ ಪರಿಯ ಸೊಬಗು’ ಕಾದಂಬರಿಯು ಪ್ರಕಟನೆಯಿಂದ ಮಾಲೆ ತನ್ನ ಎಂಟನೆಯ ವರುಷದ ಋಣಭಾರವಿಳಿಸಿಕೊಂಡಂತಾಯಿತು.

ಸಾಹಿತ್ಯ ಕೃತಿಗಳ ಪ್ರಕಟನೆ ನಿಯತಕಾಲಿಕವಾಗಿ ನಡೆಯಬೇಕಾದರೆ— ಕನ್ನಡ ಪುಸ್ತಕಗಳ ಪೇಟೆಯ ಅನಿಶ್ಚಿತ ವ್ಯಾಪಾರವನ್ನು ಬದಿಗಿಟ್ಟರೂ— ಕೃತಿ ರಚನೆ ಸಮಯಾನಿಷ್ಠವಾಗುವಷ್ಟು ಯಾಂತ್ರಿಕವಾಗಲಾರದು. ಕೃತಿಗಳ ಆಯ್ಕೆಯೂ ಹಾಗೆಯೇ. ಆದ್ದರಿಂದ ಪುಸ್ತಕ ಪ್ರಕಾಶನ ಎಷ್ಟು ಮುಂಧೋರಣೆಯಿಂದ ನಡೆದರೂ ಒಂದಿಷ್ಟು ವಿಲಂಬವಾದರೆ ಆಶ್ಚರ್ಯಪಡಬೇಕಾಗಿಲ್ಲ. ಆದರೆ ಒಳ್ಳೊಳ್ಳೆಯ ಕೃತಿಗಳನ್ನು ಪ್ರಕಟಿಸಿದರೆ ಈ ವಿಲಂಬವನ್ನು ಚಂದಾದಾರರು ಮನ್ನಿಸುವರೆಂದು ನಮ್ಮ ನಂಬಿಕೆ. ಯಾಕೆಂದರೆ ಅವರು ಓದುವ ಪುಸ್ತಕಗಳು ಚಿರಂತನವಾದ ಮಾನವೀಯತೆಯನ್ನು ಪೃಥಃಕರಿಸುತ್ತವೆ.

ಈ ಕೃತಿಯ ಕರ್ತೃ ಪ್ರೊ. ಇನಾಂದಾರರು ಆಗಲೆ ಕನ್ನಡಕ್ಕೆ ಏಳು ಕಾದಂಬರಿಗಳನ್ನು ಕೊಡಮಾಡಿದ್ದಾರೆ. ಇದು ಎಂಟನೆಯದು. ಶ್ರೀಯುತರು ಈ ಮೊದಲಿನ ತಮ್ಮ ಕೃತಿಗಳಲ್ಲಿ ಸಮಾಜಜೀವನದ ಅಂದಂದಿನ ಸಮಸ್ಯೆಗಳನ್ನು ಎದುರಿಸಿದ್ದರೆ ಇಲ್ಲಿ— ಈ ಕೃತಿಯಲ್ಲಿ ಅನಂತಕಾಲದ ಸತ್ವವನ್ನು ಕೆಣಕಿದ್ದಾರೆ. ವ್ಯಕ್ತಿ ಜೀವನದ ಒಂದು ಘಟನೆ ಮಾನವನ ಮಹಾಜೀವನದ ಸನ್ನಾಹದ ಪ್ರತಿಫಲವಾಗಿ ನಡೆಯುತ್ತದೆ. ಅದನ್ನು ನೋಡುವ ನೋಟದ ಹರವು ತನ್ನ ಪರಿಮಿತ ಕ್ಷೇತ್ರದಲ್ಲಿ ಕಾರ್ಯ-ಕಾರಣಗಳನ್ನು ಅರಸುತ್ತದೆ— ಮಾತ್ರ. ಇಂಥ ಒಂದು ವಿಚಾರ-ವಿಶ್ಲೇಷಣೆ ಇಲ್ಲಿ ನಡೆದಿದೆ.

ಪ್ರೊ. ಇನಾಂದಾರರು ಮಾಲೆಯ ಮೇಲಿನ ಅಭಿಮಾನದಿಂದ, ನಮ್ಮಲ್ಲಿಯ ಆತ್ಮೀಯತೆಯಿಂದ ತಮ್ಮ ಈ ಕೃತಿಯ ಪ್ರಕಟನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ನಾವು ಅತ್ಯಂತ ಋಣಿಯಾಗಿದ್ದೇವೆ.

ಒಂಬತ್ತನೆಯ ವರುಷದ ಪ್ರಕಟನೆಯ ಆದಿಯು ಶ್ರೀರಂಗರ ‘ಅನಾದಿ’ ಎಂಬ ಕಾದಂಬರಿ. ಚಂದಾದಾರರಿಗೆ ಇದಕ್ಕಿಂತ ಹೆಚ್ಚಿನ ಆಕರ್ಷಣೆ ಯಾವುದಿದ್ದೀತು ?

ಧಾರವಾಡ **ಲಲಿತ ಸಾಹಿತ್ಯಮಾಲೆ**

೧೧-೮-೫೩

# ಪ್ರಮೇಯ

"ನಮ್ಮ ಮನೆತನದಲ್ಲಿ ಒಂದು ಮದುವೆ ಎಂದರೆ ಒಂದು ಸಾವು ಎಂದು ಕಾಣುತ್ತದೆ" ಎಂದು ಒಂದು ಸಂದರ್ಭದಲ್ಲಿ (ಪು. ೧೪೪) ಈ ಕಾದಂಬರಿಯ ಪಾತ್ರವೊಂದು ನುಡಿಯುತ್ತದೆ. "ಅದು ಕಾಕತಾಲೀಯ ನ್ಯಾಯ" ಎಂದು ಇನ್ನೊಂದು ಪಾತ್ರದ ಉತ್ತರ. ಆದರೆ ಈ ಸೃಷ್ಟಿಯಲ್ಲಿ ಕಾಕತಾಲೀಯ ನ್ಯಾಯ ಎಂಬುದೆ ಹೆಚ್ಚು ನಿಜವಿದ್ದಂತೆ ತೋರುವುದು. ಯಾವುದೆ ಘಟನೆ ನಮಗೆ ತಿಳಿಯುವುದು ಕಾಲ ಮತ್ತು ದೇಶಗಳ ಪರಿಮಿತಿಯಲ್ಲಿ. ಆದರೆ ಕಾಲ ಮತ್ತು ದೇಶಗಳ ನಮ್ಮ ಜ್ಞಾನವೆ ಅಪೂರ್ಣವಾಗಿದ್ದಾಗ ಆ ಘಟನೆಯ ಜ್ಞಾನ ನಮಗೆ ಆಗುವುದು ಹೇಗೆ ? ನಮಗೆ ಗೋಚರವಾಗಬಲ್ಲ ಕೊನೆಯ ಪೂರ್ವಭಾವಿ ನಮಗೆ 'ಕಾರಣ' ಎನ್ನಿಸುವುದು. ಆದರೆ ಆ ಕಾರಣವೂ ಮುಂಚಿನ ಮತ್ತೊಂದು ಕಾರಣದ ಕಾರ್ಯವಾಗಿರಬಾರದೇಕೆ ? ಇದಲ್ಲದೆ ಒಂದು ಕಾರ್ಯಕ್ಕೆ ಒಂದೇ ಕಾರಣ ಎಂದು ಹೇಗೆ ಹೇಳಲಾದೀತು ? ಅಪರಿಮಿತ ಕಾಲದ ಅಗ್ನಿಯಲ್ಲಿ, ಅಮರ್ಯಾದಿತ 'ದೇಶ'ದ ಮೇಲೆ ಸದಾ ಪಕ್ವವಾಗುತ್ತಲಿದ್ದ ಸೃಷ್ಟಿಯ ವ್ಯಾಪ್ತಿಯನ್ನು ತನಗೆ ತಿಳಿದ ಮಟ್ಟಿಗೆ ಮರ್ಯಾದಿತಗೊಳಿಸಿಕೊಂಡಿದ್ದಾನೆ ಮಾನವನು.

ಈ ಕಾದಂಬರಿಯೊಳಗಿನ ಶಾಸ್ತ್ರಿಗಳು ಇಂತಹ ಒಂದು ಪ್ರಮೇಯವನ್ನೆ ತಮ್ಮ ಅನುಭವವನ್ನಾಗಿಸಿ ನಮ್ಮೆದುರು ನಿಲ್ಲಿಸಿದ್ದಾರೆ. ವರ್ತಮಾನವೆ ಆಗಲಿ, ಭವಿಷ್ಯವೆ ಆಗಲಿ ನಾನು ಮಾಡುವೆ, ನಾನು ತಡೆಯುವೆ ಎಂಬುದು ಮಾನವನಿಗೆ ಶಕ್ಯವಿದೆಯೆ? ಆಗುವುದು ಆಗಿಯೆ ತೀರುವುದು ಎಂದು ಒಪ್ಪಿದರೆ ಸೃಷ್ಟಿಯಲ್ಲಿ ಮಾನವನಿಗೆ ಯಾವ ಯೋಗ್ಯತೆ ಉಳಿಯುವುದು ? ನಡೆಯುವುದನ್ನು ತಡೆಯುವುದೆಂಬುದಾಗಲಿ ತಪ್ಪಿಸುವುದೆಂಬುದಾಗಲಿ ಅಜ್ಞಾನದ ಲಕ್ಷಣ; ತಪ್ಪಿಸುವುದು ಇಲ್ಲವೆ ತಡೆಯುವುದು ಅಶಕ್ಯವೆಂಬುದಕ್ಕಾಗಿ ನಿಷ್ಕ್ರಿಯನಾಗುವುದು ಬುದ್ಧಿಯ ಅಭಾವದ ಲಕ್ಷಣ. ತಮ್ಮ ಹಿರಿಯರು ನಾಲ್ಕು ದಿವಸಕ್ಕೆಂದು ಬಂದು ಅಲ್ಲಿ ನೆಲಸದಿದ್ದರೆ ತಾವೂ ಅಲ್ಲಿ ಇರುತ್ತಿರಲಿಲ್ಲ, ಆಗ ತಮ್ಮ

ಮಗಳ ಈ ಮದುವೆಯ ಪ್ರಶ್ನವು ಏಳುತ್ತಿರಲಿಲ್ಲ. ಅಂದಿನ ಆ ಮೂಲ ಕಾರಣವನ್ನು ತಡೆಯಲು ಅಸಮರ್ಥರಾದವರು ಇಂದಿನ ಆದರ ಪರಿಣಾಮ ವನ್ನು ತಡೆಯುವುದೆಂದರೆ, ಬೀಜವನ್ನು ಹಾಗೇ ಬಿಟ್ಟು ಮೇಲಿನ ಮರವನ್ನು ಕಡಿದಂತೆ. ಹಾಗಾದರೆ ಮಾರ್ಗ ಯಾವುದು ? ಜ್ಞಾನ ಎಲ್ಲಿದೆ ? ಸಾಯು ವುದು ತಪ್ಪಿಲ್ಲವಾದರೂ ಬದುಕಿಗಾಗಿ ಆಸಕ್ತಿ ಇದ್ದುದು ಸೃಷ್ಟಿಗೆ ಸಹಜ ತತ್ತ್ವವಾದಂತೆ, ಆಗಬೇಕಾದುದನ್ನು ತಡೆಯದಾಗದಿದ್ದರೂ ತನ್ನ "ಕರ್ತವ್ಯ" ವನ್ನು ನೆರವೇರಿಸುವುದು ಮಾನವನಿಗೂ ಸಹಜ ಧರ್ಮ. ಇದೇ ಈ ಪರಿಯ ಸೊಬಗು ಎಂದು ನಾನು ತಿಳಿದಿದ್ದೇನೆ.

ಪಂಚವಟಿ, ಧಾರವಾಡ
೧೨–೮–೫೩

ಶ್ರೀರಂಗ

# ಅರಿಕೆ

ಈ ಕಾದಂಬರಿಯ ಕೊನೆಯಲ್ಲಿ ನಡೆಯುವಂಥ ಒಂದು ಸಂಗತಿ ಎಲ್ಲಿಯೊ ಒಂದೆಡೆ ನಡೆಯಿತೆಂದು ವೃತ್ತಪತ್ರದಲ್ಲಿ ಓದಿದ್ದೆ. ಇದು ಹೀಗೇಕೆ ನಡೆಯಿತು ? ಹೀಗೇಕೆ ನಡೆಯಬೇಕು ? ಎಂದು ಮುಂತಾಗಿ ಯೋಚಿಸುತ್ತಿದ್ದಾಗ ಕಾದಂಬರಿಯ ರೂಪರೇಷೆ ಮನಸ್ಸಿನೆದುರು ನಿಂತಿತು. ಕೊನೆಯಲ್ಲಿ ನಡೆಯುವ ಈ ವಿಘಟನೆಯನ್ನು ತಿಳಿಯಬೇಕೆಂಬ ಕುತೂಹಲವುಂಟಾಯಿತು. ನನ್ನ ಕುತೂಹಲಕ್ಕೊಂದು ಉತ್ತರವೆಂದು ಸಹಜಸಾಧ್ಯವಾದ ಹಿನ್ನೆಲೆಯನ್ನೆಲ್ಲ ಕಲ್ಪಿಸಿಕೊಂಡೆ. ಆದ್ದರಿಂದ ಇಲ್ಲಿ ಹಿನ್ನೆಲೆಯಾಗಿ ನಿಂತ ಒಂದು ವಾತಾವರಣ, ವ್ಯಕ್ತಿಗಳ ಆಸೆ ಅಪೇಕ್ಷೆಗಳು ಕೊನೆಯಲ್ಲಿ ನಡೆಯಲಿದ್ದುದನ್ನು ರೂಪಿಸುವುದರಲ್ಲಿ ನಿರ್ಣಾಯಕವಾದ ಶಕ್ತಿಗಳಾಗಿ ನಿಂತುವು ಎಂದು ನಂಬಿ ಹಾಗೆ ಚಿತ್ರಿಸಿದ್ದೇನೆ. ಅದೇ ಒಂದು ಕತೆ. ಇಂದು ನಡೆಯುವ ಒಂದು ಸಂಗತಿ ಸಾಮಾನ್ಯ ದೃಷ್ಟಿಗೆ ಪೂರ್ವಾಪರ ಸಂಬಂಧವಿಲ್ಲದ್ದಾಗಿ, ಆಕಸ್ಮಾತ್ತಾಗಿ ಕಾಣಬಹುದು. ಆದರೆ ಯಾವ ಸಂಗತಿಯೂ ಈ ಪ್ರಪಂಚದಲ್ಲಿ ಆಕಸ್ಮಾತ್ತಾಗಿ ನಡೆಯುವುದಿಲ್ಲ. ಅದಕ್ಕಾಗಿ ಅನುಗಾಲವೂ ಪೂರ್ವಸಿದ್ಧತೆ ನಡೆದಿರುತ್ತದೆ. ನಮ್ಮ ಕಣ್ಣಿಗೆ ಕಾಣದ ಹಾಗೆ, ನಮ್ಮ ಪರಿಮಿತ ಬುದ್ಧಿಗೆ ಗೋಚರಿಸದ ಹಾಗೆ ಈ ಸಿದ್ಧತೆ ಅನಾದಿಕಾಲದಿಂದಲೂ ನಡೆದಿರಬೇಕು; ನಡೆದಿರುತ್ತದೆ. ಕಾರ್ಯಕಾರಣ ಸಂಬಂಧ ಇದ್ದೇ ತೀರಬೇಕು. ಇಂಥ ಪೂರ್ವಸಿದ್ಧತೆಯ ಒಂದೆರಡು ಅಂಶಗಳನ್ನು ಮಾತ್ರ ಎತ್ತಿಕೊಂಡು ಇದು ಹೀಗಿರಬಹುದೆ ? ಎಂಬ ಸೂಚನೆಯನ್ನು ಕೊಡಬಯಸಿದ್ದೇನೆ. ಇದು ಹೀಗೆ, ಇದು ಇಷ್ಟು, ಎಂದು ನಿಕೃಷ್ಟವಾದ ಅಭಿಪ್ರಾಯವನ್ನು ಹೇಳುವ ಧೈರ್ಯ ನನಗಿಲ್ಲ. ನನಗಿಂತಲೂ ತಿಳಿದವರಾದ ಶಾಸ್ತ್ರಿಗಳಿಗೆಯೆ ಆ ಧೈರ್ಯ ಬರಲಿಲ್ಲ ಅಲ್ಲದೆ ಇಲ್ಲಿ ಎತ್ತಿ ತೋರಿಸಲಾದ ಒಂದೆರಡು ಅಂಶಗಳ ಹೊರತಾಗಿ ಇನ್ನೂ ಸಾವಿರಾರು ಅಂಶಗಳು ತಮ್ಮ ಪ್ರಭಾವವನ್ನು ಬೀರಿ ನಡೆದ ವಿಘಟನೆಯನ್ನು ಸಾಧ್ಯವಾಗಿಸಿದುವು, ಅನಿವಾರ್ಯವಾಗಿಸಿದುವು, ಎಂಬ ಅರಿವೂ ನನಗಿದೆ. ಅದೆಲ್ಲವನ್ನೂ ವಿವರಿಸಬಲ್ಲೆನೆಂಬ ಮನುಷ್ಯ ಪೂರ್ಣ ಜ್ಞಾನಿಯಾಗಿರಬೇಕು.

ದೇವರು ಹೀಗೆ ನಡಸಿದ, ಹೀಗೆ ನಡೆಯಿತು ಎನ್ನುವ ಮಾತ್ರ ಅಂಧ ಶ್ರದ್ಧೆಯಲ್ಲದೆ ಈಶ್ವರನ ಮೇಲೆ ವೃಥಾರೋಪ. ದೈವಕ್ಕೆ ಸರಿಯಾಗಿ ನಡೆಯಿತು ಎನ್ನುವ ಮಾತು ನಿಷ್ಕ್ರಿಯವಾದ ಅಸಹಾಯತೆ. ಮಳೆ ಬೀಳುತ್ತಿರುವಾಗ ಕಸವೂ ಬೆಳೆಯುತ್ತದೆ, ಕಮಲವೂ ಬೆಳೆಯುತ್ತದೆ. ಕಸ ಕಮಲವಾಗಿ ಬೆಳೆಯುವುದಿಲ್ಲ ಎನ್ನುವುದು ಮಳೆಯ ತಪ್ಪೇ ? ಬಿರುಗಾಳಿಯ ಹೊಡೆತಕ್ಕೆ ಗಿಡ ಬೀಳುತ್ತದೆ. ಬಿದ್ದ ಗಿಡಕ್ಕೆ ನಿಲ್ಲುವ ಸಾಮರ್ಥ್ಯವಿರಲಿಲ್ಲವೆಂದು ಹೇಳಬೇಕೆ ? ಅಥವಾ ಬಿರುಗಾಳಿ ಕ್ರೂರೋದ್ದೇಶಪ್ರೇರಿತವಾಗಿತ್ತೆಂದು ಹೇಳಬೇಕೆ ? ಒಂದು ಗಿಡ ಬಿದ್ದರೂ ನೂರಾರು ನಿಲ್ಲುತ್ತವೆಯೆಂದಮೇಲೆ ? ನಿಲ್ಲುವ ಸಾಮರ್ಥ್ಯವನ್ನು ಬೆಳೆಯಿಸಿಕೊಳ್ಳುವುದು ಮುಖ್ಯವಲ್ಲವೆ ? ಸಾವಿನ ಹೆದರಿಕೆಯಲ್ಲಿ ಅಮರತ್ವದ ಆಸೆಯೂ ಇದೆ. ಮನುಷ್ಯ ಕ್ಷಣಮಪಿ ಬದುಕಿರುತ್ತಾನೆ ಎಂಬ ಮಾತಿನಲ್ಲಿಯೆ ಅಮರತ್ವದ ಸತ್ವ ಇದೆ. ಆ ಸತ್ವವನ್ನು ಬೆಳೆಯಿಸಿಕೊಳ್ಳುವ ಹೊಣೆ ತನ್ನದಾಗಿದ್ದಾಗ ದೈವವನ್ನೊ ದೈವತವನ್ನೊ ದೂಷಿಸುವುದು ಬುದ್ಧಿವಂತಿಕೆಯೆ ?

ಇಲ್ಲಿ ನಡೆಯುವ ಕಥೆಯನ್ನು ಒಂದೆರಡು ಮಾತಿನಲ್ಲಿ ಹೇಳಿಬಿಡಬಹುದು. ಕಥೆ ಮುಖ್ಯವಾಗಿಲ್ಲ. ಒಂದು ಘಟನೆಗೆ ಹಿನ್ನೆಲೆಯಾಗಿ ನಿಂತ ಘಟಕಗಳೇ ಒಂದು ಕಥೆಯಾಗಿದೆ. ಆ ಘಟಕಗಳು ಜೀವನದ ಒಂದು ಕ್ರಮ. ಕಾದಂಬರಿ ಜೀವನದ ಸಂಶೋಧನೆ ಎಂಬ ಮಾತು ನಿಜವಿದ್ದರೆ ಇದೂ ಒಂದು ಕಾದಂಬರಿಯೆ. ಇಂಥ ಈ ಕೃತಿಯನ್ನು ಈ ಮಾಲೆಯಲ್ಲಿ ಪ್ರಕಟಿಸಲು ಒಪ್ಪಿ ಕೆಲಮಟ್ಟಿಗೆ ಇದನ್ನು ನಾನು ಬೇಗನೆ ಬರೆದುಬಿಡುವಂತೆ ಪ್ರಚೋದಿಸಿದ ಮಾಲೆಯ ಸಂಚಾಲಕರೂ ನನ್ನ ಮಿತ್ರರೂ ಆದ ಶ್ರೀ. ದ. ಬಾ. ಕುಲಕರ್ಣಿಯವರಿಗೆ, ಇಲ್ಲಿಯ 'ಪ್ರಮೇಯ' ವನ್ನು ಕುರಿತು ನಾಲ್ಕು ಮಾತುಗಳನ್ನು ಬರೆದ ಶ್ರೀರಂಗರಿಗೆ, ನನ್ನ ವಂದನೆಗಳು.

ಧಾರವಾಡ
೭-೮-೫೩

ವಿ. ಎಂ. ಇನಾಂದಾರ್

ಲಲಿತ ಸಾಹಿತ್ಯಮಾಲೆಯು

ಒಂಬತ್ತನೆಯ ವರುಷದ ಮೊದಲನೆಯ ಪ್ರಕಟನೆ

# ಅನಾದಿ

ಶ್ರೀರಂಗರ ಕಾದಂಬರಿ

# ಈ ಪರಿಯ ಸೊಬಗು

## ೧

ವಿಶ್ವನಾಥ ಶಾಸ್ತ್ರಿಗಳಿಗೆ ಹೇಳಬೇಕಾದ ಉತ್ತರವನ್ನು ಹೇಗೆ ಹೇಳ ಬೇಕೆಂಬುದೇ ತಿಳಿಯಲಿಲ್ಲ. ಅವರು ಕೆಲಹೊತ್ತು ಸುಮ್ಮನಾದರು. ಅವರ ಯಾವ ಮಾತಿಗೂ ರಾಘವೇಂದ್ರರಾಯರು ಮಣಿಯುವ ಹಾಗಿರಲಿಲ್ಲ. ಶಾಸ್ತ್ರಿ ಗಳು ಬೇಡ ಎನ್ನಲಿಕ್ಕೆ-ಅಥವಾ ಒಪ್ಪದಿರಲಿಕ್ಕೆ-ಪ್ರಬಲವಾದ ಕಾರಣಗಳಿರ ಬೇಕೆಂಬುದು ರಾಘವೇಂದ್ರರಾಯರಿಗೆ ತಿಳಿದಿದ್ದರೂ ಅವರನ್ನು ಒಪ್ಪಿಸುವುದು ದೊಡ್ಡ ಮಾತಲ್ಲವೆಂಬ ವಿಶ್ವಾಸದಲ್ಲಿಯೆ ಮುಂದುವರಿದರು.

" ನಿಮಗೆ ಯಾವುದು ಗೊತ್ತಿಲ್ಲ ಶಾಸ್ತ್ರಿಗಳೆ? ಕಳೆದ ನಾಲ್ಕಾರು ವರ್ಷ ಗಳಲ್ಲಿ ಗೋಪಿಗಾಗಿ ಎಷ್ಟು ಕನ್ಯೆ ಬಂದಾಯಿತು ? ಏನೋ ಒಂದು ತರಹದ ಸ್ವಭಾವ ಆತನದು. ಇಷ್ಟು ದಿವಸ ಮದುವೆಯೇ ಬೇಡ ಎಂದು ಹಟಹಿಡಿದ ಆತ ಈಗ ತಾನಾಗಿಯೆ ಮೊನ್ನೆದಿನ ಬಂದು ತನ್ನ ತಾಯಿಯ ಹತ್ತಿರ ಹೇಳಿದ ನಂತೆ-ಮದುವೆಯಾಗುವೆ-ಅದೂ ನಿಮ್ಮ ಮಗಳನ್ನೆ ಎಂದು. ನೀವು ಯಾತ ಕ್ಕಾಗಿ ಹಿಂಜರಿಯುತ್ತೀರಿ ಇದೇ ತಿಳಿಯುವುದಿಲ್ಲ ನನಗಂತೂ—"

ಶಾಸ್ತ್ರಿಗಳು ಸುಮ್ಮನಾಗಿಯೇ ಉಳಿದರು. ಊರಿಗೆಯೆ ಸಿರಿವಂತರಾದ, ಸಾತ್ವಿಕರಾದ, ಹಿರಿಯ ಸಭ್ಯಗೃಹಸ್ಥರಾದ ರಾಘವೇಂದ್ರರಾಯರು ಬಂದು ಶಾಸ್ತ್ರಿಗಳನ್ನು ಹೀಗೆ ಕೇಳಿಕೊಳ್ಳಬೇಕಾದದ್ದು ವಿಧಿವಿಲಾಸವೇ ಸರಿ. ಅಂಥ

ಸಂಬಂಧಕ್ಕಾಗಿ ಹತ್ತಾರುಸಾವಿರ ವರದಕ್ಷಿಣೆ ಕೊಟ್ಟು ಬೇಕಾದಷ್ಟು ವಿಜೃಂಭಣೆಯಿಂದ ಮದುವೆಮಾಡಲು ಸಿದ್ಧರಾಗಿ ಬಂದ ಹತ್ತಾರು ಕನ್ಯಾ ಪಿತೃಗಳನ್ನು ಶಾಸ್ತ್ರಿಗಳೇ ಕಣ್ಣಾರೆ ನೋಡಿದ್ದರು. ಹೀಗಿದ್ದರೂ ಹೆಚ್ಚು ಕಡಿಮೆ ಅಶಿಕ್ಷಿತೆಯಾದ ತಮ್ಮ ಮಗಳು–ಶಾಂತಾಳಿಗಾಗಿ ರಾಯರು ಕೇಳಬಂದಾಗ ಅವರು ಹರ್ಷಾತಿರೇಕದಿಂದ ಕುಣಿಯಬೇಕಾಗಿತ್ತು. ಆದರೆ ಶಾಸ್ತ್ರಿಗಳ ಅಂತ ಶ್ಚಿತ್ತ ವ್ಯಗ್ರವಾಗಿತ್ತು. ಅವರ ಬಾಯಿಗೆ ಮಾತಿಲ್ಲದಾಗಿತ್ತು. ಅವರು ಸುಮ್ಮ ನಾಗಿಯೆ ಉಳಿದದ್ದನ್ನು ನೋಡಿ ರಾಘವೇಂದ್ರರಾಯರು ಹೇಳಿದರು; ಅವರ ದನಿಯಲ್ಲಿ ಕನಿಕರದ ಛಾಯೆ ಮೂಡಿತ್ತು.

"ಇಷ್ಟೊಂದು ಹೇಳಿಸಿಕೊಳ್ಳಬೇಕೆ ನನ್ನಿಂದ ನೀವು, ಶಾಸ್ತ್ರಿಗಳೆ ?—"

ಮಾತು ಶಾಸ್ತ್ರಿಗಳನ್ನು ನೋಯಿಸಿತು. ನಿಟ್ಟುಸಿರೆಳೆದು ಹೇಳಿದರು.

"ಎಂಥ ಮಾತು ರಾಯರೆ ! ನಿಮ್ಮಂಥವರು ನನ್ನನ್ನು ಬೇಡಿಕೊಳ್ಳು ವುದೇ ? ನಾನು ಎಷ್ಟು ? ನಿಮ್ಮ ಆಶ್ರಯದಿಂದ, ಒಂದು ಕಾಲದ ನಿಮ್ಮ ಸಹಾಯದಿಂದ ಒಂದು ನಿಲುಗಡೆಗೆ ಬಂದು ಮನೆಮಾಡಿಕೊಂಡು ಇದ್ದವ. ನೀವೇನೋ ದೊಡ್ಡ ಮನಸ್ಸು ಮಾಡಿದ್ದೀರಿ. ಆದರೆ—"

"ಯಾಕೆ ಆದರೆ ಎನ್ನುವ ಮಾತು ? ಸಂತೋಷದಿಂದ ನಾವೆಲ್ಲರೂ ಒಪ್ಪಿದ್ದೇವೆ. ಮುಖ್ಯವಾಗಿ ಗೋಪಿ ತಾನಾಗಿಯೆ ಒಪ್ಪಿ ಮುಂದಾಗಿ ಬಂದಿ ದ್ದಾನೆ. ಅವನ ಸಂತೋಷದ ಮುಂದೆ ನನಗೆ ಯಾವುದಿದೆ ! ಬೇಕಾದಷ್ಟು ದುಡ್ಡು ಕೊಡಲು ಒಪ್ಪಿ ಬಂದವರಿಗೆಲ್ಲ ನನ್ನದು ಒಂದೇ ಮಾತು. ಆತ ಒಪ್ಪಿ ದರೆ ಆಗಲಿ, ಎಂದು. ಈಗ ಆತ ಒಪ್ಪಿದ್ದಾನೆ. ನನ್ನ ಒಬ್ಬನೇ ಒಬ್ಬ ಮಗನ ಸುಖಕ್ಕಾಗಿ ನೀವು ಮನಸ್ಸು ಮಾಡಬೇಕು."

ಮತ್ತೆ ದನಿಯಲ್ಲಿ ಅದೇ ಕನಿಕರ–ಅದೇ ಬೇಡಿಕೆ. ರಾಘವೇಂದ್ರ ರಾಯರು ಯಾರನ್ನೂ ಯಾವ ಮಾತಿಗೂ ಬೇಡಿದವರಲ್ಲ. ಬೇಡಬೇಕಾದ ಸಂದರ್ಭವೂ ಅವರಿಗೆ ಬರಬೇಕಾಗಿರಲಿಲ್ಲ. ಐಶ್ವರ್ಯವಂತರು, ಜನರಿಗೆ ಬೇಕಾದವರು. ಅವರಿಗಾಗಿ ಊರಲ್ಲಿಯ ಯಾರೂ ಬೇಕಾದುದನ್ನು ಮಾಡಲು ಸಿದ್ಧ. ಹೀಗೆ ಬೇಡಬೇಕಾಗಿ ಬಂದದ್ದು ಒಂದು ಕ್ಷಣ ರಾಘವೇಂದ್ರ ರಾಯರಿಗೆಯೆ ವಿಚಿತ್ರವೆನಿಸಿತ್ತು. ಶಾಸ್ತ್ರಿಗಳು ಕೂಡಲೇ ಒಪ್ಪಬಹುದೆಂದು ಅವರು ತಿಳಿಯದಿದ್ದರೂ ಇಷ್ಟರ ಮಟ್ಟಿಗೆ ಬಿಗಿಹಿಡಿಯಬಹುದೆಂದು ಅವರಿಗೆ

ಅನಿಸಿರಲಿಲ್ಲ. ರಾಯರು ಶಾಸ್ತ್ರಿಗಳನ್ನು ತಿಳಿದವರಾಗಿದ್ದರಿಂದಲೇ ಅವರ ಈ ಮನೋವೃತ್ತಿಯಿಂದ ನೋಯಲಿಲ್ಲ. ಬೇಸರಪಡಲಿಲ್ಲ. ಅವರು ವಿದ್ಯಾ ಸಂಪನ್ನರು. ವ್ಯವಹಾರಜ್ಞರು. ಜ್ಞಾನಿಗಳು. ಅವರ ವರ್ಚಸ್ಸಿಗೆ ಯಾವುದೂ ಮಿಗಿಲಾಗಲಾರದೆಂದು ಹತ್ತಾರು ಸಂದರ್ಭಗಳಲ್ಲಿ ರಾಯರು ಮನಗಂಡಿದ್ದರಿಂದಲೇ ಶಾಸ್ತ್ರಿಗಳಿಗೆ ಎದುರುಹೇಳುವ ಮಾತು ಹಾಗಿರಲಿ, ಅವರ ಒಪ್ಪಿಗೆ ಆಶೀರ್ವಾದವಿಲ್ಲದೆ ರಾಯರು ಯಾವುದಕ್ಕೂ ಮುಂದುವರಿಯುವಂತಿರಲಿಲ್ಲ. ಅವರ ಆಶೀರ್ವಾದಬಲವೇ ಅಷ್ಟು ಪ್ರಭಾವಯುತವಾಗಿತ್ತೆಂದು ಮನವರಿಕೆಯಾದ ಮೇಲೆ ಅವರನ್ನು ಮನವೊಲಿಸುವುದರ ಹೊರತಾಗಿ ಬೇರೆ ಮಾರ್ಗವಿರಲಿಲ್ಲವೆಂದೇ ರಾಯರು ಬೇಡುತ್ತಿದ್ದರು.

"ನೀವು ಯಾತಕ್ಕಾಗಿ ಇಷ್ಟೊಂದು ಹಿಂತೆಗೆಯುತ್ತೀರಿ—ಇದೇ ನನಗೆ ತಿಳಿಯುವುದಿಲ್ಲ, ಶಾಸ್ತ್ರಿಗಳೆ. ಅದನ್ನಾದರೂ ಹೇಳಬಾರದೆ ?"

ಶಾಸ್ತ್ರಿಗಳು ತಮ್ಮಷ್ಟಕ್ಕೆಯೆ ಕೇಳಿಕೊಂಡರು "ಹೇಳಬಹುದೆ ?" ಎಂದು. ಅವರ ಕಣ್ಣೆದುರು ಭವಿಷ್ಯತ್ತಿನಲ್ಲಿಯ ಯಾವ ಚಿತ್ರ ನಿಂತಿತ್ತೊ ! "ಹೇಳಲಾಗದು, ಹೇಳಲಾಗುವುದಿಲ್ಲ" ಎಂದುಕೊಂಡರು. ಆದರೂ ರಾಘವೇಂದ್ರರಾಯರಿಗೆ ಉತ್ತರ ಹೇಳಬೇಕು. ಏನಾದರೊಂದು ಉತ್ತರ ಎಂದು ಹೇಳಿದರು.

"ಇಂಥ ಒಂದು ಸಂಬಂಧವನ್ನು ಗೊತ್ತುಮಾಡುವಾಗ ಪೂರ್ವಾಪರಗಳನ್ನು ಯೋಚಿಸಬೇಡವೆ ? ನಿಮ್ಮ ಯೋಗ್ಯತೆ, ನಿಮ್ಮ ಮನೆತನ—ನೀವು ಕೇಳುತ್ತೀರೆಂದಮಾತ್ರಕ್ಕೆ ನಾನು ಒಪ್ಪಿದರೆ ನಾಲ್ಕು ಜನ ನಾಳೆ ನನ್ನನ್ನು ಏನೆಂದಾರು ?"

"ಅಷ್ಟಕ್ಕೆ ಇಷ್ಟು ಯೋಚನೆಯೆ ? ಏನೆನ್ನುನ್ನುತ್ತಾರೆ ಜನ ? ಏನೆಂದರೂ ಏನು ? ನಾವು ಮಾಡುತ್ತಿದ್ದುದು ಯಾವ ಅನ್ಯಾಯವೂ ಅಲ್ಲವಲ್ಲ? ಅಪರಾಧವೂ ಅಲ್ಲ. ನನಗೆ ಅದು ಯಾವುದೂ ಮಹತ್ವದ್ದಾಗಿ ಕಾಣುವುದಿಲ್ಲ. ಒಬ್ಬನೇ ಮಗ–ಸುಖವಾಗಿರಬೇಕು ಎಂಬುದರ ಹೊರತಾಗಿ ನನಗೆ ಯಾವುದೂ ತೋಚುವುದಿಲ್ಲ. ಆತ ಮನಸ್ಸು ಮಾಡಿದ್ದಾನೆ. ನೀವು ನಡಸಿಕೊಡಬೇಕು. ಇದಕ್ಕೂ ಹೆಚ್ಚಿಗೆ ಹೇಳಲಾರೆ—"

ಎಂದು ರಾಯರು ಸುಮ್ಮನಾದರು. ಇಷ್ಟಕ್ಕಾಗಿ ಶಾಸ್ತ್ರಿಗಳು ಹಿಂತೆಗೆ

ಯುತ್ತಿದ್ದರೆ ಅವರನ್ನು ಮನವೊಲಿಸುವುದು ಯಾವ ದೊಡ್ಡ ಮಾತು ಎಂಬ ಸಮಾಧಾನ ಅವರ ಮನಸ್ಸಿನಲ್ಲಿ ಮೂಡಿತ್ತು. ಆದರೆ ಶಾಸ್ತ್ರಿಗಳು ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿರಲಿಲ್ಲ, ಹೇಳುವಂತಿರಲಿಲ್ಲವೆಂಬುದು ರಾಘವೇಂದ್ರರಾಯರಿಗೆ ಹೇಗೆ ಗೊತ್ತಾಗಬೇಕು ?

ಅರೆನಿಮಿಷ ತಡೆದು ಶಾಸ್ತ್ರಿಗಳು ಕೇಳಿದರು.

" ನನ್ನ ಶಾಂತಾಳನ್ನು ನಿಮ್ಮ ಮನೆಯವರು ಒಪ್ಪುತ್ತಾರೆಯೆ?"

ಈ ಪ್ರಶ್ನೆಯಾದರೂ ಸುಮ್ಮನೆ ಕೇಳಿದ ಪ್ರಶ್ನೆಯೆ. ಕಮಲಾಬಾಯಿಯವರು ಒಪ್ಪಿದ ಮಾತನ್ನು ರಾಘವೇಂದ್ರರಾಯರು ಆಗಲೆ ಹೇಳಿದ್ದರು. ತಟ್ಟನೆ ಮಾತನ್ನು ಮುಗಿಯಿಸಿ ರಾಯರ ಮನಸ್ಸನ್ನು ನೋಯಿಸಲಾಗದ್ದಕ್ಕೆ ಶಾಸ್ತ್ರಿಗಳು ಹಾಗೆ ಕೇಳಿದ್ದರು.

" ನಾನಾಗಲೆ ಹೇಳಿದೆನಲ್ಲವೆ ? ಇದರಲ್ಲಿ ಉಳಿದ ಯಾರ ಮನಸ್ಸನ್ನೂ ನಾನು ಗಮನಿಸುವುದಿಲ್ಲ. ಗೋಪಿಯ ಮನಸ್ಸು ಮುಖ್ಯ. ಆತ ಹೇಳಿದ ಮೇಲೆ ಉಳಿದವರು ಏನೆಂದರೇನು ?"

" ಆದರೂ ತಾಯಿಯ ಮನಸ್ಸು ನೋಯಬಾರದು ನೋಡಿ."

" ನೋಯಬಾರದು. ನೋಯುವುದಿಲ್ಲ. ಗೋಪಿಯನ್ನು ಆಕೆ ಪ್ರೀತಿಸುವುದಿಲ್ಲವೆ ? ಗೋಪಿಯ ಹಿತ ಆಕೆಗೆ ತಿಳಿಯುವುದಿಲ್ಲವೆ ? ನಾವಿಬ್ಬರೂ ಮಾತನಾಡಿಕೊಂಡಾದಮೇಲೆಯೆ ನಾನು ಇಲ್ಲಿಗೆ ಬಂದದ್ದು."

" ಆದರೂ ನೀವು ಯೋಚನೆ ಮಾಡಬೇಕು ರಾಯರೆ."

" ಯೋಚನೆ ಮಾಡಬೇಕಾದದ್ದೆಲ್ಲ ಮುಗಿದಿದೆ. ನಿಮ್ಮ ಮನಸ್ಸು ನನಗೆ ತಿಳಿದಿದೆ. ವತ್ಸಲೆಯ ವಿಚಾರವಲ್ಲವೆ ನೀವು ಸೂಚಿಸಿದ್ದು?"

" ಹೌದು. "

ವತ್ಸಲೆ ಗೋಪಿಯ ಸೋದರಮಾವನ ಮಗಳು. ಆಕೆ ಹುಟ್ಟಿದಾಗಿನಿಂದ " ಗೋಪಿಯ ಹೆಂಡತಿ " ಎಂದು ಮೊದಲಾದ ನಗೆಮಾತು ವರ್ಷಗಳು ಉರುಳಿದ ಹಾಗೆ ಎರಡೂ ಮನೆತನಗಳಲ್ಲಿ ಒಪ್ಪಿತವಾಗಿದ್ದಹಾಗಿತ್ತು. ರಜೆ ದಿನಗಳಲ್ಲಿ–ಆಗೀಗ–ಗೋಪಿ ಸೋದರಮಾವನ ಮನೆಗೆ ಹೋದಾಗ ವತ್ಸಲೆಯೊಡನೆ ಬೇಕಾದಷ್ಟು ಸಲಿಗೆಯಿಂದ ಇರುತ್ತಿದ್ದ. ಇಂದಿಲ್ಲ ನಾಳೆ ಮದುವೆಯಾಗತಕ್ಕವರು ಎಂಬ ಗ್ರಹೀತವಿಟ್ಟುಕೊಂಡ ಇಕ್ಕಡೆಯಲ್ಲಿಯ ತಾಯಿತಂದೆ

ಗಳು ಅವರಿಬ್ಬರ ಒಡನಾಟಕ್ಕೆ ಅಡ್ಡಿಯಾಗುತ್ತಿರಲಿಲ್ಲ. ಮಾತ್ರವಲ್ಲದೆ ತಾಯಿ ಕಮಲಮ್ಮ ಗೋಪಿ ಬೆಳೆದ ಹಾಗೆ ಈ ಸಲಿಗೆಯನ್ನು ಉತ್ತೇಜಿಸುತ್ತಲೆ ಇದ್ದರು. ಮೊದಮೊದಲು–ತಾನು ವತ್ಸಲೆಯನ್ನು ಮದುವೆಯಾಗುವುದು ಸಾಧ್ಯವಿಲ್ಲ ಎಂದು ಗೋಪಿ ಸ್ಪಷ್ಟವಾಗಿ ಹೇಳುವತನಕ–ಕಮಲಮ್ಮ ವರಾನ್ವೇಷಿಯಾಗಿ ಯಾರು ಬಂದರೂ ಅವರನ್ನು ಉಪಾಯವಾಗಿ ಸಾಗಿಸುತ್ತಿದ್ದರಲ್ಲದೆ, ಆತನಿಗೆ ಮನೆಯಲ್ಲಿಯೇ ಮದುವೆ ಗೊತ್ತಾಗಿದೆ ಎಂದೂ ಒಂದೆರಡು ಸಂದರ್ಭಗಳಲ್ಲಿ ಸ್ಪಷ್ಟವಾಗಿ ಹೇಳಿಯೂ ಇದ್ದರು. ಗೋಪಿಗೆ ಇದು ತಿಳಿದಾಗಲೆ ವತ್ಸಲೆಯನ್ನು ನಿರಾಕರಿಸಿದ್ದ. ಅಣ್ಣನ ಮಗಳನ್ನು ಮದುವೆ ಮಾಡುವ ಆಸೆಯನ್ನು ಕಮಲಮ್ಮ ಪೂರ್ತಿಯಾಗಿ ತೊರೆದಿರಲಿಲ್ಲವೆಂದೇ ಗೋಪಿ ವತ್ಸಲೆಯನ್ನು ನಿರಾಕರಿಸಿದ ಸಮಾಚಾರ ಬಹಿರಂಗವಾಗಿರಲಿಲ್ಲ. ಶಾಸ್ತ್ರಿಗಳಿಗೂ ಈ ಸಮಾಚಾರ ತಿಳಿದಿರಲಿಲ್ಲವೆಂದೇ ಅವರು ಹಾಗೆ ಕೇಳಿದ್ದರು.

“ಆ ಮಾತು ಮುಗಿದು ಹೋಗಿದೆ ಶಾಸ್ತ್ರಿಗಳೆ. ನೀವು ತಿಳಿದ ಹಾಗೆ ಎಷ್ಟೋ ಜನರು ತಿಳಿದಿದ್ದಾರೆ. ಗೋಪಿ ಒಪ್ಪಿದ್ದರೆ ಅದೂ ನಡೆಯಬಹುದಿತ್ತು. ಆದರೆ ಯೋಗಾಯೋಗವಿಲ್ಲವೆಂದು ಕಾಣುತ್ತದೆ. ಅದಕ್ಕೆ ಯಾರು ಏನು ಮಾಡುವುದಕ್ಕಿದೆ ?”

“ಯೋಗಾಯೋಗ—”

ಶಾಸ್ತ್ರಿಗಳು ತಮ್ಮಷ್ಟಕ್ಕೆಯೆ ಎಂಬಂತೆ ಆ ಮಾತನ್ನಾಡಿದರು. ಆ ಒಂದು ಶಬ್ದವನ್ನು ಅವರು ಉಚ್ಚರಿಸಿದ ಬಗೆಯಲ್ಲಿ ಅವರ ಹೃದಯಾಂತರಾಳದಲ್ಲಿಯ ವ್ಯಗ್ರತೆ ಸ್ಪಷ್ಟವಾಗಿ ಮೂಡಿನಿಂತಿತ್ತು. ಆದರೆ ರಾಘವೇಂದ್ರರಾಯರು ಆ ಮಾತನ್ನು ಬೇರೆಯಾಗಿಯೆ, ಅಂದರೆ ತಮ್ಮ ಅಭಿಪ್ರಾಯಕ್ಕೆ ಪೂರ್ತಿಯಾದ ಒಪ್ಪಿಗೆ ಎಂದೇ ತಿಳಿದುಕೊಂಡರು. ಹೀಗೆಂದೇ ಉತ್ತೇಜಿತರಾಗಿ ಹೇಳಿದರು.

“ಮದುವೆ ಯಾವಾಗಲೂ ಯೋಗಾಯೋಗದ ಮಾತೇ. ಗಂಡು ಹೆಣ್ಣುಗಳು ಹುಟ್ಟಿದಾಗಲೆ ತಮ್ಮ ತಮ್ಮ ಜೊತೆಗಾರರನ್ನು ಗೊತ್ತುಮಾಡಿ ಕೊಂಡೇ ಬರುತ್ತವೆ ಎಂದು ಕಾಣುತ್ತದೆ. ಯಾರು ಎಷ್ಟು ಪ್ರಯತ್ನ ಮಾಡಿದರೂ ದೈವಸಂಕಲ್ಪವಿದ್ದ ಹಾಗೆಯೆ ನಡೆಯಬೇಕು. ಈಗ ನೀವೇ ನೋಡಿದಿರಲ್ಲ–ಗೋಪಿಗೆ ಎಷ್ಟು ಕಡೆಯಿಂದ ಕೇಳಿಕೆ ಬರಲಿಲ್ಲ ?....”

ಶಾಸ್ತ್ರಿಗಳ ಲಕ್ಷ್ಯ ಅವರ ಮಾತಿನ ಕಡೆಗಿರಲಿಲ್ಲ. ಮನಸ್ಸು ಏನೇನನ್ನೊ

ಯೋಚಿಸುತ್ತಿತ್ತು. ಯಾವ ಮಾತನ್ನು ಹೇಳಿ ರಾಘವೇಂದ್ರರಾಯರನ್ನು ಹಿಂತಿರುಗಿಸಬೇಕೆಂಬುದೇ ಅವರಿಗೆ ತಿಳಿಯದಾಗಿತ್ತು. ಕೊನೆಗೊಂದು ಯೋಚನೆ ಹೊಳೆದು ಕೇಳಿದರು.

"ಗೋಪಿ ನಮ್ಮ ಶಾಂತಳನ್ನು ಮದುವೆಯಾಗುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದಾನೆಯೆ ?"

"ಮದುವೆಯಾದರೆ ಆಕೆಯನ್ನೇ ಆಗುವುದು. ಇಲ್ಲವಾದರೆ ಮದುವೆಯೆ ಇಲ್ಲ-ಎಂದು ಖಂಡಿತವಾಗಿ ಹೇಳಿದ್ದಾನೆ. ಅಂತೆಯೆ—"

"ತೀರ ಅನ್ಯಾಯವಾಯಿತು."

"ಯಾವ ಅನ್ಯಾಯವೂ ಇಲ್ಲ. ಸುಮ್ಮನೆ ಏನಾದರೊಂದು ಸಣ್ಣ ಯೋಚನೆಯನ್ನು ಕಟ್ಟಿಕೊಂಡು ಒದ್ದಾಡುತ್ತೀರಿ. ಅದಾವುದೂ ಇಲ್ಲ. ನೀವು ಒಪ್ಪಲೇಬೇಕು."

"ನೀವು ಒಪ್ಪಲೇಬೇಕು ಎಂದು ಹೇಳಿದರೆ ನನಗೆ ಬಾಯಿಗೆ ಮಾತಿಲ್ಲ, ರಾಯರೆ. ಆದರೆ-"

"ಆದರೆ ಎನ್ನುವ ಮಾತೇ ಬೇಡ."

"ಆದರೂ-"

"ಮತ್ತೆ ಆದರೂ ಎನ್ನುತ್ತೀರಲ್ಲ, ಶಾಸ್ತ್ರಿಗಳೆ ?"

"ನಾನು ಈ ವಿಷಯ ಗೋಪಿಯ ಕೂಡ ಮಾತನಾಡಿದನಂತರ—"

"ಆಗಬಹುದಲ್ಲ. ಅದಕ್ಕೇನು ? ನಾನು ಗೋಪಿಗೆ ಹೇಳಲಾ ಹೀಗೆ ಎಂದು ?"

"ಬೇಡ. ಅವನಾಗಿಯೇ ಬಂದೇ ಬರುತ್ತಾನೆ. ಮಧ್ಯಾಹ್ನ, ಇಲ್ಲವೆ ಸಂಜೆ. ನಾನು ಅವನ ಜೊತೆಯಲ್ಲಿ ಮಾತನಾಡುತ್ತೇನೆ. ನಾನು ಹೀಗೆ ಹೇಳುತ್ತೇನೆ ಎಂದು ತಪ್ಪು ತಿಳಿಯಬಾರದು, ರಾಯರೆ."

"ತಪ್ಪೇನು ಬಂತು ? ನೀವು ಹೇಳುವುದೂ ಸರಿಯೆ. ಒಂದು ಮದುವೆ ಎಂದರೆ ಸಾವಿರ ವರ್ಷದ ಸಂಬಂಧ. ಯೋಚನೆ ಮಾಡಬೇಕಾದದ್ದೇ. ಆದರೆ ಇಲ್ಲಿ ಯೋಚನೆ ಮಾಡಬೇಕಾದದ್ದು ಯಾವುದೂ ಇಲ್ಲ. ಈಗ ಆರೇಳು ವರ್ಷಗಳಿಂದ ಮದುವೆಯೇ ಬೇಡ ಎನ್ನುತ್ತಿದ್ದವ ಈಗ— "

ಶಾಸ್ತ್ರಿಗಳು ತಮ್ಮ ಯೋಚನೆಯಲ್ಲಿಯೆ ಇದ್ದರು. "ಯೋಚನೆ ಮಾಡ

ಬೇಕಾದದ್ದು ಬೇಕಾದಷ್ಟಿದೆ" ಎಂದು ಅವರ ಒಳಮನಸ್ಸಿನ ಕಳವಳ ಕೂಗಿ ಹೇಳುತ್ತಿತ್ತು. ಆದರೆ ಆ ಕಳವಳವನ್ನು ರಾಘವೇಂದ್ರರಾಯರಿಗೆ ಹೇಳುವಂತಿರಲಿಲ್ಲ. ಹೇಳುವುದು ಸಾಧ್ಯವೇ ಇರಲಿಲ್ಲವೆನ್ನುವುದಕ್ಕಾಗಿಯೆ ಶಾಸ್ತ್ರಿಗಳು ಇಬ್ಬಣದಲ್ಲಿ ಸಿಲುಕಿದ್ದರು. ಮಾತುಗಾಣದಾಗಿದ್ದರು. ಗೋಪಿಯನ್ನೆ ಮಾತಾಡಿಸುವೆನೆಂದು ಅವರು ಹೇಳಿದ್ದು ಸದ್ಯದ ಮಟ್ಟಿಗಾದರೂ ಮಾತನ್ನು–ಕೊನೆಯ ನಿರ್ಣಯವನ್ನು–ಮುಂದೂಡಲಿಕ್ಕೊಂದು ಹಂಚಿಕೆ ಮಾತ್ರವಾಗಿತ್ತು.

ಅದೇ ಮಾತನ್ನು ಹತ್ತಾರು ಬಾರಿ ಹೇಳಿ ರಾಘವೇಂದ್ರರಾಯರು ಮನೆಗೆ ಹೊರಟರು ಶಾಸ್ತ್ರಿಗಳನ್ನು ಮನವೊಲಿಸುವುದು ಅಷ್ಟೇನೂ ಕಷ್ಟದ ಕೆಲಸವಲ್ಲ ವೆಂಬ ಭರವಸೆಯಿಂದಲೇ ಹೆಜ್ಜೆ ಹಾಕುತ್ತಿದ್ದರು. ಇಷ್ಟರಮಟ್ಟಿಗೆ ಯಾಕೆ ಅವರು ಹಿಂತೆಗೆಯುತ್ತಿರಬಹುದು, ಏನು ಆತಂಕ, ಎಂಬ ಯೋಚನೆ ಅವರನ್ನು ಸೋಂಕದಿರಲಿಲ್ಲ. ಕೊನೆಗೆ "ಅವರೆನ್ನುವುದೂ ಸರಿಯೆ. ಎಷ್ಟಾದರೂ ಒಂದು ಕಾಲಕ್ಕೆ ತಮ್ಮಿಂದಲೆ ಸಹಾಯ ಪಡೆದು ಊರಲ್ಲಿ ಬಂದು ಇದ್ದವರು ಈಗ ನೆಂಟಸ್ತಿಕೆ ಮಾಡಿದರೆ ಜನ ಮಾತನಾಡಿಕೊಳ್ಳಬಹುದು. ಎಂಥ ವಿಚಾರವೊ! ಶಾಸ್ತ್ರಿಗಳ ಯೋಗ್ಯತೆ ಯಾವ ಧನವಂತನಿಗೆ ಬಂದೀತು? ಮನುಷ್ಯನ ಯೋಗ್ಯತೆಗೆ ದುಡ್ಡೇ ಮುಖ್ಯವೆ? ತಾವು ಕಡಿಮೆಯವರು ಎಂದು ಶಾಸ್ತ್ರಿಗಳು ತಿಳಿಯುತ್ತಿದ್ದರೆ ಅದು ಅವರ ಸೌಜನ್ಯ, ನಮ್ರತೆ. ಅಷ್ಟಕ್ಕಾಗಿ ಅವರು ಕೂಡಿಬಂದ ಒಂದು ಸಂಬಂಧವನ್ನು ತಡೆಯಬೇಕೆ? ಅದೂ ಗೋಪಿಯ ಮದುವೆಯಂಥ ವಿಷಯದಲ್ಲಿ? ಛೆ. ಆಗದು. ಎಂದಿಗೂ ಆಗದು. ಶಾಸ್ತ್ರಿಗಳು ಒಪ್ಪಲೇಬೇಕು. ಒಪ್ಪುತ್ತಾರೆ." ಎಂದು ಮುಂತಾಗಿ ಗೋಪಿಯ ಮದುವೆಯನ್ನು ನಿಶ್ಚಯಮಾಡಿದ ಹುಮ್ಮಸ್ಸಿನಲ್ಲಿಯೇ ನೇರವಾಗಿ ಮನೆಯನ್ನು ಸೇರಿದರು.

ರಾಘವೇಂದ್ರರಾಯರು ಹೊರಟುಹೋಗಿ ಹತ್ತು ನಿಮಿಷಗಳಾಗಿರಬಹುದು. ಶಾಸ್ತ್ರಿಗಳು ಯಾವುದೊ ಒಂದು ಹಳೆಯ ಪಂಚಾಂಗವನ್ನು, ಜ್ಯೋತಿಷದ ಒಂದೆರಡು ಗ್ರಂಥಗಳನ್ನು ಬಿಡಿಸಿಟ್ಟುಕೊಂಡು ಆಳವಾದ ಯೋಚನೆಯಲ್ಲಿ ಮುಳುಗಿದ್ದರು. ಅವರ ಹೆಂಡತಿ ಬಾಗಿಲಲ್ಲಿ ಬಂದು ನಿಂತುದನ್ನು ಅವರು ಗಮನಿಸಿರಲಿಲ್ಲ. ಅರೆನಿಮಿಷ ತಡೆದು ಶಾಂತಳ ತಾಯಿ ನಿಧಾನವಾಗಿ ಕೇಳಿದರು.

"ಸ್ನಾನಕ್ಕೆ ಹೊತ್ತಾಯಿತಲ್ಲ, ಅಭಿಷೇಕವಾಗಬೇಕು.... "

"ಆಂ ? ಏನೆಂದೆ ?"

"ಸ್ನಾನಕ್ಕೆ ತಡವಾಗಿಬಿಟ್ಟಿತು—"

"ಹುಂ. ಎದ್ದೆ. ಏನೋ ಮಾತಿನಲ್ಲಿ ಹೊತ್ತೇ ಗೊತ್ತಾಗಲಿಲ್ಲ."

"ಅದೇನು ಬಹಳ ಹೊತ್ತು ಕುಳಿತಿದ್ದರಲ್ಲ, ರಾಘವೇಂದ್ರರಾಯರು ?"

"ಹುಂ–ಏನೋ ಮನೆತನದ ಮಾತು—"

"ಮನೆತನದ ಮಾತೆ ?"

"ಹುಂ. ಮತ್ತೇನು? ಅದಿರಲಿ, ಈಗ—"

"ಅಯ್ಯೊ ಯಾಕೆ ಹೀಗೆ ? ಏನು ಮಾತು ಹೇಳಬಾರದೆ ?"

"ಅದೆಲ್ಲ ನಿನಗೇನು ಗೊತ್ತಾಗುತ್ತದೆ ? ಸುಮ್ಮನೆ ಏನಾದರೊಂದು ತಲೆಯಲ್ಲಿ ಸೇರಿಸಿಕೊಳ್ಳಬೇಡ ನೀನು."

"ಸುಮ್ಮನೆ ಏನಾದರೊಂದು ಅಂದರೆ ? ಶಾಂತಳ ಮದುವೆಯನ್ನು ನನಗೆ ಹೇಳದೆ ಮಾಡಬೇಕು ಅನ್ನುತ್ತೀರಾ ?"

"ಯಾರು ಹೇಳಿದರು ನಿನಗೆ ಶಾಂತಳ ಮದುವೆಯ ಮಾತು ಎಂದು ?"

"ಅಷ್ಟೂ ಗೊತ್ತಾಗುವುದಿಲ್ಲವೆ ? ಈಗಾಗಲೆ ಊರಲ್ಲಿ ಗುಜುಗುಜು ಮಾತು. ನಿನ್ನೆ ಆಚೆಮನೆಯ ರಾಧಕ್ಕ ನನ್ನನ್ನೆ ಕೇಳಿದರೆ ಬೆಪ್ಪಾಗಿ ಹೋದೆ. ನನಗೆ ಯಾವುದೂ ಗೊತ್ತಿಲ್ಲದಾಗ ನಾನಾದರೂ ಏನು ಹೇಳಲಿ ! ಮನೆಯ ವರೇ ಒಂದು ಮಾತನ್ನು ನನಗೆ ಹೇಳದಿದ್ದಾಗ—"

"ಸರಿ, ಸರಿ. ಕೆಲಸವಿಲ್ಲ, ನಿನಗೆ ನಿನ್ನ ಆ ರಾಧಕ್ಕನಿಗೆ."

"ನಿಜವೆ, ರಾಘವೇಂದ್ರರಾಯರು ಕೇಳಲಿಕ್ಕೆ ಬಂದದ್ದು ?"

"ಹೌದು."

"ಹೌದೆ ?"

ಎಣಿಕೆ ಮೀರಿದ ಸಂತೋಷದಿಂದ ಕೂಡಿಬಂದ ಪ್ರಶ್ನೆ ಅದು.

"ನಮ್ಮ ಶಾಂತಳ ದೈವಕ್ಕೆ ಎಣೆಯಿಲ್ಲ. ಆಕೆ ಹುಟ್ಟಿದ ವೇಳೆಯೆ ಅಂಥದು. ಏನು ಮಾತುಕತೆಯಾಯಿತು. ಆಂ ? ಏನು ? ಅಯ್ಯೊ, ಹೇಳ ಬಾರದೆ?"

"ಈ ವಿಚಾರ ಶಾಂತಳಿಗೆ ಗೊತ್ತಿದೆಯೆ ?"

" ಇಲ್ಲ ಎಂದು ಕಾಣುತ್ತದೆ."

" ಆಕೆಯ ಎದುರು ಈ ಮಾತನ್ನು ಹೇಳಬೇಡ."

" ಆಕೆಗೂ ತಿಳಿಯದ ಹಾಗೆ ಮದುವೆಮಾಡಬೇಕೆನ್ನುತ್ತೀರಾ ?"

" ಯಾವುದೂ ನಿಶ್ಚಯವಾಗದಿದ್ದಾಗ ಹೇಳಿ ಆಕೆಯನ್ನು ಯಾಕೆ ನೋಯಿಸಬೇಕು ? ಎಂಥ ಸಣ್ಣ ಮಾತೂ ಆಕೆಯ ಮನಸ್ಸಿನಲ್ಲಿ ನಟ್ಟು ನಿಲ್ಲುತ್ತದೆ."

" ಅವರಾಗಿಯೆ ಕೇಳಬಂದಾಗ ನಿಶ್ಚಯವಾಗುವುದು ಯಾವ ದೊಡ್ಡ ಮಾತು ? ನೀವು ಒಪ್ಪಲಿಲ್ಲವೆ ? "

" ಇಲ್ಲ! "

" ಅಯ್ಯೋ ದೇವರೆ ? ನಿಮಗೆ ಆಗಿದೆಯಾದರೂ ಏನು ? ಇಂಥವರು ತಾವಾಗಿಯೆ ಬಾಗಿಲಿಗೆ ಬಂದಾಗ ಬೇಡ ಎನ್ನುವುದೆ ? ಅಂಥ ಐಶ್ವರ್ಯವಂತ ಗಂಡ ಸಿಕ್ಕಬೇಕಾದರೆ ಹತ್ತುಜನ್ಮದ ಪುಣ್ಯ ಬೇಕು."

" ಅಷ್ಟು ಪುಣ್ಯ ನಿನ್ನ ಮಗಳು ಮಾಡಿದ್ದಾಳೆಯೆಂದು ತಿಳಿದಿದ್ದೀಯಾ?"

" ಅಲ್ಲವೆ ? ಇಲ್ಲವಾದರೆ ಅವರಾಗಿಯೆ ಬಾಗಿಲಿಗೆ ಬರುತ್ತಿದ್ದರೆ ?"

" ಸರಿ-ಹೋಯಿತು. ನೀನು—"

" ನಿಜವಾಗಿಯೂ ಆಗುವುದಿಲ್ಲ ಎಂದು ಹೇಳಿದಿರಾ ? "

" ಹಾಗೆ ಹೇಗೆ ಖಂಡಿತವಾಗಿ ಹೇಳಲಿಕ್ಕಾಗುತ್ತದೆ ? ಯೋಚನೆ ಮಾಡುವಾ ಎಂದೆ. "

" ಆಯಿತು. ನಿಮ್ಮ ಯೋಚನೆ ಮುಗಿಯುವುದೇ ಇಲ್ಲ. ಶಾಂತ ಇನ್ನೂ ಮಗು ಎಂದೇ ತಿಳಿದ ಹಾಗಿದೆ ನೀವು. ಮೊನ್ನೆ ಮಾಘಕ್ಕೆ ಹದಿನೇಳು ತುಂಬಿತು. ನಿಮಗಿನ್ನೂ ಮದುವೆಯ ಯೋಚನೆಯೇ ಇದ್ದಹಾಗಿಲ್ಲ. "

" ಹದಿನೇಳು ತುಂಬಿತೆ ? "

" ಅಲ್ಲವೆ ? ನಿಮಗೆ ಯಾವುದು ಗೊತ್ತಾಗುತ್ತದೆ ? ಜನ ಆಡಿಕೊಳ್ಳುವುದು ನಿಮ್ಮ ಕಿವಿಯನ್ನು ಮುಟ್ಟುವುದೇ ಇಲ್ಲ. ಮಗು ನಾಚಿಕೊಂಡು ಮುದ್ದೆಯಾಗಿ ಬಿಟ್ಟಿದೆ. ಮದುವೆಯಂಥ ಮದುವೆಯ ಮಾತನ್ನೂ ನನಗೆ ಹೇಳಬಾರದೆ ?.... "

ಶಾಸ್ತ್ರಿಗಳ ಗಮನ ಹೆಂಡತಿಯ ಮಾತಿನ ಕಡೆಗೆ ಇದ್ದ ಹಾಗಿರಲಿಲ್ಲ.

" ಹದಿನೇಳು ತುಂಬಿತೆ, ಶಾಂತಳಿಗೆ ? "

" ಹುಂ....ಹುಂ. ಹದಿನೇಳು. ಎಲ್ಲಿದ್ದೀರಿ ? ನಿಮಗೆ ಯಾವುದೂ ಯೋಚನೆಯೆ ಇಲ್ಲ. ವರ ಹುಡುಕುವುದಕ್ಕೆ ಹತ್ತು ಹೆಜ್ಜೆ ಹೋಗುವುದಿಲ್ಲ. ಎಲ್ಲವೂ ನಡೆದು ಮನೆಗೇ ಬರಬೇಕು. " ಶಾಸ್ತ್ರಿಗಳ ಮನಸ್ಸಿನಲ್ಲಿ " ಯೋಗ ಕ್ಷೇಮಂ ವಹಾಮ್ಯಹಂ...." ಸುಳಿದು ಹೋಯಿತು. " ಮನೆಗೆ ಬಂದ ವರನನ್ನು ಒಪ್ಪುವ ಹಾಗಿಲ್ಲ. ನನಗಂತೂ ಒಂದೂ ತಿಳಿಯದಾಗಿದೆ. ಆಕೆಯ ಮದುವೆಯ ವಿಚಾರವನ್ನು ನೀವು ಏನೇನು ಮಾಡುತ್ತೀರೊ, ಮಾಡುವುದೇ ಇಲ್ಲವೊ—ನನಗಂತೂ ಸಾಕಾಗಿಹೋಗಿದೆ.... "

ಶಾಸ್ತ್ರಿಗಳು ಹೆಂಡತಿಯ ಮಾತನ್ನು ಕೇಳುತ್ತಿದ್ದರು. ಕೇಳುತ್ತಿರಲಿಲ್ಲ. ಮನುಷ್ಯನ ಯೋಚನೆ ಎಲ್ಲಿಗೆ ನಿಲುಕೀತು ಎಂದು ಮನಸ್ಸು ಒಳಗಿನಿಂದ ಕೇಳುತ್ತಿತ್ತು. ಆದರೂ ಹೆಂಡತಿಯ ಮಾತೂ ನಿಜ. ಆದರೆ ಏನು ಮಾಡಬಹುದು ? ಶಾಸ್ತ್ರಿಗಳ ಹೆಂಡತಿಗೆ ಗೋಪಿ ಸಾಕ್ಷಾತ್ ನಾರಾಯಣನಾಗಿ ಕಾಣುವುದು ಸ್ವಾಭಾವಿಕವೆ. ಗೋಪಿಯಲ್ಲಿ ಯಾವ ಕೊರತೆಯೂ ಇರಲಿಲ್ಲ.

" ನನ್ನಮಾತು ಕೇಳಿದರೆ ಒಪ್ಪಿಬಿಡಿ. ಗೋಪಿಯಂಥ ವರ ಸಿಕ್ಕಬೇಕಾದರೆ—ಸರಿ. ನಾವು ಏನು ಮಾಡಿದರೂ ಏನಾಗಬೇಕು? ಏನೋ ಶಾಂತಳ ಭಾಗ್ಯ ತೆರೆದಿದೆ. ಅಂತೇ ರಾಘವೇಂದ್ರರಾಯರು ಇಲ್ಲಿಗೆ ಬಂದರು. ಈಗಾಗಲೆ ಊರಲ್ಲೆಲ್ಲ ಸುದ್ದಿಯೂ ಹಬ್ಬಿದೆ.... "

" ನೀವೇ ಹಬ್ಬಿಸುವವರು. ಶುದ್ಧ ಅವಿವೇಕ. "

" ಗೋಪಿಯೇ ಹೇಳುತ್ತಿದ್ದಾನಂತಲ್ಲ ? "

" ನನಗಂತೂ ಹೇಳಲಿಲ್ಲ—ಯಾರೂ "

" ಸರಿ. ನಿಮಗೆ ನಿಮ್ಮ ಪುಸ್ತಕ ಬಿಟ್ಟು ಹೊರಗೆ ಹೋಗಲು ಅವಕಾಶವಿದ್ದರಲ್ಲವೆ ಇನ್ನೊಬ್ಬರು ನಿಮಗೆ ಹೇಳುವುದು ? "

" ಇಷ್ಟೆಲ್ಲಾ ಬೇಕಾದ ಹಾಗೆ ನನ್ನ ಜೊತೆಯಲ್ಲಿ ಮಾತನಾಡುವವನಿಗೆ ಇಷ್ಟನ್ನು ಹೇಳಲಿಕ್ಕಾಗಲಿಲ್ಲವೆ?"

" ಯಾರು ? ಗೋಪಿ ತಾನಾಗಿಯೇ ಹೇಳಬೇಕಾಗಿತ್ತೆ ? ಸರಿಯಾಯಿತು. ಪಾಪ, ನಿಮ್ಮೆದುರು ಹೇಳಲಿಕ್ಕಾಗದ್ದಕ್ಕೆಯೆ ತನ್ನ ತಾಯಿಗೆ ಹೇಳಿದ."

ಶಾಸ್ತ್ರಿಗಳು ಸುಮ್ಮನಾದರು. ಕಳೆದ ಎಂಟು ಹತ್ತು ತಿಂಗಳಲ್ಲಿ ಗೋಪಿ

ತಮ್ಮ ಮನೆಗೆ ಬಂದ ನೂರಾರು ಸನ್ನಿವೇಶಗಳೆಲ್ಲವೂ ಅವರ ಕಣ್ಣೆದುರು ಸುಳಿದುವು. ಕೆಲವೊಂದು ಸನ್ನಿವೇಶಗಳಿಗೆ ಈಗ ಬೇರೆಯಾಗಿ ಅರ್ಥ ಹೇಳಬಹುದಾಗಿ ಕಂಡಿತು. ತಮ್ಮ ಮನೆಯಲ್ಲಿ ಗೋಪಿಗೆ ಇಷ್ಟು ಸಹಜ ಸಲಿಗೆಯನ್ನು ಕೊಡಬಾರದಾಗಿತ್ತು. ಕೊಡಬಾರದಾಗಿತ್ತು ಎನ್ನುವುದೂ ತಪ್ಪು. ಕೊಡುವವರು ಯಾರು ? ಕೊಳ್ಳುವವರು ಯಾರು ? ಕಾಲಚಕ್ರಕ್ಕೆ ತಡೆಯಿಲ್ಲ. ಯಾರ ಅಂಕಿತಕ್ಕೆ ಒಳಗಾದ ಬೊಂಬೆಗಳೊ ! ಎಂದುಕೊಂಡರು ಶಾಸ್ತ್ರಿಗಳು.

ಶಾಸ್ತ್ರಿಗಳು ಸುಮ್ಮನಾದುದನ್ನು ನೋಡಿ ಹೆಂಡತಿ

" ಏನೇನು ನಿಮ್ಮ ಯೋಚನೆಗಳೊ. ನನಗಂತೂ ಯಾವುದೂ ತಿಳಿಯುವುದಿಲ್ಲ. ನೀವಾಗಿಯಂತೂ ಒಂದು ಮಾತನ್ನು ನನಗೆ ಹೇಳುವುದಿಲ್ಲ. ಇಷ್ಟು ತಲೆ ಹಿಡಿದುಕೊಂಡು ಕೂಡುವಂಥದು ಈಗ ಏನು ಬಂದದ್ದು ?"

" ತಲೆ ಹಿಡಿದಿಲ್ಲ. ಪುಸ್ತಕ ಹಿಡಿದಿದ್ದೇನೆ. ಸರಿ. ಸ್ನಾನಕ್ಕೆ ಯಾವ ಹೊತ್ತಾಯಿತೊ. ಆಗಲೆ ಬಿಸಿಲೇರಿ ಬಿಟ್ಟಿತು.".

ಮಾತನ್ನು ಜಾರಿಸಲಿಕ್ಕೆ ಇದೊಂದು ಉಪಾಯ ಮಾತ್ರವಾಗಿತ್ತು. ಅವರ ಒಳಮನಸ್ಸು ಸಿಕ್ಕಿಕೊಂಡ ವ್ಯೂಹದಿಂದ ಬಿಟ್ಟುಬರುವುದು ಸಹಜ ಸಾಧ್ಯವಾಗಿ ಕಾಣಲಿಲ್ಲ. ಪಂಚಾಗವನ್ನು, ಜ್ಯೋತಿಷದ ಗ್ರಂಥಗಳನ್ನು ಬದಿಗಿಟ್ಟು ಉತ್ತರೀಯವನ್ನೆತ್ತಿಕೊಂಡು ಎದ್ದುನಿಂತರು.

" ಇಲ್ಲೇ ನಿಂತೆಯಲ್ಲ ? ಅಡಿಗೆ ಇಲ್ಲವೆ ?"

" ಏನು ಅಡಿಗೆ ? ನಿಮ್ಮ ಪೂಜೆ ಮುಗಿಯುವ ಹೊತ್ತಿಗೆ ಮೂರುಸಲ ಮಾಡಬಹುದು ಅಡಿಗೆಯನ್ನು."

" ಹುಂ. " ಎಂದು ನಿಟ್ಟುಸಿರೆಳೆದು ಶಾಸ್ತ್ರಿಗಳು ನಡುಮನೆಗೆ ಬಂದಾಗ ಹೆಂಡತಿ ಕೇಳಿದಳು. "ರಾಘವೇಂದ್ರರಾಯರು ಮತ್ತೆ ಬರುತ್ತೇನೆಂದರೆ?"

" ಬರಬಹುದು."

" ಹೀಗೆ ಮಾತನಾಡಿದರೆ ಏನೆಂದು ತಿಳಿಯಬೇಕೊ ? "

" ಏನೂ ತಿಳಿಯಬಾರದು.. ತಿಳಿಯುವ ಕಾಲ ಬಂದಾಗ ಎಲ್ಲ ತಾನಾಗಿಯೇ ತಿಳಿಯುತ್ತದೆ."

ಎಂದು ಶಾಸ್ತ್ರಿಗಳು ಬಚ್ಚಲಕ್ಕಿಳಿದರು. ಯೋಚನೆ ನಡೆದೇ ಇತ್ತು. ಅಂದು ದೇವತಾರ್ಚನೆಯಲ್ಲಿ ಕೂಡ ವಾಡಿಕೆಯಂತೆ ಮನಸ್ಸು ಸೇರಲಿಲ್ಲ.

ಎಲ್ಲೆಲ್ಲಿಯೋ ಅಲೆದಾಡುತ್ತಿತ್ತು. ಬಗೆಹರಿಯದ ಪ್ರಶ್ನೆಗಳನ್ನು ಕೇಳುತ್ತಿತ್ತು. ರಾಘವೇಂದ್ರರಾಯರು ಬಂದು ಮದುವೆಯ ಪ್ರಸ್ತಾಪವನ್ನೆತ್ತಿದಾಗಿನಿಂದ ಗೋಪಿಯ ಹೊರತಾಗಿ ಅವರಿಗೆ ಬೇರೆ ಯೋಚನೆಯೆ ಹೊಳೆಯುತ್ತಿರಲಿಲ್ಲ.

" ಇದು ಹೀಗೆ ಹೇಗಾಯಿತು? ತೀರ ವಿಚಿತ್ರ. ಹೀಗಾಗಬಹುವೆಂದು ಕನಸು ಮನಸ್ಸಿನಲ್ಲಿಯೂ ಬರಲಿಲ್ಲವಲ್ಲ! ಮೊದಲಿಗೆಯೆ ತಿಳಿದಿದ್ದರೆ ತಡೆಯ ಬಹುದಿತ್ತೇನೊ. ಸಾಧ್ಯವಿಲ್ಲ ಎಂದು ಕಾಣುತ್ತದೆ. ನಡೆಯುವುದನ್ನು ತಡೆಯು ವುದು ಸಾಧ್ಯವೆ ? ಈ ಕ್ಷಣಕ್ಕೆ ನಡೆಯಬೇಕಾದುದಕ್ಕೆ ನಮ್ಮ ಬುದ್ಧಿಗೆ, ಎಣಿ ಕೆಗೆ ಗೋಚರಿಸದೆ, ಎಷ್ಟು ಕಾಲದಿಂದ, ಎಷ್ಟು ವಿಧವಾಗಿ ಸಿದ್ಧತೆ ನಡೆದಿರು ತ್ತದೆಯೊ ! ಅದನ್ನೆಲ್ಲವನ್ನೂ ತಡೆಯುವುದೆಂದರೆ ಸೃಷ್ಟಿಯ ಕ್ರಮವನ್ನೇ ತಡೆಯಬೇಕು. ಕಾಲಚಕ್ರವನ್ನು ನಿಲ್ಲಿಸಬೇಕು....."

## ೨

ಕಮಲಮ್ಮ ರಾಘವೇಂದ್ರರಾಯರ ಬರವನ್ನೇ ಇದಿರು ನೋಡುತ್ತಿದ್ದರು. ಬಂದೊಡನೆಯೆ ಕೇಳಿದರು

" ಏನಾಯಿತು ?"

" ಏನಾಗುವುದು ?"

" ಅಂದರೆ ಶಾಸ್ತ್ರಿಗಳು ಏನೆಂದರು ಎಂದೆ. ಒಪ್ಪಿದರೆ? ಒಪ್ಪದೆ ಏನು?"

" ಯಾಕೆ ? ಒಪ್ಪಲೇಬೇಕೆಂಬ ಒತ್ತಾಯವಿಲ್ಲವಲ್ಲ."

ಶಾಸ್ತ್ರಿಗಳು ಮಾತನ್ನು ಮುಂದೂಡಿದ್ದರಿಂದ ರಾಯರಿಗೆ ಕೆಲಮಟ್ಟಿಗೆ ಅಸಮಾಧಾನವೆನಿಸಿದ್ದರೂ ಆ ಮನಃಸ್ಥಿತಿಯಲ್ಲಿಯೂ ಹೆಂಡತಿಯನ್ನು ಪೀಡಿಸುವ ಆಸೆಯಾಯಿತು. ಎಷ್ಟಾದರೂ- ಈಗ ದಿನ ಕಳೆದಿದ್ದರೂ—ಒಂದು ಕಾಲಕ್ಕೆ ತುಂಬಾ ರಸಿಕರಾಗಿದ್ದವರಲ್ಲವೆ ?

" ಒತ್ತಾಯವಿರದಿದ್ದರೂ ಒಪ್ಪದಿರುತ್ತಾರೆಯೆ ? "

" ಆಯಿತು. ನಿನ್ನ ಮಗ ಅಂದರೆ ಅಷ್ಟು ಅಭಿಮಾನ. ಇನ್ನೇನೂ ಇಲ್ಲ. ಹೆತ್ತವರಿಗೆ-ಎಂದು ಏನೋ ಶಾಸ್ತ್ರ ಹೇಳುತ್ತಾರೆ. ಅಲ್ಲವೆ ? "

" ಆ ಮಾತು ನಿಮಗೂ ಅನ್ವಯಿಸುತ್ತದೆ. "

" ಇಲ್ಲ ಎಂದೆನೆ ನಾನು ? "

" ನೀವು ಏನೂ ಅನ್ನಿ. ಅದಲ್ಲ ಈಗ ನನಗೆ ಬೇಕಾದದ್ದು. ಶಾಸ್ತ್ರಿಗಳು ಏನೆಂದರು, ಅದು ಬೇಕಾಗಿದೆ."

" ನೋಡುವಾ ಎಂದರು. "

" ಹಾದೆ ? "

ಆ ಒಂದು ಪ್ರಶ್ನೆಯಿಂದ ಕಮಲಮ್ಮನವರ ಮನಸ್ಸಿನಲ್ಲಿಯ ಹತ್ತಾರು ಭಾವನೆಗಳು ವ್ಯಕ್ತವಾಗುತ್ತಿದ್ದ ಹಾಗಿತ್ತು. ಮಗನ ವಿಷಯದಲ್ಲಿಯ ತಮ್ಮ ಅಭಿಮಾನಕ್ಕೆ, ತಮ್ಮ ಘನತೆಗೆ, ಯೋಗ್ಯತೆಗೆ ಏಟು ಬಿದ್ದಿತ್ತು. " ತಮ್ಮಂಥವರು " ಹೆಣ್ಣು ಬೇಡಲು— ಅದೂ ಗೋಪಿಯಂಥ ವರನಿಗಾಗಿ— ಮನೆತನಕ

ಹೋದರೆ ಶಾಸ್ತ್ರಿಗಳಂಥವರು, ಎಷ್ಟಾದರೂ ಪರಾವಲಂಬಿಗಳು, ನೋಡುವಾ ಎಂದು ತನ್ನ ಪತಿಯನ್ನು ಹಿಂತಿರುಗಿ ಕಳುಹಿಸಬೇಕೆಂದರೆ ?

" ನೋಡುವಾ ಎಂದರೆ ? ಗೋಪಿಯನ್ನು ಅವರು ನೋಡಿಲ್ಲವೇನು ? ಬಹಳ ಹೆಚ್ಚಾಯಿತು ಈ ದಿಮಾಕು. ತಾವೇನು, ತಮ್ಮ ಯೋಗ್ಯತೆ ಏನು ? ಇಷ್ಟಾದರೂ ಯೋಚನೆ ಬೇಡವೆ ? ಮೆತ್ತಗಾಗಿ ಕಂಡಲ್ಲಿ ಮೊಣಕೈಯಿಂದ ಅಗಿಯುವ ಜನ ಇದು. ಎಷ್ಟಾದರೂ.... "

" ಯಾಕೆ ಸುಮ್ಮನೆ ಈ ನಿಷ್ಠುರ ಮಾತು ? ಯಾರಿಗಾದರೂ ಒಂದಿಷ್ಟು ಯೋಚನೆ ಮಾಡಲಿಕ್ಕೆ ಅವಕಾಶ ಬೇಕೇ ಬೇಕು ಇಂಥ ವಿಷಯದಲ್ಲಿ— "

"ಸರಿ. ನಿಮಗಂತೂ ಯಾವುದೂ ಕೆಟ್ಟದಾಗಿ ಕಾಣುವುದೇ ಇಲ್ಲ. ಇಷ್ಟು ಬೇಡವಾಗಿದ್ದರೆ ಬಿಟ್ಟುಬಿಡಲಿ. ಗೋಪಿಗೆ ನಾನೇ ಚೆನ್ನಾಗಿ ತಿಳಿಹೇಳುತ್ತೇನೆ. ಬಡತನಕ್ಕೆ ಸರಿಯಾಗಿ ಬಡಿವಾರ ಬೇರೆ. ಬೇಡವೇ ಬೇಡ. ಇಟ್ಟುಕೊಂಡು ಕೂಡಲಿ ಮಗಳನ್ನು ಮನೆಯಲ್ಲಿ. ಮನೆಯೆತ್ತರ ಮಗಳು ಬೆಳೆದರೂ ಮದುವೆ ಮಾಡುವ ಯೋಗ್ಯತೆ ಇಲ್ಲದವರಿಗೆ— "

ಹೆಂಡತಿಯ ಸಿಡುಕು ರಾಘವೇಂದ್ರರಾಯರಿಗೆ ಮೋಜೆನಿಸಿತು. ಶಾಸ್ತ್ರಿಗಳ ಮಾತಿನಲ್ಲಿ ಅಂಥ ಭರವಸೆ ಅವರಿಗೆ. ಗೋಪಿಯನ್ನು ಮಾತಾಡಿಸಿದ ನಂತರವೇ ತಮ್ಮ ಅಭಿಪ್ರಾಯವನ್ನು ಹೇಳಬೇಕೆಂದದ್ದು ಅವರಿಗೆ ಸಮಂಜಸವಾಗಿಯೇ ಕಂಡಿತ್ತು. ಆದರೆ ಅವರ ತಾಳ್ಮೆತಿಳಿವುಗಳು ಕಮಲಮ್ಮನಂಥ ಹೆಂಗಸರಿಗೆ ಎಲ್ಲಿಂದ ಬರಬೇಕು ? ಕಮಲಮ್ಮನ ಎಣಿಕೆಯ ಪ್ರಕಾರ ಶಾಸ್ತ್ರಿಗಳು ಕುಣಿದಾಡಿ, ಗಂಡನ ಜೊತೆಯಲ್ಲಿಯೇ ಮನೆಗೆ ಬಂದು ತಮ್ಮ ಸಂತೋಷದಕಿಂತಲೂ ಹೆಚ್ಚಾಗಿ ಕೃತಜ್ಞತೆಯನ್ನು ಹೇಳಬೇಕಾಗಿತ್ತು.

" ನೀವೇನು ಹೇಳಿದಿರಿ ? "

"ನಾನೇನು ಹೇಳುವುದು? ಇದ್ದ ವಿಷಯವನ್ನೆಲ್ಲ ವಿವರವಾಗಿ ಹೇಳಿದೆ. ಗೋಪಿ ಹಟಹಿಡಿದಿದ್ದಾನೆಂದೂ ಹೇಳಿದೆ. "

" ಅಷ್ಟು ಹೇಳಿದ ಮೇಲೆ–ಸರಿಯಾಯಿತಲ್ಲ. ವೈಯ್ಯಾರಿಗೆ ಒಡವೆ ಸಿಕ್ಕಹಾಗಾಯಿತು. ಅವರು ಹೇಳಿದ್ದನ್ನು ಕೇಳಿಕೊಂಡು ನೀವೂ ತೆಪ್ಪಗಾಗಿ ಬಂದುಬಿಟ್ಟಿರಿ. ಅಲ್ಲವೆ ? "

ಕಮಲಮ್ಮನವರ ಮಾತಿನಲ್ಲಿಯ ಅಣಕು ರಾಯರನ್ನು ನೋಯಿಸ

ಲಿಲ್ಲ. ಹೆಂಡತಿಯ ಈ ಮಾತಿನ ರೀತಿ ಅವರಿಗೆ ಹೊಸದಾಗಿರಲಿಲ್ಲ. ಹೆಂಡತಿಗೆ ಈ ರೀತಿ ನಿರಾಶೆ ಎನಿಸುವುದೂ ಸಹಜವೇ ಎಂದುಕೊಂಡು ಸುಮ್ಮನಾದರು. ಮೊದಲಿನಿಂದಲೂ ತಮ್ಮ ಅಣ್ಣನ ಮಗಳಾದ ವತ್ಸಲೆಯನ್ನ ಸೊಸೆಯನ್ನಾಗಿ ಮಾಡಿಕೊಳ್ಳುವುದೆಂದು ನಿಶ್ಚಯಿಸಿದ್ದ ಕಮಲಮ್ಮನವರಿಗೆ ಗೋಪಿಯ ಈ ಹೊಸ ಉಪಕ್ರಮ ಮೊದಲೇ ನಿರಾಶೆಯನ್ನುಂಟುಮಾಡಿತ್ತು. ಕೊನೆಯಲ್ಲಿ, ಆಯಿತು, ತನಗೆ ತಿಳಿದ ಹಾಗೆ ಮಾಡಲಿ, ಅವನು ಸುಖವಾಗಿರುವುದು ಮುಖ್ಯ ಎಂದು ಏನೇನೋ ಸಮಾಧಾನ ಹೇಳಿಕೊಳ್ಳುತ್ತಿರುವಾಗ ಈ ಶಾಸ್ತ್ರಿ ಮೀನಮೇಷ ಮಾಡುತ್ತ ಮಾತನ್ನು ಮುಂದೂಡಿದ್ದು ಅವರಿಗೆ ನೋವನ್ನುಂಟುಮಾಡಿತ್ತು. ಅದಕ್ಕೆಂದೇ ಕೇಳಿದರು—

" ಇನ್ನೂ ಹತ್ತುಬಾರಿ ನಿಮ್ಮನ್ನು ಮನೆಯತನಕ ಕಾಲೆಳೆಯಿಸಿದಾಗಲಿ ಅವರಿಗೆ ಸಮಾಧಾನ ಎಂದು ಕಾಣುತ್ತದೆ."

" ಹಾಗೇಕೆ ತಿಳಿಯಬೇಕು ? ಇನ್ನು ಮೂರು ನಾಲ್ಕು ದಿನಗಳಲ್ಲಿಯೇ ಹೇಳಬಹುದು."

" ಹೇಳಬಹುದು ! ಅಷ್ಟಾದರೂ ಹೇಳಿದರೆ ? "

" ಗೋಪಿಯು ಕೂಡ ಮಾತನಾಡಬೇಕು ಎಂದರು."

" ಗೋಪಿಯು ಕೂಡ ಏನು ಮಾತನಾಡುವುದು ? "

" ಅದೆಲ್ಲ ನನಗೇನು ಗೊತ್ತು ? "

ಶಾಸ್ತ್ರಿಗಳ ಮನಸ್ಸಿನಲ್ಲಿ ಗೋಪಿಗೆ ಶಾಂತಳನ್ನು ಕೊಡುವುದು ಇರದೇ ಇದ್ದರೆ, ಅದೇ ವಿಷಯವನ್ನು ಅವರು ಗೋಪಿಯ ಎದುರು ಪ್ರಸ್ತಾಪಿಸುವವರಿದ್ದರೆ ಒಂದು ದೃಷ್ಟಿಯಿಂದ ಒಳ್ಳೆಯದೇ ಆಯಿತು ಎಂದು ಕಮಲಮ್ಮ ಸಮಾಧಾನ ಹೇಳಿಕೊಂಡರು. ಆದರೆ ಶಾಸ್ತ್ರಿಗಳು ಕೂಡಲೆ ಒಪ್ಪಿಗೆಯನ್ನು ಹೇಳದಿದ್ದುದು ಅದೇಕೋ ಅವರಿಗೆ ಒಳಮನಸ್ಸಿನಲ್ಲಿ ಅಸ್ಪಷ್ಟವಾಗಿ ಆತಂಕವನ್ನುಂಟುಮಾಡಿತ್ತು. ಗೋಪಿಗೆ ಆಗಲೆ ಇಪ್ಪತ್ತಾರು ವಯಸ್ಸು. ಎಂದಿಗೊ ಮದುವೆಯಾಗಬೇಕಿತ್ತು. ಆಗಬಹುದೂ ಇತ್ತು. ಲಕ್ಷ್ಮಿ ಸರಸ್ವತಿಯರಂಥ ವಧು ಬಂದು ಹೋಗಿದ್ದವು. ಅದೇನೋ ಆತನ ಮದುವೆಯ ಯೋಗ ಸುಲಭವಾಗಿ ಕೂಡಿಬರುವಂಥದಾಗಿ ಕಾಣಲಿಲ್ಲ. ಇದುವರೆಗೆ ಮದುವೆಯೇ ಬೇಡ ಎನ್ನುತ್ತಿದ್ದವ ಈಗ ತಾನಾಗಿಯೇ ಸಿದ್ಧನಾಗಿದ್ದಾಗ ಶಾಸ್ತ್ರಿಗಳಂಥ ಸಾಮಾನ್ಯ

ಪರಿಸ್ಥಿತಿಯಲ್ಲಿದ್ದವರು ಈ ರೀತಿ ಹಿಂತೆಗೆಯಬೇಕೆಂದರೆ ?

"ಗೋಪಿ ಅವರ ಮನೆಯಲ್ಲಿ ಇಷ್ಟು ಸಲಿಗೆಯಿಂದ ಇರಲೇಬಾರದಾಗಿತ್ತು. ಏನೋ ಹಳೆಯ ಋಣಾನುಬಂಧ. ಗೊತ್ತಿದ್ದವರು ಎಂದು ನಾನು ಗೋಪಿಗೆ ಅಡ್ಡಿ ಮಾಡಲಿಲ್ಲ. ಶಾಸ್ತ್ರಿಗಳ ಈ ಮೀನಮೇಷ ಎಲ್ಲ ತೋರಿಕೆಯದು. ಒಳಗಿನಿಂದಲೇ ಸಂಚುಹೂಡಿ ಈಗ ಈ ನಾಟಕ ಮಾಡುತ್ತಿದ್ದಾರೆ."

"ಯಾಕೆ ಸುಮ್ಮನೆ ಕೆಟ್ಟ ಮಾತು ? ಶಾಸ್ತ್ರಿಗಳ ಯೋಗ್ಯತೆ ನಿನಗೆ ಗೊತ್ತಿಲ್ಲವೆ ? ಅಂಥ ಮನುಷ್ಯರೆ ಅವರು ?"

"ಆಯಿತು. ನೀವು ಯಾವಾಗಲೂ ಕಣ್ಣುಮುಚ್ಚಿಕೊಂಡೇ ಇರುತ್ತೀರಿ. ನಿಮಗೇನು ಗೊತ್ತಾದೀತು, ಗಂಡಸರಿಗೆ ? ಆ ಶಾಸ್ತ್ರಿಗಳ ಹೆಂಡತಿಯ ಆಟ ಇದು. ಈಗ ಮಹಾಸಂಭಾವಿತೆಯ ಹಾಗೆ—"

"ಇದೆಲ್ಲ ಸುಮ್ಮನೆ ಮಾತು. ಅವರು ಏನೇನು ಮಾಡಿದರು ನಿನಗೆ ಗೊತ್ತೆ? ಏನೂಮಾಡಿರಲಾರರು. ತುಂಬಾ ಸಾತ್ವಿಕ ಜನ. ತಮ್ಮ ನೆರಳಿಗೆ ಹೆದರಿಕೊಂಡು ಜೀವನ ಸಾಗಿಸುವವರು. ಅಂಥವರ ಮೇಲೆ ಯಾಕೆ ಈ ವೃಥಾ ಆರೋಪ ? ಅಲ್ಲದೆ ಒಂದುವೇಳೆ ಅವರು ಏನೋ ಯುಕ್ತಿ ಹೂಡಿ ಗೋಪಿಯನ್ನು ಮನವೊಲಿಸಿಕೊಂಡಿದ್ದರೂ ಕೆಡಕೇನಾಯಿತು ? ಕೊನೆಗೊಮ್ಮೆ ಮದುವೆಮಾಡಿಕೊಳ್ಳಲಾದರೂ ಒಪ್ಪಿದನಲ್ಲ ? ಶಾಂತಾ ಒಳ್ಳೆಯ ಹುಡುಗಿ. ಅವನಾಗಿಯೇ ಮೆಚ್ಚಿದ್ದಾನೆ...."

"ನಾನು ಬೇಡ ಎಂದ ಹಾಗೆ ಹೇಳುತ್ತಿದ್ದೀರಲ್ಲ ? ಆ ನಿಮ್ಮ ಶಾಸ್ತ್ರಿಗಳಿಗೇ ಹೇಳಿ ಈ ಮಾತನ್ನು ಹತ್ತು ಸಲ. ತೀರ ವಿಚಿತ್ರವಾಯಿತು ಇದೆಲ್ಲ."

"ವಿಚಿತ್ರವೇನೂ ಇಲ್ಲ. ನಡೆಯಬೇಕಾದದ್ದೇ. ಏನೋ ಆತನಿಗೆ ಮನಸ್ಸಾಯಿತು. ಇದು ಬೇಕು, ಇದು ಬೇಡ, ಇದು ಸರಿ, ಇದು ತಪ್ಪು ಎಂದೆಲ್ಲ ಎಣಿಕೆ ಹಾಕಿದನಂತರ ಪ್ರೀತಿ ಉದಯಿಸುತ್ತದೆಯೆ! ಪ್ರೀತಿ ಕುರುಡು ಎನ್ನುವುದಿಲ್ಲವೆ ?"

"ಆಯಿತು ನೀವು, ನಿಮ್ಮ ತತ್ವಜ್ಞಾನ. ಶಾಸ್ತ್ರಿಗಳು ನಿಮಗೆ ಮಾತೂ ಹೇಳಿ ಕಳಿಸಿದ ಹಾಗಿದೆ. ಆಗಲಿ ನಿಮಗೆ ತಿಳಿದಹಾಗೆ, ತಿಳಿದಾಗ ಮಾಡಿರಿ. ನಾನು ಏನೆಂದರೆ ಏನಾಗಬೇಕು ?"

"ಎಲ್ಲವೂ ಸರಿಯಾಗುತ್ತದೆ. ಯಾಕೆ ಕಳವಳ ? ಗೋಪಿ ಎಲ್ಲಿ ?"

" ಎಲ್ಲಿ ! ಅವನೆಲ್ಲಿಗೆ ಹೋಗುವುದು ? ಬೆಳಿಗ್ಗೆ ಎದ್ದು ರಂಗಧೂಳಿಗೆ ಹೋದ. "

"ಬೆಳಿಗ್ಗೆ ? ಬರುವುದಕ್ಕೆ ತುಂಬಾ ಬಿಸಿಲಾಗುತ್ತದೆ. ಬೇಡ ಎನ್ನಲಿಲ್ಲವೆ?"

" ನಾನು ಬೇಡ ಎಂದರೆ ಕೇಳುತ್ತಾನೆಯೆ ? ಮಧ್ಯಾಹ್ನಕ್ಕೆ ಬರುವುದಿಲ್ಲ. ಸಂಜೆಗೇ ಬರುತ್ತೇನೆಂದು ಫಲಾಹಾರ ಏನೇನೊ ಮಾಡಿಸಿಕೊಂಡು ಹೋದ. ಒಬ್ಬನೇ ಅಲ್ಲಿ ಕುಳಿತು ಏನುಮಾಡುತ್ತಾನೆಯೋ ! "

" ಏನು ಮಾಡುವುದು ? ರಂಗಧೂಳಿ ಎಂದರೆ ಆತನಿಗೂ ಹುಚ್ಚು. ಹುಂ...."

ಎಂದು ಮುಗುಳುನಗೆ ನಕ್ಕು ಹೆಂಡತಿಯನ್ನು ನೋಡಿದರು. ಮೂವತ್ತು ವರ್ಷಗಳಾಚೆಯ ಕನಸಿನ ರಾಜ್ಯದ ಪ್ರತೀಕವಾಗಿತ್ತು ಆ ಮುಗುಳುನಗೆ. ಕಮಲಮ್ಮನಿಗೂ ಇದು ಹೊಳೆಯಿತು. " ಯಾರಿಗಾದರೂ ಹುಚ್ಚುಹಿಡಿಸುವ ಸ್ಥಳವೇ ಅದು. ಇಂದು ಗೋಪಿ ತನ್ನ ಯೌವನದಲ್ಲಿ ರಂಗಧೂಳಿಯಂಥ ರಮಣೀಯ ಸ್ಥಳವನ್ನು ಮೋಹಿಸಿ ಸದಾಕಾಲವೂ ಅಲ್ಲಿಯೇ ಇರಬೇಕೆನ್ನುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ" ಎನಿಸಿತು ಗಂಡಹೆಂಡಿರಿಬ್ಬರಿಗೂ. ರಂಗಧೂಳಿ ಅವರಿಬ್ಬರ ಯೌವನದ ಹೊಂಗನಸುಗಳ ಪ್ರತೀಕವಾಗಿತ್ತು. ಅಂಥ ಸ್ಥಳ ಅದು—

೩

ರಂಗಧೂಳಿ ನಿಸರ್ಗ ರಮಣೀಯವಾದ ಸ್ಥಳ. ದೇವನೂರಿಗೆ ಐದು ಮೈಲಿ ದೂರದಲ್ಲಿಯ ಕಾಡಿನೊಳಗಿಂದ ಮಾರ್ಕಂಡೇಯ ನದಿ ಮೊದಲು ಬಾರಿ ಹೊರಬಿದ್ದು ಒಂದು ಕಿರಿದಾದ ಗುಡ್ಡವನ್ನು ಬಳಸಿಕೊಂಡು ಮುಂದೆ ಪ್ರಶಾಂತವಾಗಿ ಹರಿಯತೊಡಗುವ ಸ್ಥಾನ. ಅದರ ಸೊಬಗು ಕೆಲಮಟ್ಟಿಗೆ ನಿಸರ್ಗದತ್ತವಾಗಿದ್ದರೂ ಮುಂದೆ ಅದನ್ನು ಗುರುತಿಸಿ ಅದರ ಚೆಲುವನ್ನು ನೂರ್ಮಡಿಯಾಗಿಸಿದವರು ರಾಘವೇಂದ್ರರಾಯರು. ನಲವತ್ತು ವರ್ಷಗಳ ಹಿಂದೆ ಆ ಕಾಡಿನ ಅಂಚಿನೆಡೆಗೆ ಚಿರತೆಗಳ ಬೆದರಿಕೆಗಾಗಿ ಯಾರೂ ಸುಳಿಯುತ್ತಿರಲಿಲ್ಲ. ಪ್ರಪಂಚದ ಆದಿಯಿಂದ ಮಾರ್ಕಂಡೇಯ ಅಲ್ಲಿಂದ ಹರಿದುಬರುತ್ತಿದ್ದರೂ ಯಾರೂ ಗಮನಿಸಿದ್ದಹಾಗಿರಲಿಲ್ಲ. ಆ ಹೊಳೆಯ ತಿರುವು, ಆಚೆಯ ದಡದಿಂದಲೇ ನೇರವಾಗಿ, ಕಡಿದಾಗಿ ನಿಂತ ಹಚ್ಚಹಸಿರು ಬೆಟ್ಟ, ಈಚೆಯ ದಡದಗುಂಟ ಸಾಲುಸಾಲಾಗಿ ನಿಂತ ಚಿಕ್ಕದೊಡ್ಡ ದಿನ್ನೆಗಳು, ದಿನ್ನೆಗಳ ಈಚೆಗೆ ಇಳಿಜಾರಾಗಿ ಹರಹಿದ ಬಯಲು ಯಾವ ಕಾಲದಿಂದಲೂ ರಾಘವೇಂದ್ರರಾಯರಿಗೆ, ಅವರ ಹಿರಿಯರಾದ ಅಚ್ಯುತರಾಯರಿಗೆ, ಅವರ ಹಿರಿಯರಾದ ಗೋಪಾಲರಾಯರಿಗೆ ಸೇರಿದ್ದುವು. ನೂರಿನ್ನೂರು ವರ್ಷಗಳಿಂದ ಆ ಬೆಟ್ಟ, ಹೊಳೆಯ ಈಚೆಯ ಬಯಲು, ಈ ಮನೆತನಕ್ಕೆಯೆ ನಡೆದು ಬಂದಿದ್ದರೂ ಮೊದಲನೆಯ ಮಹಾಯುದ್ಧದ ಕಾಲಕ್ಕೆ ಆ ಬೆಟ್ಟದ ಬದುಕಿನಲ್ಲಿ ಒಂದು ಸಂಧಿಕಾಲ ಬಂದಂತಾಗಿತ್ತು.

ಯುದ್ಧಕಾಲದಲ್ಲಿ ಮರದ ಕೊರಡುಗಳಿಗೆ ಎಂದಿಲ್ಲದ ಬೇಡಿಕೆ ಬಂದಿತ್ತು. ಅಚ್ಯುತರಾಯರಿಗೆ ನಾಲ್ಕು ಕಾಸು ಸಂಪಾದಿಸಬೇಕೆಂಬ ಆಸೆಯಾಯಿತು. ಈಚೆಯ ಸೆರಗನ್ನು ಕಡಿಸಿ ಹಾಕಿದರು. ಮರ ಸಾಗಿಸಿದರು. ಕೈತುಂಬ ದುಡ್ಡು ಬಂದಿತ್ತು. ಕಟ್ಟಿಗೆ ಸಾಗಿಸುತ್ತಿದ್ದಾಗ ಒಂದು ಸಾಯಂಕಾಲ ಹೊಳೆಯ ಈಚೆಯ ದಂಡೆಯ ಮೇಲೆ ನಿಂತು ಉತ್ತರದ ಕಡೆಗೆ ನೋಡಿದಾಗ ಎಡಗಡೆಯಿಂದ ಸೂಸಿಬರುತ್ತಿದ್ದ ಇಳಿಬಿಸಿಲಿನಲ್ಲಿ ಎದುರಿನ ಬಯಲು—ಅದೆಲ್ಲವನ್ನೂ

ಅಡರಿಕೊಂಡು ನಿಂತ ಪೊದೆಕಂಟಿಗಳು— ರಮಣೀಯವಾಗಿ ಕಂಡವು. ಅವರ ಸೌಂದರ್ಯ ದೃಷ್ಟಿಯಲ್ಲಿ ಒಂದಿಷ್ಟು ವ್ಯವಹಾರವೂ ಸೇರಿಕೊಂಡಿತ್ತು. ಈ ಪೊದೆಯನ್ನೆಲ್ಲ ಸವರಿದರೆ ಎದುರಿನ ಐವತ್ತು ಎಕರೆಗೆ ಮೀರಿ ನೆಲವನ್ನು ಸಾಗು ಮಾಡಬಹುದು ಎಂದು ತೋರಿತ್ತು. ಬೆನ್ನ ಹಿಂದೆಯೆ ಹೊಳೆ. ಆದರೆ ನಿಂತ ದಿನ್ನೆಯಂಥ ಎರಡು ದಿನ್ನೆಗಳನ್ನು ಕೊರೆದು ನೀರು ಹಾಯಿಸಿಕೊಳ್ಳಬೇಕು. ಅದೆಲ್ಲ ಅಸಾಧ್ಯವಾಗಿ ಕಂಡಿತು. ಅಲ್ಲದೆ ಒಂದೊಂದು ಸಲ ಮಳೆಗಾಲದಲ್ಲಿ ಮಾರ್ಕಂಡೇಯ ಎಲ್ಲಿಲ್ಲದ ಅಬ್ಬರದಿಂದ ಹರಿಯತೊಡಗಿದರೆ ಆ ನೆರೆಯ ಎದುರು ಯಾವುದೂ ತಡೆಯುವ ಹಾಗಿರಲಿಲ್ಲ. ಪೊದೆಗಳನ್ನು ಸವರಿಸಿ ನೀರು ಹರಿಯಿಸಿದಾಗ ನೆರೆ ಬಂದುಬಿಟ್ಟರೆ ನೆಲ ಸರೋವರವಾಗಿ, ಹಾಕಿದ ಹಣ ಅದರಲ್ಲಿ ಮುಳುಗಿಹೋದೀತು ಎಂದು ಮುಂತಾಗಿ ಯೋಚನೆ ಮಾಡಿ ಕೈಕೊಳ್ಳಬಹುದಾದ ಯೋಜನೆಯನ್ನು ತಳ್ಳಿಹಾಕಿದ್ದರು.

ಆಗ ರಾಘವೇಂದ್ರರಾಯರಿಗೆ ಇಪ್ಪತ್ತೆರಡು ವಯಸ್ಸಿದ್ದಿರಬಹುದು. ಹೊಲಮನೆಗಳಲ್ಲಿ ಮೊದಲಿನಿಂದಲೂ ಆಸಕ್ತಿ. ಇತ್ತೀಚೆ ಮೂರು ವರ್ಷ ಪುಣೆಯ ಕಾಲೇಜಿನಲ್ಲಿ ಓದುತ್ತಿದ್ದರೂ ಅದೇನೂ ಯಾವ ನಿಲುಗಡೆಗೆ ಬರುವ ದಾರಿ ಕಾಣುತ್ತಿರಲಿಲ್ಲ. ಅಚ್ಯುತರಾಯರಿಗೆ ಮಗ ದೊಡ್ಡ ವಕೀಲನಾಗಬೇಕೆಂಬ ಬಯಕೆ. ಆದರೆ ಮುಂದೆ ಒಂದು ವರ್ಷದಲ್ಲಿಯೇ ರಾಘವೇಂದ್ರರಾಯರು ಕಾಲೇಜಿಗೆ ಶರಣುಹೊಡೆದು ಅವರ ಬಯಕೆಯನ್ನು ಮುರಿದು ಬಿಟ್ಟಿದ್ದರು. ಇದಕ್ಕೆ ಕಾರಣ ಅವರ ಮದುವೆ. ಅಥವಾ ಮದುವೆಯಾಗಬೇಕೆಂಬ ಆಸೆ. ರಜೆಗೆಂದು ಹಳ್ಳಿಗೆ ಬಂದಾಗ ಊರ ಶಾನುಭೋಗರ ಮನೆಯ ಚೆಲುವೆಯಾದ ಮಗಳನ್ನು ಕಂಡು ಕುತೂಹಲಪಟ್ಟಿದ್ದರು. ರಜೆ ಮುಗಿದ ಮೇಲೆ ಕಾಲೇಜು ಸೇರಿದರೂ ನೋಡಿದ ಮುಖ ಮನಸ್ಸಿನಿಂದ ಮರೆಯಾಗಲಿಲ್ಲ. ಓದಿನಲ್ಲಿ ಆಸಕ್ತಿ ಕುಗ್ಗತೊಡಗಿತು. ಮುಂದಿನ ಒಂದೆರಡು ಟರ್ಮ್ ಮುಗಿಯುವ ಹೊತ್ತಿಗೆ ಓದೂ ಮುಗಿಯಿತು. ರಜೆಗೆ ಮನೆಗೆ ಬಂದವರು ಮತ್ತೆ ಕಾಲೇಜು ಸೇರಲೇ ಇಲ್ಲ. "ಓದಿಯಾದರೂ ಏನು ? ಕೆಲಸಕ್ಕೆ ಸೇರಬೇಕಾದದ್ದಿಲ್ಲ. ಹೊಲಮನೆ ಬಿಟ್ಟು ಪಟ್ಟಣ ಸೇರಿ ಇರುವ ಹಾಗೆಯೂ ಇಲ್ಲ. ಕಲಿತಷ್ಟೇ ಸಾಕು." ಎಂದು ಮುಂತಾಗಿ ಯುಕ್ತಿವಾದ ಹೂಡಿದ್ದರು. ತಂದೆಗೆ ಇದಾವುದೂ ಒಪ್ಪಿಗೆಯಿರಲಿಲ್ಲ. ಆದರೇನು ಮಾಡುವುದಕ್ಕಿತ್ತು ? ಇದೆಲ್ಲವೂ

ಶಾನುಭೋಗರ ಮಗಳ ಪ್ರಭಾವವೆಂದೂ ತಿಳಿದವರಾಗಿದ್ದರು. ಇಷ್ಟು ಹತ್ತಿರದ-ಊರಲ್ಲಿಯ-ಸಂಬಂಧ ಬೇಡ ಎಂದು ಹತ್ತಾರು ಕಡೆಯಲ್ಲಿ ಮದುವೆಯ ಪ್ರಸ್ತಾಪ ಹೂಡಿದ್ದರು. ಆದರೆ ಮರುವರ್ಷವೇ ದೇಶದಾದ್ಯಂತವೂ ಬೀಸಿದ ಸಾವಿನ ಗಾಳಿಯಲ್ಲಿ ಎಲ್ಲವನ್ನೂ ಇದ್ದಕ್ಕಿದ್ದ ಹಾಗೆಯೆ ಬಿಟ್ಟು ಹೋಗಿಬಿಟ್ಟರು. ಮುಂದೆ ವರ್ಷ ಮುಗಿಯುವ ಹೊತ್ತಿಗೆ ತಾಯಿಯೂ ಹೋಗಿಬಿಟ್ಟಿದ್ದಳು.

ಮೊದಮೊದಲು ರಾಘವೇಂದ್ರರಾಯರಿಗೆ ಯಾವುದೂ ತೋಚಲಿಲ್ಲ. ಮುರಿದ ಮನೆಯನ್ನು ಮೊದಲು ಕಟ್ಟಬೇಕಾಗಿದ್ದಿತು. ಸುತ್ತುಸುತ್ತಾಗಿ ಶಾನುಭೋಗರ ಕಿವಿಗೆ ತಾವು ಬಯಸುತ್ತಿದ್ದ ಸಂಬಂಧ ಮುಟ್ಟುವಂತೆ ಹಂಚಿಕೆ ಹಾಕಿದರು. ಶಾನುಭೋಗರು ಇದಕ್ಕಾಗಿಯೆ ಕಾಯುತ್ತಿದ್ದ ಹಾಗಿತ್ತು. ಅಚ್ಯುತರಾಯರು ಬದುಕಿದ್ದಾಗ ಈ ಪ್ರಸ್ತಾಪವನ್ನೆತ್ತುವ ಹಾಗೆಯೆ ಇರಲಿಲ್ಲ. ಒಂದೆರಡು ಸಂದರ್ಭಗಳಲ್ಲಿ-ವಿಶೇಷವಾಗಿ ಮರ ಸಾಗಿಸುವ ಸಂದರ್ಭದಲ್ಲಿ-ವೈಮನಸ್ಯ ಉಂಟಾಗಿತ್ತು. ಮಗಳನ್ನು ರಾಘವೇಂದ್ರರಾಯರಿಗೆ ಕೊಡುವ ಆತುರವಿದ್ದರೂ ಬಾಯಿ ಇರಲಿಲ್ಲ. ಹೀಗಾಗಿ ಅಚ್ಯುತರಾಯರು ಹೋದಮೇಲೆ ಇಬ್ಬರಿಗೂ ಅನುಕೂಲವೇ ಆಗಿ ಕೆಲವೇ ದಿನಗಳಲ್ಲಿ ಮದುವೆ ಯಥಾಕ್ರಮವಾಗಿ ನಡೆದಿತ್ತು. ಶಾನುಭೋಗರ ಮಗಳಿಗೆ ಮಾವನಿಲ್ಲದ ಮನೆಯಿತ್ತೆಂಬುದನ್ನು ಅಚ್ಯುತರಾಯರು ತಿಳಿದಿದ್ದರೊ ಇಲ್ಲವೊ. ಆ ವಿಷಯ ರಾಘವೇಂದ್ರರಾಯರಿಗೆ ತಂದೆಯ ಮರಣದ ನಂತರವೇ ತಿಳಿದಿದ್ದಿತಾದ್ದರಿಂದ ಅದನ್ನು ಕುರಿತು ಇನ್ನು ಮುಂದೆ ಯೋಚಿಸಬೇಕಾಗಿರಲಿಲ್ಲ.

ಮದುವೆಯಾದ ನಾಲ್ಕಾರು ತಿಂಗಳುಗಳಲ್ಲಿಯೇ ಶಾನುಭೋಗರು ಅಳಿಯನ ಆಸ್ತಿಪಾಸ್ತಿಗಳನ್ನು, ಕೊಡಕೊಳ್ಳುವ ಎಲ್ಲ ವ್ಯವಹಾರಗಳನ್ನು ಸರಿಮಾಡಿ ವ್ಯವಸ್ಥಿತಗೊಳಿಸಿದ್ದರು. ಎಲ್ಲವೂ ಒಂದು ಹಿಡಿತಕ್ಕೆ ಬಂದಾಗಲೆ ರಂಗಧೂಳಿಯ ಯೋಜನೆ ರಾಘವೇಂದ್ರರಾಯರ ಮನಸ್ಸಿನಲ್ಲಿ ಮೂಡಿದ್ದು. ಅದಕ್ಕೊಂದು ವಿಶೇಷ ಕಾರಣವೂ ಇದ್ದಿತು. ತಂದೆ ಬದುಕಿದ್ದಾಗ-ತಾನು ಶಾನುಭೋಗರ ಮಗಳನ್ನು ಕಾಮಿಸಿ ದಿಕ್ಕುಗಾಣದಾಗಿದ್ದಾಗ-ರಾಘವೇಂದ್ರರಾಯರು ಮನಸ್ಸಿನ ಕೊರೆತವನ್ನು ಮರೆಯಲೆಂದು ರಂಗಧೂಳಿಯ ಕಾಡಿನ ಕಡೆಗೆ ಹತ್ತಾರುಬಾರಿ ಹೋಗಿದ್ದರು. ಅಲ್ಲಿಯ ನಿಸರ್ಗರಮಣೀಯತೆಯ ಮಧ್ಯದಲ್ಲಿ ಭವಿಷ್ಯತ್ತಿನ ಕನಸನ್ನು ಕಂಡಿದ್ದರು. ತಾವು ಬಯಸಿದ ಹೆಣ್ಣು

ತಮ್ಮದಾದದ್ದೇ ಆದರೆ ಆ ಕಾಡನ್ನೆ ಒಂದು ವಿಹಾರಸ್ಥಾನವನ್ನಾಗಿಸಬಹುದು ಎಂದು ಮುಂತಾಗಿ ಸಾವಿರ ಕನಸುಗಳನ್ನು ಕಟ್ಟಿದ್ದರು. ವಾಯುವ್ಯದಿಂದ ಬಂದು ಪೂರ್ವಾಭಿಮುಖವಾಗಿ ಸಾಗುವಾಗಿನ ನದಿಯ ತಿರುವಿನ ಬದಿಯಲ್ಲಿಯ ಎತ್ತರದ ದಿನ್ನೆಯಮೇಲೆಯೆ ಒಂದು ಕೊಂಪೆಯನ್ನು ಯಾಕೆ ಕಟ್ಟಬಾರದು ? ಆ ಕೊಂಪೆಯಲ್ಲಿಯೇ ಇರುವುದು. ಯಾರ ಅಭ್ಯಂತರವೂ ಇಲ್ಲದೆ, ಯಾರ ಸೊಂಕೂ ಇಲ್ಲದೆ, ಪ್ರಪಂಚದಲ್ಲಿಯ ಮೊದಲ ಗಂಡು-ಹೆಣ್ಣುಗಳ ಹಾಗೆ-ಅನುದಿನವೂ, ಅನಾದ್ಯನಂತವಾಗಿ ಕಾಡುಬೆಟ್ಟಗಳ, ಗಿಡಬಳ್ಳಿಪೊದೆಗಳ ಮಧ್ಯದಲ್ಲಿ ಸೊಗಸಿನ, ಸರಸದ, ಜೀವನವನ್ನು ಸಾಗಿಸುವ ಜೊನ್ನವಕ್ಕಿಗಳಂತೆ—ತಾವಾದರೂ ಯಾಕೆ ಇರಬಾರದು ಎಂದು ಮುಂತಾಗಿ ಕನಸು ಕಂಡಿದ್ದರು. ಆ ಕನಸು ಮದುವೆಯಾದ ನಂತರ ನನಸಾಗುವುದರಲ್ಲಿತ್ತು. ಶಾರದೆಯ ಜೊತೆಯಲ್ಲಿ ಮದುವೆಯಾಗಿತ್ತು. ಬಯಕೆ ಕೈಗೂಡುವುದರಲ್ಲಿತ್ತು. ರಂಗಧೂಳಿಯ ಯೋಜನೆ ಶಾರದೆಯನ್ನು ಕೂಡುವ ಹಂಬಲದಂತೆಯೆ ದಿನ ಬೆಳಗೂ ಚಿಗುರಿ ನಿಲ್ಲತೊಡಗಿತ್ತು. ಚಿಗುರಿದ ಕನಸುಗಳನ್ನು ಹೊತ್ತುಕೊಂಡೇ ಹತ್ತಾರುಬಾರಿ ಅಲ್ಲಿಗೆ ಹೋಗಿ ಬಂದು ಒಂದು ದಿನ ಸಾಯಂಕಾಲ ಆ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವುದೇ ಎಂಬ ನಿಶ್ಚಯದಿಂದ ಹಿಂದಿರುಗಿದ್ದರು. ಅಂದು ಸಾಯಂಕಾಲದ ಬೆಡಗು ಅಷ್ಟೊಂದು ಅವರ ಮನಸ್ಸನ್ನು ಸೂರೆಗೊಂಡಿತ್ತು.

ಮಾವನವರ ಜೊತೆಯಲ್ಲಿ ಮತ್ತೆ ಹತ್ತಿಪ್ಪತ್ತು ಬಾರಿ ಅಲ್ಲಿಗೆ ಹೋಗಿ ಬಂದು ಬೇರೇಬೇರೆಯಾಗಿ ಆ ಕಾಡನ್ನು ಬೆಡಗಿನ ನಾಡನ್ನಾಗಿ ಮಾಡುವ ಹಂಚಿಕೆಗಳಲ್ಲಿ ಹಗಲು ರಾತ್ರಿ ಕಳೆಯತೊಡಗಿತು. ಅಳಿಯನ ಉತ್ಸಾಹಕ್ಕೆ ಶಾನುಭೋಗರು ಬೆರಗಾಗಿದ್ದರು. ಬೇಕಾದ ಬೆಂಬಲ ಕೊಡುತ್ತಿದ್ದರು. ಆದರೆ ಅವರ ದೃಷ್ಟಿ ಬೇರೆ. ರಾಘವೇಂದ್ರರಾಯರ ದೃಷ್ಟಿ ಬೇರೆ. ಆ ಸ್ಥಳವನ್ನು ಒಂದು ಬೆಡಗಿನ ತಾಣವನ್ನಾಗಿ ಮಾಡುವುದು ರಾಘವೇಂದ್ರರಾಯರಿಗೆ ಮುಖ್ಯವಾಗಿತ್ತಾದರೆ ಶಾನುಭೋಗರಿಗೆ ದಿನ್ನೆಯ ಈಚೆಗೆ ವಿಶಾಲವಾಗಿ, ಹೆಚ್ಚು ಕಡಿಮೆ ಸಮತಟ್ಟಾಗಿ, ಹಬ್ಬಿದ ಬಯಲನ್ನು ನೀರುಣಿಸಿ ಸಾಗುಮಾಡುವುದು ಮುಖ್ಯವಾಗಿ ಕಾಣುತ್ತಿತ್ತು. ಒಂದು ವಿಷಯದಲ್ಲಿ ಮಾತ್ರ ಇಬ್ಬರಿಗೂ ಒಮ್ಮತವಾಗಿತ್ತು. ಆ ವಿಚಾರವೆಂದರೆ ಕೆರೆಯದು. ನದಿಯಿಂದ ಬಯಲನ್ನು ಬೇರ್ಪಡಿ

ಸುವ ದಿನ್ನೆಗಳನ್ನು ಒಂದೆರಡು ಕಡೆಯಲ್ಲಿ ಕೊರೆದು ನೇರವಾಗಿ ಬಯಲಿಗೆ ನೀರು ಹರಿಯಿಸುವುದಕ್ಕಿಂತ ಬಯಲಿಗಿಂತ ತುಸು ಎತ್ತರದಲ್ಲಿದ್ದ ಒಂದು ಮೂಲೆಯಲ್ಲಿ ಕೆರೆಯೊಂದನ್ನು ಸಾಧ್ಯವಾಗಿಸಿದರೆ ಬಿಸಿಲುಗಾಲಕ್ಕೂ ನೀರಿನ ಕೊರತೆಯಾಗದು ಎಂಬುದು. ಅದೂ ಕಷ್ಟಸಾಧ್ಯವಾಗಿರಲಿಲ್ಲ. ನದಿಯ ದಿನ್ನೆಯಿಂದ ಇಳಿದು ಬಂದ ನಂತರ ಪಶ್ಚಿಮಕ್ಕೆ ಕೆಲವುಭಾಗ, ಪೂರ್ತಿಯಾಗಿ ಪೂರ್ವಕ್ಕೆ, ಅರ್ಧಮರ್ಧ ಉತ್ತರಕ್ಕೆ ಸ್ವಾಭಾವಿಕವಾದ ಚಿಕ್ಕದೊಡ್ಡ ದಿನ್ನೆಗಳಿದ್ದವು. ಉತ್ತರದ ಕಡೆಯಲ್ಲಿ ಸುಮಾರು ನಾನೂರು ಅಡಿ ಗೋಡೆ ಹಾಕಿ ಚಿಕ್ಕವಾಗಿದ್ದ ಒಂದೆರಡು ದಿನ್ನೆಗಳನ್ನು ಇನ್ನಷ್ಟು ಎತ್ತರವಾಗಿಸಿದರೆ ಕೆರೆ ಸಿದ್ಧವಾದಹಾಗೆಯೆ. ದೊಡ್ಡ ಕೆಲಸವೆಂದರೆ ನದಿಯ ದಿನ್ನೆಯನ್ನು ಕಡಿದು ಕಾಲುವೆ ಮಾಡುವುದು. ಒಂದೂವರೆ ಸಾವಿರ ಅಡಿಗೂ ಮಿಕ್ಕಿದ ಕಾಲುವೆಯಾಗಬೇಕು. ಆಮೇಲೆ ಎದುರಿನಲ್ಲಿಯ ಗೋಡೆ. ಶಾನುಭೋಗರಿಗೆ ಎಷ್ಟೋ ಸಲ ಅನುಮಾನವಾಗುತ್ತಿತ್ತು. ಇಷ್ಟೆಲ್ಲಕ್ಕೂ ಆರೆಂಟುಸಾವಿರ ರೂಪಾಯಿ ಹಾಕಿ ಕೊನೆಗೆ ಎಲ್ಲವೂ ಸರಿಹೋಗದಿದ್ದರೆ–ಎಂದು. ಆದರೆ ರಾಘವೇಂದ್ರರಾಯರಿಗೆ ಕೆರೆಯ ಯೋಜನೆ ಕಲ್ಪನೆಯನ್ನು ಕೆರಳಿಸಿತು. ಈಚೆಯ ದಿನ್ನೆಯ ಮೇಲಿನ ಕೊಂಪೆಯ ಎದುರಿನಲ್ಲಿ ಕುಳಿತರೆ ಹಿಂಗಡೆಯಲ್ಲಿ ಮಾರ್ಕಂಡೇಯನ ಶಾಂತಗಂಭೀರ ನಿನಾದ. ಎದುರಿನಲ್ಲಿ ವಿಸ್ತೀರ್ಣವಾದ ಕೊಳ. ನಾಲ್ಕುಬದಿಯಲ್ಲಿ–ದಿನ್ನೆಗಳ ಮೇಲೆ—ಸಾಲುಸಾಲಾಗಿ ಮರಗಳು. ಆ ಮರಗಳಾಚೆ ಮೂರೂ ಬದಿಯಲ್ಲಿ ಹಬ್ಬಿದ ಹಚ್ಚಹಸಿರು ತೋಟಗಳು. ಚಿತ್ರ ಪೂರ್ತಿಯಾಗಿ ಕಣ್ಣುಕಟ್ಟಿತು. ಮನಸ್ಸನ್ನು ಸೂರೆಗೊಂಡಿತು. ಆ ಕೆರೆಯಂಚಿನಲ್ಲಿ, ಸಂಜೆಯ ಹೊನ್ನಬೆಳಕಿನಲ್ಲಿ, ರಾತ್ರಿಯ ಬೆಳುದಿಂಗಳಲ್ಲಿ, ಶಾರದೆಯೊಡನೆ ಕಳೆಯಬಹುದಾದ ಸನ್ನಿವೇಶಗಳನ್ನೆಲ್ಲ ಚಿತ್ರಿಸಿಕೊಂಡಿತು. ರಂಗಧೂಳಿ ಅವರ ಊಹಾಪ್ರಪಂಚದಲ್ಲಿ ತಮ್ಮ ರಸಿಕ ಜೀವನದ ರಂಗಸ್ಥಳವಾಯಿತು. ತಾತಮುತ್ತಾತರಿಂದ ರಕ್ತಗತವಾಗಿ ಬಂದ ಸೌಂದರ್ಯದ ಹಂಬಲ ಯೋಜನೆಯನ್ನು ಸ್ಥಿರವಾಗಿಸಿತು. ಕನಸನ್ನು ನನಸಾಗಿಸಿಯೇ ಬಿಡುವೆನೆಂಬ ಹಟವನ್ನು ಹುಟ್ಟಿಸಿತು.

ಅಳಿಯನಿಗೆ ಉತ್ಸಾಹ ಬೆಳೆದ ಪ್ರಮಾಣದಲ್ಲಿ ಶಾನುಭೋಗರ ಅರೆ ಭರವಸೆ ತಗ್ಗಲಿಲ್ಲ. ಆಗೀಗ ಅವರು ಕೇಳುತ್ತಲೂ ಇದ್ದರು.

“ ನಿನ್ನ ಉತ್ಸಾಹವೇನೋ ಸರಿಯೆ. ಮಾಡಿದರೆ ಯೋಚಿಸಿದಂತೆ ಆಗಲೂಬಹುದು. ಆದರೆ ಸದ್ಯಕ್ಕೆ ಆರೆಂಟುಸಾವಿರ ರೂಪಾಯಿ ಹಾಕಬೇಕು. ಹಾಕಿದ ಹಣ ಹಿಂತಿರುಗಬೇಕಾದರೆ ಎಷ್ಟು ದಿನ ಕಾಯಬೇಕೊ ? ”

“ ನಾನೆಲ್ಲ ಎಣಿಕೆ ಹಾಕಿದ್ದೇನೆ, ಮಾವಯ್ಯ. ಒಂದುವೇಳೆ ಸರಿಹೋಗದಿದ್ದರೂ ಆಯಿತು. ಕೆಲಸ ಪ್ರಾರಂಭಿಸದೆ ಹಾಗೆ ಹೀಗೆ ಎಂದುಕೊಂಡು ಧೈರ್ಯಮಾಡದಿದ್ದರೆ ಏನಾಗಬೇಕು ? ನಷ್ಟವಾಯಿತೆಂದೇ ತಿಳಿಯೋಣ. ಹೆಚ್ಚಾದರೆ ಎಷ್ಟಾದೀತು ? ”

“ ಎಷ್ಟೇನು ? ಹಾಕಿದ ಹಣ ಹೋದಹಾಗೆಯೆ. ಸರಿಹೋದರೆ ಎಲ್ಲವೂ ಸರಿ. ಇಲ್ಲವಾದರೆ ಎಂಟುಸಾವಿರ ರೂಪಾಯಿಗೆ— ”

“ ಹೋದರೂ ಹೋಯಿತು. ಹೊಳೆಯ ನೀರು ಹೊಳೆಗೆ ಹೋಯಿತು. ಅಚ್ಚಪ್ಪಗಳಿಸಿದ್ದು ಎಲ್ಲಿಂದ ? ಬೆಟ್ಟವನ್ನು ಬೆಳೆಯಿಸದೆ ಮರ ಕಡಿದು ಮೂವತ್ತು ಸಾವಿರ ರೂಪಾಯಿ ಗಳಿಸಿದ. ಹೋದರೆ ಹತ್ತುಸಾವಿರ ಹೋಯಿತು.’

“ ಏನೋಪ್ಪ. ಹೀಗೆಂದರೆ ಹೇಗೆ ? ಯೋಚನೆಮಾಡಬೇಡವೆ ? ”

“ ನಾನೆಲ್ಲ ನೋಡಿಕೊಂಡಿದ್ದೇನೆ. ಮೊದಲಿಗೆ ಒಡ್ಡಿನ ಗೋಡೆ. ಆ ಮೇಲೆ ದಿನ್ನೆಗಳನ್ನು ಎತ್ತರಿಸುವುದು. ಆಚೆಯ ನೆಲ ಕೂಡ ಮೆತ್ತಗಾಗಿಯೇ ಇದೆ—ಮೊದಲಿನ ಮೂವತ್ತು ಎಕರೆ ಜಮೀನು.”

“ ಮೆತ್ತಗಾಗಿದ್ದರೇನಾಯಿತು ? ಕಂಟಿ ಬೆಳೆದ ನೆಲ. ನೇಗಿಲ ಕಂಡಿಲ್ಲ. ಏನಿದ್ದರೂ ಒಂದೆರಡು ವರ್ಷವಾದರೂ ಹಸನಾಗಿಸಬೇಕಾದೀತು.”

“ ಮೊದಲಿನ ಮೂರುವರ್ಷ ಏನೂ ಬಿತ್ತಲಾಗುವುದಿಲ್ಲ ಎನ್ನುವಾ. ಅದರ ಮರುವರ್ಷವಾದರೂ ಆದೀತಲ್ಲವೆ ? ”

“ ಆಗಬಹುದು. ಆದರೆ ಬರಿಯ ನೆಲ, ನೀರು ಏನು ಮಾಡೀತು ? ಜನ ಬೇಕು. ಆಳುಹೋಳು ಬೇಕು. ಆ ಕಾಡಿನಲ್ಲಿ ಹೋಗಿ ಯಾರಿದ್ದಾರು ? ಆಚೆ ಈಚೆ ಮೂರು ಹರದಾರಿಗೂ ಒಂದು ಕೊಂಪೆ ಇಲ್ಲ.”

“ ಸರಿಯಾಯಿತು. ಅಲ್ಲಿರಬೇಕಾದ ಜನ ಅಲ್ಲಿಯೇ ಹುಟ್ಟಬೇಕಾಗಿಲ್ಲವಲ್ಲ ! ಕೆಲಸ ಪ್ರಾರಂಭವಾದ ಮೇಲೆ ಬಂದೇಬರುತ್ತಾರೆ. ಬಂದ ಜನರನ್ನು ಅಲ್ಲಿಯೇ ಇದ್ದು ಸಾಗುಮಾಡುವ ಕೆಲಸಕ್ಕೆ ಉಪಯೋಗಿಸಿದರೂ ಆಯಿತು.

ಕೆಲಸಕ್ಕೆಯೇ ಕೈಹಾಕದೆ ಮುಂದಿನ ಅಡಚಣೆಗಳನ್ನೇ ಗಮನಿಸುತ್ತ ಕುಳಿತರೆ ಎಲ್ಲಿಗೂ ನಿಲುಕುವುದಿಲ್ಲ."

"ಹಾಗಾದರೆ—"

"ಹಾಗಾದರೆ ಎನ್ನುವ ಮಾತೇ ಇಲ್ಲ. ಈ ಮಳೆಗಾಲ ಮುಗಿದ ಕೂಡಲೆ ಪ್ರಾರಂಭಮಾಡಿಯೇ ಬಿಡತಕ್ಕದ್ದು."

ಅಳಿಯನ ವಾದದಲ್ಲಿ ತಥ್ಯವಿರದಿರಲಿಲ್ಲವೆಂದೇ ತೋರಿತು ಶಾನುಭೋಗರಿಗೆ ಕೊನೆಗೆ. ಮಾಡಿನೋಡಿಯೇ ಬಿಡುವ ಎಂದುಕೊಂಡರು. ಸಿದ್ಧತೆಗಳಿಗೆ ತೊಡಗಿದರು....

ರಾಘವೇಂದ್ರರಾಯರ ತಂದೆ ತಾಯಿಗಳು ತೀರಿಕೊಂಡನಂತರ ಮನೆಯಲ್ಲಿ ಉಳಿದ ಹಿರಿಯರೆಂದರೆ ಅಚ್ಯುತರಾಯರ ಅಕ್ಕ-ಸರಸಮ್ಮ-ವಿಧವೆ. ಮೊದಲಿನಿಂದಲೂ ಮನೆಗೆ ಹಿರಿಯಳು. ಹಿರಿಯಳಾಗಿಯೇ ಉಳಿದಳು. ಕೆಲ ಕಾಲ ರಾಘವೇಂದ್ರರಾಯರನ್ನು ನೋಡಿಕೊಳ್ಳುವ ಭಾರ ಅವರ ಮೇಲೆಯೇ ಬಿದ್ದಿತು. ಸರಸಮ್ಮ ಶಾನುಭೋಗರಿಗೆ ದೂರಿನ ಸಂಬಂಧಿಕಳು. ಹೀಗಾಗಿ ಶಾರದೆಯನ್ನು ಮದುವೆಯಾಗುವ ವಿಚಾರದಲ್ಲಿ ರಾಘವೇಂದ್ರರಾಯರಿಗೆ ಅವರಿಂದ ಉತ್ತೇಜನವೇ ದೊರಕಿದ್ದಿತಲ್ಲದೆ ಸಾಧ್ಯವಾದಷ್ಟು ಬೇಗನೆ ಮನೆಯ ಒಡೆತನವನ್ನು ಯಾರದೊ ಅವರಿಗೆ ಒಪ್ಪಿಸಬೇಕೆಂದು ಆತುರರಾಗಿಯೇ ಇದ್ದರು. ಮಕ್ಕಳಿಲ್ಲದ ಅವರು ರಾಘವೇಂದ್ರರಾಯರನ್ನು ಮೊದಲಿನಿಂದಲೂ ಅಕ್ಕರೆಯಿಂದ ನೋಡಿಕೊಂಡಿದ್ದರು. ತಮ್ಮ ಇದ್ದ ಬಿದ್ದ ಆಸ್ತಿಪಾಸ್ತಿಯನ್ನು ಅವರಿಗೆಯೆ ದತ್ತುಮಾಡಿಕೊಟ್ಟಿದ್ದರು. ಮದುವೆಯಾದಾಗ ಶಾರದೆ ಇನ್ನೂ ಚಿಕ್ಕವಳು. ಮನೆಗೆ ಮಡದಿಯಾಗಿ ಬರಬೇಕಾದರೆ ಮುಂದೆ ಎಂಟು ಹತ್ತು ತಿಂಗಳಾಯಿತು. ಆದರೆ ಶಾರದೆ ಮನೆಗೆ ಬಂದ ದಿನ ಅವರ ಸಂಭ್ರಮವನ್ನು ನೋಡುವ ಹಾಗಿತ್ತು. ಯಾವುದೋ ಒಂದು ಕಾಲದ ಅವರ ಬರಡು ಯೌವನದ ಆಕಾಂಕ್ಷೆಗಳೆಲ್ಲವೂ ರಾಘವೇಂದ್ರ ಶಾರದೆಯರು ಸುಖವಾಗಿ, ಸರಸವಾಗಿ ಇರುವಂತೆ ನೋಡಿಕೊಳ್ಳುವ ಉತ್ಕಂಠೆಯಲ್ಲಿ ಪೂರ್ಣವಾಗುತ್ತಿದ್ದ ಹಾಗಿತ್ತು.

ನಿಷೇಕವಾದ ಹೊಸತರಲ್ಲಿ ಶಾರದೆಯನ್ನು ಕರೆದುಕೊಂಡು ಊರ ಹೊರಗಡೆಯಲ್ಲಿಯ ಮಾವಿನತೋಪಿನ ಕಡೆಗೆ, ಹಳ್ಳದ ದಂಡೆಗೆ, ಅಗಸೆಯ ಆಚೆಯ ಮಳಲ ಬಯಲಿನ ಕಡೆಗೆ, ಹೋಗಬೇಕೆಂದೆನಿಸುತ್ತಿತ್ತು ರಾಘವೇಂದ್ರರಾಯರಿಗೆ. ಸಾಧ್ಯವಿದ್ದರೆ ರಂಗಭೂಮಿಯವರೆಗೂ ಕರೆದೊಯ್ಯಬೇಕೆಂದುಕೊಳ್ಳುತ್ತಿದ್ದರು. ರಂಗಭೂಮಿಯ ಯೋಜನೆಯೆ ಶಾರದೆಗಾಗಿ ಮೂರ್ತಗೊಳ್ಳುತ್ತಲಿತ್ತು. ಆದರೆ ಆ ಕಾಲ ಬೇರೆ. ಜನಗಳ ಅಭಿರುಚಿ,

ಅಪೇಕ್ಷೆಗಳು ಬೇರೆ. ಗಂಡಸರಿದ್ದರು ಬಹಿರಂಗವಾಗಿ ಹೆಂಗಸರು ಸುಳಿಯದಿರಬೇಕಾದ ಕಾಲ. ಒಂದುವೇಳೆ ಗಂಡಸರಿದ್ದರು ಹಾಯ್ದು ಹೋಗಬೇಕಾಗಿ ಬಂದದ್ದೇ ಆದರೆ ತಲೆಯಮೇಲೆ ಸೆರಗು ಹಾಕಿಕೊಂಡು, ಮುದ್ದೆಯಾಗಿ, ಹಾಗೂ ಹೀಗೂ ಪಾರಾದ ಹಾಗೆ ಸಾಗಬೇಕು. ಕೈಯಲ್ಲಿ ಕೈ ಸಿಕ್ಕಿಸಿಕೊಂಡು ಅಲೆದಾಟಕ್ಕೆ ಹೋಗಬೇಕೆನ್ನುವ ಮಾತಂತೂ ದೂರವೇ. ಇಬ್ಬರೂ ಬೇಕಾದ ಹಾಗೆ ಸುಖವಾಗಿರಲಿ ಎಂದು ಸರಸಮ್ಮ ಒಪ್ಪುತ್ತಿದ್ದರೂ ಹೀಗೆ ಹೊರಗೆ ತಿರುಗಾಡುವುದಕ್ಕೆ ಅವರು ಸಮ್ಮತಿಸುವುದು ಸುಲಭಸಾಧ್ಯವಿರಲಿಲ್ಲ. ಮದುವೆಯ ಹೊಸತರಲ್ಲಿ ಹಿರಿಯರನ್ನು ಅನುಮತಿಗಾಗಿ ಕೇಳುವುದೂ ರಾಘವೇಂದ್ರರಾಯರಿಗೆ ಸರಿಯೆನಿಸುತ್ತಿರಲಿಲ್ಲ. ಹೀಗಾಗಿ ರಂಗಧೂಳಿಯ ಕೆಲಸ ನಿಧಾನವಾಗಿ ಮುಂದರಿಯುತ್ತಿದ್ದಾಗಲೆಲ್ಲ—ಅವರು ಎಷ್ಟು ಆಸೆಪಟ್ಟರೂ—ಶಾರದೆಯನ್ನು ಅಲ್ಲಿಗೆ ಕರೆದೊಯ್ಯಲಾಗಲಿಲ್ಲ. "ಏನಿದ್ದರೂ ಇರಲಿಕ್ಕೆ ಅಲ್ಲಿ ಒಂದು ಕೊಂಪೆಯನ್ನು ಕಟ್ಟುತ್ತಲೇ ಇದ್ದೇನೆ. ಇಷ್ಟರಲ್ಲಿಯೇ ಮುಗಿಯಬಹುದು. ಕಾಲುವೆ ಸಿದ್ಧವಾದ ಕೂಡಲೆ ಮುಂದಿನ ಕೆಲಸಗಳನ್ನು ನೋಡಿಕೊಳ್ಳಲಿಕ್ಕೆ ಅಲ್ಲಿಯೇ ಇರಬೇಕಾಗುತ್ತದೆ ಎಂದು ಮುಂತಾಗಿ ಹೇಳಿ ಬಿಡಾರವನ್ನೇ ಅಲ್ಲಿಗೆ ಒಯ್ದರಾಯಿತು" ಎಂದು ಸಮಾಧಾನ ಹೇಳಿಕೊಳ್ಳುತ್ತಿದ್ದರು.

ಆದರೆ ರಂಗಧೂಳಿಗೆ ಬಿಡಾರವನ್ನೊಯ್ಯುವ ಸಂದರ್ಭ ಅವರು ನಿರೀಕ್ಷಿಸಿದುದಕ್ಕಿಂತ ಬೇಗನೆ, ಬೇರೆಯಾಗಿಯೆ, ಒದಗಿತು.

ದೀಪಾವಳಿಯ ಮುಹೂರ್ತಕ್ಕೆ ಮೊದಲಾದ ಕೆಲಸ ವೈಶಾಖದವರೆಗೂ ಅವ್ಯಾಹತವಾಗಿ ನಡೆದಿತ್ತು. ಒಡ್ಡುಕಟ್ಟೆಗಳ ಕೆಲಸ ಆಗಲೆ ಮುಗಿದು, ನದಿಯಿಂದ ಕಾಲುವೆ ಕಡಿಯುವ ಕೆಲಸ ನಡೆದಿತ್ತು. ಅಡ್ಡಮಳೆಯ ದಿನಗಳು. ಮೃಗ ಮೊದಲಾಗುವುದರಲ್ಲಿಯೇ ಕಾಲುವೆಯ ಕೆಲಸ ಮುಗಿಯಬೇಕು. ಇಲ್ಲವಾದರೆ ಮತ್ತೆ ಮಳೆಗಾಲ ಮುಗಿಯುವವರೆಗೆ ತಡೆಯಬೇಕು. ಹೀಗಾಗಿ ಭರದಿಂದ ಕೆಲಸ ಸಾಗಿತ್ತು. ಸುತ್ತಲಿನ ಹಳ್ಳಿಯಿಂದ ಕೆಲಸಕ್ಕೆ ಬರುತ್ತಿದ್ದ ಜನ ಅಲ್ಲಿಯೇ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು. ಮುಂದೆ ಅಲ್ಲಿಯೇ ನೆಲ ಪಡೆದು ಸಾಗುಮಾಡುವ ಆಸೆಯನ್ನೂ ಇಟ್ಟುಕೊಂಡಿದ್ದರು. ರಾಘವೇಂದ್ರರಾಯರ ಉತ್ಸಾಹಕ್ಕೆ ಪಾರವೇ ಇರಲಿಲ್ಲ. ಆದರೆ ಆ ವರ್ಷ ವೈಶಾಖ ಪೂರ್ತಿ ಸರಿದರೂ ಒಂದೂ ಮಳೆ ಬೀಳಲಿಲ್ಲ. ಬಿಸಿಲು ದಿನದಿಕ್ಕೆ ಬಲಿಯುತ್ತಿತ್ತು.

ಸುತ್ತಲಿನ ಕಾಡು ಹಸಿರನ್ನು ಕಳೆದು ಕಪ್ಪಿಟ್ಟು ನೀರಿಗಾಗಿ ಬಾಯ್ಬಿಡುತ್ತ ನಿಂತಿತ್ತು. ಮಾರ್ಕಂಡೇಯ ಕೂಡ ಚಿಕ್ಕ ಹಳ್ಳವಾಗಿ ಹೇಗೊ ಜೀವನವನ್ನು ನಡಸುವ ಬಡಕೂಲಿಯಂತೆ ಮುಂದುಗಾಣದೆ ಸಾಗಿತ್ತು. ಆ ಬಿಸಿಲ ಬೇಗೆ ಯಲ್ಲಿ ಜನ ದುಡಿಯುತ್ತಿದ್ದುದನ್ನು ನೋಡಿ ರಾಘವೇಂದ್ರರಾಯರಿಗೆ ಒಂದೊಂದು ಸಲ ಅವರಿಗಾಗಿ ತೀರ ಕನಿಕರವೆನಿಸುತ್ತಿತ್ತು. ಜೇಷ್ಠ ಸರಿ ಯಿತು. ಆಷಾಢ ಬಂದರೂ ಮಳೆಯ ಹನಿ ಉದುರಲಿಲ್ಲ ಬಿರ್ರೆಂದು ಬೀಸುವ ಪಶ್ಚಿಮದ ಗಾಳಿ ಬಂದ ಮೋಡಗಳನ್ನು ಚದರಿಸುತ್ತಿತ್ತು. ಊರ ಲ್ಲಿಯ ಜನ ಕಂಗಾಲಾದರು. ನೆಲ ಬಿರುಕು ಬಿಟ್ಟು ಅದನ್ನು ಸಾಗು ಮಾಡು ವವರ ಹೃದಯಗಳಂತೆ ಮುಗಿಲನ್ನೇ ದಿಟ್ಟಿಸುತ್ತ ನಿಂತಿತ್ತು. ನೀರಿನ ಕೊರತೆ· ಬಿಸಿಲ ಬೇಗೆ. ನಿಧಾನವಾಗಿ ಊರಲ್ಲಿ ಮಾರಿಯಬೇನೆಗೆ ಮೊದಲಾಯಿತು. ಜನ ಮುಂಗಾರಿನ ಆಸೆಯನ್ನು ತೊರೆದು ಅಲ್ಲಲ್ಲಿ ಕೆಲಸ ಹುಡುಕತೊಡಗಿ ದರು. ಒಂದು ದೃಷ್ಟಿಯಿಂದ ರಾಘವೇಂದ್ರರಾಯರಿಗೆ ಇದು ಅನುಕೂಲವೇ ಆಯಿತು. ಕೈ ತೆರವಾದ ಜನ ರಂಗಧೂಳಿಯ ಕಡೆಗೆ ಸಾಗಿದರು. ಬೇನೆಯಿಂ ದಾಗಿ ಊರೇ ಬರಿದಾಗುವ ಹಾಗೆ ಕಂಡಿತು. ಒಂದು ಸಾಯಂಕಾಲ ರಾಘ ವೇಂದ್ರರಾಯರು ರಂಗಧೂಳಿಯಿಂದ ದಣಿದು ಬರುತ್ತಿದ್ದ ಹಾಗೆ ಮನೆಯ ಆಳು ಅರ್ಧ ದಾರಿಯಲ್ಲೆ ಸರಸಮ್ಮನಿಗೆ ವಾಂತಿ ಭೇದಿಯಾಗುತ್ತಿದ್ದ ಸಮಾ ಚಾರವನ್ನು ತಂದ. ಮನೆ ಮುಟ್ಟುವಷ್ಟರಲ್ಲಿ ಸರಸಮ್ಮ ತೀರ ನಿತ್ರಾಣಳಾಗಿ ನೆಲಕ್ಕೆಯೆ ಬಿದ್ದಿದ್ದರು. ಅದು ಇದು ಎಂದು ಓಡಿಯಾಡಿ ಸಾಧ್ಯವಿದ್ದ ಉಪಾಯ ಮಾಡಿಯಾಯಿತು. ಆದರೆ ರಾಯರ ಪ್ರಯತ್ನ ಎಲ್ಲಿಗೂ ನಿಲುಕ ಲಿಲ್ಲ. ಮರುದಿನ ಮಧ್ಯಾಹ್ನದ ಸುಮಾರಿಗೆ ಸರಸಮ್ಮ ಜನ್ಮ ನೀಗಿದರು. ಕೊನೆಯ ಗಳಿಗೆಯಲ್ಲಿ ರಾಘವೇಂದ್ರರಾಯರನ್ನು ಹತ್ತಿರ ಕುಳ್ಳಿರಿಸಿಕೊಂಡು ಹೇಳಿದರು : " ಇದು ನೋಡು ರಾಘು. ದೇವರು ನಿನಗೆ ಯಾವುದಕ್ಕೂ ಕಡಿಮೆ ಮಾಡಲಿಲ್ಲ. ಇದ್ದುದನ್ನು ಚೆನ್ನಾಗಿ ನೋಡಿಕೊ. ನೀನು ಸುಖವಾಗಿರ ಬೇಕಪ್ಪ. ಪದ್ಮಾವತಿ (ಶಾರದೆ) ಮನೆಗೆ ಗೌರಿ ಇದ್ದ ಹಾಗಿದ್ದಾಳೆ. ಆಕೆಯನ್ನು ಸುಖವಾಗಿರಿಸು. ನೀನು ಮದುವೆಯಾಗಿ ಸುಖವಾಗಿದ್ದುದನ್ನು ಅಚ್ಯುತ ನೋಡಬೇಕಿತ್ತು. ದೇವರ ಮನಸ್ಸಿಗೆ ಬರಲಿಲ್ಲ. ಆಯಿತು. ನನ್ನ ಯಾತ್ರೆ ಮುಗಿಯಿತು....ಹುಂ ಇನ್ನೊಂದು ಮಾತು. ನನ್ನದೆಲ್ಲವನ್ನೂ ನಿನಗೆಯೆ

ಬಿಟ್ಟುಕೊಟ್ಟಿದ್ದೇನೆ. ಆದರೆ ಒಂದು ಮಾತು ನೀನು ನಡಸಬೇಕು. ನನ್ನದರಲ್ಲಿಯ ಐದು ಮಾವಿನಗಿಡ, ಒಂದು ಒಳ್ಳೆಯ ಹೊಲ ಕೃಷ್ಣಶಾಸ್ತ್ರಿಗಳಿಗೆ ದಾನವಾಗಿ ಕೊಡು. ದೇವರಂಥ ಮನುಷ್ಯ. ಮಕ್ಕಳೊಂದಿಗ. ಆ ಮಗು ವಿಶ್ವನಾಥ ಬುದ್ಧಿವಂತ. ಶಾಸ್ತ್ರಿಗಳ ಆಶೀರ್ವಾದ ಬಲ ದೊಡ್ಡದು. ಅವರನ್ನು ಚೆನ್ನಾಗಿ ನೋಡಿಕೋ.... "

ರಾಘವೇಂದ್ರರಾಯರು ಮುಂದೆ ಹತ್ತು ನಿಮಿಷಗಳಲ್ಲಿಯೇ ಕೃಷ್ಣಶಾಸ್ತ್ರಿಗಳನ್ನು ಬರಮಾಡಿಕೊಂಡು ಸರಸಮ್ಮ ಇನ್ನೂ ಬದುಕಿರುವಾಗಲೆ ಆಕೆಯ ಇಚ್ಛಾನುಸಾರವಾಗಿ ದಾನಕಾರ್ಯವನ್ನು ಮುಗಿಸಿದ್ದರು. ಸರಸಮ್ಮ ನಿರಾತಂಕವಾಗಿ ತವರಿಗೆ ತೆರಳುವ ಹೆಣ್ಣಿನ ಹಾಗೆ ಹೊರಟು ಹೋಗಿದ್ದರು. ಆಗ ಅವರನ್ನು ನೋಡಿದ್ದರೆ, ಅದು ಸಾವಲ್ಲ, ದುಡಿಮೆಯೇ ಬದುಕೆಂದುಕೊಂಡ ಪ್ರಾಣಿ ದಣಿದು ಗಾಢವಾಗಿ ನಿದ್ರೆಹೋದ ಹಾಗಿತ್ತು.

ಸರಸಮ್ಮ ಹೋದನಂತರ ರಾಘವೇಂದ್ರರಾಯರಿಗೆ ಊರ ಮನೆಯಲ್ಲಿಯೇ ಉಳಿಯುವ ಮನಸ್ಸಾಗಲಿಲ್ಲ. ಮನೆಯೆಂದರೆ ಸರಸಮ್ಮ, ಸರಸಮ್ಮನೆಂದರೆ ಮನೆ ಎಂಬುದೇ ರಾಯರ ಅನುಭವವಾದ್ದರಿಂದ ಅವರಿಲ್ಲದ ಮನೆ ಮನೆಯಾಗಿಯೇ ಕಾಣುತ್ತಿರಲಿಲ್ಲ ಅವರಿಗೆ. ಊರಲ್ಲಿಯ ಬೇನೆಯ ಹೆದರಿಕೆ ಬೇರೆ. ಹೀಗಾಗಿ ಸಾಧ್ಯವಿದ್ದಷ್ಟು ಬೇಗ ಹೆಂಡತಿಯೊಡನೆ ರಂಗಧೂಳಿಯಲ್ಲಿಯೇ ಇರುವುದೆಂದು ಗೊತ್ತುಮಾಡಿಕೊಂಡು ಅಲ್ಲಿಯ ಮನೆಯ ಸಿದ್ಧತೆಗೆ ತೊಡಗಿದರು. ಆಗಲೇ ಸಿದ್ಧವಾಗುತ್ತ ಬಂದಿದ್ದ ಕೊಂಪೆಗೆ ಸುಣ್ಣ ಬಣ್ಣ ಬಳಿಯಿಸಿ ತಿಂಗಳ ಸಮಯದಲ್ಲಿ ರಂಗಧೂಳಿಯನ್ನು ಸೇರಿದರು.

ಮಾರ್ಗಶಿರದ ಹುಣ್ಣಿಮೆ. ರಾಘವೇಂದ್ರ ಪದ್ಮಾವತಿಯರು ರಂಗಧೂಳಿಗೆ ಬಂದನಂತರದ ಮೊದಲ ಹುಣ್ಣಿಮೆ ಅದು. ಬೆಳುದಿಂಗಳು ತಾನೇ ತಾನಾಗಿ ಮೆರೆಯುತ್ತಿತ್ತು— ಮಳೆಗಾಲದ ಮೋಡಗಳನ್ನು ಪೂರ್ತಿಯಾಗಿ ಮರೆತ ನೀಲಾಕಾಶದಲ್ಲಿ ತನ್ನನ್ನು ಬಂಧಿಸುವವರು ಯಾರು ಎಂದು. ಸುತ್ತಲಿನ ಮೌನವೇ ಸೃಷ್ಟಿಸೌಂದರ್ಯದ ಗೀತವನ್ನು ಹೇಳುವಂತೆ ಗಿಡಗಳೆಲೆಯಲ್ಲಿ, ನದಿಯ ನೀರ ಅಲೆಯಲ್ಲಿ, ಬೆಳುದಿಂಗಳ ಮಾಯೆಯಲ್ಲಿ, ಎಲ್ಲಿಲ್ಲದ ಕಾಡು ಸೌರಭಗಳನ್ನು ಹೊತ್ತು ತರುತ್ತಿದ್ದ ತಂಗಾಳಿಯಲ್ಲಿ ನೂರು ದನಿಯಿಂದ ಹಾಡುತ್ತಿತ್ತು. ಮಳೆಗಾಲದ ಕೊನೆಕೊನೆಯಲ್ಲಿ ಬಿದ್ದ ಒಂದೆರಡು ಮಳೆಗಳಿಂದಾಗಿ ಮಾರ್ಗಂ

ಡೇಯ ಬಹುಮಟ್ಟಿಗೆ ಮೈತುಂಬಿಕೊಂಡಿತ್ತು. ಕೆರೆ ತುಂಬಿರದಿದ್ದರೂ ಆ ಬೆಳುದಿಂಗಳ ರಾತ್ರಿಯಲ್ಲಿ ಚಂದ್ರಬಿಂಬಕ್ಕೊಂದು ಕನ್ನಡಿಯಾಗುವಂತೆ ನೀರು ತನ್ನ ನೆಲೆಯನ್ನು ತಾನೇ ಅರಿಯದಂತೆ ಪ್ರಶಾಂತವಾಗಿ ನಿಂತಿತ್ತು. ರಾಘವೇಂದ್ರರಾಯರು ಪದ್ಮಾವತಿಯನ್ನು ಒಲುಮೆಯ ಬಂಧನದಲ್ಲಿ ಬಂಧಿಸಿ ಬೆಳುದಿಂಗಳಿಂದ ಇನ್ನೂ ಚೆಲುವುಗೊಂಡ ಆಕೆಯ ಮುಖವನ್ನೇ ದಿಟ್ಟಿಸುತ್ತಿದ್ದರು.

ಅವರ ಕನಸು ನನಸಾಗಿತ್ತು.

" ಯಾಕೆ, ಪದ್ಮಾ, ಕಣ್ಮುಚ್ಚಿದೆಯಲ್ಲ ? ನಿದ್ರೆ ಬಂದಿತೆ ? "

" ಇಂಥ ಬೆಳುದಿಂಗಳಲ್ಲಿ ನಿದ್ರೆ ಬರುವುದೆ ? "

" ಹಾಗಾದರೆ ? "

" ಈ ಪರಿಯ ಸೊಬಗು—"

" ಏನು ? "

" ಏನೊ ! ಯಾವ ದೇವರ ಲೀಲೆಯೊ !—"

" ಚೆಲುವಾಗಿದೆಯಲ್ಲವೆ ? "

" ಏನೆಂದು ಹೇಳಲಿ ? ಇಂದಿಗೆ ಬದುಕಿದ್ದು ಸಾರ್ಥಕವಾಯಿತು."

ಸುತ್ತಲಿನ ಚೆಲುವಿಗೆ, ಪತಿಯ ಒಲುಮೆಯ ಚೆಲುವಿಗೆ, ತನ್ನ ಹೃದಯಾಂತರಾಳದಲ್ಲಿ ತೂರಿಬರುತ್ತಿದ್ದ ಅನಿರ್ವಚನೀಯವಾದ ಸಂತಸಕ್ಕೆ ಪದ್ಮಾವತಿ ಏನೆಂದು ಹೇಳಬೇಕು ? ಪತಿಯ ತೊಡೆಯಲ್ಲಿ ತಲೆಯನ್ನಿಟ್ಟು ಕಣ್ಣು ಮುಚ್ಚಿದಳಷ್ಟೆ. ಕಣ್ಣುಗಳು ಮುಚ್ಚಿದ್ದರೂ ಆಕೆಯ ಹೃದಯದ ಹದಿನಾರು ಸಾವಿರ ಬಾಗಿಲುಗಳೆಲ್ಲವೂ ತೆರೆದು ಒಂದೊಂದರಿಂದಲೂ ತನ್ನ ಪತಿಯನ್ನು ಇದಿರುನೋಡಿ, ಆತನ ಒಲುಮೆಯನ್ನು ಬರಮಾಡಿಕೊಳ್ಳುತ್ತಿದ್ದವು.

" ಎಷ್ಟು ಚೆಲುವೆಯಾಗಿ ಕಾಣುತ್ತೀ ? ನಿನ್ನನ್ನು ಏನೆಂದು ಕರೆಯಲಿ, ಪದ್ಮಾ ? "

ಮುಗುಳುನಗೆಯೊಂದನ್ನು ಬೀರಿ ಪದ್ಮಾವತಿ ಹೇಳಿದ್ದಳು.

" ಈಗ ಏನೆಂದು ಕರೆದಿರಿ ? "

" ಸರಿ. ಅದೇನೋ ಹಳೆಯ ಹೆಸರು–ನನ್ನ ತಾಯಿಯದು. ಮದುವೆಯ ಕಾಲಕ್ಕೆ ಸರಸತ್ತೆಯ ಒತ್ತಾಯಕ್ಕೆ ಇಟ್ಟಿದ್ದು."

" ಅಂದರೆ ನಿಮಗೆ ಒಪ್ಪಿಗೆಯಿಲ್ಲವೆ ? "

"ಇದೆ–ಇಲ್ಲ. ಆದರೂ ನಿನ್ನನ್ನು ಕರೆಯಲು ಒಂದು ಒಳ್ಳೆಯ ಹೆಸರು ಬೇಕು."

"ಏನೆಂದು ಕರೆಯಬೇಕೆನ್ನುತ್ತೀರಿ ?"

"ನೀನೇ ಹೇಳು—"

"ನಾನೇನು ಹೇಳಲಿ ? ನನಗಂತೂ ಮೊದಲಿನಿಂದಲೂ ಶಾರದಾ ಹೆಸರು ರೂಢಿಯಾಗಿಬಿಟ್ಟಿದೆ. ಬೇರೆಯಾಗಿ ಕರೆದರೆ ಕರೆಯುತ್ತಿದ್ದದ್ದು ನನ್ನನ್ನೇ ಎಂಬುದೂ ಗೊತ್ತಾಗುವುದಿಲ್ಲ."

"ಹಾಗಾದರೆ ಶಾರದಾ ಎಂಬುದೇ ಇರಲಿ ?"

"ನಿಮಗೆ ಇಷ್ಟವಿದ್ದರೆ—"

"ಇಷ್ಟವೇನು ? ಚೆಲುವಾಗಿದ್ದದ್ದೆಲ್ಲವೂ ನನಗೆ ಇಷ್ಟ."

"ಶಾರದಾ ಚೆಲುವಾಗಿಲ್ಲವೆ ?"

"ಶಾರದಾ ಚೆಲುವಾಗಿದ್ದಾಳೆ ! ಆದರೆ ಹೆಸರು—"

"ಹಾಗಾದರೆ ?"

"ನಿನಗೆ ಯಾವ ಹೂವು ಬಹಳ ಪ್ರೀತಿ ?"

"ಮಲ್ಲಿಗೆ !"

"ಹಾಗಿದ್ದರೆ ನಿನ್ನ ಮಲ್ಲಿಗೆ ಎನ್ನುತ್ತೇನೆ."

"ಬೇಡ. ಪ್ರೀತಿ ಹೆಚ್ಚಾಗಿ ಮಲ್ಲಿ ಎಂದಾಗುತ್ತದೆ !"

"ಇನ್ನೊಂದು ಹೂವು ಹೇಳು—"

"ಕಮಲ—"

"ಹೊ! ಕಮಲ. ಅದೇ ಸರಿಯಾದದ್ದು–ಕಮಲಾ ನಿನಗೆ ಒಪ್ಪಿಗೆಯೆ?"

"ಹುಂ—"

ಶಾರದೆ ಒಂದೆರಡು ಸಲ ಯೋಚಿಸಿದ್ದೂ ಇತ್ತು–ಮದುವೆಗೆ ಮೊದಲು. ಮದುವೆಯ ಕಾಲಕ್ಕೆ ತನಗೆ ಏನೆಂದು ಹೆಸರಿಡಬಹುದು ? ಕಮಲಾ ಎಂದಿಟ್ಟರೆ ಎಷ್ಟು ಚೆನ್ನ ? ಆದರೆ ಅಂದು ತನ್ನ ಇಷ್ಟವನ್ನು ಯಾರು ಕೇಳಬೇಕು? ಹಿರಿಯರ ಹೆಸರನ್ನಿಟ್ಟರು–ಪದ್ಮಾವತಿ ಎಂದು.

"ಪದ್ಮ, ಕಮಲ ಎರಡೂ ಒಂದೇ ಅಲ್ಲವೇ ?" ಎಂದು ರಾಯರು ನಕ್ಕಿದ್ದರು.

" ವಸ್ತು ಒಂದೇ ಆದರೂ ಕಮಲ ನಯವಾಗಿದೆ."

" ನಿನ್ನ ಹಾಗೆಯೆ—"

ಪದ್ಮಾವತಿ ಕೆರೆಯ ನೀರನ್ನು ದಿಟ್ಟಿಸುತ್ತಿದ್ದಳು. ಮೊದಲಿಗಿಂತಲೂ ಮೇಲಕ್ಕೇರಿದ್ದ ಚಂದ್ರಬಿಂಬ ಸ್ಪಷ್ಟವಾಗಿ ಪ್ರತಿಫಲಿತವಾಗುತ್ತಿತ್ತು. ಇಷ್ಟು ವಿಸ್ತಾರವಾಗಿ, ಸೊಗಸಾಗಿ ಹಬ್ಬಿನಿಂತ ನೀರ ಮಧ್ಯದಲ್ಲಿ ಕಮಲಗಳು ಅರಳಿ ನಿಂತಿದ್ದರೆ ಇನ್ನೂ ಸೊಗಸಾಗಿ ಕಾಣುತ್ತಿರಲಿಲ್ಲವೆ? ಎಂದು ಆ ಕೆರೆಯ ಮಧ್ಯ ದಲ್ಲಿ ಹಬ್ಬಿರಬಹುದಾಗಿದ್ದ ಕಮಲದ ಬಳ್ಳಿಗಳನ್ನು, ಗುಂಪುಗುಂಪಾಗಿ ಅರಳಿ ಓಲಾಡುತಿದ್ದ ಕಮಲಗಳ ನೈದಿಲೆಗಳ ಕನಸನ್ನು ಕಾಣುತ್ತಿದ್ದಳು. ಪತಿಯನ್ನು ಕೇಳಬಾರದೇಕೆನ್ನುವಷ್ಟರಲ್ಲಿ

" ಅದೇನು ಸುಮ್ಮನಾಗಿ ಬಿಟ್ಟೆಯಲ್ಲ ? "

" ಏನೋ ಒಂದು ಯೋಚನೆ—"

" ಏನು ? "

" ಇಷ್ಟು ಚೆಲುವಾಗಿ ನೀರು ಹರಡಿನಿಂತಿದೆ. ಇದರ ಮಧ್ಯದಲ್ಲಿ ಹತ್ತಾರು ಕಮಲದ ಹೂವುಗಳಿದ್ದರೆ—"

" ಆದರೆ ಕಮಲಗಳು ರಾತ್ರಿ ಅರಳುವುದಿಲ್ಲ."

" ಕಮಲಗಳು-ನೈದಿಲೆಗಳು ಎರಡೂ ಇದ್ದರೆ—"

" ಸದಾಕಾಲವೂ ಕೆರೆಯ ನೀರು ನಗುತ್ತಲೇ ಇದ್ದಹಾಗಿರುತ್ತದೆ. ಅಲ್ಲವೇ ? "

ರಾಘವೇಂದ್ರರಾಯರ ಮನಸ್ಸು ಆಗಲೆ ಅದರ ಸೊಬಗನ್ನು ಗ್ರಹಿಸಿ ಅದನ್ನು ಸಾಧ್ಯವಾಗಿಸುವುದು ಹೇಗೆ ಎಂಬ ಯೋಚನೆಯಲ್ಲಿದ್ದರು. ಯಾವ ದೊಡ್ಡ ಮಾತು ? ಸಿದ್ದಪ್ಪನಿಗೆ ಹೇಳಿದರೆ ಎಲ್ಲಿಂದಾದರೂ ಬಳ್ಳಿಯನ್ನು ತಂದು ಹಾಕಿಬಿಡುತ್ತಾನೆ. ಭೀಮನಕೊಪ್ಪದ ಕೊಳದಲ್ಲಿ ಬೇಕಾದಷ್ಟು ತಾವರೆ, ನೈದಿಲೆಗಳಿವೆ. ಅವನಿಗೆ ಹೇಳಿದರಾಯಿತು....ನಾಲ್ಕಾರು ತಿಂಗಳು ಸರಿಯು ತ್ತಿರುವಾಗಲೆ ಅಂಥದೇ ಬೆಳುದಿಂಗಳ ರಾತ್ರಿಯೊಂದರಲ್ಲಿ ರಾಘವೇಂದ್ರ ಪದ್ಮಾವತಿಯರು ಅಲ್ಲಿ ಕುಳಿತಿದ್ದಾಗ ನೀರಲ್ಲಿ ತಂದುಹಾಕಿದ ಕಮ ಲದ-ನೈದಿಲೆಯ ಬಳ್ಳಿ ಹೂಬಿಟ್ಟಿತ್ತು. ಅವರಿಬ್ಬರ ಜೀವನದ ಬಳ್ಳಿಯೂ ಹೂ ಬಿಡುವುದರಲ್ಲಿತ್ತು. ಆ ಬಳ್ಳಿಗೂ, ಅವರಿಬ್ಬರ ಸರಸವಿಲಾಸಗಳಿಂದಾಗಿ

ಹುಟ್ಟಿಲಿದ್ದ—ಬಹುಶಃ ಆ ಹೂವುಗಳ ಸಾನ್ನಿಧ್ಯದಲ್ಲಿಯೇ ಮೂಡಿನಿಂತ—ಹೊಸ ಜೀವಕ್ಕೂ ಯಾವುದೊ ಒಂದು ಅವ್ಯಕ್ತ ಸಂಬಂಧವಿದ್ದ ಹಾಗೆ. ಬೆಳಗಿನಲ್ಲಿ ತಾವರೆಗಳ ಬೆಡಗನ್ನು ನಡುರಾತ್ರಿಯವರೆಗೂ ನೈದಿಲೆಗಳ ನಲಿದಾಟವನ್ನು ನೋಡಿ ಅವರು ಅವುಗಳಂತೆಯೇ ತಮ್ಮ ಜೀವನವನ್ನೆ ಒಂದು ನಗುಮಲ್ಲಿಗೆಯನ್ನಾಗಿ ಮಾಡಿದ ದಿನಗಳೆಷ್ಟೊ, ರಾತ್ರಿಗಳೆಷ್ಟೊ ! ಕಾಲಚಕ್ರ ತಿರುಗುತ್ತಲೇ ಇದ್ದಿತು. ಮುಂದೆ ಒಂಬತ್ತು ತಿಂಗಳಲ್ಲಿ ಗೋಪಿ ಜನ್ಮವೆತ್ತಿದ್ದ !

೫

ಇಂದು ಗೋಪಿ ಹೆಚ್ಚು ಕಡಿಮೆ ಅದೇ ಸ್ಥಳದಲ್ಲಿ ಕುಳಿತು ರಾಶಿರಾಶಿಯಾಗಿ ಬೆಡಗನ್ನು ಸೂರೆಮಾಡುತ್ತಿದ್ದ ಕಮಲಗಳನ್ನು ನೋಡುತ್ತ ಕುಳಿತಿದ್ದ. ದೇಹ ಮಾತ್ರ ಆ ಕಟ್ಟೆಯ ಮೇಲೆ ಕುಳಿತಿತ್ತು. ಚೇತನವೆಲ್ಲವೂ ಸುತ್ತಲಿನ ಸೃಷ್ಟಿಸೌಭಾಗ್ಯದಲ್ಲಿ ಸಮರಸವಾಗಿತ್ತು. ಯಾರು ಮಾಡಿದರು, ಹೇಗೆ ಮಾಡಿದರು ಈ ಪರಿಯ ಸೊಬಗನ್ನು–ಎಂದು ಕೇಳಿಕೊಳ್ಳುತ್ತಿದ್ದ. ಬ್ರಹ್ಮ ಸರಸ್ವತಿಯನ್ನು ಮೋಹಿಸಿ, ಕಾಮಿಸಿ ಕಾತರಗೊಂಡ ಒಂದು ಬೆಳುದಿಂಗಳ ರಾತ್ರಿಯಲ್ಲಿ ಸೌಂದರ್ಯದ ನಿರ್ಮಿತಿಯಾಗಿರಬಹುದೆ ? ಎಂದು ಹಲವಾರು ಬಾರಿ ಕೇಳಿಕೊಂಡಿದ್ದ. ಅವನ ಪಾಲಿಗೆ ಸೌಂದರ್ಯ ಒಂದು ಒಡೆಯಲಾಗದ ಒಗಟವಾಗಿತ್ತು.

ಹೆಚ್ಚುಕಡಿಮೆ ಪ್ರತಿನಿತ್ಯವೂ ಆತ ರಂಗಧೂಳಿಯ ನೆಲವನ್ನು ತುಳಿಯುತ್ತಿದ್ದ. ಅದು ಆತನಿಗೆ ಪುಣ್ಯಭೂಮಿಯಾಗಿ ಕಾಣುತ್ತಿತ್ತು. ಜೀವನದ ಚೆಲುವು ಅಲ್ಲಿ ಆತನಿಗೆ ಅರ್ಥವಾಗುತ್ತಿತ್ತು. ಅರ್ಥವಾಗುತ್ತಿತ್ತು ಎನ್ನುವದಕ್ಕಿಂತ, ಅರ್ಥ ಎಷ್ಟು ಗೂಢ ಎಂಬ ಅರಿವು ಮಾತ್ರ ಬರುತ್ತಿತ್ತು. ನಿತ್ಯವೂ ಬೆಳೆಯುತ್ತಿತ್ತು. ಜೀವನವನ್ನು ತಿಳಿಯಬೇಕಾದರೆ, ಬಹುದಾದರೆ, ಈ ಚೆಲುವನ್ನು ತಿಳಿಯಬೇಕು. ಅದರ ಸೃಷ್ಟಿ, ಕ್ರಮ, ಸೌಭಾಗ್ಯ ಸಾವುಗಳ ನೆಲೆಯನ್ನು ಗುರುತಿಸಬೇಕು. ಯಾವುದೊ ಒಂದು ತತ್ತ್ವ, ಯಾವುದೊ ಒಂದು ಸೂಕ್ಷ್ಮ, ಇಡಿಯ ಪ್ರಪಂಚಕ್ಕೆಯೆ ಅನ್ವಯಿಸಬಹುದಾದ ಯಾವುದೊ ಒಂದು ಅನ್ಯೋನ್ಯ ಸಂಬಂಧ ರಂಗಧೂಳಿಯ ಸೌಂದರ್ಯದ ಸಾವಿರಾರು ಆವಿಷ್ಕಾರಗಳಲ್ಲಿ ಅಸ್ಪಷ್ಟವಾಗಿ ಆತನಿಗೆ ಗೋಚರಿಸುತ್ತಿತ್ತು. ಆ ಸೂಚನೆಗಳೆಲ್ಲವೂ ಅಸ್ಪಷ್ಟವಾಗಿದ್ದುವೆಂದೇ ಗೋಪಿಯಲ್ಲಿ ಆ ಸ್ಥಳದ ಬಗ್ಗೆ ಹಿಡಿಸಲಾರದ ಒಂದು ಹಂಬಲ, ಹಾತೊರೆಯುವಿಕೆ ಹುಟ್ಟಿಕೊಂಡಿದ್ದುವು. ಯಾವಾಗಲೂ ಅಲ್ಲಿಯೇ ಇದ್ದು, ಅದರಲ್ಲಿಯೇ ಮನಸ್ಸನ್ನು ಲಯಗೊಳಿಸಿದಾಗಿನ ಅನುಭವವನ್ನೇ ಶಾಶ್ವತಗೊಳಿಸಬೇಕೆಂದು ಬೇಡುತ್ತಿತ್ತು ಆತನ ಅಂತರಂಗ.

ತನ್ನ ವಿದ್ಯಾಭ್ಯಾಸವನ್ನು ಮುಗಿಯಿಸಿ ಗೋಪಿ ಊರಿಗೆ ಬಂದು ಒಂದು ವರ್ಷವಾಗುತ್ತ ಬಂದಿತ್ತು. ತಂದೆಯ ಮನಸ್ಸಿನಂತೆ ನಡೆಯಬೇಕಾಗಿದ್ದರೆ ತಾನು ಲಾ ಪರೀಕ್ಷೆಗಾಗಿ ಮುಂದೆ ಓದಿ ವಕೀಲಿಯ ವ್ಯವಸಾಯಕ್ಕೆ ತೊಡಗ ಬೇಕಾಗಿತ್ತು. ಆದರೆ ಪರೀಕ್ಷೆಗಾಗಿ ಓದುವುದು ಗೋಪಿಗೆ ಮೊದಲಿನಿಂದಲೂ ಬೇಡವಾಗಿತ್ತು. ಅಚ್ಯುತರಾಯರ ಆಸೆಯನ್ನು ರಾಘವೇಂದ್ರರಾಯರು ಪೂರ್ತಿ ಗೊಳಿಸಿರದಂತೆ ರಾಘವೇಂದ್ರರಾಯರ ಆಸೆಯನ್ನೂ ಗೋಪಿ ಪೂರ್ತಿಗೊಳಿ ಸುವ ಹಾಗೆ ಕಾಣಲಿಲ್ಲ. ಕಾರಣಗಳು ಮಾತ್ರ ಬೇರೆಯಾಗಿದ್ದವು. ಗೋಪಿಗೆ ಓದಿನಲ್ಲಿ ಬೇಕಾದಷ್ಟು ಆಸಕ್ತಿ ಇದ್ದಿತು ಆದರೆ ಓದು ಜ್ಞಾನಾರ್ಜನೆಗೊಂದು ಸಾಧನ, ಜೀವನೋಪಾಯಕ್ಕಲ್ಲ, ಎಂದು ಖಂಡಿತವಾಗಿ ಹೇಳುತ್ತಿದ್ದ. ಜೀವ ನೋಪಾಯವನ್ನು ಹುಡುಕುವ ಅಗತ್ಯವೂ ತನ್ನ ತಂದೆಯಂತೆ ತನಗೂ ಇರ ಲಿಲ್ಲ. ಹೀಗೆಂದೇ ಗೋಪಿ ಬಿ. ಎ. ಗಾಗಿ ಓದುತ್ತಿದ್ದಾಗ ವಿಷಯದಿಂದ ವಿಷ ಯಕ್ಕೆ ಜಿಗಿದು ಮೂರುಬಾರಿ ಬದಲಾಯಿಸಿ ಎರಡು ವರ್ಷಗಳಲ್ಲಿಯೆ ಮುಗಿಸ ಬಹುದಾದ ಬಿ. ಎ. ವಿದ್ಯಾಭ್ಯಾಸವನ್ನು ನಾಲ್ಕು ವರ್ಷಗಳವರೆಗೂ ಸಾಗಿ ಸಿದ್ದ. ಸಾಹಿತ್ಯ ಓದುತ್ತಿದ್ದ ಆತ ಸಹಜವಾಗಿಯೆ ತತ್ವಜ್ಞಾನದ ಕಡೆಗೆ ತಿರು ಗಿದ್ದ. ಯಾವ ಯೋಚನೆಯೂ ಕೊನೆಗೆ ತತ್ವಜ್ಞಾನದ ಕಡೆಗೆಯೇ ಆತನನ್ನು ಕರೆದೊಯ್ಯುತ್ತಿದ್ದಿತಾದ್ದರಿಂದ ಅದನ್ನೇ ಯಾಕೆ ಓದಬಾರದು ಎಂದು ಆ ವಿಷಯವನ್ನೆತ್ತಿಕೊಂಡು ಒಂದು ಒಂದೂವರೆ ವರ್ಷ ವ್ಯಾಸಂಗ ಮಾಡುವಷ್ಟ ರಲ್ಲಿ ಗಣಿತದ ಜ್ಞಾನವಿಲ್ಲದೆ ತತ್ವಜ್ಞಾನವೂ ಅಪೂರ್ಣವೆಂದೆನಿಸತೊಡಗಿತ್ತು. ಹೀಗಾಗಿ ಗಣಿತವನ್ನು ಅಭ್ಯಸಿಸಿ ಆ ವಿಷಯದಲ್ಲಿಯೇ ಡಿಗ್ರಿಯನ್ನು ಪಡೆದಿದ್ದ. ಓದುತ್ತಿದ್ದ ಹಾಗೆ ಜ್ಞಾನಪ್ರಪಂಚದ ವಿಸ್ತೀರ್ಣ ಕ್ಷಿತಿಜಗಳು ಆತನನ್ನು ಬೆರಗು ಗೊಳಿಸುತ್ತಿದ್ದವು. ಕೈಬೀಸಿ ಕರೆಯುತ್ತಿದ್ದವು. ತಿಳಿಯಬೇಕು—ಅದರ ಹೊರತು ಬೇರೆ ಯಾವುದೂ ಮಹತ್ವದ್ದಲ್ಲ—ಎಂಬ ಅರಿವು ಬೆಳೆಯುತ್ತ ಹೋದ ಹಾಗೆ ಪರೀಕ್ಷೆಗಳಲ್ಲಿಯ ಆಸಕ್ತಿ ಕ್ರಮವಾಗಿ ಕುಗ್ಗತೊಡಗಿತು. ಎಂ. ಎ. ಮಾಡ ಬಹುದಾಗಿತ್ತು. ಆದರೆ ಓದುವುದೇ ಇದ್ದರೆ ವಿಶ್ವವಿದ್ಯಾಲಯವೇ ಏಕೆ? ಮನೆಯಲ್ಲಿಯೂ ಓದಬಹುದು ಎಂದು ಮನೆಯೆಡೆಗೆ ಹಿಂದಿರುಗಿದ್ದ. ಇದಕ್ಕೆ ಬೇರೆ ಕಾರಣಗಳೂ ಇದ್ದವು.

ಕಳೆದ ಸಲ ರಜೆಗೆ ಹಳ್ಳಿಗೆ ಬಂದಾಗ ವಿಶ್ವನಾಥಶಾಸ್ತ್ರಿಗಳ ಜೊತೆ

ಯಲ್ಲಿ ಕೆಲವು ದಿನ ಕಳೆದುದರ ಪರಿಣಾಮವಾಗಿ ಅವರ ಪರಿಚಯ ಒಂದು ವಿಶೇಷವಾದ ಬಗೆಯಲ್ಲಿ ಬೆಳೆದಿತ್ತು. ಒಬ್ಬರೊಬ್ಬರನ್ನು ತಿಳಿಯಲು ಅನುಕೂಲವಾಗಿತ್ತು. ಮೊದಲಿನಿಂದಲೂ ಶಾಸ್ತ್ರಿಗಳು ಹತ್ತಿರದವರೇ ಆಗಿದ್ದರೂ ಅವರೊಡನೆ ಆತ ಯಾವ ಚರ್ಚೆಗೂ ಆವರಿಗೆ ತೊಡಗಿರಲಿಲ್ಲ. ಎಷ್ಟಾದರೂ ಶಾಸ್ತ್ರಿಗಳು ಹಿರಿಯರು ಎಂದು ದೂರವಾಗಿಯೇ ಇರುತ್ತಿದ್ದ ಆತ ಒಂದು ದಿನ ಮಾತನಾಡುತ್ತಿದ್ದಾಗ ಶಾಸ್ತ್ರಿಗಳು ವಿಶೇಷವಾದ ಆಸ್ಥೆಯಿಂದ ತನ್ನ ಅಭಿಪ್ರಾಯಗಳನ್ನು ಕೇಳುತ್ತಿದ್ದುದನ್ನು ನೆನೆದು ಆಶ್ಚರ್ಯಪಟ್ಟಿದ್ದ. ತಮ್ಮಿಬ್ಬರ ಅಂತರಂಗದಲ್ಲಿ ಮಿಡಿಯುವ, ಕೊರೆಯುವ ಪ್ರಶ್ನೆಗಳು ಬಹುಮಟ್ಟಿಗೆ ಸಾಮಾನ್ಯವಾಗಿದ್ದುವೆಂದು ತಿಳಿಯುವಂತಾಗಿತ್ತು. ಹಳೆಯ ಪದ್ಧತಿಯ ವ್ಯಾಸಂಗದಲ್ಲಿಯೆ ಶಾಸ್ತ್ರಿಗಳು ಜೀವನವನ್ನು ಸವೆಯಿಸಿದ್ದರೂ ಗೋಪಿ ಪಾಶ್ಚಿಮಾತ್ಯ ದಾರ್ಶನಿಕರ ಅಭಿಪ್ರಾಯಗಳನ್ನು ವಿವರಿಸುತ್ತಿದ್ದಾಗ ಕುತೂಹಲದಿಂದ ಕೇಳುತ್ತಿದ್ದರಲ್ಲದೆ ತಮ್ಮ ದೃಷ್ಟಿಯಿಂದ ವಿವೇಚನೆಗಳನ್ನು ಮುಂದುವರಿಸುತ್ತಿದ್ದರು. ಇಂಥ ನಾಲ್ಕಾರು ಸಂದರ್ಭಗಳಿಂದಾಗಿ ಶಾಸ್ತ್ರಿಗಳ ಬಗೆಯಲ್ಲಿ ಗೋಪಿ ಅಸಾಧಾರಣವಾದ ಆದರವನ್ನು ಬೆಳೆಯಿಸಿಕೊಳ್ಳುವಂತಾಗಿತ್ತು ಅಲ್ಲದೆ ಅವರ ಜ್ಞಾನ ಕೇವಲ ಪುಸ್ತಕಜನ್ಯವಾಗಿರದೆ ಅನುಭವದ ತಳಪಾಯದ ಮೇಲೆ ಕೆಲವೊಂದು ವಿಷಯಗಳಲ್ಲಿ ತಲಸ್ಪರ್ಶಿಯಾಗಿ ನಿಂತಿರುವಂತೆ ಬೆಳೆದುದನ್ನು ಕಂಡು ಅದೇ ಮುಖ್ಯ, ಅದೇ ನಿಜವಾದ ಜ್ಞಾನ, ಎಂದು ಅವರೊಡನೆ ಚರ್ಚೆಗಳಿಗಾಗಿ ಹಾತೊರೆಯುತ್ತಿದ್ದ. ಗೋಪಿಯ ಕುತೂಹಲ ಶಾಸ್ತ್ರಿಗಳ ಮನಸ್ಸನ್ನು ಸೆಳೆದಿತ್ತು. ಆತನ ಹಂಬಲ ಅವರಿಗೆ ಅರ್ಥವಾಗಿತ್ತು. ಹೀಗಾಗಿ ಓದನ್ನು ಬಿಟ್ಟು ಊರಿಗೆ ಬರಲಿಕ್ಕೆ ಬಹುಮಟ್ಟಿಗೆ ಶಾಸ್ತ್ರಿಗಳೂ ಕಾರಣವಾಗಿದ್ದರೆಂದೇ ಹೇಳಬೇಕು.

ಓದು ಮುಂದರಿದ ಹಾಗೆ ಪಟ್ಟಣಗಳ ನಾಗರಿಕತೆಯ ಬಗೆಯಲ್ಲಿನ ಆತನ ವಿಶ್ವಾಸ ಸಡಿಲಾಗಿತ್ತು. ಅಲ್ಲಿಯ ಕೃತ್ರಿಮತೆಗಳು ನಿಜವಾದ ಜೀವನಕ್ಕೆ ಹೊಂದಿಕೊಂಡವುಗಳಲ್ಲವೆಂಬ ನಂಬಿಕೆ ಬೆಳೆದಿತ್ತು. ಅಲ್ಲದೆ ಆತನಿಗೆ ಮೊದಲಿನಿಂದಲೂ ನೆಲ, ನೀರು, ಗಿಡ, ಗದ್ದೆ, ಬೆಟ್ಟ, ಬಯಲುಗಳನ್ನು ಕಂಡರೆ ಏನೋ ಒಂದು ತರದ ವಿಶ್ವಾಸ, ಪ್ರೀತಿ. ಬದುಕಿನ ಪ್ರಾಚೀನತೆಗೆ, ಅವ್ಯಾಹತ ಸ್ವರೂಪಕ್ಕೆ, ಸಂಕೇತಗಳಂತಿದ್ದ ನಿಸರ್ಗದ ನೂರು ವಿನ್ಯಾಸಗಳು ಆತನ ಮನಸ್ಸನ್ನು

ಸೆಳೆದಿದ್ದವು. ಮಾನವ ಮಾಡಿದ್ದು ಅಳಿಯುತ್ತದೆ. ನಿಸರ್ಗ ನಿತ್ಯವಾದದ್ದು ಅದರೊಡನೆ ಹೊಂದಿಕೆಯಾಗಿರುವುದೇ ಶಾಶ್ವತ ಜೀವನದ ಮಾರ್ಗವೆಂದೂ ನಂಬಿದ್ದ. ಬಯಲುಗಳ ವಿಶಾಲತೆ, ಬೆಟ್ಟಗಳ ಭವ್ಯತೆ, ನೀರ ಸೋಜಿಗ, ಹಣ್ಣುಹೂವುಗಳ ಸಹಜ ಸೌಭಾಗ್ಯಗಳೆಲ್ಲವೂ ಜೀವನದ ಚೆಲುವನ್ನು ತೋರಿಸುತ್ತಿದ್ದವು. ಮಾನವನ ಜೀವನದಲ್ಲಿಯ ಚೆಲುವೆಲ್ಲವೂ ನಿಸರ್ಗದಲ್ಲಿಯ ಚೆಲುವಿನ ಪ್ರತಿಬಿಂಬ, ಅದಿಲ್ಲದೆ ಇದಿಲ್ಲ, ಎಂದು ದೃಢವಾಗಿ ತಿಳಿದಿದ್ದನಾದ್ದರಿಂದ ಸಾಧ್ಯವಾದಷ್ಟು ಬೇಗ ಹಳ್ಳಿಗೆ ಹಿಂತಿರುಗಿ ಪಟ್ಟಣದ ಕೃತ್ರಿಮ ಜೀವನದಿಂದ ನೂರು ಬಗೆಯಲ್ಲಿ ಬೇರೆಯಾಗಿದ್ದ, ಅದಕ್ಕೂ ವಿಶಾಲವಾಗಿದ್ದ, ಜೀವನವನ್ನು ನಡಸಬೇಕೆಂಬ ಹಂಬಲದಿಂದ ಹಿಂದಿರುಗಿದ್ದ. ರಾಘವೇಂದ್ರರಾಯರಿಗೆ ನಿರಾಶೆಯೆನಿಸಿದ್ದರೂ ಗೋಪಿಗೆ ರಂಗಧೂಳಿಯ ನಿಸರ್ಗರಂಗಮಂಟಪದಲ್ಲಿ ತನ್ನ ಅಂತರಂಗದ ಆಸೆ ಫಲಿಸುವ ಚಿಹ್ನೆ ಕಾಣುತ್ತಿತ್ತು. ಹೀಗೆಂದೇ ಬಂದಾಗಿನಿಂದ ಪ್ರತಿನಿತ್ಯವೂ ರಂಗಧೂಳಿಗೆ ಹೋಗಿಬರುತ್ತಿದ್ದ. ಸಾಧ್ಯವಾದರೆ ಹಗಲಿರುಳೂ ಅಲ್ಲಿಯೇ ಇರುವ ಹಂಚಿಕೆಯನ್ನು ಹುಡುಕುತ್ತಿದ್ದ.

ಮೂರುದಿನದ ಮೊದಲು ತಾನು ಮದುವೆಯಾಗಬೇಕೆಂದಿರುವ ಪ್ರಸ್ತಾಪವನ್ನು ತಾಯಿಯೆದುರು ಮಾಡಿದ್ದು ರಂಗಧೂಳಿಯ ಮೂಲಕವೆ.

ಸಂಜೆಗತ್ತಲು ಮುಸುಕುವುದರಲ್ಲಿತ್ತು. ಗೋಪಿ ಅದೇ ರಂಗಧೂಳಿಯಿಂದ ಅಲ್ಲಿಯ ಸೂರ್ಯಾಸ್ತದ ಸೊಬಗನ್ನು ಮನದಣಿಯೆ ನೋಡಿ ಹಿಂದಿರುಗಿದ್ದ. ತಾಯಿಯೆದುರು ಹೇಳಿದ್ದ—

" ಯಾವ ಮಹಾರಾಯ ಮಾಡಿದನೊ ಆ ಸ್ಥಳವನ್ನು ! ಎಷ್ಟು ಚೆಲುವಾಗಿದೆ! "

" ಯಾರೇಕೆ ? ಇವರೇ ಅದರ ಯೋಜನೆಯನ್ನು—"

" ಸರಿ. ಅಪ್ಪ ಏನು ಮಾಡಿದ್ದು ? ಇದ್ದುದನ್ನೆ ಇನ್ನಷ್ಟು ನಯವಾಗಿಸಿರಬಹುದು. ಅಲ್ಲಿಯ ನದಿ, ಬೆಟ್ಟ, ಹಸಿರು, ಒಟ್ಟಿನಲ್ಲಿ ಆ ಜಾಗ—"

ಗೋಪಿಯ ಮಾತು ಕಮಲಮ್ಮನವರಿಗೆ ರುಚಿಸಲಿಲ್ಲ. ಪೂರ್ತಿಯಾಗಿ ಅರ್ಥವಾಗಿಯೂ ಇರಲಿಕ್ಕಿಲ್ಲ. ತಮ್ಮ ಪತಿಯ ವಿಷಯದಲ್ಲಿಯ ಅವರ ಅಭಿಮಾನ ನೊಂದಿತ್ತು ಮಗನ ಮಾತಿನಿಂದ. ತಮ್ಮ ಜೀವನದಲ್ಲಿ ರಂಗಧೂಳಿಯ ಸ್ಥಾನವನ್ನು ಚೆನ್ನಾಗಿ ಬಲ್ಲ ಅವರು ಅದೆಲ್ಲವನ್ನು ಆಡಿ ಏನು ಪ್ರಯೋಜನ ?

ಬಾಯಿಂದ ಹೇಳುವುದೂ ಸಾಧ್ಯವಾಗಿ ಕಾಣಲಿಲ್ಲ. ಹೀಗೆಂದು ಸುಮ್ಮನಾಗಿ ಬಿಟ್ಟರು. ಗೋಪಿಯ ಮನಸ್ಸು ಅಂದು ಸಾಯಂಕಾಲದ ಸೌಭಾಗ್ಯದಿಂದ ಸೂರೆಗೊಂಡಿತ್ತು. ಅವನಿಗೆ ಸುಮ್ಮನಿರಲಾಗಲಿಲ್ಲ.

"ಯಾರು ಮಾಡಿದರೂ ಆಯಿತು. ಅಷ್ಟು ಚೆಲುವಾಗಿದೆ. ಅಲ್ಲಿದ್ದಾಗ ಹಸಿವು, ನೀರಡಿಕೆ ಯಾವುದೂ ಇಲ್ಲ. ನನಗಂತೂ ಯಾವಾಗಲೂ ಅಲ್ಲಿಯೇ ಇದ್ದುಬಿಡಬೇಕೆನ್ನಿಸುತ್ತಿದೆ. ಮುಂದಿನ ವಾರ—"

"ಯಾವಾಗಲೂ ಅಲ್ಲಿಯೇ ಇರಬೇಕಾದರೆ—"

ಎಂದು ನಸುನಕ್ಕು ಕಮಲಮ್ಮ ಸುಮ್ಮನಾದರು. ತಮ್ಮ ಮದುವೆ ಯಾದ ಹೊಸದರಲ್ಲಿಯ ರಂಗಧೂಳಿಯಲ್ಲಿ ಕಳೆದ ರಸನಿಮಿಷಗಳ ನೆನಹು ಅವರ ಮನಸ್ಸಿನಲ್ಲಿ ಮೂಡಿರಬೇಕು.

"ಮುಂದಿನ ವಾರದಿಂದ ನಾನಂತೂ ಅಲ್ಲಿಯೇ ಇರಬೇಕೆಂದು ಮಾಡಿದ್ದೇನೆ."

"ಅಲ್ಲಿಯೇ ಇರಬೇಕಾದರೆ ಮದುವೆಯಾಗಬೇಕು !"

ಎಂದು ಕಮಲಮ್ಮ ಮತ್ತೆ ಅದೇ ನಗೆಯನ್ನು ಬೀರಿದರು.

"ಮದುವೆಯಾಗದೆ ಅಲ್ಲಿ ಇರಕೂಡದೆ ?"

"ಇರಬಹುದು. ಆದರೆ ಅದರಲ್ಲಿ ಮೋಜಿಲ್ಲ !"

"ಹೌದೆ ?"

ಎಂದು ಗೋಪಿ ಸುಮ್ಮನಾದ. ಯೋಚನೆಯಲ್ಲಿ ಮುಳುಗಿದ. ತಾನು ಶಾಸ್ತ್ರಿಗಳ ಶಾಂತಳನ್ನು ವರಿಸಿದ್ದು ಆಕೆಯನ್ನು ಮದುವೆಯಾಗುವ ನಿಶ್ಚಯ ವನ್ನು ತಾಯಿ ತಂದೆಗಳೆದುರು ಹೇಳುವುದು ಹೇಗೆ ಎಂದು ಯೋಚಿಸುತ್ತಿದ್ದ. ಆತನಿಗೆ ಈಗ ಒಳ್ಳೆಯ ಸಂದರ್ಭ ದೊರಕಿತೆಂದೆನಿಸಿತು. ಅವರು ಏನೆನ್ನುವರೊ ಎಂಬ ಹೆದರಿಕೆ ಆತನಿಗಿರಲಿಲ್ಲ. ಅಷ್ಟರಮಟ್ಟಿಗೆ ಆತ ಶಾಂತಳಲ್ಲಿ ಅನುರಕ್ತ ನಾಗಿದ್ದ. ಅದರೂ ಯಾವುದೊ ಒಂದು ಬಗೆಯ ಸಂಕೋಚ ಆತನ ದನಿ ಯನ್ನಡಗಿಸಿತ್ತು.

"ಮದುವೆಯಾಗಲೇ ಬೇಕೆ ?" ಎಂದು ಮೊದಲುಮಾಡಿದ.

"ಹೌದು" ಎಂದರು ತಾಯಿ, ಆತನ ಮಾತಿನಲ್ಲಿ ಏನೊ ಒಂದು ಅನಿ ರೀಕ್ಷಿತವಾದ ಭರವಸೆಯನ್ನು ಕಂಡು.

" ಹಾಗಾದರೆ ನಾನು ಮದುವೆಯಾಗುವೆ ! "

ಕಳೆದ ಐದಾರು ವರ್ಷಗಳಲ್ಲಿ ಎಷ್ಟೋ ಪರಿಯಿಂದ ತಾಯಿ ಒತ್ತಾಯ ಪಡಿಸಿದ್ದರೂ ಒಪ್ಪಿರದ ಗೋಪಿ ತಾನಾಗಿಯೆ " ನಾನು ಮದುವೆಯಾಗುತ್ತೇನೆ " ಎಂದದ್ದು ಇದೇ ಮೊದಲು ಬಾರಿ. ಕಮಲಮ್ಮನವರಿಗೆ ಆಶ್ಚರ್ಯ, ಆನಂದ.

" ಮದುವೆಯಾಗುತ್ತೀಯಾ ? " ಎಂದರು.

" ಯಾಕೆ ? ಮದುವೆಯಾಗಬಾರದೆ ? " ಎಂದು ಗೋಪಿ ನಕ್ಕ.

" ಆಗಬಹುದು. ಆದರೆ ಮದುವೆ ಒಬ್ಬನದೇ ಆಗುವುದಿಲ್ಲ. ಮದುವೆಗೆ ವಧು ಬೇಕು. ವಧುವನ್ನು ನೀನು ಒಪ್ಪಬೇಕಾಗುತ್ತದೆ."

" ನನಗೆ ಅಷ್ಟೂ ತಿಳಿಯುವುದಿಲ್ಲವೆ ? "

" ನಿನಗೆ ತಿಳಿದದ್ದು ನನಗೆ ಮಾತ್ರ ತಿಳಿದಿಲ್ಲ."

" ತಿಳಿದೀತು. ಅದು ಯಾವ ದೊಡ್ಡ ಮಾತು ? "

" ಯಾರನ್ನು ? ವತ್ಸಲೆಯನ್ನೆ ? "

ಹಿಡಿಸಲಾರದ ಕುತೂಹಲದಿಂದ ಕೇಳಿದರು ಕಮಲಮ್ಮ. ಅರೆನಿಮಿಷ ತಡೆದು ಗೋಪಿ ಹೇಳಿದ್ದ

" ವತ್ಸಲೆ ಬೇಡ."

ಕಮಲಮ್ಮನಿಗೆ ನಿರಾಶೆ. ಆದರೂ ಮಗ ಮದುವೆಯಾಗುವ ನಿಶ್ಚಯವನ್ನಲ್ಲದೆ ವಧುವನ್ನು ಗೊತ್ತುಮಾಡಿಕೊಂಡದ್ದನ್ನು ನೆನೆದು ಅದರ ಸಮಾಧಾನದಲ್ಲಿ ತಮ್ಮ ನಿರಾಶೆಯನ್ನು ಮರೆತು ಕೇಳಿದರು.

" ಹಾಗಾದರೆ ಯಾರು ? "

" ಶಾಸ್ತ್ರಿಗಳ ಮಗಳು-ಶಾಂತಾ ! "

ಕಮಲಮ್ಮನವರು ತೆಪ್ಪಗಾಗಿಬಿಟ್ಟರು. ಗೋಪಿಗೆ ಇದು ತಿಳಿಯದಿರಲಿಲ್ಲ. ಗೋಪಿ ಮುಂದುವರಿದು ಕೇಳಿದ

" ಯಾಕಮ್ಮ, ನಿನಗೆ ಒಪ್ಪಿಗೆ ಇಲ್ಲವೆ ? "

" ಒಪ್ಪಿಗೆ ಏನು ? ಆದರೂ— "

" ಏನು ಆದರೂ ? "

" ಅಲ್ಲ, ಎಂಥ ಕನ್ಯೆ ? ಏನೆಂದು— "

" ಯಾಕೆ ? ಏನಾಗಿದೆ ಆಕೆಗೆ ? "

" ಆಗುವುದೇನು ? ಎಂತೆಂಥ ಕನ್ಯೆಯರನ್ನು ಬಿಟ್ಟು— "

" ಮನಸ್ಸಾದರೆ ಮುಗಿಯಿತು. ಮದುವೆಗೆ ಮನಸ್ಸು ಮುಖ್ಯವಲ್ಲವೆ?"

" ಹೌದಪ್ಪ, ಆದರೂ—"

" ಆದರೂ ಎನ್ನುವ ಮಾತೇ ಇಲ್ಲ. ನನ್ನ ಮಟ್ಟಿಗೆ ನಾನು ಗೊತ್ತು ಮಾಡಿಕೊಂಡದ್ದು ಇಷ್ಟು. ಮದುವೆಯಾಗುವುದೇ ಆದರೆ ಶಾಂತಳನ್ನು ಆಗುವುದು. ಇಲ್ಲವಾದರೆ—"

ಕಮಲಮ್ಮನಿಗೆ ತುಂಬ ನಿರಾಶೆಯಾಯಿತು. ಕತ್ತಲು ಪ್ರಪಂಚವನ್ನು ಕರಾಳವಾಗಿ ಆವರಿಸುತ್ತಿತ್ತು. ಎದುರಿಗಿನ ತೊಟ್ಟಿಯಲ್ಲಿ ಆಳುಮನುಷ್ಯ ಅದೇ ತಂದಿರಿಸಿದ ದೀಪದ ಬೆಳಕು ಸುತ್ತಲಿನ ಕತ್ತಲೊಡನೆ ಹೋರಾಡುತ್ತಿತ್ತು. ಮದುವೆಯೆ ಬೇಡ ಎಂದು ಗೋಪಿ ಹೇಳುತ್ತಿದ್ದಾಗಿನ ನಿರಾಶೆ ಸುತ್ತಲಿನ ಕತ್ತಲಂತೆಯೆ ಹಬ್ಬಿನಿಂತಾಗ ಯಾರನ್ನೆ ಆಗಲಿ ಮದುವೆಯಾಗುತ್ತೇನೆ ಎಂದು ಆತ ಹೇಳಿದ ಇಂದಿನ ಮಾತು ತೊಟ್ಟಿಯಲ್ಲಿಯ ದೀಪದ ಬೆಳಕಿನ ಹಾಗೆಯೆ ಕೆಲಮಟ್ಟಿಗಾದರೂ ಅವರ ಮನಸ್ಸಿನಲ್ಲಿಯ ಕತ್ತಲನ್ನು ಬೆಳಗುತ್ತಿತ್ತು. ತಾಯಿಯನ್ನು ನೋಯಿಸುವುದು ಗೋಪಿಗೆ ಬೇಡವಾಗಿತ್ತು. ಶಾಂತಳನ್ನು ಬಿಡುವುದೂ ಅಸಾಧ್ಯ. ಕಾತರನಾಗಿ ಕೇಳಿದ್ದ

" ನೀನು ಬೇಡ ಎನ್ನುತ್ತೀಯಾ ? "

" ಬೇಡ ಅನ್ನುವುದಿಲ್ಲಪ್ಪ. ನಿನಗೆ ಯಾವುದು ಇಷ್ಟ ಅದಾಗಲಿ.... "

ಎಂದು ಹೇಳಿದಾಗ ಅವರ ದನಿ ನಡುಗಿದ್ದನ್ನು ಗೋಪಿ ಗುರುತಿಸದಿರಲಿಲ್ಲ. ಹೇಳಬೇಕಾದುದನ್ನು ಹೇಳಿದಾಗ ಮನಸ್ಸು ಹಗುರಾಗಿತ್ತು. ತಾಯಿಯ ಅಸಂತೋಷವನ್ನು ಬೇರೊಂದು ಸಂದರ್ಭದಲ್ಲಿ ಕಳೆಯಲು ಪ್ರಯತ್ನಿಸಬಹುದೆಂದುಕೊಂಡು ಸುಮ್ಮನಾಗಿಬಿಟ್ಟ. " ಶಾಂತಾ ಬಡವರ ಮಗಳು ನಿಜ. ಅದಕ್ಕೆಂದೇ ಅಲ್ಲವೆ ನನ್ನ ತಾಯಿ ಅಸಂತೋಷಪಡುವುದು ? ಶಾಂತಾ ಅಷ್ಟೊಂದು ಚೆಲುವೆಯಲ್ಲ ಎಂದಲ್ಲವೆ ಇವರು ಹೀಗೆ ಹಿಂಜರಿಯುವುದು ? ಆದರೆ ಶಾಂತಾ ದೇವತೆಯ ಹಾಗಿದ್ದಾಳೆ; ಆಕೆಯ ಒಳಮನಸ್ಸಿನ ಸೊಬಗನ್ನು ಇವರು ಹೇಗೆ ಗುರುತಿಸಿಯಾರು ? " ಎಂದು ಯೋಚಿಸುತ್ತಿರುವಾಗಲೆ ತಾಯಿ ಕೇಳಿದರು

" ಈ ವಿಚಾರ ಶಾಸ್ತ್ರಿಗಳೇ ಕೇಳಿದರೆ ನಿನ್ನನ್ನು ? "

" ಇಲ್ಲವಲ್ಲ. ಅವರಿಗೆ ನಾನು ಇನ್ನೂ ಹೇಳಿಯೂ ಇಲ್ಲ. ನೀವೇ ಹೇಳಬೇಕು. "

" ನಾವೇ ಕೇಳಬೇಕೆ ? ಎಂಥ ಅನ್ಯಾಯ ಗೋಪಿ ? ನಾವಾಗಿಯೆ ಅವರ ಬಾಗಿಲಿಗೆ ಹೋಗಿ ಕನ್ಯೆ ಕೊಡಿರೆಂದು ಕೇಳುವುದೆಂದರೆ ? ನಮ್ಮ ಯೋಗ್ಯತೆಯೇನು ? "

ಗೋಪಿ ಮಾತನಾಡಲಿಲ್ಲ-ಹೇಳಬೇಕಾದುದೆಲ್ಲವನ್ನು ಹೇಳಿಯಾಗಿದೆ ಎಂಬ ಭರವಸೆಯಲ್ಲಿ. ಬೇರೆ ಯಾರನ್ನೂ ಮದುವೆಯಾಗುವ ಹಾಗಿಲ್ಲ ಎಂಬ ತನ್ನ ನಿರ್ಧಾರವನ್ನು ಸ್ಪಷ್ಟವಾಗಿ ಹೇಳಿದ ನಂತರ ಹೇಳಬೇಕಾದುದೇನು ಉಳಿಯಿತು ? ಮನೆತನ, ಘನತೆ, ಯೋಗ್ಯತೆಯ ಮಾತುಗಳೆಲ್ಲವೂ ನಿರರ್ಥಕವಾದವುಗಳು. ಅಲ್ಲದೆ ತಮ್ಮ ಯೋಗ್ಯತೆ ಎಂದರೇನು ? ದುಡ್ಡಿದ್ದ ಮಾತ್ರಕ್ಕೆ ದೊಡಿಸ್ತಿಕೆ ಬಂದಿತೆ ? ಶಾಸ್ತ್ರಿಗಳ ಮನಸ್ಸಿನ ಆಳ, ಹದ; ಅವರ ತಿಳಿವು ಸಂಸ್ಕಾರಗಳೆದುರು ಯಾವುದಕ್ಕೆ ಬೆಲೆ ? ಅಂಥವರ ಮಗಳು ತಮ್ಮ ತಾಯಿ ತಂದೆಗಳಿಂದ ನೂರರಲ್ಲೊಂದು ಪಾಲು ಆಂತರ್ಯದ ಸಂಸ್ಕಾರಗಳನ್ನು ಪಡೆದುಬಂದಿದ್ದರೆ ಆಯಿತು. ಆಕೆಯ ಯೋಗ್ಯತೆಯ ಮಾತೇ ಸಲ್ಲದು. ಶಾಂತಾ ನಿಜವಾಗಿಯೂ ಶಾಸ್ತ್ರಿಗಳ ಮಗಳು. ಅಂಥ ಹೃದಯವಂತಿಕೆ ಆಕೆಯದು. ಅಂಥ ತಿಳಿವು ಆಕೆಯದು. ಹೊರಚೆಲುವು ಇದ್ದರೂ ಆಯಿತು. ಇರದಿದ್ದರೂ ಆಯಿತು. ಹೊರಚೆಲುವನ್ನಾದರೂ ಶಾಂತಾ ಪಡೆದಿರಲಿಲ್ಲವೆಂದು ಹೇಗೆ ಹೇಳುವುದು ? ನೋಡುವ ಕಣ್ಣಿಗೆ ಚೆಲುವು ಎಲ್ಲಿಯೂ ಗೋಚರಿಸೀತು. ಹೊರಜಗತ್ತಿನ ಕಣ್ಣಿಗೆ ಶಾಂತಾ ಅಷ್ಟೊಂದು ಚೆಲುವಾಗಿ ಕಾಣದಿದ್ದರೂ ಗೋಪಿಯ ಕಣ್ಣಿಗೆ ಆಕೆ ಅಪ್ಸರೆಯಾಗಿಯೇ ಕಾಣುತ್ತಿದ್ದಳು. ಆದರೆ ಇದನ್ನು ಇನ್ನೊಬ್ಬರಿಗೆ, ತನ್ನ ತಾಯಿಗೆ, ತಿಳಿಹೇಳುವುದು ಹೇಗೆ ? ತಿಳಿಹೇಳಬೇಕಾದ ಅಗತ್ಯವೂ ಇರಲಿಲ್ಲ—

ಗೋಪಿ ಸುತ್ತಲಿನ ದೃಶ್ಯವನ್ನು ಎವೆಯಿಕ್ಕದೆ ನೋಡುತ್ತಿದ್ದ. ಆದರೆ ಮನಸ್ಸು ಯೋಚನೆಯಲ್ಲಿ ಮುಳುಗಿತ್ತು.

ಮೊದಲದಿನವೇ ಮಳೆಬಿದ್ದುದರಿಂದ ಗಾಳಿಬಿಸಿಲುಗಳು ಮೈದೊಳೆದು ನಿರಾಭರಣ ಸುಂದರವಾದ ನೀಲಾಕಾಶವನ್ನೆಲ್ಲ ವ್ಯಾಪಿಸಿ ನಲಿಯುತ್ತಿದ್ದವು. ಸುತ್ತಲಿನ ವನರಾಜಿ ಹೊಸಬೆಡಗಿನಿಂದ ಮೆರೆಯುತ್ತಿತ್ತು. ಗೋಪಿ ಕುಳಿತ

ಕಟ್ಟೆಯ ಮೇಲಿಂದ ಎದುರಿನ ದಡದಮೇಲೆ ಎತ್ತರದಲ್ಲಿ ಕಟ್ಟಿದ ಮನೆ, ಅದರ ಎಡಬಲದಲ್ಲಿ ಇಪ್ಪತ್ತೈದು ವರ್ಷಗಳ ಮೊದಲು ನೆಟ್ಟ ತೆಂಗಿನ ಮರಗಳ ಸಾಲುಗಳು ಎತ್ತರವಾಗಿ ನಿಂತಿದ್ದವು. ಅದರಾಚೆ ಮಾರ್ಕಂಡೇಯನ ಪ್ರವಾಹ. ಪ್ರವಾಹದಾಚೆ ಬೆಟ್ಟ. ಒಂದೇ ರಾಗದ ಹತ್ತಾರು ಲಯವಿನ್ಯಾಸಗಳಂತೆ, ಒಂದೇ ಬಣ್ಣದ ಹತ್ತಾರು ಬಗೆಗಳು ಹಸಿರು ಸೂಸುತ್ತಿದ್ದ ಬೆಟ್ಟದ ಸಾವಿರಾರು ಗಿಡಗಳಲ್ಲಿ ಕಣ್ಣನ್ನು ತಣಿಸುತ್ತಿದ್ದವು. ಅಲೆಅಲೆಯಾಗಿ ಮರಗಳ ಸಾಲುಗಳು ಏರಾಟ ನಡಸಿದ ಹಾಗೆ ಬೆಟ್ಟದ ತುದಿಯನ್ನು ಏರಬಯಸುತ್ತಿದ್ದ ಹಾಗಿತ್ತು. ಅಲ್ಲಲ್ಲಿ ಬರೀ ಹೂವೇ ಹೂವಾಗಿ ನಿಂತ ಬಣ್ಣಬಣ್ಣದ ಗಿಡಗಳು ಹೇಳ ಹೆಸರಿಲ್ಲದ ಚೆಲುವಿನಿಂದ ಸೃಷ್ಟಿಯ ಮೋಡಿಗೆ, ಮಾಯೆಗೆ ಸಾಕ್ಷಿಯಾಗಿ ನಿಂತಿದ್ದವು. ಎಣಿಕೆ ಇಲ್ಲದ ಬಣ್ಣಗಳು. ಎಣೆಯಿಲ್ಲದ ಗಂಭೀರ ಶಾಂತತೆಯಿಂದಾಗಿ ಆ ಬೆಳಗಿನ ಜಾವ ಗೋಪಿಯ ಅಂತರಂಗವನ್ನು ಸೂರೆಗೊಂಡಿತ್ತು. ಮುನ್ನಾದಿನದ ಮಳೆ ಕೆರೆಯ ನೀರನ್ನು ಕಲಕಿದ ಹಾಗೆ ಶಾಂತಳನ್ನು ಕುರಿತಾದ ಭಾವನೆ ಆತನ ಹೃದಯವನ್ನು ಕಲಕಿತ್ತು. ಆಕೆಯನ್ನೇ ಕುರಿತು ಯೋಚಿಸುತ್ತ ಸುತ್ತಲಿನ ಪ್ರಪಂಚಕ್ಕೆ ಬಾಹಿರನಾಗಿ ಅಂತರ್ಮುಖಿಯಾಗಿದ್ದ—

"ಶಾಂತಾ ಯಾರು ? ಆಕೆಯನ್ನೇ ಕುರಿತು ನಾನೇಕೆ ಇಷ್ಟು ಯೋಚಿಸಬೇಕು ? ಮನಸ್ಸಿನಿಂದ ಆಕೆ ಮರೆಯಾಗುವುದೇ ಇಲ್ಲವಲ್ಲ ? ಯಾವಾಗಲೂ ಆಕೆಯ ಸಾನ್ನಿಧ್ಯವನ್ನು, ಸಹವಾಸವನ್ನು ಹೇಗೆ ಬಯಸುತ್ತಿದೆಯಲ್ಲ ? ಆಕೆಯ ಯೋಚನೆಯಲ್ಲಿ ಮನಸ್ಸು ಎಲ್ಲಿಲ್ಲದ ಸಮಾಧಾನವನ್ನು ಪಡೆಯುತ್ತಿದೆ. ಏನಿರಬಹುದು ? ಎದುರಿನ ವನರಾಜಿಯನ್ನು ನೆನೆದಾಗ, ಕಾಲ ಬಳಿಯಲ್ಲಿಯ ಕಣ್ಣನ್ನು ಸೆಳೆಯುವಂತೆ ನೀರ ಎದೆಯನ್ನು ಸೀಳಿ ಸೌಭಾಗ್ಯವನ್ನು ಸೂರೆ ಮಾಡುತ್ತಿದ್ದ ಕಮಲಗಳನ್ನು ನೋಡಿದಾಗ ಮನಸ್ಸು ಶಾಂತಳನ್ನೆ ಬಯಸುತ್ತಿದೆಯಲ್ಲ ? " ಆದರೆ ಈ ಯೋಚನೆ ಬಹುಕಾಲ ಬಾಳುತ್ತಿರಲಿಲ್ಲ. ಅಂಥ ಯೋಚನೆಗೊಳಗಾದಾಗ ಆತನ ಮನಸ್ಸು ಶಾಂತಳ ಸೌಂದರ್ಯಕ್ಕೂ ಸುತ್ತಲಿನ ಸೌಂದರ್ಯಕ್ಕೂ ಯಾವುದೊ ಒಂದು ಅವ್ಯಕ್ತವಾದ ಸಂಬಂಧವನ್ನು ಕಲ್ಪಿಸುತ್ತಿತ್ತು. ಶಾಂತಾ ನಿಸರ್ಗವಿದ್ದ ಹಾಗಿದ್ದಾಳೆ. ಆಕೆಯ ಗಂಭೀರ ಪ್ರಸನ್ನತೆ ನಿಸರ್ಗದ್ದು. ಸುತ್ತಲಿನ ಗಿಡಮರಗಳು ಯಾರ ನೆರವೂ ಇಲ್ಲದೆ ಸೃಷ್ಟಿಯ ಮಾಯೆಯ ಫಲವಾಗಿ ಬೆಳೆದು ನಿಂತ ಹಾಗೆ ಶಾಂತಾ ಬೆಳೆದು

ನಿಂತಿದ್ದಾಳೆ ಸುತ್ತಲಿನ ಸೃಷ್ಟಿ ತನ್ನ ಅಂತರಂಗವನ್ನು ಸೂರೆಗೊಳ್ಳುತ್ತಿದ್ದ ಹಾಗೆ ಶಾಂತಾ ಕೂಡ ತನ್ನ ಅಂತರಂಗವನ್ನು ಸೂರೆಗೊಂಡಿದ್ದಾಳೆ. ಶಾಂತಾ ಸೃಷ್ಟಿಯ ಚೆಲುವಿಗೊಂದು ಸಂಕೇತ ಮಾತ್ರ. ಆಕೆ ಶಾಸ್ತ್ರಿಗಳ ಮಗಳು ಹೌದು. ಆದರೆ ಶಾಸ್ತ್ರಿಗಳು ನಿಮಿತ್ತ ಮಾತ್ರ. ಸೃಷ್ಟಿಗೆ ಈಶ್ವರ ನಿಮಿತ್ತವಾಗಿದ್ದ ಹಾಗೆ. ಈಶ್ವರ ಸೃಷ್ಟಿಯನ್ನು ನಿರ್ಮಿಸಿದ ಎನ್ನುವುದಕ್ಕಿಂತ ಸೃಷ್ಟಿ ಈಶ್ವರ ನಿಂದಾಗಿ ಹುಟ್ಟಿಕೊಂಡಿತು ಎಂದೇ ಹೇಳಬೇಕಲ್ಲವೇ ? ಎಂದುಕೊಂಡ—

ಆದರೆ ವತ್ಸಲೆ ?

ವತ್ಸಲೆ ಬೇರೆಯಾಗಿದ್ದಳು. ತೀರ ಬೇರೆಯಾಗಿದ್ದಳು. ನೋಡಿದವ ರೆಲ್ಲರೂ ಆಕೆ ಚೆಲುವೆ ಎಂದೇ ಹೇಳುತ್ತಿದ್ದರು. ಆಕೆಯನ್ನು ನೋಡಿ ಆಕೆ ಯನ್ನು ಮದುವೆಯಾಗಬೇಕೆಂದು ಬಯಸದ ತರುಣನಿರಲಿಲ್ಲ.

ಮದುವೆಯ ಯೋಚನೆ ಮೊದಲಾದಾಗಿನಿಂದಲೂ ಆತನಿಗೆ ವತ್ಸಲೆ ಬೇಡವಾಗಿದ್ದಳು. ಪ್ರತಿಯೊಂದು ವಿಷಯದಲ್ಲೂ ಚೆಲುವನ್ನು ಬಯಸುವ ಆತನಿಗೆ ,ಚೆಲುವಿನ ಕಣಿಯಾದ ವತ್ಸಲೆ ಬೇಡವಾದ ಬಗೆ ಉಳಿದವರಿಗೆ, ಗೋಪಿಯ ತಾಯಿತಂದೆಗಳಿಗೆ ವಿಚಿತ್ರವೆನಿಸುತ್ತಿತ್ತು. ವತ್ಸಲೆ ತನ್ನ ಕಣ್ಣೆ ದುರೇ ಬೆಳೆದವಳು. ಮೊದಲಿನಿಂದಲೂ ಕೂಡಿ ಆಡಿದವಳು. ಆಕೆಗೆ ಹದಿ ನಾಲ್ಕು ತುಂಬಿ ತಾರುಣ್ಯ ವೈದೋರತೊಡಗಿದಾಗಲೂ ಗೋಪಿಯಿಂದ ದೂರ ವಾಗಿರಲಿಲ್ಲ. ಯೌವನವನ್ನು ಪಡೆದು ಶೃಂಗಾರಕ್ಕೊಂದು ಆಹ್ವಾನವಾಗಿ ನಿಂತಾಗಲೂ ಆಕೆ ಗೋಪಿಯ ಪಾಲಿಗೆ ತನಗೆ ಮೊದಲಿನಿಂದಲೂ ಒಡನಾಡಿ ಯಾದ ವತ್ಸಲೆಯಾಗಿಯೇ ಕಾಣುತ್ತಿದ್ದಳು. ಆ ಒಡನಾಟ, ಸ್ನೇಹಗಳು ಯೌವನದ ಅರುಣೋದಯದ ಸಮಯದಲ್ಲಿಯೂ ಬೇರೆ ದಾರಿಗಳನ್ನು ಕಂಡಿರ ಲಿಲ್ಲ. ತಾನು ವತ್ಸಲೆಯನ್ನು ಮದುವೆಯಾಗಬೇಕೆಂಬ ಮಾತು ಖಂಡಿತವಾಗಿ ಹಿರಿಯರಿಂದ ಬಂದಾಗ ಗೋಪಿ ಅಸಹ್ಯಪಟ್ಟುಕೊಂಡಿದ್ದ. ಸಾಧ್ಯವೆ, ಎಂದು ಕೇಳಿಕೊಂಡಿದ್ದ. ಯಾಕೆ ಎಂದು ಕೇಳಿದರೆ ಉಳಿದವರನ್ನು ಮನಗಾಣಿಸಬಹು ದಾದ ಕಾರಣಗಳನ್ನು ಹೇಳುವುದು ಕಷ್ಟವಾಗಿದ್ದಿತು. ಆದರೆ ಬೇಡ ಎನಿಸು ತ್ತಿತ್ತು. ಬೇಡ ಎಂಬ ಒಂದು ಮಾತಿನ ಉತ್ತರದಿಂದಲೇ ಆ ಮಾತನ್ನು ಮುಗಿ ಯಿಸಿದ್ದ. ತಾಯಿಗೆ ನಿರಾಶೆಯನ್ನುಂಟು ಮಾಡಿದ್ದ. ವತ್ಸಲೆಯ ಹೃದಯ ವನ್ನು ಮಸಣವನ್ನಾಗಿ ಮಾಡಿದ್ದ.

ವತ್ಸಲೆ ಸ್ಪಷ್ಟವಾಗಿ ಹೇಳಿದ್ದಳು " ನಾನು ಮದುವೆಯಾಗುವುದೇ ಆದರೆ ನಿನ್ನನ್ನು. ಇಲ್ಲವಾದರೆ ಇಲ್ಲ. ಈ ಬದುಕು ನಿನಗೆ ಮೀಸಲು. ನೀನು ಒಪ್ಪಿದರೆ ಸಾರ್ಥಕವಾಯಿತು. ಇಲ್ಲದಿದ್ದರೆ ನಿನ್ನನ್ನು ನೆನೆಯುತ್ತಿರುವುದೇ ಒಂದು ಕೆಲಸ ನನಗೆ " ಎಂದು. ಈ ಮಾತು ಗೋಪಿಯನ್ನು ಕರಗಿಸಿರಲಿಲ್ಲ. ಆಕೆ ಹಾಗೆ ಹೇಳಬಾರದಾಗಿತ್ತು ಎಂದು ಮಾತ್ರ ಅಂದುಕೊಂಡಿದ್ದ.

ವತ್ಸಲೆಯ ಧಾರ್ಷ್ಟ್ಯ, ಆಕೆಯ ಮುಂಧೋರಣೆ, ಆಕೆಯ ಬೆಡಗು ವೈಯ್ಯಾರಗಳು ಗೋಪಿಯನ್ನು ನೋಯಿಸುತ್ತಿದ್ದವು. ಮೂರುವರ್ಷ ಮೊದಲು ಆಕೆ ಕಾಲೇಜಿನ ನೆಪಹೂಡಿಕೊಂಡು ತಾನು ಓದುತ್ತಿದ್ದ ಪುಣೆಯಲ್ಲಿಯ ಕಾಲೇಜನ್ನೇ ಸೇರಿದ್ದು ಆತನಿಗೆ ಎಷ್ಟು ಮಾತ್ರವೂ ಸರಿಬಿದ್ದಿರಲಿಲ್ಲ. ಆದರೆ ಆಕೆಗೆ ತನ್ನ ತಾಯಿಯ ಬೆಂಬಲವಿದ್ದಿತು. ತನ್ನ ತಾಯಿತಂದೆಗಳ, ಸೋದರತ್ತೆಯ ಬೆಂಬಲಕ್ಕೆ ಸರಿಸಮನಾಗಿ ವತ್ಸಲೆಯ ಹೃದಯದಲ್ಲಿ ಮೂಡಿದ ಅನುರಾಗ ಇತ್ತೀಚೆಗೆ ಹಟವಾಗಿ ಪರಿಣಮಿಸಿತ್ತು. ಗೋಪಿಯಲ್ಲದ ಗಂಡನ್ನು ತಾನು ನೆನೆಯುವುದು, ಒಪ್ಪುವುದು ಅಸಾಧ್ಯವೆಂಬ ನಿರ್ಧಾರಕ್ಕೆ ಬಂದು ಗೋಪಿಯನ್ನು ತನ್ನೆಡೆಗೆ ಸೆಳೆಯುವ ಸಾವಿರ ಸಂಚುಗಳಿಗೆ ತೊಡಗಿದ್ದಳು. ಇದೆಲ್ಲವೂ ಗೋಪಿಯಲ್ಲಿ ಆಕೆಯ ಬಗೆಯಲ್ಲಿ ಬೇಸರವನ್ನುಂಟುಮಾಡಿತ್ತು. ಗೋಪಿ ಪುಣೆಯಲ್ಲಿಯ ಆ ಸಾಯಂಕಾಲದ ಸನ್ನಿವೇಶವನ್ನು ಮರೆಯುವಂತಿರಲಿಲ್ಲ—

ಗೋಪಿ ತಾನು ಮುಂಬರುವ ಟರ್ಮಿಗೆ ಕಾಲೇಜು ಸೇರುವುದಿಲ್ಲವೆಂಬ ನಿರ್ಧಾರವನ್ನು ಮಾಡಿದ್ದ. ಬಿ. ಎ. ಪರೀಕ್ಷೆ ಮುಗಿದಿತ್ತು. ಗೋಪಿ ಕಾಲೇಜಿಗೆ ಮತ್ತೆ ಬರುವುದಿಲ್ಲ ಎಂಬ ಮಾತು ವತ್ಸಲೆಯಲ್ಲಿ ಕಾತರ ಹುಟ್ಟಿಸಿತ್ತು. ರಜೆಯಲ್ಲಿ ಮನೆಗೆ ಹೋದಾಗ ಗೋಪಿಯನ್ನು ಮಾತನಾಡಿಸಬಹುದಿತ್ತು. ಆದರೆ ತಾನು ಇಂಟರ್‌ಗೆಂದು ಅಲ್ಲಿ ಬಂದಾಗಿನಿಂದ ಎರಡು ವರ್ಷಗಳ ಕಾಲದ ತನ್ನ ಎಲ್ಲ ಯತ್ನಗಳೂ ವಿಫಲವಾಗುವ ದಾರಿಯಲ್ಲಿದ್ದುದನ್ನು ನೆನೆದು ಗೋಪಿ ಹೊರಡುವ ಮುನ್ನ ಅವನಿಂದ ಕೊನೆಯ ಉತ್ತರವನ್ನು ಪಡೆಯುವ ಉದ್ದೇಶದಿಂದ ಆ ಸಾಯಂಕಾಲ ಅಲೆದಾಟಕ್ಕೆಂದು ಕರೆಯಲು ಬಂದಿದ್ದಳು. ಬಂದಾಗಿನ ಆಕೆಯ ಬೆಡಗುವೈಯ್ಯಾರಗಳನ್ನು ನೋಡಿ ಗೋಪಿ ಅಚ್ಚರಿಗೊಂಡಿದ್ದ. ಆದರೆ ಆ ಬಾಹ್ಯಾಡಂಬರ ಆತನ ಅಂತರಂಗವನ್ನು ತಟ್ಟುವುದು ಸಾಧ್ಯವಿರಲಿಲ್ಲ.

" ಅದೇನು ಈ ಕಡೆಗೆ ಬಂದೆ ? " ಎಂದ.

" ಸುಮ್ಮನೆ— "

" ಸುಮ್ಮನೆಯೆ ? "

" ಸುಮ್ಮನೆ ಎಂದರೆ, ಏನೊ ಬರಬೇಕೆಂದೆನಿಸಿತು, ಬಂದೆ. ಯಾಕೆ, ಬರಬಾರದಾಗಿತ್ತೆ ? ಅಷ್ಟು ಬೇಡವಾಗಿದ್ದರೆ, ಇಕೊ, ಹೊರಟೆ."

" ಬರಬಾರದಾಗಿತ್ತು ಎಂದೆನೆ ನಾನು ? "

" ಮತ್ತೆ ಹಾಗೇನು ಕೇಳಿದಿ, ಹಾಗಾದರೆ ? "

" ಏನು ಕೇಳಿದೆ ? "

"ಸಾಕು ಅದೆಲ್ಲ. ಈಗ ನನಗೆ ತೀರ ಬೇಸರವಾಗಿದೆ. ಎಲ್ಲಿಯಾದರೂ— "

" ಪಿಕ್ಚರಿಗೆ, ಹೌದಲ್ಲವೆ ? "

" ದೊಡ್ಡ ಬಂದವ. ಪಿಕ್ಚರ್ ಎಂದರೆ ಮೈಗೆ ಮುಳ್ಳೇ ನಿನಗೆ."

" ಮೈಗೆ ಮುಳ್ಳು ಬಂದರೆ ಹೇಗೂ ಆದೀತು. ಮನಸ್ಸೇ ಬಧಿರವಾಗುತ್ತದೆ. ಅದಕ್ಕೇನು ಮಾಡುವುದು ? "

" ಆಗಲಿ. ಎಲ್ಲಿಯಾದರೂ ಒಂದಿಷ್ಟು ಬಿಸಿಬಿಸಿ ಕಾಫಿ ಕುಡಿದರೆ ತಾನಾಗಿಯೇ ಕರಗುತ್ತದೆ ! "

" ಕಾಫಿ ಕುಡಿದರೆ ಮನಸ್ಸು ಕರಗುತ್ತವೆಯೆ ? "

" ಕರಗುವುದೇ ಬೇಡ. ಆಯಿತೆ ? ಮಂಜುಗಡ್ಡೆಯಾಗಿಯೇ ಇರಲಿ."

ಮಾತಿನಲ್ಲಿಯ ಸೂಚ್ಯಾರ್ಥ ಇಬ್ಬರಿಗೂ ಅರ್ಥವಾಗಿತ್ತು. ಆ ವಿಷಯವನ್ನು ಮುಂದುವರಿಸುವುದು ವತ್ಸಲೆಗೆ ಬೇಕಾದಷ್ಟೂ ಗೋಪಿಗೆ ಬೇಡವಾಗಿತ್ತು.

" ಹುಂ. ಈಗ ಏನು ? " ಎಂದ ಗೋಪಿ.

" ಏನೂ ಇಲ್ಲ."

" ಎಂದರೆ ಹೀಗೆಯೆ ಸುಮ್ಮನೆ ಕುಳಿತಿರುವುದೆ ? "

" ಕುಳಿತಿರುವುದು ಬೇಡವಾದರೆ ಅಲೆದಾಡಿ ಬರಬಹುದು—ರಾಯರಿಗೆ ಮನಸ್ಸಾದರೆ— "

" ಅಲೆದಾಡಿ ಬರಬಹುದು. ಆದರೆ— "

" ಆದರೆ ಎನ್ನುವುದನ್ನೇ ಬಿಡಬೇಡ ನೀನು. ನಾನು ಹೇಳಿದ ಒಂದು

ಮಾತನ್ನಾದರೂ ನೀನು ಆದರೆ ಎನ್ನದೆ ಒಪ್ಪಿದ್ದೀಯಾ ? "

"ಆದರೆ ಅನ್ನುವುದು ನನ್ನ ಸ್ವಭಾವ. ಅದಕ್ಕೇನು ಮಾಡುವುದು ? "

"ನಿನ್ನ ಸ್ವಭಾವವೊ ನನ್ನ ದೈವವೊ" ಎನ್ನಬೇಕೆಂದವಳು ಸುಮ್ಮ ನಾದಳು. ಆ ಮಾತನ್ನು ಹೇಳಿ ಪ್ರಯೋಜನ ಕಾಣಲಿಲ್ಲ ಆಕೆಗೆ. ಬೇರೆ ಯಾಗಿಯೇ ಹೇಳಿದಳು.

"ಮೊದಲು ಆದರೆ ಎಂದರೂ ಕೊನೆಗೆ ಒಪ್ಪಿದರೆ ಸಾಕು ! "

"ಮೊದಲು ಆದರೆ ಎಂದು ಕೊನೆಗೆ ಒಪ್ಪುವುದು ಹೇಗೆ ? "

"ಅಂತೂ ಅಲೆದಾಟಕ್ಕೆ ಹೋದ ಹಾಗಾಯಿತಲ್ಲ ? "

"ಓ. ಅದೇ ? ಅಷ್ಟನ್ನು ಮಾಡಬಹುದು."

ಆ ಒಂದು ಮಾತಿನಿಂದ ಗೋಪಿ ಬೇರೆಯಾದ ಅರ್ಥವನ್ನಿಟ್ಟುಕೊಂಡು ಮಾತನಾಡುತಿದ್ದನೆಂಬುದು ಸ್ಪಷ್ಟವಾಗುತ್ತಿತ್ತು. ಆ ಅರ್ಥ ವತ್ಸಲೆಯ ಮನಸ್ಸಿ ನೊಳಗೆ ಸುಳಿಯುತ್ತಲೇ ಇದ್ದಿತಾದ್ದರಿಂದ ಆಕೆಗೆ ಬೇರೆಯಾಗಿ ತಿಳಿಹೇಳ ಬೇಕಿರಲಿಲ್ಲ. ಆದರೆ ಗೋಪಿಯ ಮಾತಿನ ಈ ರೀತಿ ಆಕೆಯನ್ನು ಪೂರ್ತಿ ಯಾಗಿ ನೋಯಿಸಿತು. ಬರುವಾಗಿನ ಉತ್ಸಾಹ ಆಕೆಯ ಮುಖದಲ್ಲಿಂದ ಮಾಯವಾಗಿತ್ತು. ಆಕೆ ಕೇಳಿದಳು—ಕರುಣವಾಗಿ

"ಯಾಕೆ, ಗೋಪಿ ? ನನ್ನನ್ನು ಕಂಡರೆ ಯಾವಾಗಲೂ ಹೀಗೆಯೆ ಮಾತನಾಡುತ್ತೀ ? "

"ಏನು ಮಾತೊ ? ತಿಳಿದೂತಿಳಿದೂ— "

ಮುಂದೆ ವತ್ಸಲೆಗೆ ಮಾತನಾಡಲಾಗಲಿಲ್ಲ. ನೀರವತೆಯನ್ನು ಸಹಿಸ ದಾಗಿ ಗೋಪಿ ಕೇಳಿದ

"ನೀನು ಊರಿಗೆ ಹೊರಡುವುದಿಲ್ಲವೆ ? ಪರೀಕ್ಷೆಯಂತೂ ಆಯಿತಲ್ಲ ? "

"ಪರೀಕ್ಷೆ ಎಂದಿಗೊ ಮುಗಿದಿದೆ. ನೀನು ಹೊರಡುವುದು ಯಾವಾಗ ? "

"ನೋಡಬೇಕು. ಇನ್ನು ಮುಂದೆ ನಾನು ಪರೀಕ್ಷೆಗಾಗಿ ಓದಬಾರದು ಎಂದುಕೊಂಡಿದ್ದೇನೆ. ಇನ್ನು ಇಲ್ಲಿಗೆ ಬರುವ ಹಾಗಿಲ್ಲ. ಅಂತೆಯೇ ಇನ್ನೂ ತಿಂಗಳೊಪ್ಪತ್ತು ಇದ್ದುಕೊಂಡು ಹೋಗಬೇಕೆಂದಿದ್ದೇನೆ. "

"ಹಾಗಿದ್ದರೆ ನಾನು ಹೊರಡಬೇಕಾಯಿತು. "

"ನನಗಾಗಿ ಕಾಯುತ್ತಿದ್ದೆಯಾ ? "

" ಇನ್ನೂ ಕಾಯುತ್ತಿದ್ದೇನೆ. "

ಆ ಮಾತು ಎಷ್ಟು ನಿಜ ಎಂದುಕೊಂಡಳು ವತ್ಸಲೆ. ಕಾಯುತ್ತಿದ್ದೇನೆ. ಕೊನೆಯವರೆಗೂ ಕಾಯುತ್ತೇನೆ. ಎಂದು ದೃಢವಾಗಿ ತನ್ನಷ್ಟಕ್ಕೆಯೆ ಹೇಳಿ ಕೊಂಡಳು. ಕಾಯುವ ಹೊರತು ಬೇರೆ ಮಾರ್ಗವೆ ಕಾಣುತ್ತಿರಲಿಲ್ಲ ಆಕೆಗೆ. ತಾನು ಮದುವೆಯನ್ನೇ ಆಗುವುದಿಲ್ಲವೆಂಬ ಗೋಪಿಯ ಮಾತು ವತ್ಸಲೆಗೆ ಹೇಗೊ ಭರವಸೆಯನ್ನುಂಟುಮಾಡುತ್ತಿತ್ತು. ನೀನು ಬೇಡ, ಇನ್ನೊಬ್ಬಳನ್ನು ವರಿಸುವೆ ಎಂದು ಹೇಳುತ್ತಿಲ್ಲವಲ್ಲ ಎಂಬುದೇ ಆಕೆಗೊಂದು ಭರವಸೆ. ಬದುಕಿ ನುದ್ದಕ್ಕೂ ಕಾಯ್ದರೆ ಎಂದಾದರೂ ಒಂದು ದಿನ ಗೋಪಿಯ ಹೃದಯ ಕರಗ ಬಹುದು, ತನ್ನೆಡೆಗೆ ಒಲಿಯಬಹುದು ಎಂಬ ಆಸೆ ನೋವನ್ನುಂಟು ಮಾಡಿ ದಷ್ಟೂ ಸಮಾಧಾನವನ್ನು ಹೇಳುತ್ತಿತ್ತು.

" ಗೋಪೀ— " ಎಂದಳು ವತ್ಸಲೆ ಗದ್ಗದಿತಳಾಗಿ

" ಏನು ? "

" ನನ್ನನ್ನು ಕಂಡರೆ ನಿನಗೆ ಅಸಡ್ಡೆಯೆ ? "

" ಯಾರು ಹೇಳಿದರು ಹಾಗೆ ಎಂದು ? "

" ಹಾಗಿದ್ದರೆ ನನ್ನನ್ನು ಹೀಗೇಕೆ— "

" ಏನು ಮಾಡಿದೆ ? "

" ಏನೂ ಮಾಡಲಿಲ್ಲ. ನನ್ನ ಹೃದಯಕ್ಕೆ ಬೆಂಕಿಯನ್ನಿಟ್ಟೆ. ಅದು ಸುಟ್ಟು ಹೋಗುತ್ತಿರುವುದನ್ನು ನೋಡಿ ಎಷ್ಟು ಚೆಲುವಾಗಿ ಉರಿಯುತ್ತಿದೆ ಎಂದು ಸಂತೋಷಪಡುತ್ತಿರುವೆ ! "

" ಎಂಥ ಮಾತು ವತ್ಸಲಾ ! ಅಷ್ಟು ನಿಷ್ಠುರನೆ ನಾನು ? "

" ನನಗಂತೂ ಯಾವುದೂ ತಿಳಿಯದು. ನಿನ್ನ ಮನಸ್ಸು ನನಗೊಂದು ಗೂಢವಾಗಿದೆ. "

" ಗೂಢವೇನೂ ಇಲ್ಲ. "

" ಹಾಗಿದ್ದರೆ ಯಾಕೆ ಬೇಡ ಎನ್ನುತ್ತೀ ? "

" ಎಷ್ಟು ಸಲ ಹೇಳಿದೆ ? ನನಗೆ ಮದುವೆಯಾಗುವುದೇ ಬೇಡ ಎಂದು."

" ಅದೆಲ್ಲ ಸುಮ್ಮನೆ ಒಂದು ಮಾತು. "

" ಯಾಕೆ, ನನ್ನ ಮಾತಿಗೆ ಅಷ್ಟೇ ಬೆಲೆಯೆ ? "

" ಹಾಗಲ್ಲ. ಮದುವೆಯಾಗದೆಯೆ ಇರವುದಕ್ಕಾಗುತ್ತದೆಯೆ ? "

" ಯಾಕಾಗಬಾರದು ? "

" ಆದರೆ ಅಂಥದೇನು ಬಂದದ್ದು — ? "

ಗೋಪಿ ಯೋಚನೆಯಲ್ಲಿ ಮುಳುಗಿದ್ದ.

ಇದು ನಡೆದು ವರ್ಷದ ಮೇಲಾಗಿತ್ತು. ಆಮೇಲೆ ವತ್ಸಲೆ ದೀಪಾವಳಿಯ ರಜೆಯಲ್ಲಿ ಗೋಪಿಯ ಮನೆಗೇ ಬಂದಿದ್ದಳು. ನೇರವಾಗಿ ಯಾವ ಮಾತೂ ನಡೆದಿರಲಿಲ್ಲ. ಅಂದು ಹೇಳಿದ ಮಾತು ಆಕೆಯ ಹೃದಯವನ್ನು ಕೊರೆಯು ತ್ತಲೇ ಇದ್ದಿತು. ಇನ್ನೂವರೆಗೆ ಆತ ಮದುವೆಯ ಯೋಚನೆಯನ್ನೇ ಮಾಡದೆ ಇದ್ದದ್ದು ಅದೇ ಹಳೆಯ ಭರವಸೆಯನ್ನು ಹೇಳುತ್ತಿದ್ದಿತು.

ಇಂದು ಗೋಪಿಯ ಕಣ್ಣೆದುರು ಶಾಂತಾ-ವತ್ಸಲೆಯರ ಚಿತ್ರಗಳು ಸುಳಿ ಯುತ್ತಿದ್ದವು. ಎಷ್ಟು ಬೇರೆ? ಒಬ್ಬರೊಬ್ಬರಿಗೆ ಯಾವ ಸಂಬಂಧವೂ ಇಲ್ಲವಲ್ಲ ಎಂದುಕೊಳ್ಳುತ್ತಿದ್ದ. ಹೋಲಿಸಿ ನೋಡಿದ ಹಾಗೆ ವತ್ಸಲೆಯ ಚಿತ್ರ ಮಸುಕು ಮಸಕಾಗಿ ಕೊನೆಯಲ್ಲಿ ಮಾಯವಾಗುತ್ತಿತ್ತು. ಶಾಂತಾ ಮಾತ್ರ ಆತನ ಹೃದಯ ವನ್ನಷ್ಟೇ ಏಕೆ ಸುತ್ತಲಿನ ಸೃಷ್ಟಿಯ ಸೌಭಾಗ್ಯವನ್ನೆಲ್ಲ ವ್ಯಾಪಿಸಿ ನಿಂತು ಅದರ ಅಂತಶ್ಶಕ್ತಿಯಾಗಿದ್ದ ಹಾಗೆ ಕಾಣುತ್ತಿದ್ದಳು. ಈ ಸ್ಥಳಕ್ಕೆ, ಈ ಸೌಂದರ್ಯಕ್ಕೆ ಈ ಕ್ಷಣದ ಭಾವನಾವಿಲಾಸಕ್ಕೆ ಶಾಂತಾ ಏನು ಸಂಬಂಧ? ಏನು ಸಂಬಂಧವೆ? ಆಕೆ ಇಲ್ಲದ ಪ್ರಪಂಚ ಶೂನ್ಯ ! ಈ ಕಾಡಿನ ಕಡುಬೆಡಗು ನಿರರ್ಥಕ, ಎಂದು ಹೇಳಿಕೊಂಡ.

ಬಿಸಿಲು ಬಲಿಯುತ್ತಿತ್ತು. ಝುಳಪಿಸುತ್ತಿತ್ತು. ಕುಳಿತ ಕಲ್ಲುಗಳು ಕಾವು ಗೊಳ್ಳುತ್ತಲಿದ್ದವು. ಎಡಬಲದಲ್ಲಿಯ ಗಿಡಗಳು ಬೆಳಗಿನ ಬೆಡಗನ್ನು ತೊರೆದು ಬಿಸಿಲ ಬೇಗೆಯಲ್ಲಿ ನಿಡುಸುಯ್ಯುತ್ತಿದ್ದ ಹಾಗೆ ನಿಶ್ಚಲವಾಗಿ ನಿಂತಿದ್ದವು. ಕೆರೆಯ ನೀರಲ್ಲಿ ಒಂದು ಅಲೆಯೂ ಕಾಣುತ್ತಿರಲಿಲ್ಲ. ಒಂದು ಹಕ್ಕಿಯ್ದ ದನಿಯೂ ಆ ನಡುಮಧ್ಯಾಹ್ನದ ನೀರವತೆಯನ್ನು ಮುರಿಯಲಿಲ್ಲ. ಪ್ರಪಂಚದ ಬುನಾದಿಯಿಂದ ಆ ನೆಲ, ಆ ನೀರು, ಆ ಬೆಳಕು, ಆ ವಿಚಿತ್ರವಾದ ನಿಶ್ಶ ಬ್ದತೆ ಹಾಗೆಯೆ ನಿಂತಿದ್ದ ಹಾಗೆ ತೋರಿತು. ಯಾವುದೊಂದೂ ಚಲಿಸುತ್ತಿರ ಲಿಲ್ಲ—ಗೋಪಿಯ ಚೇತನದ ಹೊರತಾಗಿ.

ಬಿಸಿಲು ಇನ್ನೂ ಚುರುಕಾದಾಗ ಗೋಪಿ ಎದ್ದು ನೂರಡಿ ದೂರದಲ್ಲಿ

ವಿಶಾಲವಾಗಿ ಹಬ್ಬಿನಿಂತ ಆಲದಮರದಡಿಯಲ್ಲಿ ಬಂದು ಕುಳಿತ. ಎದ್ದು ಬರುತ್ತಿರುವಾಗ ಅಂದುಕೊಂಡ : ಯಾಕೆ ತಾನು ಒಬ್ಬ ತಬ್ಬಲಿಯ ಹಾಗೆ, ಮನೆಮಾರುಗಳಿಲ್ಲದ ಸಂನ್ಯಾಸಿಯ ಹಾಗೆ ಈ ಕಾಡನ್ನು ಸೇರಿ ಕೆಲಸವಿಲ್ಲದೆ ಕಾಲವನ್ನು ಕಳೆಯುತ್ತಿರುವುದು ? ಕಾರಣ ತಿಳಿಯದಲೆ ಮನಸ್ಸು ಉದ್ವಿಗ್ನಗೊಳ್ಳುತ್ತಲಿತ್ತು. ಯಾಕೆ ? ಯಾಕೆ ? ಈ ಮೂಕ ಮೊರೆತ? ನನಗೇನಾಗಿದೆ ? ನನಗೆ ಏನು ಬೇಕಾಗಿದೆ ? ಬಿಸಿಲೇರಿದರೂ, ಹೊಟ್ಟೆ ಬರಿದಾಗಿದ್ದರೂ ಕಟ್ಟಿತಂದ ಬುತ್ತಿಯನ್ನು ಉಣ್ಣಬೇಕೆಂದು ಆತನಿಗೆನಿಸಿರಲಿಲ್ಲ. ಮೂರು ದಿನವಾಯಿತು. ಪ್ರತಿನಿತ್ಯವೂ ರಂಗಧೂಳಿಗೆ ಬರುತ್ತಿದ್ದೇನೆ. ಆದರೆ ಮೊದಲಿನಂತೆ ಮನಸ್ಸಿಗೆ ನೆಮ್ಮದಿ ಇಲ್ಲ. ವೈಶಾಖದ ಬಿಸಿಲಬೇಗೆ ಬೆಳೆಯುತ್ತಿದ್ದ ಹಾಗೆ ಮನಸ್ಸಿನ ಉದ್ವಿಗ್ನತೆ ಬೆಳೆಯುತ್ತಿದೆ. ಈ ವೈಶಾಖದ ಬಿಸಿ ಉಸಿರಿನಿಂದ ಮಲ್ಲಿಗೆಯ ಚಿಗುರು ಮೊಗ್ಗೆಯಾಗಿ ಮೊಗ್ಗೆಬಿರಿದು ಸೌರಭವನ್ನು ಸೂರೆಮಾಡುತ್ತದೆ. ಗಿಡಬಳ್ಳಿಗಳೆಲ್ಲವೂ ಮುಂಬರುವ ಉತ್ಸವಕ್ಕೆಂದು ತಳಿರತೋರಣವನ್ನು ಕಟ್ಟಲೆಸಗುತ್ತವೆ. ಎಡಬಲದಲ್ಲಿ ನೋಡಿದ. ಎಳೆಮುಗುವಿನ ಬೆರಳ ಬಣ್ಣಗಳ ಕಾಂತಿಯಿಂದ ಸುತ್ತಲೆಲ್ಲವೂ ಗಿಡಗಳು ಮುಗುಳು ಪಡೆದಿದ್ದವು. ತನ್ನ ಮಾನಸ್ಸೇಕೆ ಹಾಗೆಯೆ ಹೊಸ ಬಾಳಿನ ಹೊಸ ಸೂಚನೆಯಿಂದ ಕೂಡಿ ಹರುಷವಾಗಿರಬಾರದು ? ಎಂದುಕೊಂಡ. ಸೃಷ್ಟಿಗೂ ಮನುಷ್ಯನ ಅಂತರಂಗಕ್ಕೂ ಯಾವ ಸಂಬಂಧವೂ ಇಲ್ಲವೆ ? ಇಲ್ಲವೇಕೆ ? ಇದ್ದೇ ಇದೆ. ಕಾಡನ್ನು ಬೆಡಗಿನ ಬೀಡನ್ನಾಗಿ ಮಾಡುವ ತಳಿರತೋರಣ, ಹೂಗೊಂಚಲು, ಬಿಸಿಲ ಹೊಳೆ, ಮೈಮರೆತ ಗಾಳಿ, ಎಲ್ಲವೂ ತನ್ನ ಅಂತರಂಗದ ಪ್ರತೀಕಗಳೆಂದೇ ತೋರಿದವು ಗೋಪಿಗೆ. ಶಾಂತಳ ಕಡೆಗೆ ಮನಸ್ಸು ಹರಿಯಿತು. ಎಲ್ಲವೂ ಶಾಂತಾ, ಶಾಂತಾ ಎಂದು ಮೊರೆಯಿಡುತ್ತಿದ್ದ ಹಾಗಿತ್ತು. ಗಾಳಿಯ ಬಾಯಲ್ಲಿ, ಮುಗಿಲ ಒಡಲಲ್ಲಿ ಅದೇ ದನಿಯನ್ನು ಕೇಳಿದ. ಅಲ್ಲವೆ ? ತನ್ನ ಹೊಸಬಾಳಿನ ಹೊಸತಿಲಲ್ಲಿ ನಿಂದು ಬೇಗನೆ ನನಸಾಗಬಲ್ಲ ಹೊಂಗನಸುಗಳ ತೋರಣವನ್ನು ಕಟ್ಟುತ್ತಿಲ್ಲವೆ ಶಾಂತಾ? ಕಟ್ಟುತ್ತಿದ್ದಾಳೆಯೆ ? ಯಾರು ಬಲ್ಲರು ?

ಹೌದು, ಯಾರು ಬಲ್ಲರು ? ಆ ಮಾತೇ ಬದುಕಿನ ಮೂಲ ಮಂತ್ರವೆಂದು ತೋರಿತು. ತಾನು ಈ ಸಮಾಚಾರವನ್ನು ತಾಯಿಗೆ ಹೇಳಿ ಮೂರು ದಿನವಾಯಿತು. ಆ ನಂತರ ಆಕೆ ಏನನ್ನೂ ಮಾತನಾಡಿರಲಿಲ್ಲ. ತಂದೆಯವರಿಗೆ

ಸಮಾಚಾರ ಹೋಗಿತ್ತು ನಿಜ. ಆದರೆ ಮುಂದೇನು ? ಶಾಂತಾಳಿಗೆ ಇದು ತಿಳಿದಿದೆಯೆ ? ಶಾಸ್ತ್ರಿಗಳನ್ನು ತಂದೆ ಕೇಳಿದರೆ ? ಅವರೇನೆಂದರು ? ಯಾವುದೂ ತಿಳಿಯಲಿಲ್ಲ. ನೇರವಾಗಿ ಕೇಳುವ ಹಾಗೆಯೂ ಇಲ್ಲ. ಕೊನೆಯಲ್ಲಿ ಎಲ್ಲವೂ ತನ್ನ ಮನಸ್ಸಿನಂತೆ ನಡೆದೇ ತೀರುವುದರಲ್ಲಿ ಸಂದೇಹವಿರಲಿಲ್ಲ. ಆದರೆ—ಯಾರು ಬಲ್ಲರು? ಶಾಸ್ತ್ರಿಗಳನ್ನು ಎದುರು ಹೇಳುವುದು ಸುಲಭದ ಕೆಲಸವಲ್ಲ. ಅವರು ಬೇಡವೆಂದರೆ ಮುಗಿದೇ ಹೋಯಿತು. ಅದೇಕೋ ಗೋಪಿಗೆ ಸಂದೇಹವೆನಿಸಿತು. ಶಾಸ್ತ್ರಿಗಳು ಒಪ್ಪಲಿಕ್ಕಿಲ್ಲ ಎಂದು. ಕಾರಣ ಹೇಳಬಹುದಾಗಿದ್ದರೆ ಪರಿಹಾರೋಪಾಯವನ್ನು ಆತ ಹುಡುಕಬಹುದಿತ್ತು. ಆತನ ಮನಸ್ಸು ಒಳಗಾಗಿದ್ದ ಮೂಕ ಮೊರೆತಕ್ಕೆ ಇದೇ ಕಾರಣ. ಶಾಸ್ತ್ರಿಗಳು ಥಟ್ಟನೆ ಬೇಡ ಎಂದುಬಿಟ್ಟರೆ? ಅನ್ನಲಿಕ್ಕಿಲ್ಲ—ಅನ್ನಬಹುದು ? ಯಾರು ಬಲ್ಲರು ? ಭವಿಷ್ಯದ ತೆರೆಯ ಹಿಂದೆ ಏನೇನು ಅಡಗಿದೆಯೊ ? ಯೋಚನೆ ಮಾಡಿದಷ್ಟೂ ಮನಸ್ಸು ಅಳುಕಿತು, ಕಳವಳಪಟ್ಟಿತು.

ಶಾಂತಳಲ್ಲಿ ತಾನು ಈ ಪರಿಯ ಸೊಬಗನ್ನು ಕಾಣುತ್ತಿದ್ದಾಗ, ಆಕೆಯಲ್ಲಿ ತಾನು ಈ ಪರಿ ಅನುರಕ್ತನಾಗಿದ್ದಾಗ ಆಕೆಯೊಡನೆ ಕೂಡಿ ಮಾತನಾಡಿ ತನ್ನ ಹೃದಯದೊಲುಮೆಯನ್ನು ನಿವೇದಿಸಲಿಕ್ಕೂ ಅವಕಾಶವಿಲ್ಲದ್ದಕ್ಕಾಗಿ ಗೋಪಿ ಗೋಳಾಡಿದ. ತನ್ನ ಹೃದಯದಲ್ಲಿಯ ಈ ಕೋಲಾಹಲವನ್ನು ಶಾಂತಾ ತಿಳಿದಿದ್ದಳೆ ? ಯಾರು ಬಲ್ಲರು ? ತಿಳಿದಿರಲಿಲ್ಲವೆಂದೇ ಕಾಣುತ್ತಿತ್ತು. ತನ್ನ ಬಗೆಯಲ್ಲಿ ಆಕೆ ಯೋಚಿಸುತ್ತಿರಬಹುದೆ ? ಏನೆಂದು ? ಅಥವಾ ಯೋಚಿಸುತ್ತಲೆ ಇರದಿರಬಹುದು. ತಾನು ಯಾರು ? ತನ್ನನ್ನು ಕುರಿತು ಆಕೆ ಯಾಕೆ ಯೋಚಿಸಬೇಕು ? ಹೃದಯಗಳಲ್ಲಿಯ ನಿಜವಾದ ಅನುರಕ್ತಿ ಮಾತು ಕೃತಿಗಳ ಸಹಾಯವಿಲ್ಲದೆ ಒಬ್ಬರೊಬ್ಬರಿಗೆ ತಿಳಿಯುತ್ತದೆ ಎನ್ನುತ್ತಾರೆ. ಹಾಗಿದ್ದರೆ ಶಾಂತಾ ತನ್ನಲ್ಲಿಯ ಮಾರ್ಪಾಟನ್ನು ತಿಳಿಯಬೇಕು. ತಿಳಿದಿದ್ದರೆ ಒಂದಿಲ್ಲೊಂದು ಬಗೆಯಲ್ಲಾದರೂ ಅದು ವ್ಯಕ್ತವಾಗಬೇಕಿತ್ತು. ಶಾಂತಾ ಮುಖ ಮೇಲೆತ್ತಿ ನೋಡುತ್ತಿರಲಿಲ್ಲ. ಶಾಸ್ತ್ರಿಗಳ ಜೊತೆಯಲ್ಲಿ ತಾನು ಗಂಟೆಗಟ್ಟಲೆ ಕಾಲ ಹರಟೆ ಹೊಡೆಯುತ್ತ ಕುಳಿತಿರುತ್ತಿದ್ದರೂ ಶಾಸ್ತ್ರಿಗಳೇ ಯಾತಕ್ಕಾದರೂ ಆಕೆಯನ್ನು ಕರೆಯದ ಹೊರತು ಪಡಸಾಲೆಯ ಕಡೆಗೆ ಇಣುಕುತ್ತಿರಲಿಲ್ಲ. ಬಾಗಿಲ ಸಂದಿನಲ್ಲಿ ನಿಂತು ತನ್ನ ಮಾತು ಕೇಳುತ್ತಿರಲಿಲ್ಲ. ಶಾಸ್ತ್ರಿಗಳು ಕರೆ

ದಾಗ ಕೂಡ ಹೇಳಿದಷ್ಟು ಕೆಲಸಗಳನ್ನು ಚಾಚೂ ತಪ್ಪದೆ ಮಾಡಿ ಮರೆಯಾಗು ತ್ತಿದ್ದಳು. ಪ್ರತಿ ರವಿವಾರ ಸಾಯಂಕಾಲ ಶಾಸ್ತ್ರಿಗಳು ಶ್ರೀರಾಮಚಂದ್ರನ ಭಜನೆಯನ್ನು ಮಾಡುತ್ತಿದ್ದರು. ದಾಸರ, ತ್ಯಾಗರಾಜರ ಕೀರ್ತನೆಗಳನ್ನು ರಾಗ ಬದ್ಧವಾಗಿ ಹೇಳುತ್ತಿದ್ದರು. ಶಾಂತಾ ವೀಣೆ ನುಡಿಸುತ್ತಿದ್ದಳು. ನಾಲ್ಕೆಂಟು ಬಾರಿ ಗೋಪಿ ಶಾಸ್ತ್ರಿಗಳೆದುರು ಕುಳಿತು ಕೀರ್ತನೆಗಳನ್ನು ಕೇಳಿದ್ದ. ಶಾಂತಾ ವೀಣೆಯನ್ನು ನುಡಿಸುತ್ತಿದ್ದಾಗ ಒಮ್ಮೆ ಆಕೆಯ ಬೆರಳುಗಳನ್ನಾದರೆ ಇನ್ನೊಮ್ಮೆ ಆಕೆಯ ಮುಖವನ್ನು ನೋಡುತ್ತಿದ್ದ. ಆದರೆ ಆ ತಗ್ಗಿದ ಮುಖದಲ್ಲಿ ನುಡಿಸು ತ್ತಿದ್ದ ಕೀರ್ತನೆಯ ರಾಗಾಲಾಪನೆಯಲ್ಲಿಯ ಭಾವ ವ್ಯಕ್ತವಾಗುತ್ತಿತ್ತಲ್ಲದೆ ಆಕೆಯ ಲಕ್ಷ್ಯ ಬೇರೆಡೆ ಹರಿಯುತ್ತಿದ್ದ ಹಾಗೆ ಕಾಣಲಿಲ್ಲ. ಹೆಸರಿಗೆ ತಕ್ಕಂತೆ ಶಾಂತತೆಯೆ ಅಲ್ಲಿ ಸದಾಕಾಲವೂ ನೆಲಸಿದ ಹಾಗಿತ್ತು. ಆ ಶಾಂತತೆಯನ್ನು ನೆನೆದಾಗಲೆಲ್ಲ ಗೋಪಿ ಅಚ್ಚರಿಪಡುತ್ತಲೇ ಇದ್ದ. ಎಂಥ ಅಗಾಧ ಶಾಂತತೆ ಅದು ? ಅದರ ಗೂಢವೇನು ? ಯಾವುದನ್ನೂ ಬೇಡದ ಯಾವುದನ್ನೂ ಬಯ ಸದ ಸಂತುಷ್ಟ ಮನಸ್ಸಿನ ಶಾಂತತೆಯೆ ? ಅಥವಾ ? ಬೇಡಿದರೆ ಏನಾಗಬೇಕು? ಎಂದುಕೊಂಡ ಹೃದಯದ ಸಾವಿರ ಹಾರೈಕೆಗಳನ್ನು ಹುಗಿದಿಟ್ಟು ಭಾರವಾದ ಅಂತರಂಗವನ್ನು ಹೊತ್ತುನಿಂತ ಶಾಂತತೆಯೆ? ಯಾರು ಬಲ್ಲರು? ಇಷ್ಟು ಹತ್ತಿರ ವಿದ್ದು ಎಷ್ಟು ದೂರ ? ಎಂದು ಕಳವಳಪಡುತ್ತಿದ್ದ.

ರವಿವಾರ ಸಾಯಂಕಾಲದ ಕೀರ್ತನೆಗಳ ಸಮಯದಲ್ಲಿಯೇ ಗೋಪಿ ಶಾಂತಳಲ್ಲಿ ಬದ್ಧಾನುರಾಗನಾಗಿದ್ದ. ಶಾಸ್ತ್ರಿಗಳು ಪದ್ಮಾಸನಸ್ಥರಾಗಿ ಕೀರ್ತ ನೆಗೆ ತೊಡಗಿದಾಗ ಅವರ ಮುಖದಲ್ಲಿ ಎಲ್ಲಿಲ್ಲದ ಒಂದು ಬಗೆಯ ತೇಜಸ್ಸು ಮೂಡುತ್ತಿತ್ತು. ಶುಚಿಯಾದ ಅಂತಃಕರಣದಿಂದ ಹೊರಹೊಮ್ಮಿ ಬರುತ್ತಿದ್ದ ರಾಗಲಹರಿ ಯಾವ ಸಂಗೀತದ ಸಾಧನೆಗೂ ನಿಲುಕದ ಸಿದ್ಧಿಯನ್ನು ಪಡೆಯು ತ್ತಿದ್ದಿತು. ಆ ಕ್ಷಣಕ್ಕೆ ಅವರಿಗೆ ಶ್ರೀರಾಮಚಂದ್ರನ ಸಾಕ್ಷಾತ್ಕಾರವಾಗುತ್ತಿ ತ್ತೆಂದು ಜನ ಹೇಳುತ್ತಿದ್ದರು. ಅದು ಹೇಗಿದ್ದರೂ ಆ ಕ್ಷಣದಲ್ಲಿ ಅವರು ಮಾನವನ ಚೇತನ ಸಾಧಿಸಬಹುದಾದ ಅಂತಃಶುದ್ಧಿ, ಸಮರ್ಪಣೆಯ ಭಾವದ ಪರಮಾವಧಿಯನ್ನು ಪಡೆಯುತ್ತಿದ್ದರು. ಈ ಪಾರ್ಥಿವ ಆವರಣ, ರಾಗದ್ವೇಷಾದಿ ಗಳಿಂದ ಅತಿ ದೂರವಾಗಿ ಅವರು ಇರುತ್ತಿದ್ದುದನ್ನು ಅವರ ಆ ಮುಖದಲ್ಲಿ ಸ್ಪಷ್ಟವಾಗಿ ಕಾಣಬಹುದು ಎಂಬುದನ್ನು ಗೋಪಿ ಹತ್ತಾರು ಬಾರಿ ತಿಳಿದಿದ್ದ.

ಅವರ ಭಾವಕ್ಕೆ ಸರಿಸಮನಾಗಿ ಶಾಂತಾ ನುಡಿಸುತ್ತಿದ್ದ ವೀಣೆ ಆಕೆಯ ಕೈಯಲ್ಲಿ ಒಂದು ದಿವ್ಯ ಸಾಧನವಾಗುತ್ತಿತ್ತು. ಬೆರಳುಗಳು ತಾವಾಗಿಯೆ ಸರಿಯಾದ ಸ್ಥಾನಗಳಲ್ಲಿ ತಂತಿಯನ್ನು ಮೀಟುತ್ತಿದ್ದ ಹಾಗಿರುತ್ತಿತ್ತು. ಮನಸ್ಸು ಇಷ್ಟು ಸಹಜವಾಗಿ ಭಾವಮಯವಾಗಬೇಕಾದರೆ, ತಲ್ಲೀನವಾಗಿ, ಭಕ್ತಿಯಂಥ ಒಂದು ಅಲೌಕಿಕಾನುಭವದಲ್ಲಿ ಓಲಾಡುವಂತಾಗಬೇಕಾದರೆ ಅದರ ಹದ, ಯೋಗ್ಯತೆ, ಸಂಸ್ಕಾರ ಬೇರೆಯಾದುವು, ಅಸಾಮಾನ್ಯವಾದುವೆಂದು ಗೋಪಿ ಸಹಜವಾಗಿಯೇ ತಿಳಿದ. ರಾಗರೂಪವಾಗಿ ಆಕೆಯ ಹೃದಯ ದೈವತದೆಡೆ ಸಾಗಿದಂತೆ ಅನುರಾಗ ರೂಪವಾಗಿ ಗೋಪಿಯ ಹೃದಯ ಆಕೆಯೆಡೆಗೆ ಹರಿದಿತ್ತು. ಈಕೆ ಹೆಣ್ಣಲ್ಲ, ದೈವತ ಎಂದು....

ಆಲದ ಮರದಡಿಯಲ್ಲಿ ಮಲಗಿದ್ದ ಹಾಗೆ ಆಕೆ ನುಡಿಸಿದ ಹತ್ತಾರು ರಾಗಗಳು, ಪಲ್ಲವಿಗಳು ಗೋಪಿಯ ಕಿವಿಯಲ್ಲಿ ದುಮುದುಮಿಸಿದವು. ಶಾಂತೆ ಸರಸ್ವತಿಯ ಅವತಾರವಾಗಿ ಕಂಡಳು. ಆಕೆಯ ಎದುರು ತಾನೆಂಥ ಪಾಮರ? ಎಂದುಕೊಂಡ.

೬

ಅಂದು ಸಾಯಂಕಾಲ ಊರಲ್ಲಿಯ ಭಟ್ಟರ ಕಟ್ಟೆಯ ಮೇಲೆ ಎಂದಿನಂತೆ ಊರಕಾರುಭಾರದ, ಸಲ್ಲದ ಊಹಾಪೋಹ ನಡೆದಿತ್ತು.

"ನನಗೆ ಮೊದಲಿಂದಲೂ ಗೊತ್ತು. ಆ ಶಾಸ್ತ್ರಿ ಎಂದರೆ ಏನೆಂದು ತಿಳಿದಿದ್ದೀರಿ? ಅವನ ನಾಮ, ಅವನ ಮಂತ್ರಗಳಿಗೆ ಮರುಳಾಗಬೇಕಾದವರು ಭಗವಂತರೇ. ಈ ಆಟವನ್ನು ಆತ ಹೂಡಿದ್ದನೆಂಬುದನ್ನು ನಾನು ಯಾವಾಗಲೊ ತಿಳಿದಿದ್ದೆ."

ಎಂದ ವಾಚಾಳಿ ವಾಮನಪ್ಪ. ಊರಲ್ಲಿಯ ಎಲ್ಲ ಸಮಾಚಾರ ಅವನಿಗೆ ಹೇಗೋ ಮೊದಲಿಗೆ ತಿಳಿಯುತ್ತಿತ್ತು. ತಿಳಿದ ಸುದ್ದಿಗಳ ಸುಳಿವು ಹಿಡಿದು ಅದಕ್ಕೆ ಸಂಬಂಧಪಟ್ಟ ಹೆಚ್ಚಿನ ವಿವರಗಳನ್ನು ತಿಳಿಯುವುದರಲ್ಲಿಯೇ ಆತನ ಪಾಲಿಗೆ ಮುಂಜಾವು ಸಂಜೆಗಳು ಸವೆಯುತ್ತಿದ್ದವು. ರಾಘವೇಂದ್ರರಾಯರು ಶಾಸ್ತ್ರಿಗಳ ಮನೆಗೆ ಹೋದದ್ದು, ಶಾಂತಳನ್ನು ಬೇಡಿದ್ದು, ಆತನಿಗೆ ಹೇಗೆ ತಿಳಿದಿತ್ತೊ! ಸಾಮಾನ್ಯವಾಗಿ ಆತನಗೆ ವಾಚಾಳಿ ಎಂಬ ಬಿರುದಿದ್ದರೂ ವೃತ್ತಪತ್ರಗಳ ಸಂಪರ್ಕವಿದ್ದವರು ಆತನನ್ನು ರಾಯಿಟರ್ ಏಜನ್ಸಿ ಎಂದೂ ಸಂಬೋಧಿಸುತ್ತಿದ್ದರು.

"ಮಹಾ ಘಾಟಿ ಆತ. ನೋಡಿದೆಯಾ, ಎಷ್ಟು ದೂರ ಎಣಿಕೆ ಈತನದು? ಮಗಳು ಬೆಳೆದು ಮುದುಕೆಯಾದರೂ ಇದುವರೆಗೆ ಮದುವೆಯ ಮಾತನ್ನಾದರೂ ಎತ್ತಿದ್ದನೆ? ಯಾಕೆ ಎತ್ತಬೇಕು? ಒಳಗಿನಿಂದ ಈ ಕಾರಸ್ಥಾನ ನಡೆದೇ ಇತ್ತೆಂದಮೇಲೆ?"

ಎಂದ ಶಿಕಾರಿ ಶಂಕ್ರಪ್ಪ. ಶಂಕ್ರಪ್ಪ ಶಿಕಾರಿ ಮಾಡುತ್ತಿದ್ದುದು ಅಡವಿಯಲ್ಲಿಯ ಹುಲಿ ಚಿರತೆಗಳನ್ನಲ್ಲ. ಊರಲ್ಲಿಯ ಪಾತರಗಿತ್ತೆಗಳನ್ನು. ಕೆಲಸವಿಲ್ಲದಾಗ ಕಟ್ಟೆಗೆ ಬಂದು ತನ್ನ ಸಾಹಸಗಳನ್ನು ಹೇಳುವುದು ಒಂದು ಕೆಲಸವಾದರೆ ಉಳಿದವರ ಪೌರುಷವನ್ನು ಹೀಗಳೆಯುವುದು ಆತನಿಗೆ ಇನ್ನೊಂದು ಕೆಲಸ. ತನ್ನ ಹೊರತು ಇನ್ನೊಬ್ಬರಿಂದ ಯಾವ ದೊಡ್ಡ ಕೆಲಸವೂ ಸಾಧಿಸ

ದೆಂಬ ಒಣ ಹೆಮ್ಮೆ ಆತನ ಸ್ವಭಾವದಲ್ಲಿಯ ಒಂದು ಮುಖ್ಯಾಂಶವಾಗಿತ್ತು.

" ನನಗೂ ಹಾಗೇ ತೋಚಿತ್ತು. ಈಗ ಮನವರಿಕೆಯಾಯಿತು. ಅಲ್ಲ— ತಾನೇನು, ತನ್ನ ಯೋಗ್ಯತೆಯೇನು ? "

ಎಂದು ದನಿಗೂಡಿಸಿದ ಬಹಾದ್ದೂರ ಬಂಡೇರಾಯ. ಬಂಡೇರಾಯನ ವಿಶೇಷವೆಂದರೆ ಇನ್ನೊಬ್ಬರ ಅಭಿಪ್ರಾಯವನ್ನು ಎತ್ತಿಹಿಡಿದು ಸಮರ್ಥಿಸುವುದು. ಆತನಿಗೆ ಸ್ವಂತದ ಅಭಿಪ್ರಾಯಗಳೇ ಇರಲಿಲ್ಲ. ಮನೆಯಲ್ಲಿಯ ಮಡದಿ ಕೂಡು ಎಂದರೆ ಕುಳಿತು ಏಳು ಎಂದರೆ ಎದ್ದು ಪರಮವಿಧೇಯನಾಗಿ ಜೀವನ ನಡಸುತ್ತಿದ್ದನಾದ್ದರಿಂದ ಆತನಿಗೆ ಬಹಾದ್ದೂರನೆಂಬ ಬಿರುದು ಬಂದಿತ್ತು.

" ಯೋಗ್ಯತೆಯೇನೊ? ಈಗ ನೀನೇ ನೋಡು ಹುಡುಗನನ್ನೆ ಒಡೆದು ಕೊಂಡು ಮಗಳ ಮದುವೆಯನ್ನು ಮಾಡಿ ಬಿಟ್ಟನೆಂದರೆ ಅವನ ಯೋಗ್ಯತೆಯೂ ಬೀಗರ ಯೋಗ್ಯತೆಗೆ ಸರಿಯಾಗಿಬಿಟ್ಟಿತಲ್ಲ." ಎಂದು ಶಿಕಾರಿ ಶಂಕ್ರಪ್ಪ ತನ್ನ ತರ್ಕವನ್ನು ತೂರಿದ.

" ಅದೇ-ಅದೇ. ನಾನೆನ್ನುವುದೂ ಅದೇ." ಎಂದು ಬಂಡೇರಾಯ.

ಆದರೆ ಶಂಕ್ರಪ್ಪನ ಸಂದೇಹ ಬೇರೆಯಾಗಿದ್ದಿತು. ಅವನೆಂದ

" ಇನ್ನು ಮೇಲೆ ಮದುವೆಯಾಗಲಿ, ಆಗದಿರಲಿ. ಆದರೆ ಇಷ್ಟು ದಿವಸ ಆ ಹುಡುಗೆಯ ಮದುವೆ ಯಾಕೆ ಆಗಲಿಲ್ಲ ? ಅದೇ ನನಗೆ ಯೋಚನೆ. ಅಲ್ಲಿ ಏನಾದರೂ ಗೌಣ ಇರಲೇಬೇಕು. ನನಗೆ ಕೇಳಿದರೆ— "

" ಹೌದು-ಹೌದು. ಮದುವೆ ಯಾಕಾಗಿರಲಾರದು ? "

" ಸಾಕುಬಿಡೋ ಶಂಕ್ರಪ್ಪ. ನಿನಗಂತೂ ಯಾವಾಗಲೂ ಒಂದೇ ಸಂಶಯ. ನಿನ್ನ ಕಣ್ಣಲ್ಲಿ ಯಾರಾದರೂ ಸಾಧ್ವಿಯರಿದ್ದಾರೆಯೇನೊ? ಅಥವಾ ನೀನೇನಾದರೂ ಕೈ ಹಾಕಿ ಕೆನ್ನೆಗೇಟು ಪಡೆದು ಬಂದಿರುವಿಯೊ ? "

" ಏನು ಮಹಾ ಅಪ್ಸರೆ ಎಂದು ನಾನು ಕಣ್ಣು ಹಾಕಬೇಕೊ ! ನನ್ನ ಸಂಶಯ ಸುಳ್ಳಾಗಿರಲಿ. ನೀನಾದರೂ ಹೇಳು ಹಾಗಿದ್ದರೆ, ನಿನ್ನ ರಾಯ್‌ಟರ್ ಏಜನ್ಸಿ ಏನು ಸಮಾಚಾರ ಗಳಿಸಿದೆ ಎಂಬುದನ್ನಾದರೂ— "

" ನಾನೂ ಬೇಕಾದಷ್ಟು ಸುದ್ದಿ ಸಂಗ್ರಹಿಸಿದವ. ಆದರೆ ಈ ವಿಷಯದಲ್ಲಿ ಮಾತ್ರ ನನ್ನ ಕೈ ನಿಂತು ಹೋಗಿದೆ ಶಂಕ್ರಪ್ಪ. ಮಗಳ ಮದುವೆಯನ್ನು ಶಾಸ್ತ್ರಿ ಇಷ್ಟು ದಿವಸ ಯಾಕೆ ಮಾಡಲಿಲ್ಲ ಎನ್ನುವುದು ನನಗಂತೂ ಗೂಢ

ವಾಗಿಯೇ ಉಳಿಯಿತು."

"ಗೂಢ ಇಲ್ಲ-ಏನೂ ಇಲ್ಲ. ಮೊದಲಿನಿಂದಲೂ ಆತ ಗೋಪಿಯ ಮೇಲೆ ಕಣ್ಣಿಟ್ಟಿರಲೇಬೇಕು. ಹೀಗೆಂದೇ ಗೋಪಿ ಬಂದಾಗಲೆಲ್ಲ ಹಗಲೂ ರಾತ್ರಿ ಆತನನ್ನು ಮನೆಗೆ ಕರೆದು ಒಯ್ದದ್ದೇ ಒಯ್ದುದ್ದು. ಮಹಾ ಜೇಡ ಇದ್ದ ಹಾಗಿದ್ದಾನೆ. ಕೊನೆಗೆ ಸಿಕ್ಕು ಬಿದ್ದಿತು ಈ ನೊಣ !" ಎಂದು ಶಂಕ್ರಪ್ಪ ತನ್ನ ಅಭಿಪ್ರಾಯವನ್ನು ವಿವರಿಸಿದ.

"ಇಷ್ಟಾದರೂ ಈ ಮದುವೆ ಆಗುತ್ತದೆ ಎನ್ನುತ್ತಿಯೇನು ಶಂಕ್ರಪ್ಪ ?"

"ಆಗುವುದಿಲ್ಲ ಎನ್ನುತ್ತೀಯಾ ?"

"ನನ್ನ ಕೇಳಿದರೆ ಆಗುವುದಿಲ್ಲ, ಎನ್ನುತ್ತೇನೆ," ಎಂದು ವಾಮನಪ್ಪ.

"ಎಂಥ ಮಾತು? ಆಂ?-ಆಗುವುದಿಲ್ಲ ಎನ್ನುತ್ತೀಯಾ?" ಬಂಡೇರಾಯ.

"ಇಲ್ಲ !"

"ನಿನ್ನ ತಲೆಕೆಟ್ಟಿದೆ." ಎಂದ ಶಂಕ್ರಪ್ಪ ಅಸಹನೆಯಿಂದ.

"ನನ್ನ ತಲೆ ಕೆಟ್ಟಿದೆಯೊ ಇಲ್ಲವೊ. ನಮ್ಮ ಏಜನ್ಸಿಗೆ ಬಂದ ಸಮಾಚಾರ ಅಂತೂ ಇಷ್ಟು."

"ಮತ್ತೆ ಆಗಲೆ ನೀನೇ ಏನೇನೋ ಹೇಳಿದೆಯಲ್ಲೋ ?"

"ಹೌದು ಹೇಳಿದೆ. ನಿಮಗೆ ಎಷ್ಟು ತಿಳಿದಿದೆ ನೋಡುವಾ ಎಂದು !"

"ಭಾರಿಯಾಯಿತು ನಿನ್ನದೂ. ಅದಿರಲಿ ಏನು ಸಮಾಚಾರ ? ಮದುವೆ ಯಾಗುವುದಿಲ್ಲವೆ ?"

"ನಿನಗೇಕೋ ಇಷ್ಟು ಕುತೂಹಲ ?"

"ಅದೇ ಅಂದೆ ನಾನೂ— ಅಲ್ಲ-ಅಂದರೆ-"

"ಏನಂದೆಯೊ ?"

"ಅಲ್ಲ-ಅಂದರೆ-ಈಗ ಶಂಕ್ರಪ್ಪ ಏನೆಂದ ?"

"ಮೊನ್ನೆ ಏನೋ 'ರಾಯರು' ಶಾಸ್ತ್ರಿಗಳನ್ನು ಕೇಳಿದರಂತೆ. ಶಾಸ್ತ್ರಿಗಳು ನೋಡುವಾ ಎಂದು ಹೇಳಿ ಮುಂದೂಡಿದರಂತೆ."

"ಸರಿಯಾಯಿತಲ್ಲ" ಎಂದು ಶಂಕ್ರಪ್ಪ ಮುಂದೆ ಬಂದ. "ಸರಿಯಾಯಿತು. ಇಷ್ಟು ಆಟ ಹೂಡಿದವ ಅಷ್ಟನ್ನು ಮಾಡಲಾರನೆ ? ಒಮ್ಮೆಲೆ ಒಪ್ಪಿದರೆ ತನ್ನ ಆಟ ಬಯಲಾದೀತು ಎಂಬ ಹೆದರಿಕೆ. ಮಹಾ ಧೂರ್ತ— "

" ನನ್ನ ಲೆಕ್ಕ ಬೇರೆಯಾಗಿದೆ. ಈಗ ಸದ್ಯಕ್ಕೆ ಬೇಡ ಎನ್ನುವುದು ಬೇರೆ ಉದ್ದೇಶ ಇದ್ದಿರಬೇಕು. ಆ ಹುಡುಗನ ಸೋದರಮಾವನ ಮಗಳು, ಅಂದರೆ ನಮ್ಮ ಶಾನುಭೋಗ ಶೀನಪ್ಪನ ಮಗಳೇನೊ ಈತನನ್ನೇ ಮಾಡಿಕೊಳ್ಳುತ್ತೇನೆ ಎಂದು ಹಟ ಹಿಡಿದಿದ್ದಾಳಂತೆ— "

" ಅದಕ್ಕೆ ? "

" ಅವರಿಂದ ಏನಾದರೂ ಸಂಭಾವನೆ ಪಡೆಯುವ ಆಟ ಇದ್ದರೂ ಇದ್ದಿರ ಬಹುದು. — "

" ಹುಂ. ಯಾರು ಬಲ್ಲರು ? ಹೀಗೆಯೆ ಏನೇನೋ ಮಂತ್ರದ ಸೋಗು ಮಾಡಿ ಮೂವತ್ತು ವರ್ಷಗಳಲ್ಲಿ ಮೂರು ಹೊಲ ಗಿಟ್ಟಿಸಿದ ಮಹಾನುಭಾವ. ಈ ಮದುವೆಯ ವಿಚಾರದಲ್ಲಿಯೂ ನೀನು ನೋಡುತ್ತಿರು. ಮತ್ತೆ ಏನಾದರೂ ಸಾಧಿಸಿಯೇ ಸಾಧಿಸುತ್ತಾನೆ. "

" ನಿನಗೇಕೊ ಇಷ್ಟು ಅಸೂಯೆ ? ದೇವರಂಥ ಮನುಷ್ಯ ಆ ರಾಘವೇಂದ್ರರಾಯ ಅಂದರೆ— "

" ಯಾಕೆ ? ನಿನಗೂ ಏನಾದರೂ ಕೈಗೆ ತಾಕಿದೆ ಏನು ? "

" ನನಗೇನು ಮಾಡುವುದು ? ಅಲ್ಲ–ಅಂದರೆ ಇದ್ದ ಸಮಾಚಾರ ಹೇಳಿದೆ. "

" ಅಂತೂ ಅಳಿಯನೇ ಬಂದು ಮನೆ ಸೇರಿದರೂ ಮದುವೆ ನಿಶ್ಚಯ ವಾಗಲಿಲ್ಲ, ಅನ್ನು. "

" ಆದೀತು, ಆದೀತು ಆದರೆ ಸದ್ಯಕ್ಕಂತೂ ಶಾಸ್ತ್ರಿ ಬಿಗಿಹಿಡಿದಿದ್ದಾನೆ. "

" ಸರಿ. ಅದೆಲ್ಲಾ ನಾಟಕ. ಇಷ್ಟು ಸಹಜವಾಗಿ ಸಿಕ್ಕ ಬೇಟೆಯನ್ನು ಬಿಡುತ್ತಾನೆಯೆ ? "

" ಯಾರು ಬಿಟ್ಟಾರು ? ನೀನಾಗಿದ್ದರೆ ಬಿಡುತ್ತಿದ್ದೆಯಾ ? "

" ಹೌದು ಅದೇ ಅಂದೆ ನಾನೂ–ಅಲ್ಲ–ಅಂದರೆ-- "

" ಖಂಡಿತವಾಗಿ ಬಿಡುತ್ತಿದ್ದೆ. ಏನು ದೊಡ್ಡ ಬೇಟೆ ಮಹಾ ? ಆ ಹುಡುಗನ ತಲೆಕೂಡ ಸಮನಾಗಿದ್ದ ಹಾಗಿಲ್ಲ. "

" ಆಯಿತು ನಿನ್ನ ಮಾತು ಕೇಳಿದರೆ. ಬಿ. ಎ. ಪಾಸು ಮಾಡಿದ್ದಾನೊ!"

" ಬಿ. ಎ. ಪಾಸು ಮಾಡಿದರೆ ಹುಚ್ಚು ಇರಬಾರದು ಎನ್ನುತ್ತೀಯಾ ?

ಬಿ. ಎ. ಆಯಿತು. ಎಂ. ಎ. ಆಯಿತು. ಮನೆಯಲ್ಲಿಯ ಚಿನ್ನದಂಥ ಹುಡುಗಿಯನ್ನು ಬಿಟ್ಟು ವೈದಿಕನ ಈ ಮುದಿ ಹೆಗ್ಗಣ ಮದುವೆಯಾಗುತ್ತೇನೆ ಎಂದನಂತೆ. ತಲೆ ಇದ್ದವರ ಮಾತೇ ಇದು ? "

" ಹೌದು. ಅದೇ ಅಂದೆ ನಾನೂ—ಅಲ್ಲ-ಅಂದರೆ- "

" ಮೇಲಾಗಿ ಬರೀ ಕಾಡುಕಾಡು ತಿರುಗುತ್ತಲೆ ಇರುತ್ತದೆ. ತಲೆ ಕೆಟ್ಟದ್ದಕ್ಕೆ ಬೇರೆ ಪ್ರಮಾಣ ಬೇಕೆ ? ರಂಗಧೂಳಿಯ ಕೆರೆಯ ಕಟ್ಟೆಯ ಮೇಲೆಯೆ ಬಿದ್ದಿದ್ದನಂತೆ ಮೊನ್ನೆ ರಾತ್ರಿಯಂತೂ— "

" ಅಲ್ಲ. ಆಕೆಯನ್ನೇ ಮಾಡಿಕೊಳ್ಳುತ್ತೇನೆ ಎಂದು ಹೇಳಿದನಂತೆ. ಅದೇ ನನಗೆ ಆಶ್ಚರ್ಯ. ಅಂಥಾದ್ದೇನು ಕಂಡನೊ ಮಹಾರಾಯ. "

" ತಲೆ ಕೆಟ್ಟವರಿಗೆ ಯಾವುದಾದರೂ ಸರಿ— "

" ಹೌದು, ಅದೇ ಅಂದೆ ನಾನೂ—ಅಲ್ಲ-ಅಂದರೆ- "

" ಆಯಿತು, ಯಾರು ಯಾರನ್ನು ಮಾಡಿಕೊಂಡರೂ ನಮಗೇನಾಗಬೇಕು ? ಮದುವೆಯಾದರೆ ಆಯಿತು. ನಮಗೊಂದು ಔತಣದೂಟಕ್ಕೆ ಹಾದಿ."

" ಶಾಸ್ತ್ರಿ ಊಟ ಹಾಕುತ್ತಾನೆಯೆ ? ಆಯಿತು— " ಎಂದು ಶಂಕ್ರಪ್ಪ

" ಊಟವಿಲ್ಲದೆ ಮದುವೆಯಾಗುವುದಂತೂ ಇಲ್ಲವಲ್ಲ— "

" ಹೌದು. ಅದೇ ಅಂದೆ ನಾನೂ-ಅಲ್ಲ-ಅಂದರೆ— "

" ಚಿನ್ನದಂಥ ಹುಡಿಗೆ ಶಾನುಭೋಗರ ಮೊಮ್ಮಗಳು. ಸರಿಸಮಾನ ಸಂಬಂಧ. ಮಾಡಲಿಕ್ಕೆ ನೋಡಲಿಕ್ಕೆ ಚೆಂದಾಗಿ ಮದುವೆಯಾದೀತು. ಈ ಶಾಸ್ತ್ರಿಯೆಲ್ಲಿ, ನಮ್ಮ ರಾಯರೆಲ್ಲಿ? ನೋಡುವಾ. ಇನ್ನೂ ಏನೇನಾಗುತ್ತದೆಯೊ. ಏನಾದರೂ ಮಾಡಿ-ಶಾಸ್ತ್ರಿ ಬಿಗಿಹಿಡಿದಿರುವಾಗಲೆ-ಇದನ್ನು ಮುರಿಯಬೇಕು. ಶಾನುಭೋಗರ ಆ ಹುಡಿಗೆಯ ಮುಖನೋಡಿದರೆ, ಪಾಪ, ಮುರಿದ ಮದುವೆ ಹೊಂದಿಸಲಿಕ್ಕೆ ಯಾರಾದರೂ ಪ್ರಯತ್ನ ಮಾಡಿಯಾರು "

" ಅಂತೂ ನಾನು ಆಗಲೆ ಹೇಳಿದ್ದೆ ನಿಜ ಎಂದಾಯಿತು ? " ವಾಮನಪ್ಪ.

" ಏನು ಹೇಳಿದೆಯೊ ? "

" ನಿನ್ನ ಕೈಗೂ ಏನೋ ತಾಗಿರಬೇಕು ಎಂದು ಕಾಣುತ್ತದೆ."

" ಏನೂ ತಾಗಿಲ್ಲ-ಒಂದು ಕಪ್ಪು ಚಹ ಕೂಡ. ಮೊನ್ನೆ ಶಾನುಭೋಗರ

ಮನೆಗೆ ಹೋದಾಗ ಈ ಸಮಾಚಾರ ತಿಳಿಯಿತು. ಮುದುಕ—ರಾಘವೇಂದ್ರ ರಾಯರ ಮಾವ—ಪೇಚಾಡುತ್ತಿದ್ದ. ಇಷ್ಟು ದಿನ ಹೆಚ್ಚುಕಡಿಮೆ ಗೊತ್ತಾಗಿದ್ದ ಹಾಗೆಯೇ ಇದ್ದ ಮದುವೆ ಈಗ ತಟ್ಟನೆ ಮುರಿದು ಹೋಗಬೇಕಾದರೆ-ಏನು ಮಾಡುವುದು? ಅವರವರ ಋಣಾನುಬಂಧ ಇದ್ದ ಹಾಗೆ ಆಗುತ್ತದೆ ಎಂದು ಕೈ ಚೆಲ್ಲಿದ. ನಾನೇ ಹೇಳಿದೆ—ಯಾಕೆ ಕೈ ಚೆಲ್ಲುತ್ತೀರಿ, ನೋಡುವಾ, ನನ್ನ ಕೈಲಾದ ಪ್ರಯತ್ನಮಾಡುತ್ತೇನೆ ಎಂದು—"

"ಹುಡುಗನೇ ತಾನಾಗಿ ಮುಂದೆ ಬಂದು ಮಾಡಿಕೊಳ್ಳುತ್ತೇನೆ ಎಂದಾಗ ನೀನೇನೋ ಮಾಡುವವ—?"

"ನೋಡುವಾ ಎಂದೆನಲ್ಲ. ಈಗಲೆ ಯಾಕೆ ? ಕಾರಣ ಏನೇ ಇರಲಿ. ಶಾಸ್ತ್ರಿಯಂತೂ ತಟ್ಟನೆ ಒಪ್ಪಿಲ್ಲ. ಅದನ್ನ ಉಪಯೋಗಿಸಿಕೊಂಡು—"

"ಏನು ಮಾಡಬೇಕೆನ್ನುತ್ತೀ ?"

"ನೋಡಬೇಕು. ಏನಾದರೂ ಮಾಡಬೇಕು. ಊರಿಗೇ ದೊಡ್ಡ ಮನೆತನ. ಅಂಥವರ ಮಗ ಒಬ್ಬ ಸಾಮಾನ್ಯ ಮನೆತನದ ವೈದಿಕನ ಮಗಳನ್ನು ಮದುವೆಯಾಗುವುದೆಂದರೇನು ? ಊರಿಗೇ ಅವಮಾನ—"

"ಹೌದು. ಹೌದು. ಅದೇ ಅಂದೆ ನಾನೂ—"

"ಮತ್ತೆ ಆ ಹುಡುಗ ಹುಚ್ಚು ಎಂದು ಬೇರೆ ಹೇಳಿದೆಯಲ್ಲೋ ?"

"ಹುಚ್ಚೆಂದರೇನು, ಕಲ್ಲು ಒಗೆಯುತ್ತಾನೆಯೆ? ಏನೋ ಒಂದುತರಹ-ವಿಚಿತ್ರ ಸ್ವಭಾವ, ಆಯಿತು. ಏನಿದ್ದರೂ ದೊಡ್ಡ ಮನೆತನ. ಆನೆಯಂಥ ಉತ್ಪನ್ನ—ಹೊಲ-ಮನೆ-ದುಡ್ಡು-ದುಗಾಣಿ—"

"ಅದರ ಮೇಲೆಯೆ ಅನ್ನು ಶಾನುಭೋಗರ ಕಣ್ಣು—"

"ಯಾರದಿರಲಿಕ್ಕಿಲ್ಲ ? ಒಬ್ಬನೆ ಮಗ. ಬೇಕಾದಷ್ಟು ಅನುಕೂಲ. ಅಲ್ಲದೆ ಸಮೀಪದ ಸಂಬಂಧ. ಶಾನುಭೋಗರಿಗೆ ತೀರ ನಿರಾಶೆಯಾಗಿದೆ. ಆ ಹುಡುಗಿಯೂ ಅಷ್ಟೇ. ಈತ ಒಲ್ಲೆ ಎಂದಾಗಿನಿಂದ ಒಂದು ತರಹ ಆಗಿಬಿಟ್ಟಿದ್ದಾಳಂತೆ. ಈಗ ನೀನೇ ನೋಡು, ಕಾಲೇಜು ರಜೆಯಾಗಿದ್ದರೂ ಇನ್ನೂ ಮನೆಗೇ ಬಂದಿಲ್ಲ—"

ಇಂಥಮಾತು, ಊಹಾಪೋಹ ಹೆಚ್ಚುಕಡಿಮೆ ಪ್ರತಿನಿತ್ಯ ನಡೆಯುತ್ತಿತ್ತು. ಊರಲ್ಲಿ ನಡೆದ ಯಾವ ಸಮಾಚಾರವೂ ಈ ತ್ರಿಮೂರ್ತಿಗಳ, ಅವರ

ಸಂಗಡಿಗರ ಚರ್ಚೆಗೆ ಗುರಿಯಾಗಬೇಕು. ವಿಷಯ ಯಾವುದೇ ಇರಲಿ, ಇದ್ದುದನ್ನು ಬೆಳೆಯಿಸಿ, ವಿಕೃತಗೊಳಿಸಿ, ಅದನ್ನು ಹೊತ್ತುಗಳೆಯಲಿಕ್ಕೊಂದು ಸಾಧನವನ್ನಾಗಿ ಮಾಡಿಕೊಳ್ಳುವುದೇ ಮುಖ್ಯ ಉದ್ದೇಶವಾಗಿರುತ್ತಿತ್ತು. ತುದಿ ಮೊದಲಿಲ್ಲದ ಹರಟೆ. ಕೆಲಸವಿಲ್ಲದವರ ಕೆಲಸ. ಶಾನುಭೋಗ ಶೀನಪ್ಪನ ಮನೆಗೆ ಶಂಕರಪ್ಪ ಮುನ್ನಾದಿನ ಹೋದದ್ದು ನಿಜ. ವತ್ಸಲೆಯ ಮದುವೆ ಯನ್ನು ಕುರಿತು ಏನೋ ಮಾತು ಬಂದಾಗ ಶೀನಪ್ಪ “ ಏನೋ—ಮೊದಲಿ ನಿಂದಲೂ ಗೊತ್ತಾದಂತೆಯೆ ಇದ್ದದ್ದು ಮುರಿಯಬಾರದಾಗಿತ್ತು. ಆಯಿತು, ದೈವಬಲವಿದ್ದಲ್ಲಿ ಆದೀತು ” ಎಂದು ಅಂದದ್ದು ನಿಜ. ಅವರಿಗೆ ನಿರಾಶೆಯೆನಿ ಸಿರುವುದೂ ಸಹಜ. ಆದರೆ ಮುಂದಿನಪೆಲ್ಲವೂ ಶಂಕರಪ್ಪನ ಊಹೆ. ಯಾವು ದಾದರೊಂದು ಉಪಾಯ ಹೂಡಿ ಶೀನಪ್ಪನಿಂದ ಒಂದಿಲ್ಲೊಂದು ಬಗೆಯಲ್ಲಿ ನಾಲ್ಕು ಕಾಸು ಕಿತ್ತುಕೊಳ್ಳಬೇಕೆನ್ನುವುದು ಯಾವಾಗಲೂ ಶಂಕರಪ್ಪನ ಆಸೆ. ಅದಕ್ಕಾಗಿ ಮುಂದಿನದೆಲ್ಲ ಯೋಚನೆ. ಸಹಜವಾಗಿ ಮಾತನಾಡುತ್ತಿರುವಾಗಲೆ ಬೆಳೆದ ಆತನ ಯೋಚನೆ ಶಾಸ್ತ್ರಿಗಳೊಡನೆ ನಡೆಯಲಿದ್ದ ಸಂಬಧವನ್ನು ಹೇಗೆ ಮುರಿಯಬೇಕು ಎಂಬ ಹಂಚಿಕೆಯನ್ನು ಹುಡುಕತೊಡಗಿತು. ಅದೂ ಕೆಲಸ ವಿಲ್ಲದವರ ಕೆಲಸವೆ. ಶಾಸ್ತ್ರಿಗಳನ್ನು ಕಂಡು ಏನಾದರೊಂದು ಆತಂಕವನ್ನು ಸೂಚಿಸಿ ಅವರು ಒಪ್ಪದಂತೆ ಹೇಗೆ ಮಾಡುವುದು ಎಂಬ ಯೋಚನೆಯಲ್ಲಿಯೇ ಇದ್ದ. ಆತನ ಒಳಮನಸ್ಸು ಈ ಹಂಚಿಕೆಯನ್ನು ಹುಡುಕುತ್ತಿತ್ತಾದರೆ ಹೊರ ಹೊರಗೆ ವಾಮನಪ್ಪನ ಸುದ್ದಿಗಳನ್ನು ಕೇಳಿಕೊಂಡು ಅವುಗಳನ್ನೆ ತನ್ನ ಉದ್ದಿ ಶ್ಯಕ್ಕೆ ಹೇಗೆ ಮಾರ್ಪಡಿಸಿಕೊಳ್ಳುವುದು ಎಂಬ ಯೋಚನೆಯಲ್ಲಿಯೂ ಇದ್ದ. ಮಾತು ಮುಂದುವರಿಯುತ್ತಲೇ ಇದ್ದಿತು. ಆ ಕ್ಷಣಕ್ಕೆ ಊರಹೊರಗಡೆಯಿಂದ ಬರುತ್ತಿದ್ದ ಶಾಸ್ತ್ರಿಗಳು ಅದೇ ದಾರಿಯಿಂದ ಬಂದಿರದಿದ್ದರೆ ಅವರ ಮಾತು ಇನ್ನೂ ಯಾವಯಾವ ದಾರಿಗಳನ್ನು ತುಳಿಯುತ್ತಿದ್ದಿತೊ ಯಾರು ಹೇಳಬೇಕು?

ಬರುತ್ತಿದ್ದ ಶಾಸ್ತ್ರಿಗಳನ್ನು ಮೊದಲುನೋಡಿದವ ಬಹಾದ್ದೂರ ಬಂಡೆ ರಾಯ. ತನ್ನ ನೆರಳಿಗೆಯೆ ಹೆದರುತ್ತಿದ್ದ ಆತ ಶಾಸ್ತ್ರಿಗಳು ಬರುತ್ತಿದ್ದುದನ್ನ ತನ್ನಿಬ್ಬ ಬಾಯ್ಬಡಕ ಸಂಗಡಿಗರಿಗೆ ಪಿಸುಮಾತಿನಲ್ಲಿ ತಿಳಿಸಿದ. ಅವರಿಬ್ಬರು ಶಾಸ್ತ್ರಿಗಳನ್ನು ಆದರಪೂರ್ವಕವಾಗಿ ಸ್ವಾಗತಿಸಲೆಂಬಂತೆ ಎದ್ದುನಿಂತರು. ಅವರ ಬೆನ್ನಹಿಂದೆ ಬೇಕಾದುದನ್ನು ಮಾತನಾಡಬಲ್ಲವರಾದರೂ ಅವರನ್ನು ಎದುರಿ

ಸುವ ಧೈರ್ಯ ಅವರಿಬ್ಬರಿಗೂ ಇರಲಿಲ್ಲ. ಆ ಧೈರ್ಯ ಇದ್ದರೆ ಬೆನ್ನಹಿಂದೆ ಬೇಕಾದ ಹಾಗೆ ಮಾತನಾಡುವ ಕುಹಕ ಸಾಹಸಕ್ಕೆ ಅವರು ಕೈ ಹಾಕುತ್ತಲೇ ಇರಲಿಲ್ಲ—

" ಏನು ವಾಮನಪ್ಪನವರೆ, ಎದ್ದೇಬಿಟ್ಟಿರಲ್ಲ ನಾನು ಬರುವುದಕ್ಕೆ ಸರಿಯಾಗಿ— "

" ಏನಿಲ್ಲ. ಸುಮ್ಮನೆ. ಅಂದರೆ— "

" ಏನು ಸಮಾಚಾರ ? "

" ನಿಮಗೆ ಯಾವುದು ತಿಳಿಯದು ಶಾಸ್ತ್ರಿಗಳೆ ? "

" ಆಯಿತಪ್ಪ. ಏನಾದರೂ ಸುದ್ದಿ ಹೇಳಬೇಕು ನೀವೆ. ಸಮಾಚಾರ ತಿಳಿದಿದ್ದರೂ ಅದನ್ನು ಕೇಳಬೇಕು ನಿಮ್ಮ ಬಾಯಿಂದಲೆ. ಅಂದರೇನೆ ಸ್ವಾರಸ್ಯ."

" ಸರಿ. ಒಳ್ಳೆ ಚೇಷ್ಟೆ ನಿಮ್ಮದೂ-ಅದೇನು-ಇಷ್ಟು ತಡಮಾಡಿಬಂದಿರಿ? "

" ಬೆಳಿಗ್ಗೆ ಬೆಳಗಾಂವಿಗೆ ಹೋಗಿದ್ದೆ— "

" ಬೆಳಗಾಂವಿಗೆ ಹೋಗಿದ್ದಿರಾ ? "

" ಹುಂ. ನಮ್ಮ ಗಾಮಶಾಸ್ತ್ರಿಗಳನ್ನು ನೋಡಬೇಕಾಗಿತ್ತು. ಮತ್ತೇನು ಶಂಕ್ರಪ್ಪನವರೆ— ? "

" ಏನು ಹೇಳಿ — "

" ಎಲ್ಲ ಸೌಖ್ಯವಷ್ಟೇ. ಎಲ್ಲಿ, ನಿಮ್ಮನ್ನು ನೋಡಿದ ಹಾಗೆಯೆ ಇಲ್ಲವಲ್ಲ? ಊರಲ್ಲಿರಲಿಲ್ಲವೇ ? "

" ಹುಂ-ಇಲ್ಲ. ಏನೋ ಓಡಾಟ ಇದ್ದೇ ಇರುತ್ತಗೆ. ನಿಮ್ಮಲ್ಲಿಗೇ ಒಂದಿಷ್ಟು ಬರಬೇಕಾಗಿತ್ತು."

" ಅದಕ್ಕೇನು ? ಬೇಕಾದಾಗ ಬರಬಹುದು. ಅದಕ್ಕೆಲ್ಲ ಇಷ್ಟು ಉಪಚಾರ ಯಾತಕ್ಕೆ ? "

" ನಾಳೆ ಬರುತ್ತೇನೆ. ಈಗಾಗಲೆ ನಿಮಗೆ ತಡವಾಗಿಬಿಟ್ಟಿದೆ. "

" ನಾಳೆ ಬರುತ್ತೀರಾ ? "

" ಹುಂ—ಮಧ್ಯಾಹ್ನ ಬಂದರೂ ಬಂದೆ. "

ತಾನು ಹೂಡಬೇಕೆಂದಿದ್ದ ಕಾರಸ್ಥಾನ ತಕ್ಕಮಟ್ಟಿಗೆ ಆತನ ಮನಸ್ಸಿನಲ್ಲಿ ಮೂರ್ತಸ್ವರೂಪ ತಾಳಿತ್ತು. ಆದರೆ ಇನ್ನೂ ವಿವರಗಳನ್ನು ಗೊತ್ತುಮಾಡಿ

ಕೊಳ್ಳಬೇಕಿತ್ತು. ಅಂತೆಯೆ ಮರುದಿನ ಮಧ್ಯಾಹ್ನ ಎಂದು ಸಂದರ್ಶನವನ್ನು ಮುಂದೂಡಿದ.

" ಆಗಬಹುದು— ಬರಲಾ ? "

ಎಂದು ಶಾಸ್ತ್ರಿಗಳು ಮನೆಯ ದಾರಿಯನ್ನು ಹಿಡಿದಿದ್ದರು. ಅವರು ಕಣ್ಣಿಗೆ ಮರೆಯಾಗುತ್ತಲೆ ವಾಮನಪ್ಪ ಕೇಳಿದ.

" ಅಲ್ಲ ಶಂಕರಪ್ಪ, ಬೆಳಗಾಂವಿಗೆ ರಾಮಶಾಸ್ತ್ರಿಗಳ ಕಡೆಗೆ ಹೋಗಿದ್ದೆ ಅನ್ನಲಿಲ್ಲವೆ ? ರಾಮಶಾಸ್ತ್ರಿಗಳ ಕಡೆಗೆ ಅಂದಮೇಲೆ ಮದುವೆಯ ಜಾತಕ ಕೂಡಿಸಿ ನೋಡಲಿಕ್ಕೆಯೆ ಇರಬೇಕು. ಅಲ್ಲವೆ ? "

" ಜಾತಕ ಕೂಡಿಸಿ ನೋಡಲಿಕ್ಕೆ ರಾಮಶಾಸ್ತ್ರಿಗಳ ಕಡೆಗೆ ಯಾತಕ್ಕೆ ? ಸ್ವತಹ ಚೆನ್ನಾಗಿ ಜ್ಯೋತಿಷ ತಿಳಿದವ. ಊರುಊರಿಂದ ಜನ ಇವನ ಕಡೆಗೇ ಬರುತ್ತಾರೆ. "

" ಅದು ಸರಿ. ಆದರೆ ರಾಮಶಾಸ್ತ್ರಿಗಳ ಕಡೆಗೆ ಬೇರೆ ಏನು ಕೆಲಸ ಇದ್ದೀತು ? ಹಾಗಿದ್ದರೆ—ನನ್ನ ಸಂಶಯವೇ ನಿಜ ನೋಡು. ಅಲ್ಲಿ ಏನೊ ಹೊಂದಿಕೆಯಾಗುತ್ತಿರಲಿಕ್ಕಿಲ್ಲ. ಅಂತೆಯೆ ಕೂಡಲೆ ಒಪ್ಪದೆ ಇದ್ದಿರಲೂ ಸಾಕು. "

ಶಂಕರಪ್ಪನಿಗೆ ತನ್ನ ಹಂಚಿಕೆಯಲ್ಲಿ ಮುಂದಿನ ಒಂದು ಹೆಜ್ಜೆ ಸ್ಪಷ್ಟವಾಯಿತು. ಅದನ್ನು ತೋರಗೊಡದೆ ಹೇಳಿದ.

" ಸರಿ. ಅದೆಲ್ಲ ಆಗದ ಮಾತು. ಇಂಥ ಸಂಬಂಧ ಬಾಗಿಲಿಗೆ ಬಂದಿರುವಾಗ ಚೆನ್ನಾಗಿ ಜ್ಯೋತಿಷ ತಿಳಿದ ಆತನಿಗೆ ಒಂದು ಜಾತಕ ಹೊಂದಿಸುವುದೇನು ದೊಡ್ಡ ಮಾತು ? ಸರಿಯೊ ಅಲ್ಲವೊ ಎಲ್ಲವನ್ನೂ ಆತನೇ ಹೇಳಬೇಕು. ಹೊಂದಿಸಿ ಹೇಳಿಬಿಟ್ಟರೆ ಆಗದೆ ? ಹಾಗಿರಲಿಕ್ಕಿಲ್ಲ. ಎಂದೂ ಊರು ಬಿಟ್ಟು ಹೋಗದವ ಹೀಗೆ ತರಾತುರಿಯಾಗಿ ಯಾಕೆ ಹೋಗಿದ್ದನೊ? "

" ನಾಳೆ ತೆಗೆಯುತ್ತೇನೆ ನೋಡುತ್ತಿರು ಈ ಎಲ್ಲ ವಿವರ— "

ಎಂದು ವಾಮನಪ್ಪ ತನ್ನ ಸುದ್ದಿಸಂಗ್ರಹದಲ್ಲಿಯ ವಿಶ್ವಾಸವನ್ನು ವ್ಯಕ್ತಪಡಿಸಿದ. ಒಂದು ಹೊಸ ಸಮಾಚಾರಕ್ಕಾಗಿ ಹರಿದಾರಿ ನಡೆಯಲೂ ಸಿದ್ಧನಿರುತ್ತಿದ್ದ ಆತನಿಗೆ ಶಾಸ್ತ್ರಿಗಳು ಬೆಳಗಾಂವಿಗೆ ಹೋದದ್ದು ಯಾತಕ್ಕೆ ಎಂಬುವುದು ಒಂದು ವಿಶೇಷ ಕುತೂಹಲದ ವಿಷಯವೇ ಆಯಿತು. ಹೀಗೆ ವಾಮ

ನಪ್ಪ ಒಂದು ಕಾರಣದಿಂದಾದರೆ ಶಂಕರಪ್ಪ ತನ್ನ ಯೋಜನೆಯಿಂದಾಗಿ ಸುಮ್ಮ ನಾದರು. ಅಂದಿನ ಸಭೆ ಅಷ್ಟಕ್ಕೆಯೆ ಮುಕ್ತಾಯವಾಯಿತು.

ಬದುಕಿನಲ್ಲಿ ತೊಡಕು ತೋರಿದರೆ, ಅನುಕೂಲ ಅನನುಕೂಲಗಳು ಹುಟ್ಟಿ ಕೊಳ್ಳುವುದು ಹೀಗೆಯೆ ಎಂದು ಕಾಣುತ್ತದೆ. ಹಾಗೆ ನೋಡಿದರೆ ವಾಮನಪ್ಪ ಶಂಕರಪ್ಪನಂಥ ನಿರುದ್ಯೋಗಿ ಕಾರುಭಾರಿಗಳ ಕೂಡ ಶಾಸ್ತ್ರಿಗಳದೇನು ಸಂಬಂಧ ? ಆದರೂ ತಮ್ಮ ಅಧಿಕಪ್ರಸಂಗವೃತ್ತಿಯಿಂದ, ಕುತ್ಸಿತ ಕುತೂ ಹಲದಿಂದ, ಕೆಲವುಟ್ಟಿಗೆ ಸ್ವಾರ್ಥದಿಂದ, ಪ್ರೇರಿತರಾಗಿ ತಮ್ಮ ತಮ್ಮ ಮನೋ ವೃತ್ತಿಗಳಿಗೆ ಅನುಸಾರವಾಗಿ ಅವರು ಕೆಲಸ ಮಾಡುತ್ತಿದ್ದರು. ಮಾಡಿದರು. ಇದರಿಂದಾಗಿ ಶಾಸ್ತ್ರಿಗಳಿಗೆ, ರಾಘವೇಂದ್ರರಾಯರಿಗೆ, ಗೋಪಿಗೆ ಎಷ್ಟು ಮನ ಸ್ತಾಪವಾಯಿತೆನ್ನುವುದನ್ನು ಅವರು ಹೇಗೆ ತಿಳಿದಾರು ? ಇಷ್ಟೊಂದು ದೂರದ ಯೋಚನೆಯಿಂದ ಪ್ರತಿಯೊಬ್ಬನೂ ನುಡಿಯುತ್ತಿದ್ದರೆ, ನಡೆಯುತ್ತಿದ್ದರೆ, ಯಾರ ಬದುಕಿನಲ್ಲಿಯೂ ತೊಡಕುಗಳೇ ತಲೆದೋರುತ್ತಿರಲಿಲ್ಲ.

---

## ೭

ಮೂರು ದಿನಗಳಾದರೂ ಗೋಪಿಯ ತೊಳಲಾಟ ಕೊನೆಗಾಣಲಿಲ್ಲ. ರಾಘವೇಂದ್ರರಾಯರು ಶಾಸ್ತ್ರಿಗಳ ಮಾತಿನಲ್ಲಿ ತುಂಬ ವಿಶ್ವಾಸವುಳ್ಳವರಾದ್ದರಿಂದ ತಾಳ್ಮೆಯಿಂದಲೇ ಇದ್ದರು. ಕಮಲಮ್ಮನಿಗೆ ಮಾತ್ರ ಒಂದು ಕಡೆ ವತ್ಸಲೆಯ ಬಗೆಯಲ್ಲಿ ನಿರಾಶೆಯಾದರೆ ಶಾಸ್ತ್ರಿಗಳ ಮಾತಿನಿಂದಾಗಿ ಅನಿಶ್ಚಿತತೆಯಾಗಿ ಒಳಗಿನಿಂದಲೇ ಕುದಿಯುತ್ತಿದ್ದರು. ತಾಯಿಯ ಮುಖಾಂತರ ಶಾಸ್ತ್ರಿಗಳ ಅಭಿಪ್ರಾಯ ಗೋಪಿಗೆ ತಿಳಿದಿತ್ತಾದರೂ ತಾನಾಗಿಯೇ ಹೋಗಿ ಅವರನ್ನು ಕಾಣಲು ಅದೇಕೋ ಹಿಂಜರಿಯುತ್ತಿದ್ದ. ತಾವು ನಡಸುತ್ತಿದ್ದ ಚರ್ಚೆಗಳಿಂದಾಗಿ ಬೇಕಾದಷ್ಟು ಸಲಿಗೆ ಬೆಳೆದಿದ್ದರೂ ಈ ವಿಷಯ ಮೊದಲಾದ ನಂತರ—ಅದರಲ್ಲಿಯೂ ಅದನ್ನು ಬಹಿರಂಗಪಡಿಸಿದನಂತರ—ಅವರ ಮನೆಗೆ ಹೋಗಲು ಮನಸ್ಸು ಹಿಂತೆಗೆಯುತ್ತಿತ್ತು. ತಾನು ಹೋದರೆ ಶಾಸ್ತ್ರಿಗಳು ಏನೆನ್ನುವರೊ, ಏನೆಂದು ಆಡುವರೊ ಎಂದು ವಿವಂಚನೆಯಾದರೆ, ಶಾಂತಳ ಮುಖವನ್ನು ಒಂದು ಬಾರಿಯಾದರೂ ನೋಡಬೇಕೆಂಬ ಕುತೂಹಲ ಇನ್ನೊಂದೆಡೆ. ಹೀಗಾಗಿ ಕಳೆದ ಮೂರು ದಿನ ಆತ ಹೆಚ್ಚುಕಡಿಮೆ ರಂಗಧೂಳಿಯಲ್ಲಿಯೆ ಕಳೆದಿದ್ದಾನೆ. ಆದರೆ ಅಲ್ಲಿಯ ಸೌಂದರ್ಯವೂ ಮೊದಲಿನಂತೆ ಮನಸ್ಸನ್ನು ಸೆಳೆಯುತ್ತಿಲ್ಲ. ಮೊದಲಿನಂತೆ ಎಂದರೆ ಮೊದಲಿನ ರೀತಿಯಲ್ಲಿ. ಮನಸ್ಸು ಮಾರುಹೋಗುತ್ತಿತ್ತು. ಅದರಲ್ಲಿಯೇ ಲೀನವಾಗುತ್ತಿತ್ತು. ಆದರೆ ರೀತಿ ಬೇರೆ. ಆ ಸೌಂದರ್ಯದ ಪ್ರತಿಯೊಂದು ಆವಿಷ್ಕಾರವೂ ಶಾಂತಳನ್ನು ಮನಸ್ಸಿನೆದುರು ನಿಲ್ಲಿಸುತ್ತಿತ್ತು. ಯಾವುದನ್ನು ನೋಡಿದರೂ, ಯಾವುದನ್ನು ನೆನೆದರೂ ನೋಡಿದುದಕ್ಕೂ ನೆನೆದುದಕ್ಕೂ ಶಾಂತಾಳ ಸಂಬಂಧ ನಿಕಟವಾಗಿ ಇದ್ದೇ ಇದೆ ಎಂಬ ಅರಿವು ಬೆಳೆದ ಹಾಗೆ ಶಾಂತಾ ರಂಗಧೂಳಿಯ ದೇವತೆ–ಅಥವಾ ಅದರ ಸತ್ವಸಾರ, ತತ್ತ್ವ–ಎಂದೇ ಬಗೆಯುತ್ತ ಹೋದನಾದ್ದರಿಂದ ಮನಸ್ಸು ಆಕೆಯೆಡೆಗೇ ಹೆಚ್ಚುಹೆಚ್ಚಾಗಿ ಹರಿಯತೊಡಗಿತು. ಸಾನ್ನಿಧ್ಯವನ್ನಲ್ಲದಿದ್ದರೆ ದರ್ಶನವನ್ನಾದರೂ ಅಪೇಕ್ಷಿಸತೊಡಗಿತು. ಆದರೆ ಯಾವುದೂ

ಸಾಧ್ಯವಾಗಿ ಕಾಣಲಿಲ್ಲ. "ನಾನು ಇದನ್ನು ಮಾಡುತ್ತೇನೆ ; ಹೀಗೆ ಮಾಡು ತ್ತೇನೆ" ಎಂಬ ಮಾತು ಮಾನವನ ಪಾಲಿಗೆ ಎಂಥ ಒಣ ಹೆಮ್ಮೆಯದು ಎಂಬ ವಿಚಾರ ಗೋಪಿಯ ಮನಸ್ಸಿನಲ್ಲಿ ಇಂಥ ಸಂದರ್ಭದಲ್ಲಿ ಮೂಡದಿರಲಿಲ್ಲ.

ಮತ್ತೆ ಮೂರು ದಿನಗಳು ಸರಿದುವು. ಶಾಸ್ತ್ರಿಗಳಿಂದ ಗೋಪಿಯನ್ನು ಕಾಣುವ ಬಗೆಯಲ್ಲಿ ಯಾವ ಸೂಚನೆಯೂ ಬರಲಿಲ್ಲ. ಅವರ ಈ ವೃತ್ತಿ ರಾಘವೇಂದ್ರರಾಯರಿಗೊಂದು ಗೂಢವಾಯಿತಾದರೆ ಕಮಲಮ್ಮನವರನ್ನು ರೇಗಿಸತೊಡಗಿತು. "ಹೆಚ್ಚಾಯಿತು, ಇದೆಲ್ಲ. ಗೋಪಿಯನ್ನು ಕಾಣುತ್ತೇನೆಂದು ಹೇಳಿದವರಿಗೆ ಇನ್ನೂ ಪುರಸತ್ತಾಗಲಿಲ್ಲವೆ ? ಹೆಣ್ಣಿನ ತಂದೆ ತಾನು. ಇಷ್ಟು ತಿಳಿಯಬೇಡವೆ ? ಗೋಪಿ ತಾನಾಗಿಯೇ ಮನಸ್ಸು ಮಾಡಿದ್ದಾನೆಂಬುದು ತಿಳಿದ ಮಾತ್ರಕ್ಕೆ ಇಷ್ಟು ಅಟ್ಟಕ್ಕೇರಿ ಕೂಡುವುದೆ ?" ಎಂದು ಪತಿಯ ಎದುರು ಮೂರು ನಾಲ್ಕು ಬಾರಿಯಾದರೂ ಆಡಿಯಾಗಿತ್ತು. "ಯಾಕೆ ಸುಮ್ಮನೆ ಆಡಿಕೊಳ್ಳುವುದು ? ನಿಷ್ಕಾರಣವಾಗಿ ಯಾರನ್ನೂ ನೋಯಿಸಲಾ ರರು ಶಾಸ್ತ್ರಿಗಳು. ಯೋಚನೆಯಿಲ್ಲದೆ ಯಾವುದನ್ನೂ ಮಾಡಲಾರರು. ಇದು ವರೆಗೆ ಅವರು ಗೋಪಿಯನ್ನು ನೋಡಿರದಿದ್ದರೆ ಅದಕ್ಕೂ ಕಾರಣ ಇರಬೇಕು. ಬೇಕಾದಷ್ಟು ಸಲ, ಹಗಲು ರಾತ್ರಿ ಅಲ್ಲಿಯೇ ಅಡ್ಡಾಡುತ್ತಿದ್ದ ಈತನಾದರೂ ಆಕಡೆಗೆ ಯಾಕೆ ಹೋಗಿಬರಬಾರದು ?" "ಸರಿ, ನೀವು ಹೋಗಿಬಂದದ್ದು ಸಾಕಲ್ಲವೆ ? ಅವನೂ ಹೋಗಿ ಬಾಗಿಲು ಕಾಯಬೇಕೆ ? ಬೇಡವೇ ಬೇಡ. ನಾನಾಗಿಯೇ ಹೋಗಿ ಹೇಳಿ ಬಂದು ಬಿಡುತ್ತೇನೆ. ಆ ಮಾತು ಅಲ್ಲಿಗೇ ಮುಗಿಯಲಿ. ಸಾಕು ಎಂದು." "ಯಾಕೆ ಇಷ್ಟು ಆತುರ ? ಎಲ್ಲವೂ ನಡೆ ಯುತ್ತದೆ. ಮೊನ್ನೆ ಶಾಸ್ತ್ರಿಗಳು ಊರಲ್ಲಿರಲಿಲ್ಲ. ನೋಡಲಿಕ್ಕಾಗಿರಲಿಕ್ಕಿಲ್ಲ. ಇಂದು ನಾಳೆ ಗೋಪಿಯನ್ನು ಮಾತನಾಡಿಸಿಯಾರು. ನಮ್ಮ ಆತುರಕ್ಕೆ ಸರಿ ಯಾಗಿ ಪ್ರಪಂಚ ಓಡುವುದಿಲ್ಲವಲ್ಲ. ಶಾಸ್ತ್ರಿಗಳ ಮನೆಗೆ ಹೋಗಿ ನೀನು ಸುಮ್ಮನೆ ವಿರಸ ಏನಾದರೂ ಮಾಡಬೇಡ."

ಈ ತೆರದ ಮಾತು ಈಗ ಮೂರು ನಾಲ್ಕು ದಿನಗಳಿಂದ ಪ್ರತಿನಿತ್ಯವೂ ಗಂಡಹೆಂಡಿರ ನಡುವೆ ನಡೆಯುತ್ತವೆ. ಕಮಲಮ್ಮ ತಮಗೆ ಸಾಧ್ಯವಿದ್ದ ರೀತಿ ಯಲ್ಲಿ ಮಗನನ್ನು ಮನವೊಲಿಸಿ ಈ ಸಂಬಂಧವನ್ನು ಮುರಿಯಲು ಶತಪ್ರಯ ತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಗೋಪಿಯ ಮನಸ್ಸು ನಿವೃತ್ತವಾಗ

ಬೇಕಾದುದಲ್ಲ. ತಾಯಿಯ ಮಾತು ಆತನಿಗೆಬೇಸರವನ್ನುಂಟು ಮಾಡುತ್ತದೆ. ವತ್ಸಲೆಯ ಬಹಿರಂಗ ಪ್ರಶಂಸೆ ಆತನಿಗೆ ಅಪ್ರಸ್ತುತವಾಗಿ ಕಾಣುತ್ತದೆ. ಕಮಲವೊಂದರಡೆಡೆಗೆ ಭ್ರಮರವನ್ನು ಕರೆದೊಯ್ಯುವ ಗಾಳಿಯ ಗತಿಯನ್ನು ಬದಲಾಯಿಸುವ ಹವ್ಯಾಸ ಇವರದು ಎಂದುಕೊಳ್ಳುತ್ತಾನೆ. ಗಾಳಿ ಬೀಸಿ ಹೋಯಿತು. ಭ್ರಮರ ಅಲ್ಲಿ ಬದ್ಧರಾಗವಾಯಿತು. ಇನ್ನು ಯಾರು ಯಾವ ಮಾತನ್ನು ಹೇಳಿದರೆ ಏನು ?

ಇಂಥ ಯೋಚನೆಯಿಂದ, ತಾಯಿಯ ನುಡಿಗಳಿಂದ ಹೆಚ್ಚುಕಡಿಮೆ ಬೇಸರಗೊಂಡು ಗೋಪಿ ಮತ್ತೆ ರಂಗಧೂಳಿಯ ದಾರಿಯನ್ನೇ ತುಳಿಯುತ್ತಿದ್ದ. ಶಾಸ್ತ್ರಿಗಳನ್ನು ತಾನು ಕಾಣುವುದಕ್ಕೆ ಯಾಕೆ ಆತಂಕಪಡಬೇಕು ? ತನ್ನ ಮನಸ್ಸಿನಲ್ಲಿ ಯೋಚನೆಯ ಎಣಿಕೆಗೆ ನಿಲುಕದ ರೀತಿಯಲ್ಲಿ ಮೂಡಿನಿಂತ ಬಯಕೆ ಯಾವ ಮಹಾಪರಾಧವೂ ಅಲ್ಲವಲ್ಲ ! ತನ್ನ ತಾಯಿಗೆನಿಸಿದಂತೆ ಅವರನ್ನು ತಾನಾಗಿಯೇ ಕಾಣುವುದು ಅವಮಾನವೆಂದು ಆತನಿಗೆ ಸರ್ವಥಾ ಎನಿಸುತ್ತಿರಲಿಲ್ಲ. ಹಾಗಿದ್ದರೆ ತಾನು ಅವರಲ್ಲಿ ಮೊದಲಿನಂತೆಯೆ ಯಾಕೆ ಹೋಗುತ್ತಿರಬಾರದು ? ಮದುವೆಯ ಮಾತು ಹಾಗಿರಲಿ. ಅವರೊಡನೆ ಮಾತನಾಡುತ್ತಿರುವುದೇ ಒಂದು ವ್ಯಾಸಂಗ. ಅದಿಲ್ಲದ್ದಕ್ಕಾಗಿಯೂ ಮನಸ್ಸು ಮರುಗುತ್ತಿತ್ತು. ಆದರೆ, ಹೋದರೆ ಮೊದಲಿನಂತೆ ನಿಸ್ಸಂಕೋಚವಾಗಿ ಮಾತನಾಡಲು ಸಾಧ್ಯವೆ? ಹೃದಯಾಂತರಾಳದಲ್ಲಿ ಶಾಂತಳನ್ನು ಕುರಿತಾದ ಭಾವನೆಗಳು ತುಮುಲವನ್ನೆಬ್ಬಿಸುತ್ತಿದ್ದಾಗ ನಿರಾತಂಕವಾಗಿ ಯಾವುದನ್ನೂ ಅರಿಯದವನಂತೆ ನಡೆಯುವುದು ಸಾಧ್ಯವೆ ? ಆದರೆ ಈ ಯೋಚನೆಗೂ ಕೊನೆಬಂದಿತು. ಶಾಂತಳ ಯೋಚನೆಯಿಂದಾಗಿ ಮನಸ್ಸಿನಲ್ಲಿ ಮೂಡಿದ ಮುದುರು ಸಂಕೋಚಗಳೆಲ್ಲವೂ ಮಾಯವಾಗಿ ಶಾಸ್ತ್ರಿಗಳ ಸಹವಾಸಕ್ಕಾಗಿ ಗೋಪಿಯ ಅಂತರಂಗ ಹಾತೊರೆಯ ತೊಡಗಿತು. ಮರುದಿನ ಅವರನ್ನು ಎಂದಿನಂತೆ ತಾನಾಗಿಯೇ ಕಾಣುವುದು ಎಂದು ನಿರ್ಧರಿಸಿಕೊಂಡ.

ಮರುದಿನ ಮಧ್ಯಾಹ್ನ ಶಾಸ್ತ್ರಿಗಳ ಮನೆಗೆ ತೆರಳಿದ. ಶಾಸ್ತ್ರಿಗಳು ಬೃಹದಾರಣ್ಯಕದ ಒಂದು ಪ್ರತಿಯನ್ನು ಬರೆಯುತ್ತ ಕುಳಿತಿದ್ದರು. ಸಾಮಾನ್ಯವಾಗಿ ಮಧ್ಯಾಹ್ನದಲ್ಲಿ ಅವರು ಮಾಡುತ್ತಿದ್ದ ಕೆಲಸ ಅದು. ಎಷ್ಟೋ ಬಾರಿ ಗೋಪಿ ಕೇಳಿದ್ದ " ಉಪನಿಷತ್ತುಗಳಲ್ಲೆವೂ ಒಂದೆಡೆಯಲ್ಲಿ ಬೇಕಾದ ಹಾಗೆ

ಮುದ್ದಾಗಿ ಅಚ್ಚಾದ ಪುಸ್ತಕರೂಪದಲ್ಲಿ ಸಿಕ್ಕುತ್ತಿರುವಾಗ ಕೈಯಿಂದ ಯಾಕೆ ಬರೆಯುತ್ತಿರಬೇಕು ? " ಎಂದು. " ಏನೋ ಹಳೆಯ ಪರಿಪಾಠ. ಮಧ್ಯಾಹ್ನ ನಿದ್ರೆ ಬರುವುದಿಲ್ಲ. ಏನಾದರೂ ಮಾಡುತ್ತಿರಬೇಕಲ್ಲವೆ ? " ಎಂದಿದ್ದರು. " ಅಚ್ಚಾದ ಪುಸ್ತಕ ಓದಬಹುದಲ್ಲ ? " ಎಂದುದಕ್ಕೆ " ಸರಿ. ಓದಬಹುದು. ಆದರೆ ಈ ರೀತಿ ಬರೆಯುತ್ತಿರುವಲ್ಲಿ ಬೇರೆಯಾದ ಲಾಭವಿದೆ. ಮನಸ್ಸು ಅದರಲ್ಲಿಯೇ ಸೇರಿಕೊಳ್ಳುತ್ತದೆ. ಯೋಚನೆಗೆ ಬೇಕಾದಷ್ಟು ಅವಕಾಶ ಸಿಕ್ಕುತ್ತದೆ. ಅಲ್ಲದೆ ನಿಧಾನವಾಗಿ ಮುದ್ದಾಗಿ ಬರೆಯುತ್ತಿರುವಾಗ ಒಂದೊಂದು ಸಲ ಬೇರೆಯಾದ ಅರ್ಥ ಹೊಳೆಯುತ್ತದೆ. ಅಲ್ಲದೆ ಅಚ್ಚಾದ ಪುಸ್ತಕದಕ್ಕಿಂತ ಕೈಬರಹದ ಪ್ರತಿಯಲ್ಲಿ ಏನೋ ಒಂದು ಆತ್ಮೀಯತೆ ಹುಟ್ಟುತ್ತದೆ" ಎಂದಿದ್ದರು.

ಗೋಪಿ ಅವರ ಮಟ್ಟಿಗೆ ಅನಿರೀಕ್ಷಿತವಾಗಿಯೆ ಬಂದಿದ್ದ.

" ಬಾ, ಗೋಪಿ. ನಾಲ್ಕಾರು ದಿವಸವಾಯಿತು. ತೀರ ಅಪರೂಪವಾಗಿ ಬಿಟ್ಟಿದ್ದೀ ? "

ಗೋಪಿ ಏನು ಹೇಳಬೇಕು ?

" ಏನೊ, ಬರಲಾಗಿರಲಿಲ್ಲ. "

" ಯಾಕೆ ! ಊರಲ್ಲಿರಲಿಲ್ಲವೆ !

" ಹುಂ. ಇರಲಿಲ್ಲವೆಂದರೂ ಆಯಿತು. ಈಗ ಒಂದು ವಾರ ಹೆಚ್ಚು ಕಡಿಮೆ ರಂಗಧೂಳಿಯಲ್ಲಿಯೇ ಇದ್ದೆ. "

" ಹೌದೆ ? ಏನಾದರೂ ಕೆಲಸ ನಡೆದಿದೆಯೆ ? "

" ಏನು ಕೆಲಸ ? ಅಲ್ಲಿಗೆ ಹೋಗುವುದೇ ಒಂದು ಕೆಲಸ. "

" ಈಗ ವೈಶಾಖ. ಬಹಳ ಚೆಲುವಾಗಿರಬೇಕು. ಅಲ್ಲವೆ ? "

" ಅಯ್ಯೋ. ಏನು ಕೇಳುತ್ತೀರಿ ? ಅಲ್ಲಿದ್ದರೆ ಊಟ-ಉಪಚಾರ ಯಾವುದೂ ಬೇಡ ವೆನ್ನಿಸುತ್ತದೆ."

" ಶಾಂತಳನ್ನು ಹೊರತುಪಡಿಸಿ " ಎಂದೂ ಮುಂದರಿಯಬಹುದಿತ್ತು. ಆದರೆ ಶಾಸ್ತ್ರಿಗಳೆದುರು ಹಾಗೆ ಹೇಳಲಿಕ್ಕೆ ಯಾರಿಗೆ ಬಾಯಿ ಬಂದೀತು ?

" ನೀವೂ ಬೆಳಗಾಂವಿಗೆ ಹೋಗಿರಲಿಲ್ಲವೆ ? "

" ಹೌದು. ಮೊನ್ನೆ ತಾನೆ ಹೋಗಿದ್ದೆ. ಆದರೆ ಅಂದೇ ಸಾಯಂಕಾಲ ತಿರುಗಿ ಬಂದೆ."

ಮಾತು ಮಾತಿಗೆ ಗೋಪಿಗೆ ಬಾಯಿಕಟ್ಟಿದ ಹಾಗಾಗುತ್ತಿತ್ತು. ನಡುಮನೆಯತ್ತ ಒಮ್ಮೆ ದೃಷ್ಟಿ ಬೀರಿದ. ಆದರೆ ಆಕಡೆಗೆ ಎಲ್ಲವೂ ಸ್ತಬ್ಧವಾಗಿತ್ತು. ಎರಡು ಮಾತುಗಳ ನಡುವಿನ ನೀರವತೆಯಲ್ಲಿ ನೊಣಗಳ ಹಾರಾಟದ ಹೊರತಾಗಿ ಬೇರೆ ಏನೂ ಕೇಳಬರುತ್ತಿಲಿಲ್ಲ. ರಾಘವೇಂದ್ರರಾಯರು ಬಂದು ಹೋದಾಗಿನಿಂದ ಗೋಪಿಯನ್ನು ಕಾಣಬೇಕೆಂದು ಶಾಸ್ತ್ರಿಗಳು ಯೋಚಿಸಿದ್ದರು. ಆತನ ಜೊತೆಯಲ್ಲಿ ಏನು, ಹೇಗೆ ಮಾತನಾಡುವುದು ಎಂಬುದನ್ನು ನಿಶ್ಚಯಿಸಿಕೊಂಡಿದ್ದರು. ಆದರೆ ನೇರವಾಗಿ ಮೊದಲು ಮಾಡುವ ಮನಸ್ಸಾಗಲಿಲ್ಲ. ರಂಗಧೂಳಿಯ ಪ್ರಸ್ತಾಪ ಬಂದದ್ದು ಒಂದು ದೃಷ್ಟಿಯಿಂದ ಇಬ್ಬರಿಗೂ ಅನುಕೂಲವೇ ಆಯಿತು.

ರಂಗಧೂಳಿಯ ವಿಚಾರವನ್ನು ಶಾಸ್ತ್ರಿಗಳ ಬಾಯಿಂದ ಕೇಳುತ್ತಿದ್ದಾಗ ಗೋಪಿಗೆನಿಸಿತು: ಶಾಸ್ತ್ರಿಗಳು ಪಂಡಿತರಾದರೂ ವೇದಾಭ್ಯಾಸ ಜಡರಲ್ಲ ಎಂದು. ರಂಗಧೂಳಿಯಲ್ಲಿ ಮೊತ್ತಮೊದಲಸಲ ಕೆಲಸವನ್ನಾರಂಭಿಸಲಿಕ್ಕೆ, ಅಲ್ಲಿ ಹೋಗಿ ಇರಲಿಕ್ಕೆ, ತನ್ನ ತಂದೆ ತಾಯಿಗಳಿಗೆ ಶುಭಮುಹೂರ್ತವನ್ನು ಹೇಳಿಕೊಟ್ಟವರು ಶಾಸ್ತ್ರಿಗಳ ತಂದೆ-ಕೃಷ್ಣಶಾಸ್ತ್ರಿಗಳು-ಎಂಬುದನ್ನು ಕೇಳಿದಾಗ ಗೋಪಿಗೆನಿಸಿತು "ಎಂದಿನಿಂದಲೂ ನಡೆದು ಬಂದ ಸೌಹಾರ್ದದ ಸಂಬಂಧ ಈಗ ಬೇರೆ ರೀತಿಯಲ್ಲಿ ಬೆಳೆಯುತ್ತಿರುವುದು ಎಂಥ ವಿಚಿತ್ರ ? ವ್ಯಕ್ತಿವ್ಯಕ್ತಿಗಳ ನಡುವಿನ ಸಂಬಂಧಗಳು ಹೇಗೆ ಬಹುಕಾಲದಿಂದ, ನೂರಾರು ಸನ್ನಿವೇಶಗಳಿಂದಾಗಿ ಹೊಂದಿಕೊಂಡು ಬೆಳೆದು ಬರುತ್ತವೆ. ಈ ಪ್ರಪಂಚದಲ್ಲಿ ನಿಜವಾಗಿಯೂ ಯಾರೂ ಏಕಾಕಿಯಾಗಿರುವುದೇ ಸಾಧ್ಯವಿಲ್ಲವಲ್ಲ" ಎಂದು.

ಶಾಸ್ತ್ರಿಗಳು ಹೇಳಿದರು

"ಅಂದಿನ ಮುಹೂರ್ತವೆ ಅಂಥದು. ಆ ಕಾಡು ಈ ಪರಿಯಾಗಿ, ಕಣ್ಣು ಮನಸ್ಸುಗಳು ತಣಿಯುವಂಥ ಸ್ಥಾನವಾದೀತೆಂದು ಯಾರು ತಿಳಿದಿದ್ದರು ? ನಿನ್ನ ತಂದೆ ಆ ಕೆರೆ ಕಾಲುವೆ ಸಿದ್ಧವಾಗುವಾಗ ಹಗಲು ರಾತ್ರಿ ದುಡಿದಿದ್ದಾರೆ. ದೇಹ ಸವೆಯಿಸಿದ್ದಾರೆ. ಒಂದು ಕಾಲಕ್ಕೆ ಅವರೂ ನಿನ್ನ ಹಾಗೆಯೆ. ರಂಗಧೂಳಿ ಎಂದರೆ ಜೀವಪ್ರಾಣ—"

ಮಾತು ನಡೆದೇ ಇತ್ತು. ಶಾಸ್ತ್ರಿಗಳಿಗೆ ತಟ್ಟನೆ ಏನೋ ಜ್ಞಾಪಕವಾಗಿ "ಶಾಂತಾ—" ಎಂದು ಕೂಗಿದರು.

ಗೋಪಿಯ ಎದೆ ಝಲ್ಲೆಂದಿತು. ಶಾಂತಾ ಕಣ್ಣಿಗೆ ಬೀಳುವಳು ಎಂದು.

" ಏನು ಶಾಸ್ತ್ರಿಗಳೆ ? "

" ಎಂಥ ಬಿಸಿಲು? ಮಾತಿನಲ್ಲಿ ಮರೆತೇ ಬಿಟ್ಟೆ. ಒಂದಿಷ್ಟು ಕುಡಿಯಲು ನೀರನ್ನಾದರೂ ತರಬೇಡವೆ ? "

ಶಾಂತಾ ಬಾಗಿಲಲ್ಲಿ ಬಂದು ನಿಂತಿದ್ದಳು.

" ಗೋಪಿ ಬಂದಿದ್ದಾನೆ. ನೋಡಲಿಲ್ಲವೇನೆ ? ಒಂದಿಷ್ಟು ಪಾನಕವನ್ನಾದರೂ ಮಾಡಿಕೊಡು. "

ಗೋಪಿ ಕಣ್ಣು ತಿರುಗಿಸಿ ನೋಡಿದ. ಶಾಂತಾ ಗೋಪಿಯನ್ನೇ ನೋಡುತ್ತಿದ್ದಳು. ಮೊತ್ತಮೊದಲಸಾರಿ ನೋಟ ಬೆರೆಯಿತು. ಏನು ಆ ಕ್ಷಣದ ಮೋಹಿನಿಯೊ, ಅವರಿಬ್ಬರ ಹೃದಯಗಳಲ್ಲಿಯ ಅವ್ಯಕ್ತ ಭಾವನೆಗಳ ಮಾಯೆಯೊ, ಮಾತಿಗೆ ಮೀರಿದ ಯಾವುದೊ ಒಂದು ಅನುಭವವನ್ನು ಅವರಿಬ್ಬರೂ ಆ ಕ್ಷಣದಲ್ಲಿ ಪಡೆದಿರಬೇಕು. ಗೋಪಿ ಖಂಡಿತವಾಗಿಯೂ ಪಡೆದ. ಏನದರರ್ಥ ? ಹೃದಯಗಳನ್ನು ಒಲುಮೆ ಬಂಧಿಸುವ ರೀತಿಯೆ ಅದು. ಆ ಒಂದು ಕ್ಷಣದಲ್ಲಿ ಶಾಂತಳ ಹೃದಯದಲ್ಲಿ ಅನುರಾಗ ಮೂಡಿದ್ದರೆ ಗೋಪಿಯ ಹೃದಯದಲ್ಲಿ ಆಗಲೆ ಮೂಡಿ ನಿಂತ ಅನುರಾಗ ನೂರ್ಮಡಿಯಾಯಿತು. ಶಾಂತಳ ಕಾಲು ತಡೆದದ್ದು ಅರೆಕ್ಷಣವೂ ಅಲ್ಲ. ತಡೆದದ್ದು ಮಾತ್ರ ನಿಜ.

ಮುಂದೆ ಐದು ನಿಮಿಷಗಳಲ್ಲಿ ಬೆಳ್ಳಿಯ ಪಾತ್ರೆಯಲ್ಲಿ ಪಾನಕವನ್ನು ಶಾಂತಾ ತಂದು ಗೋಪಿಯ ಎದುರಿನಲ್ಲಿರಿಸಿದಳು. ಗೋಪಿ ನೋಡಿದ. ಆದರೆ ಈ ಸಲ ದೃಷ್ಟಿ ಬೆರೆಯಲಿಲ್ಲ. ಆಕೆಯ ಕಾಲು ತಡೆಯಲಿಲ್ಲ. ವಿದ್ಯುದ್ವೇಗದಿಂದ ಶಾಂತಾ ಮರೆಯಾದಳು. ಆದರೆ ಗೋಪಿ ಮಾತ್ರ ಆ ಕ್ಷಣದ ವಿದ್ಯುದಾವೇಗವನ್ನು ತಡೆಯಲಾರದಾದ.

ಗೋಪಿಯ ಮನಃಸ್ಥಿತಿಯನ್ನು ಶಾಸ್ತ್ರಿಗಳು ಗುರುತಿಸಿರಬೇಕು. ಮಾತಿಗೆ ಮೊದಲು ಮಾಡಲು ಅದೇ ತಕ್ಕ ಅವಕಾಶವೆಂದೂ ಭಾವಿಸಿರಬೇಕು. ಅವರು ಕೇಳಿದ ಪ್ರಶ್ನೆಯ ದೂರದ ಸಂದರ್ಭ ಮಾತ್ರ ಗೋಪಿಗೆ ಕೂಡಲೆ ಅರ್ಥವಾಗಲಿಲ್ಲ.

" ಆ ದಿನ ನೀನು ದೈವ ಎಂದರೇನು ಎಂದು ಕೇಳಿದ್ದೆಯಲ್ಲವೆ ? "

" ಏನೋ ಹುಚ್ಚು ಪ್ರಶ್ನೆ. ಯಾವಾಗಲೂ ಏನಾದರೂ ನಾನು ಕೇಳು

ತ್ತಲೇ ಇರುತ್ತೇನೆ."

"ಸರಿ. ಆದರೆ ಆ ಮಾತಿಗೆ ಇಂದು ನಾನು ಒಂದು ಸ್ಪಷ್ಟವಾದ ನಿದರ್ಶನವನ್ನು ಕೊಡಬಲ್ಲೆ—"

ಎಂದು ಶಾಸ್ತ್ರಿಗಳು ನಸುನಕ್ಕರು. ಆದರೆ ಆ ನಗೆಯಲ್ಲಿ ಗೆಲುವಿರಲಿಲ್ಲ ವಾದರೂ ಆಳವಾದ ತಿಳಿವಿನಿಂದ ಅದು ಬೆಳಗುತ್ತಿದ್ದ ಹಾಗಿತ್ತು. ಗೋಪಿಗೆ ಕುತೂಹಲದಿಂದ ಕಾಯುವುದರ ಹೊರತು ಏನನ್ನೂ ಮಾಡಲಿಕ್ಕಿರಲಿಲ್ಲ. ಶಾಸ್ತ್ರಿಗಳು ಮುಂದುವರಿದರು.

"ನಿನಗೆ ಗೊತ್ತಿರಬೇಕು. ಮೊನ್ನೆ ನಿನ್ನ ತಂದೆ ಬಂದಿದ್ದರು—"

ಗೋಪಿಗೆ ಎದೆಯಲ್ಲಿ ಚುಚ್ಚಿದಂತಾಯಿತು. ಆದರೆ ಆ ನೋವಿನಲ್ಲಿ ಸಮಾಧಾನವೂ ಇದ್ದಿತು. ಕಾಲಲ್ಲಿ ಮುಳ್ಳು ನಟ್ಟಾಗ ಆ ಮುಳ್ಳನ್ನು ಹೊರಗೆ ಎಳೆದು ತೆಗೆಯುವಾಗ ನೋವಾಗುವುದಿಲ್ಲವೆ? ಅಂಥ ನೋವು ಅದು. ಆತ ನೇನು ಹೇಳಬೇಕು?

"ಹುಂ—" ಎಂದು ಸುಮ್ಮನಾದ.

ಶಾಸ್ತ್ರಿಗಳೂ ಸುಮ್ಮನಾಗಿಯೇ ಉಳಿದರು. ಅವರ ನೀರವತೆ ಅರ್ಥವಾಗದೆ ಗೋಪಿ ಕೇಳಿದ

"ದೈವ ಎಂದಿರಲ್ಲ? ದೈವ ಎಂದರೆ ಇಷ್ಟೆಯೆ?"

"ಅವರು ಇಲ್ಲಿಯವರೆಗೆ ಬಂದದ್ದು ಒಂದು ಸಾಮಾನ್ಯ ವಿಷಯವೆ?"

"ಅಂಥದೇನು ವಿಶೇಷ? ನನಗಂತೂ ಇದರಲ್ಲಿ ಯಾವ ವಿಶೇಷವೂ ಕಾಣುವುದಿಲ್ಲ."

"ಜೀವನದಲ್ಲಿ ಹೊರಗಣ್ಣಿಗೆ ಯಾವುದೂ ವಿಶೇಷ ಎಂದು ಕಾಣುವುದಿಲ್ಲ, ಗೋಪಿ. ಯೋಚನೆ ಮಾಡಿ ನೋಡಿದರೆ ಎಲ್ಲವೂ ವಿಚಿತ್ರವಾಗಿ ಕಾಣುತ್ತದೆ. ದೈವವಿಲಾಸವಾಗಿ ಕಾಣುತ್ತದೆ."

"ಕಾರ್ಯಕಾರಣ ಸಂಬಂಧ ತಿಳಿಯದಾದಾಗ ದೈವ ಎಂಬ ಮಾತನ್ನು ಹೇಳಿಬಿಡುತ್ತೇವೆ."

"ಅದೇ ತಪ್ಪು. ತಪ್ಪು ಎಂದರೆ ತಿಳಿವಿನ ಮಾರ್ಗವಲ್ಲ. ಅಷ್ಟೆ. ಇಂದು ನಡೆಯಬೇಕಾದ ಒಂದು ಘಟನೆಗೆ ಬುನಾದಿಕಾಲದಿಂದಲೂ ಸಿದ್ಧತೆ ನಡೆದಿರುತ್ತದೆ. ಘಟನೆ ರೂಪುಗೊಳ್ಳುತ್ತಲೇ ಇರುತ್ತದೆ. ಈಗ ನೀನೇ ನೋಡು. ನನ್ನ

ತಂದೆ ಈ ಊರಿಗೆ ಬಂದದ್ದು ತೀರ ಆಕಸ್ಮಿಕವಾಗಿ. ಇಲ್ಲಿಯೇ ನೆಲಸ ಬೇಕೆಂದು ಬಂದವರೂ ಅಲ್ಲ. ನಿಮ್ಮ ತಾತನ ಕಾಲದಲ್ಲಿ ಏನೋ ಅನುಕೂಲ ಮಾಡಿಕೊಟ್ಟರು. ವಿಶ್ವಾಸ ತೋರಿಸಿದರು. ಅಂದು ಅಷ್ಟು ನಡೆದಿರದಿದ್ದರೆ ಇಂದು ನಾವಿಬ್ಬರು ಇಲ್ಲಿ ಹೀಗೆ ಇದಿರಾಗಿ ಕುಳಿತು ಮಾತನಾಡುತ್ತಿದ್ದೆವೆ? ಅಲ್ಲದೆ—"

"ವಿಚಿತ್ರ ಅಲ್ಲವೆ? ನಾವು ಈ ವಿಶಾಲ ಪ್ರಪಂಚದ ಯಾವ ಮೂಲೆಯಲ್ಲಿ, ಯಾವ ಪರಿಸರದಲ್ಲಿ, ಯಾವ ತಾಯಿತಂದೆಗಳ ಹೊಟ್ಟೆಯಲ್ಲಿ ಹುಟ್ಟಬೇಕೆಂಬ ಅಂಶವನ್ನು ನಿರ್ಣಯಿಸುವ ಘಟಕಗಳು ನಮ್ಮ ಪರಿಮಿತ ಜ್ಞಾನಕ್ಕೆ ಗೋಚರಿಸುವುದಿಲ್ಲ...."

"ಗೋಚರಿಸುವುದಿಲ್ಲ ಅನ್ನಕೂಡದು. ತ್ರಿಕಾಲಜ್ಞಾನ ಎಂದರೇನು ಮತ್ತೆ? ಅದು ಅಸಾಧ್ಯವೆಂದು ನಮ್ಮವರು ಎಂದಿಗೂ ತಿಳಿಯಲಿಲ್ಲ."

ಗೋಪಿ ಯೋಚನೆಯಲ್ಲಿ ಸಿಲುಕಿದ. ಶಾಂತಾ, ಶಾಸ್ತ್ರಿಗಳು, ತನ್ನ ಅವರ ಸಂಬಂಧ, ಇಂದಿನ-ಹಿಂದಿನ, ಮುಂದೆ ಬೆಳೆಯಬೇಕಾದ, ಬಹುದಾದ ಅನ್ಯೋನ್ಯತೆಯ ಅನಾದ್ಯನಂತ ಸ್ವರೂಪದೆಡೆಗೆ ಆತನ ಮನಸ್ಸು ಓಡಿತು. ಜೀವನವೆಂಬುದು ಎಷ್ಟು ತೊಡಕಿನ, ಎಂಥ ಗಭೀರ ವಿಷಯವೆಂಬ ಯೋಚನೆಯೂ ಸುಳಿದುಹೋಯಿತು. ಶಾಸ್ತ್ರಿಗಳು ಆಡಬಹುದಾದ ಮಾತುಗಳ ಬಗೆಯಲ್ಲಿನ ಆತನ ಸಂಕೋಚ ಯಾವಾಗಲೊ ಮಾಯವಾಗಿತ್ತು.

ಶಾಸ್ತ್ರಿಗಳು ಒಂದೆರಡು ನಿಮಿಷ ಸುಮ್ಮನಾಗಿ ಆಮೇಲೆ ಹೇಳಿದರು—ಚಿಂತೆ ತುಂಬಿದ ದನಿಯಲ್ಲಿ

"ನಿನ್ನ ಕೂಡ ಒಂದೆರಡು ವಿಷಯ ಮಾತನಾಡಬೇಕಾಗಿದೆ, ಗೋಪಿ."

ಗೋಪಿ ಧೈರ್ಯವಾಗಿ ಕೇಳಿಬಿಟ್ಟ

"ಮದುವೆಯ ವಿಚಾರವೆ?"

"ಹೌದು—"

"ಹಾಗಿದ್ದರೆ ಇಲ್ಲಿ ಬೇಡ. ನಿಮಗೆ ಇನ್ನೇನೂ ಕೆಲಸವಿರದಿದ್ದರೆ ರಂಗಧೂಳಿಯ ಕಡೆಗೆ ಹೋಗುವಾ. ಅಲ್ಲಿಯೇ ಕುಳಿತುಕೊಂಡು ಮಾತನಾಡಬಹುದು. ಮನೆಯಲ್ಲಿ ಬೇಡ. ನಿಮಗೆ ಆಯಾಸವಾಗುತ್ತಿದ್ದರೆ ಮಾತ್ರ—"

ಶಾಸ್ತ್ರಿಗಳಿಗೂ ಅಷ್ಟೇ ಬೇಕಾಗಿತ್ತು. ಮನೆಯಲ್ಲಿ ಆ ಚರ್ಚೆ ಅವರಿಗೂ

ಬೇಡವಾಗಿತ್ತು. ಇಬ್ಬರ ಕಾರಣಗಳೂ ಬೇರೆ. ಗೋಪಿಯು ಮಟ್ಟಿಗೆ ಶಾಂತಳ ವಿಚಾರವಾಗಿ ಏನು ಮಾತನಾಡಬೇಕಿದ್ದರೂ ಅದು ರಂಗಧೂಳಿಯ ಪರಿಸರ ದಲ್ಲಿಯೇ ನಡೆಯಬೇಕೆಂದೆನಿಸುತ್ತಿತ್ತು. ಶಾಂತಳ ಅಂತರಂಗ ರಂಗಧೂಳಿಯ ಅಂತರಂಗ–ಅಷ್ಟು ಶಾಂತ, ಅಷ್ಟು ಸುಂದರ, ಅಷ್ಟು ಗೂಢವು—

"ಆಯಾಸವೇನು ಬಂತು, ನಡೆ ಆಕಡೆಗೇ ಹೋಗುವಾ. ಅಲ್ಲಿಗೆ ಹೋಗಿ ನನಗೂ ಬಹಳ ದಿವಸವಾಯಿತು. ನೋಡಿದ ಹಾಗೂ ಆಯಿತು."

ಪಶ್ಚಿಮದ ಬಿಸಿಲು ಏಟುಹೊಡೆಯುತ್ತಿದ್ದ ಹಾಗೆ ಸುರಿಯುತ್ತಿತ್ತು. ಆದರೆ ಗೋಪಿಯು ಮನಸ್ಸು ರಂಗಧೂಳಿಯಲ್ಲಿ, ಅದರ ಜೀವಂತ ಪ್ರತೀಕ ವಾದ ಶಾಂತಳಲ್ಲಿ ನೆಟ್ಟಿತ್ತು. ಬಿಸಿಲ ಎಚ್ಚರವೇ ಇರಲಿಲ್ಲ. ಶಾಸ್ತ್ರಿಗಳ ಯೋಚನೆ ಭವಿಷ್ಯದಲ್ಲಿ ಸಿಲುಕಿತ್ತು. ಕಣ್ಮರೆಯಾದ ಪ್ರಾಚೀನದಿಂದ ಕಣ್ಣು ಕಾಣದ ಭವಿಷ್ಯತ್ತಿನಾಚೆ ಚಾಚಿನಿಂತ ಸೇತುವೆಯ ಮೇಲೆ ಸಾಗುವ ಮನುಷ್ಯನ ಅನಂತಚೇತನದ ಚಿಂತನೆಯಲ್ಲಿ ಸಿಲುಕಿತ್ತು. "ನಾನು" ಎನ್ನುವುದು ಎಂಥ ಚಿಕ್ಕದಾದ ಕಲ್ಪನೆ ? ಚರಾಚರ ಪ್ರಪಂಚದಲ್ಲಿ ಅದರ ಸ್ಥಾನ ಎಷ್ಟು ಕ್ಷುದ್ರ ? ಆದರೂ ಮನುಷ್ಯನಿಗೆ ಎಂಥ ಹೆಮ್ಮೆ, ಎಂಥ ಅಟ್ಟಹಾಸ ಆತನದು, ದೈವತ ವನ್ನೂ ದುರ್ಲಕ್ಷಿಸಿ ಅದನ್ನು ಹೀಗಳೆಯುವವರೆಗೂ ಬುದ್ಧಿಯನ್ನು ದುರುಪ ಯೋಗಿಸುತ್ತಿದ್ದಾನಲ್ಲವೆ ? ಎಂದು ಮುಂತಾಗಿ ಯೋಚಿಸುತ್ತಿದ್ದರು.

ರಂಗಧೂಳಿಯ ಕೆರೆಯ ಕಟ್ಟೆಯನ್ನು ಇಬ್ಬರೂ ಸೇರಿದಾಗ ಸೂರ್ಯಾಸ್ತ ಸಮಯವಾಗಿತ್ತು. ಮಧ್ಯಾಹ್ನದಲ್ಲಿ ಒಂದು ಮಳೆಯ ಸೆಳಕು ಬಿದ್ದಹಾಗಿತ್ತು. ಪಶ್ಚಿಮದಿಂದ ಸೂಸಿ ಬರುತ್ತಿದ್ದ ಹೊನ್ನಬಿಸಿಲು ಬೆಟ್ಟದ ಓರೆಯ ಮೇಲೆ ಕೊರೆದ ಗೆರೆಯ ಹಾಗೆ, ದರಿಯನ್ನು ಇರಿಯುವ ಒಂದು ಭವ್ಯವಾದ ಬಂಗಾ ರದ ಕಠಾರಿಯ ಹಾಗೆ ಬೀಳುತ್ತಿತ್ತು. ಎಲೆಗಳ ಮೇಲೆ ನಿಂತ ನೀರ ಹನಿಗಳಲ್ಲಿ ಆ ಬೆಳಕು ಹರಿದು ಲೆಕ್ಕವಿಲ್ಲದ ವಜ್ರದ ಸರಗಳನ್ನು ಗಿಡಗಳಿಗೆ ತೊಡಿಸಿ ನೋಡುತ್ತ ನಿಂತ ಹಾಗಿತ್ತು.

ಶಾಸ್ತ್ರಿಗಳು ಸುತ್ತಲೂ ಕಣ್ಣು ಹೊರಳಿಸಿದರು. ಅವರ ಗಮನ ಸುತ್ತ ಲಿನ ಸೃಷ್ಟಿಯ ಸಿರಿಯ ಕಡೆಗೆ ಇರಲಿಲ್ಲವೆಂದು ಕಾಣುತ್ತಿತ್ತು. ದೀರ್ಘ ಯೋಚನೆಯಲ್ಲಿಂದ ಮೇಲಕ್ಕೆದ್ದ ಹಾಗೆ ಕೇಳಿದರು

"ನಾನೊಂದು ಮಾತನ್ನು ಕೇಳಿದರೆ ನೀನು ತಪ್ಪು ತಿಳಿಯಬಾರದು.

ನನಗೆ ತಿಳಿಯಬೇಕಾಗಿದೆ. ಕೇಳಲಿ ? ”

“ ಎಂಥ ಮಾತು ಶಾಸ್ತ್ರಿಗಳೆ ! ನನ್ನ ಕೂಡ ಮಾತನಾಡಲಿಕ್ಕೆ ನಿಮಗೂ ಇಂಥ ಉಪಚಾರವೆ ? ”

“ ಅಂದರೆ—ಈಗ ನಾನು ಕೇಳಲೇಬೇಕಾಗಿದೆ. ಅದಕ್ಕಾಗಿ ಕೇಳುತ್ತೇನೆ. ”

“ ಏನು ? ನಿಸ್ಸಂಕೋಚವಾಗಿ ಕೇಳಿ.”

“ ನೀನು ಇದುವರೆಗೆ ಮದುವೆಯಾಗಲಿಲ್ಲ. ಯಾಕೆ ?— ”

“ ಮನಸ್ಸಾಗಲಿಲ್ಲ ಅಷ್ಟೇ. ಮತ್ತಿನ್ನೇನು ? ”

ಎಂದು ನಕ್ಕ. ಆದರೆ ಆ ಉತ್ತರದಿಂದ ಶಾಸ್ತ್ರಿಗಳಿಗೆ ಸಮಾಧಾನವಾಗದೆಂಬುದನ್ನು ತಿಳಿದಿದ್ದನಾದ್ದರಿಂದಲೆ ಆತ ನಕ್ಕದ್ದು.

“ ಅಷ್ಟು ಗೊತ್ತಾಗುತ್ತಿದ್ದಿಲ್ಲವೇ ನನಗೆ ? ಮನಸ್ಸಾಗದೆ ಯಾರು ಏನನ್ನು ಮಾಡುತ್ತಾರೆ ? ಆದರೆ ಮನಸ್ಸಾಗದಿರಲಿಕ್ಕೂ ಏನಾದರೂ ಕಾರಣ ವಿರಬೇಕು, ಅಲ್ಲವೆ ? ”

ಗೋಪಿ ಯೋಚನೆಯಲ್ಲಿ ಮುಳುಗಿದ. ಏನೆಂದು ಹೇಳುವುದು ? ಏನೆಂದು ಹೇಳಬಹುದು ? ಮನಸ್ಸಾಗದಿದ್ದದ್ದು ನಿಜ. ಅದಕ್ಕೆ ಕಾರಣವನ್ನು ಆತ ನನ್ನ ಮಟ್ಟಿಗಾದರೂ ಸ್ಪಷ್ಟವಾಗಿ ಯೋಚಿಸಿದ್ದನೊ ಇಲ್ಲವೊ !

“ ಅದನ್ನು ಬಾಯಿಂದ ಹೇಳುವುದು ಕಷ್ಟ, ಶಾಸ್ತ್ರಿಗಳೆ. ಎಂಥ ಹುಚ್ಚು ಇದು ಎಂದು ನೀವು ನಕ್ಕುಬಿಡಬಹುದು.”

“ ನಗುವಂಥದೇನು ? ನನಗೆ ತಿಳಿಯಬೇಕಾಗಿದೆ.”

“ ಮದುವೆಯ ಯೋಚನೆ ನನಗೆ ಯಾವಾಗಲೂ ಎಲ್ಲಿಲ್ಲದ ಸಂತಸವನ್ನು ಕೊಟ್ಟಿದೆ. ಅದರ ಸೊಬಗಿನ ಮುಂದೆ ಬೇರೊಂದಿಲ್ಲ ಎಂದುಕೊಂಡಿದ್ದೇನೆ. ಆದರೆ ಆ ಕಲ್ಪನೆಯ ಸುಖಕ್ಕೆ ಮಾರುಹೋದ ನಾನು ಮದುವೆಗೆ ಒಂದು ದೃಷ್ಟಿಯಿಂದ ಹೆದರಿದ್ದೆ ಎಂದರೂ ಆದೀತು ! ”

“ ಹೆದರಿಕೆಯೆ ? ”

“ ಅಂದರೆ ಹೀಗೆ. ಈ ಸೌಂದರ್ಯ ಚಿರಂತನವಾಗಿ, ಚಿರಸ್ಥಾಯಿಯಾಗಿರಬಾರದೆಂಬ ಶಾಪ ಜೀವನಕ್ಕೆ ತಗಲಿದಹಾಗಿದೆ. ಚೆಲುವನ್ನು ನೋಡಿ ಹಿಗ್ಗಿದಷ್ಟೂ ಅದು ಬಾಡಿದ್ದನ್ನು ನೋಡಿದಾಗ ನನ್ನ ಎದೆ ಮರುಗುತ್ತದೆ. ಈ

ಸೌಂದರ್ಯ ಬಾಹ್ಯಪ್ರಪಂಚದಲ್ಲಿ ಬಾಡುತ್ತಿದ್ದಹಾಗೆ ಅಂತರಂಗ ಪ್ರಪಂಚದಲ್ಲಿಯೂ ಬಾಡಿದರೆ–ಬಾಡುವುದಾದರೆ–ಮದುವೆ ಎಂಬ ಮಹತ್ತರವಾದ ಸಂಸ್ಕಾರಕ್ಕೆ ಬೆಲೆಯೆ ಉಳಿಯುವುದಿಲ್ಲವಲ್ಲ ಎಂದು ಅದರಿಂದ ದೂರವಾಗಿಯೆ ಇದ್ದೆ—"

"ಅದು ಜೀವನಕ್ಕಂಟಿದ ಶಾಪ ಅಲ್ಲ, ಗೋಪಿ—"

"ಹಾಗಿದ್ದರೆ ಸೌಂದರ್ಯ ಯಾಕೆ ಅಳಿಯಬೇಕು ?"

"ಅದೇ ತಪ್ಪು. ಸೌಂದರ್ಯ ಅಳಿಯುವುದೇ ಇಲ್ಲ !"

"ಅಳಿದದ್ದನ್ನು ನೋಡುತ್ತೇವೆ. ಈ ಕಣ್ಣುಗಳಿಂದ ನಿತ್ಯವೂ ಅದರ ಸಾವನ್ನು ನೋಡುತ್ತೇವೆ."

"ಹಿಂದೊಮ್ಮೆ ನಿನಗೆ ಹೇಳಿದ್ದೆನೆಂದು ಕಾಣುತ್ತದೆ. ಮನುಷ್ಯನಿಗೆ ಎರಡು ದೃಷ್ಟಿ. ಹೊರನೋಟಕ್ಕೆ ಈ ವಿಪರ್ಯಾಸ ಗೋಚರವಾಗುತ್ತದೆ. ಅಳಿಯುವುದು ಕಂಡುಬರುತ್ತದೆ. ಹೊರನೋಟಕ್ಕೆ ಎಲ್ಲವೂ ನಶ್ವರ, ಕ್ಷಣಿಕ; ಒಳನೋಟಕ್ಕೆ ಎಲ್ಲವೂ ಶಾಶ್ವತ, ಚಿರಂತನ—"

"ಹಾಗಿದ್ದರೆ ಸೌಂದರ್ಯಕ್ಕೆ ಸಾವಿಲ್ಲ ಎನ್ನುತ್ತೀರಾ ?"

"ಯಾವುದಕ್ಕೂ ಸಾವಿಲ್ಲ. ಮನುಷ್ಯನ ಬದುಕು ನಶ್ವರ; ಮಾನವನ ಜೀವನ ಶಾಶ್ವತ, ಚಿರಂತನ—"

"ಅಂದರೆ—"

"ಒಂದು ಹೂವು ಬಾಡಬಹುದು. ಆದರೆ ನಾಳೆ ಮತ್ತೊಂದು ಖಂಡಿತವಾಗಿ ಅರಳುತ್ತದೆ."

"ಆದರೆ ಅದು ಬಾಡಿದ ಹೂವಲ್ಲ. ಅರಳಿದ ಹೂವು ಬೇರೆ—"

"ಬೇರೆಯಾದರೂ ಅದು ಹೂವೇ ಅಲ್ಲವೆ? ಅದೇ ನಾನು ಹೇಳುವುದು. ಹೂವು ಬಾಡಬಹುದು. ಹೂವಿನ ಸೌಂದರ್ಯ ಬಾಡುವುದಿಲ್ಲ. ಮನುಷ್ಯನ ಚೇತನದಲ್ಲಿ ಚಿರಸ್ಥಾಯಿಯಾಗಿ, ನಿರಂತರವಾಗಿ ಉಳಿಯುತ್ತದೆ. ಹೂವು ಎಂಬ ಸತ್ವಕ್ಕೆ ಸಾವೇ ಇಲ್ಲ !"

ಗೋಪಿ ಎಂದುಕೊಂಡ "ಶಾಸ್ತ್ರಿಗಳು ಹೇಳುವ ಮಾತು ನಿಜವಿರಬಹುದು. ಅದು ಒಂದು ದೃಷ್ಟಿ. ಆದರೆ ಈ ಪ್ರಪಂಚದಲ್ಲಿಯ ಚೆಲುವಿನಿಂದ ಮನಸ್ಸು ತಣಿಯಬೇಕು. ನೋಡುನೋಡುತ್ತಿರುವಾಗಲೇ ಈ ಚೆಲುವು

ಬಾಡುವುದನ್ನೂ ಸಾಯುವುದನ್ನೂ ಕಣ್ಣು ಕಾಣುತ್ತದೆ. ಸಾಯುವುದನ್ನು ಕಂಡು ಮನಸ್ಸು ಮುದುಡಿಕೊಳ್ಳುತ್ತದೆ. ಈ ಪರಿಯ ಸೊಬಗೆಲ್ಲವೂ ಇಷ್ಟು ಮಾತ್ರಕ್ಕೆಯೆ ? ಎಂದು ಮಿಡುಕುತ್ತದೆ. ಈ ಮಿಡುಕು-ಮರುಕಗಳಿಗೆ ಆಸ್ಪದ ವಿರಬಾರದು. "

ಮುನ್ನಾದಿನವೇ ರಂಗಧೂಳಿಯ ಮನೆಯೆದುರಿಗಿನ ಅಂಗಣದಲ್ಲಿ ಬೆಳೆದ ಮಲ್ಲಿಗೆಯೊಂದನ್ನು ನೋಡಿದ್ದ. ಸಾಯಂಕಾಲದ ಸುಮಾರಿಗೆ ಮೊಗ್ಗುಗಳು ಯಾವ ಉಬ್ಬರದಿಂದ, ಅಂತರ್ಯದ ಯಾವ ಭವ್ಯ ಭರವಸೆಯಿಂದ ಅರಳು ತ್ತಿದ್ದವು ! ಮರುದಿನ ಮುಂಜಾನೆ ಅವೇ ಮೊಗ್ಗುಗಳು ಸಕಲ ಸಾಫಲ್ಯದ ಸಂಕೇತಗಳಾಗಿ ಸುತ್ತಲೂ ಸೌರಭವನ್ನು, ಸೌಂದರ್ಯವನ್ನು ಬೀರುತ್ತಿದ್ದವು ! ಆದರೆ ಮಧ್ಯಾಹ್ನದಲ್ಲಿ ? ಸಾಯಂಕಾಲ ? ಅದನ್ನು ನೆನೆಯುವುದೇ ಗೋಪಿಗೆ ಬೇಡವಾಗಿತ್ತು. ಮುನ್ನಾದಿನದ ಭರವಸೆ, ಅಪೇಕ್ಷೆ, ಆಸೆಗಳೆಲ್ಲವೂ ಮಾಯ ವಾಗಿದ್ದುವಲ್ಲವೆ ? ಜೀವನದ ಚೆಲುವೂ ಇಷ್ಟೆಯೆ ಆದರೆ ? ಒಂದು ಹೃದಯ ಇನ್ನೊಂದು ಕಡೆಗೆ ಹಾತೊರೆದು ಹೋಗುತ್ತಿರುವಾಗಿನ ಚೆಲುವಿನ ಅನುಭವದ ಗತಿಯೂ ಇದೇ ಆದರೆ ? ಮದುವೆಯಾದ ನಂತರದಲ್ಲಿ ಊಹೆಯನ್ನು ದಣಿಸಿ, ಕಲ್ಪನೆಯ ರಾಜ್ಯವನ್ನು ಬೆಳಗಿಸಿ ಕಣ್ಣು ಕಾಣದ ಕನಸುಗಳ ಸಾಮ್ರಾಜ್ಯ ವನ್ನೇ ಹಬ್ಬಿಸಿದ ಭಾವನೆ ಕೊನೆಯಲ್ಲಿ " ಇದು ಇಷ್ಟು ಮಾತ್ರವೆ ? " ಎನ್ನು ವಂತಾದರೆ ? ಎಂದು ದಿವಸಾನುದಿವಸವೂ ಕೊರಗುತ್ತಿದ್ದ. ಆದರೆ ಶಾಂತ ಳನ್ನು ನೆನೆದಾಗ, ಆಕೆಯ ಸಾನ್ನಿಧ್ಯವನ್ನು ಅಪೇಕ್ಷಿಸಿದಾಗ ಈ ಬಗೆಯ ಅಸಂ ತೋಷ ಆತನಲ್ಲಿ ಮೂಡುತ್ತಿರಲಿಲ್ಲ. ಅದೇ ಆತನಿಗೆ ವಿಚಿತ್ರವೆನಿಸಿತ್ತು. ಮದುವೆಯಾಗಬೇಕು, ಆದರೆ ಶಾಂತಳನ್ನೇ ಆಗಬೇಕೆಂಬ ಆಸೆಯನ್ನು ಪ್ರೇರಿ ಸಿದ ಭಾವನೆ ಈ ಒಳಗಿನ ಸಂತೃಪ್ತಿ-ಸಂತೋಷ. ಕೊನೆಯಿಲ್ಲದ ಚೆಲುವು ! ಸಾವರಿಯದ ಸೊಬಗು !

ಇಬ್ಬರೂ ಸುಮ್ಮನಾದರು. ಆದರೆ ಶಾಂತಳನ್ನು ತಾನು ಒಪ್ಪಿದ್ದು ಯಾಕೆ ಎಂಬುದು ತನ್ನ ಮಟ್ಟಿಗೆ ಸ್ಪಷ್ಟವಾಗಿದ್ದರೂ ಶಾಸ್ತ್ರಿಗಳಿಗೆ ಅದನ್ನು ವಿವರಿಸು ವುದು ಸಹಜ ಸಾಧ್ಯವಾಗಿ ಕಾಣಲಿಲ್ಲ. ಆದರೆ ಶಾಸ್ತ್ರಿಗಳು ಕೇಳಿಯೇಬಿಟ್ಟರು.

" ಹಾಗಿದ್ದರೆ ನಿನಗೆ ಮದುವೆ ಬೇಡವಾಯಿತಲ್ಲ ? "

" ಬೇಡವಾಗಿತ್ತು. "

" ಈಗ ನಿನ್ನ ತತ್ವಜ್ಞಾನವೇ ಬದಲಾಯಿತೆ ? " ಎಂದು ನಕ್ಕರು.

ಆದರೆ ಆ ನಗೆಯಲ್ಲಿ ಮೂದಲಿಕೆ ಇರಲಿಲ್ಲ. ಗೋಪಿ ಹೇಳಿದ

" ಈ ವಿಷಯದಲ್ಲಿಯ ನನ್ನ ಅನುಭವವನ್ನು ಮಾತಿನಲ್ಲಿ ಹೇಳಲಿಕ್ಕಾದೀತೆಂದು ನನಗೆನಿಸುವುದಿಲ್ಲ. ಆದರೆ ನಾನು ಮದುವೆಯಾಗುವುದೆಂದು ಗೊತ್ತುಮಾಡಿಕೊಂಡಿದ್ದೇನೆ. ನಾನು ಗೊತ್ತುಮಾಡಿಕೊಂಡ ಮದುವೆಯಲ್ಲಿಯೇ ಈ ಜೀವನದ ಚೆಲುವಿನ ಹಂಬಲ ತನ್ನ ಪರಮ ಸಾಫಲ್ಯವನ್ನು ಪಡೆಯಬಹುದು ಎಂದು ಕಾಣುತ್ತಿದೆ."

" ನನಗೆ ಅದೇ ಯೋಚನೆಯಾಗಿದೆ, ಗೋಪಿ— "

" ಯಾವುದು ಉಳಿದವರಲ್ಲಿ ಅಳಿಯಬಹುದು ಅದು ಶಾಂತಳಲ್ಲಿ ಚಿರಂತನವಾಗಿದೆ. ನಾನು ಆಕೆಯ ಮುಖವನ್ನು ಒಮ್ಮೆಯೂ ಪೂರ್ತಿಯಾಗಿ ನೋಡಿಲ್ಲ. ಆದರೆ ಆ ಅಂತರಂಗದ ಭವ್ಯತೆಯನ್ನು, ಚೆಲುವನ್ನು ಕಂಡಿದ್ದೇನೆ."

ಶಾಸ್ತ್ರಿಗಳ ಮನಸ್ಸು ಉದ್ವಿಗ್ನಗೊಂಡಿತ್ತು. ಗೋಪಿಯ ಬಗೆಯಲ್ಲಿ ಅವರ ಹೃದಯದಲ್ಲಿ ಕನಿಕರ ಮೂಡಿತ್ತು. ನಿಧಾನವಾಗಿ ಕೇಳಿದರು

" ಗೋಪಿ, ಈ ಮದುವೆಯಿಂದ ನಿನಗೆ ಕಲ್ಯಾಣವಾಗುತ್ತದೆ ಎಂದೆನಿಸುತ್ತದೆಯೆ ? "

" ಕಲ್ಯಾಣವೆ ? ನನ್ನ ಅಂತರಂಗ ತನ್ನ ಪರಮ ಸಾಫಲ್ಯವನ್ನು ಗಳಿಸಬಹುದು. ಕಲ್ಯಾಣವಾಗುವುದಿಲ್ಲ ಎಂದೆನಿಸುತ್ತಿದೆಯೆ, ನಿಮಗೆ ? "

" ನಾನು ನಿಶ್ಚಿತವಾಗಿ ಹೇಳಲಾರೆ. ಆದರೆ ಅದೇಕೊ— "

" ಏನು ಶಾಸ್ತ್ರಿಗಳೆ ? "

" ಯಾಕಾಗಬಾರದು ? "

ಮತ್ತೆ ಅದೇ ಕಾತರದ ಪ್ರಶ್ನೆ.

" ಗೋಪಿ, ಒಂದು ದೃಷ್ಟಿಯಿಂದ ನಿನ್ನ ಮಾತೇ ನಿಜ. ಅಂದರೆ ಚೆಲುವಾದದ್ದು— "

" ಸಾಯಲೇಬೇಕೆ ? "

" ಸಾಯುವುದಿಲ್ಲ. ಆದರೆ ಕಣ್ಣಿಗೆ ಮರೆಯಾಗುತ್ತದೆ."

" ಕಣ್ಣಿಗೆ ಮರೆಯಾದರೂ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುತ್ತದೆ ಎಂದು ನೀವೇ ಹೇಳಲಿಲ್ಲವೆ ? ಸಾವಿನಲ್ಲಿಯೇ ಬದುಕು ಶಾಶ್ವತವಾಗುತ್ತದೆಯಲ್ಲವೆ ? "

" ಹೌದು."

" ಅಂದಮೇಲೆ—"

ಗೋಪಿ ಮುಂದುವರಿದ. ಹೇಳಬೇಕಾದುದನ್ನು ಮಾತಿನಿಂದ ಹೇಳಬಹುದು ಎಂದು ತೋರಿತು. ಅವನೆಂದ

" ನೀವು ಹೇಳಿದ ಎಲ್ಲ ಮಾತುಗಳನ್ನು ನಾನು ಇಲ್ಲಿ ಅರ್ಥಪೂರ್ಣವಾಗಿ ಕಾಣುತ್ತಿದ್ದೇನೆ. ನಿಮ್ಮ ಮಾತಿನಿಂದ ನನ್ನ ಮನಸ್ಸು ನನಗೇ ಸ್ಪಷ್ಟವಾಗಿ ಅರ್ಥವಾಗುತ್ತಿದೆ. ಶಾಂತಳಲ್ಲಿ ನಾನು ಚೆಲುವನ್ನು ಕಂಡಿದ್ದರೆ ಆ ಚೆಲುವು ಒಳನೋಟಕ್ಕೆ ಸಂಬಂಧಿಸಿದ್ದು. ಆದ್ದರಿಂದಲೇ ಶಾಶ್ವತ. ಒಂದು ಕಾಲಕ್ಕೆ ಈ ರಂಗಧೂಳಿಯ ಚೆಲುವಿಗೆ ಮಾರುಹೋದ ನನ್ನ ಮನಸ್ಸು ಅಲ್ಲಿಯ ಚೆಲುವನ್ನು ಇಂದು ಶಾಂತಳಲ್ಲಿ ಕಾಣುತ್ತಿದೆ. ಇಲ್ಲಿ ಅಳಿಯಬಹುದಾದದ್ದು ಅಲ್ಲಿ ಉಳಿಯುತ್ತದೆ. ನಿತ್ಯನೂತನವಾಗಿ ಚಿರಂತನವಾಗಿ ಉಳಿಯುತ್ತದೆ. ನಾವಿಬ್ಬರೂ ಇಲ್ಲದಾದನಂತರವೂ ಉಳಿಯುವ ಈ ಹೃದಯ ಮಾರುಹೋದ ಬಗೆ ಸೌಂದರ್ಯದ ಚಿರಂತನ ಸತ್ವಕ್ಕೆಯೆ ಸಾಕ್ಷಿ. ಅಲ್ಲದೆ—ಏನೆನ್ನುತ್ತಿದ್ದೇನೆಯೊ ? "

" ನಿನ್ನ ಮಾತು ನಿಜ. ಆದರೆ—"

" ಈ ಸಂದರ್ಭದಲ್ಲಿ ಆದರೆ ಎನ್ನುವ ಮಾತೇ ನನಗೆ ಅರ್ಥವಾಗುವುದಿಲ್ಲ, ಶಾಸ್ತ್ರಿಗಳೆ."

"ನನಗೂ ಪೂರ್ತಿಯಾಗಿ ಅರ್ಥವಾಗುವುದಿಲ್ಲ. ಅಂತೆಯೆ ತೊಂದರೆ—"

" ಅಂದಮೇಲೆ ಈ ಮದುವೆ ಕಲ್ಯಾಣಕಾರಿಯಲ್ಲ ಎಂದು ಯಾಕೆ ಹೇಳುತ್ತೀರಿ ? "

" ಹಾಗೆ ಖಂಡಿತವಾಗಿ ಹೇಳಲಾರೆನೆಂದೇ ನನ್ನ ಈ ತೊಳಲಾಟ."

" ಖಂಡಿತವಾಗಿ ಹೇಳಲಾರಿರಾದರೆ ತೊಳಲಾಟ ಯಾಕೆ ? "

" ಇದು ಹೀಗೆ, ಇದು ಇಷ್ಟು ಎಂದು ನಿರ್ದಿಷ್ಟವಾಗಿ ಹೇಳಲಾಗದ್ದಕ್ಕಾಗಿ. ಮನುಷ್ಯನಿಗೆ ಸಿಕ್ಕಬಹುದಾದ ಜ್ಞಾನದ ಹಣೆಬರಹವೆ ಇಷ್ಟು ಎಂದು ಕಾಣುತ್ತದೆ. ನಿನ್ನ ತಂದೆ ಬಂದು ಕೇಳಿದಾಗಿನಿಂದಲೂ ಸಾವಿರ ಬಗೆಯಲ್ಲಿ ಈ ಮದುವೆಯನ್ನು ಕುರಿತು ಹಗಲು ರಾತ್ರಿ ಯೋಚಿಸಿದ್ದೇನೆ. ನಿಮ್ಮೆಲ್ಲರಿಗೂ ಈ ಮದುವೆಯಿಂದ ಸುಖ ಸಾಧ್ಯವಿದೆ ಎಂದು ನನಗೆ ನಿರಾತಂಕವಾಗಿ

ತೋರಿದ್ದರೆ ನಿಮ್ಮ ಸುಖವನ್ನು ಕಣ್ಣಾರೆ ನೋಡುವುದೇ ನನಗೊಂದು ಧನ್ಯತೆ ಯಾಗುತ್ತಿತ್ತು. ಆದರೆ ಯೋಚಿಸಿದ ಹಾಗೆ ಯಾವುದೊ ಒಂದು ಹೇಳಲಾಗದ, ಬಹುಶಃ ನನ್ನ ಮನಸ್ಸಿಗೇ ಸ್ಪಷ್ಟವಾಗಿರದ ಕಾರಣಕ್ಕಾಗಿ, ಯಾವುದೊ ಒಂದು ಅವ್ಯಕ್ತವಾದ ಅಶುಭ ಕಣ್ಣೆದುರು ನಿಲ್ಲುತ್ತದೆ. ಇದು ಬೇಡ ಬೇಡ, ಎಂದೆನಿಸುತ್ತದೆ. ಇದನ್ನು ನಿನ್ನ ತಂದೆಗೆ ಹೇಗೆ ಹೇಳಲಿ ? ಒಪ್ಪಲಾರೆ; ಒಪ್ಪದಿರಲಾರೆ. ನಾನು ಒಪ್ಪಿ ಮುಂದೆ ಏನಾದರೂ ಅನ್ಯಾಯ ನಡೆದರೆ ತಪ್ಪಿಸಬಹುದಾದುದನ್ನು ನಾನೇ ನಡೆಸಿದೆನಲ್ಲಾ ಎಂದು ಕಳವಳಪಡಬೇಕು; ಒಪ್ಪದಿದ್ದರೆ ಮುಂಬರುವುದು ಅನಿಶ್ಚಿತವಿದ್ದಾಗ ನಿಮ್ಮಿಬ್ಬರ ಸುಖಕ್ಕೆ ಆತಂಕವಾಗಬೇಕಲ್ಲಾ ಎಂದು ಕಳವಳ. ಇಷ್ಟಕ್ಕಾಗಿ ನನ್ನ ಮನಸ್ಸು ಇಂದು ಹೇಳತೀರದ ಸಂಕಟಕ್ಕೆ ಒಳಗಾಗಿದೆ, ಗೋಪಿ— ”

ಅರೆನಿಮಿಷ ಗೋಪಿ ಸುಮ್ಮನಾದ. ಶಾಸ್ತ್ರಿಗಳ ಮನಸ್ಸಿನಲ್ಲಿಯ ತೊಡಕು ಆತನಿಗೆ ಅರ್ಥವಾಗಿತ್ತು. ಆದರೆ ಅವರ ಅನುಮಾನಕ್ಕೆ ಆತ ಒಪ್ಪುವುದು ಸಾಧ್ಯವಿರಲಿಲ್ಲ. ಸಂಪೂರ್ಣ ಜ್ಞಾನ, ಸಮ್ಯಕ್ ಜ್ಞಾನ ಮನುಷ್ಯನಿಗೆ ಸಿಗುವುದು ಎಂದು ? ಹೇಗೆ ? ಅದು ಸಿಕ್ಕುವವರೆಗೆ ಈ ತೊಳಲಾಟ ತಪ್ಪಿದ್ದಲ್ಲ, ಅಂತೆಯೇ ತೊಳಲ್ಲಾಟ ಜೀವನದ ಅಪರಿಹಾರ್ಯವಾದ ಅಂಶ. ಅಂತೆಯೆ ಭವಿಷ್ಯ ಒಂದು ಕತ್ತಲೆಯ ಕಡಲು. ಕತ್ತಲಲ್ಲಿ ಕಿರುಸೊಡರೊಂದನ್ನು ಹಿಡಿದುಕೊಂಡು ಮುಂದೆ ಸಾಗುವುದೇ ಜೀವನ. ಎರಡು ಹೆಜ್ಜೆಯ ಮಟ್ಟಿಗೆ ಬೆಳಕು. ಬೆನ್ನ ಹಿಂದೆ ಗತಕಾಲದ ಕಡಲು. ಎದುರು ಭವಿಷ್ಯತ್ತಿನ ಕಡಲು. ಅದನ್ನು ಮುಸುಕಿದ ಮಂಜು. ಅದರಾಚೆ ಯಾವುದೂ ಗೋಚರಿಸುವುದಿಲ್ಲ. ಇದು ಸೃಷ್ಟಿಯ ಕ್ರಮವಾಗಿದ್ದರೆ ಅದಕ್ಕೆ ತೊಳಲಾಡುವುದು ಯಾಕೆ ? ಬಂದುದನ್ನು ಬಂದಹಾಗೆ ಎದುರಿಸುವುದೇ ಒಂದು ಮಾರ್ಗ. ಅಪರಿಹಾರ್ಯವಾದ ಮಾರ್ಗ. ಕಾಲಚಕ್ರ ನಿಲ್ಲುವುದಿಲ್ಲ. ನಡೆಯುವ ಕಾಲು ಎಷ್ಟು ದಣಿದರೂ, ಬೇಸರಪಟ್ಟರೂ ತಡೆಯಲಾರವು. ಎಂದಮೇಲೆ ? ತೆರೆಯ ಮರೆಯಲ್ಲಿಯದು ತೆರೆದು ನಿಲ್ಲುವುದಿಲ್ಲವೆಂದು ತೊಳಲಾಡುವುದೇಕೆ ? ಆದರೆ ಮರುಕ್ಷಣದಲ್ಲಿಯೆ ಅಂದುಕೊಂಡ : ಶಾಸ್ತ್ರಿಗಳಿಗೆ ಇಷ್ಟು ತಿಳಿಯದೆ? ಹಾಗಿದ್ದರೆ ಅವರು ಒದ್ದಾಡುತ್ತಿರುವುದು ಏನೆಂದು ? ಶಾಸ್ತ್ರಿಗಳು ತಮ್ಮಷ್ಟಕ್ಕೆಯೆ ಎಂಬಂತೆ ಉಸಿರಿದರು.

“ಈ ಮನಸ್ಸೆಂಬುದು ಬಹಳ ವಿಚಿತ್ರ ಗೋಪಿ. ಜನ್ಮಾಂತರದ ಸಂಗತಿ

ಗಳನ್ನು ತಿಳಿಯಬಲ್ಲದು. ಭವಿಷ್ಯತ್ತಿನ ತೆರೆಯನ್ನು ಇರಿದು ಒಂದೊಂದು ಸಲ ಮುಂದಿನದನ್ನೂ ಕಾಣಬಲ್ಲದು. ಒಮ್ಮೆ ಸ್ಪಷ್ಟವಾಗಿ; ಆದರೆ ಹೆಚ್ಚಾಗಿ ಅಸ್ಪಷ್ಟ ವಾಗಿ. ನಮ್ಮ ಭಾವನೆಗಳ ಬೇರು ಎಷ್ಟು ದೂರವಾಗಿ ಇಳಿದಿರುತ್ತವೆಂಬು ದೊಂದು ದೊಡ್ಡ ಗೂಢ— "

" ಇದು ಬರಿಯ ಭಾವನೆಯ ಪ್ರಶ್ನೆಯಾಗಿದ್ದರೆ— "

" ಬರಿಯ ಭಾವನೆಯ ಪ್ರಶ್ನೆಯಾಗಿದ್ದರೂ ಅಷ್ಟು ಸಹಜವಾಗಿ ನಿರಾ ಕರಿಸಲಾರೆವು— "

" ಆದರೆ ಮನಸ್ಸು ಒಪ್ಪಬೇಕಾದರೆ ಬುದ್ಧಿ ಗ್ರಹಿಸಬಹುದಾದ ಏನಾ ದರೊಂದು ಸ್ಪಷ್ಟವಾದ ಸಮರ್ಥನೆ ಬೇಕಲ್ಲವೆ ? "

" ಈ ಮಾನವನ ಬುದ್ಧಿ ಎಲ್ಲಿಗೆ ನಿಲುಕೀತು ? ಬುದ್ಧಿಗೆ ನೇರವಾಗಿ ಗೋಚರಿಸದ ಜ್ಞಾನವಿದೆ. ಅದಿರಲಿ—ಗೋಪಿ, ನಿನಗೆ ಜ್ಯೋತಿಷದಲ್ಲಿ ವಿಶ್ವಾಸ ವಿದೆಯೆ ? "

" ಇದೆ— ಮತ್ತು ಇಲ್ಲ. ಆದರೆ ಹೆಚ್ಚಾಗಿ ಇಲ್ಲ ಎಂದೇ ಹೇಳಬೇಕು." ಎಂದು ಮುಂದುವರಿದು ಕೇಳಿದ

" ನೀವು ಹೇಳುತ್ತಿದ್ದ ಮಾತುಗಳನ್ನು ಜ್ಯೋತಿಷದ ಬಲದಮೇಲೆ ಹೇಳಿದಿರಾ ? "

ಶಾಸ್ತ್ರಿಗಳು ಉತ್ತರಹೇಳಲಿಲ್ಲ. ಆದರೆ ಇಲ್ಲ ಎಂಬಂತೆ ತಲೆಯನ್ನಾಡಿ ಸಿದರು. ನಿಜವಾಗಿ ಗೋಪಿಗೆ ಜ್ಯೋತಿಷದಲ್ಲಿ ವಿಶ್ವಾಸವಿರಲಿಲ್ಲ. ಆದರೆ ಶಾಸ್ತ್ರಿ ಗಳು ಆ ಶಾಸ್ತ್ರವನ್ನು ಚೆನ್ನಾಗಿಬಲ್ಲರೆಂಬುದನ್ನು ತಿಳಿದಿದ್ದ. ಅವನೆಂದ

" ಅದರಲ್ಲಿ ವಿಶ್ವಾಸ ಹುಟ್ಟುವುದು ಕಷ್ಟ ಶಾಸ್ತ್ರಿಗಳೆ. ನಾನು ಹೆಚ್ಚಾಗಿ ಪಾಶ್ಚಿಮಾತ್ಯ ದಾರ್ಶನಿಕರ ಗ್ರಂಥಗಳನ್ನು ಓದಿದವ. ಜ್ಯೋತಿಷ ಒಪ್ಪಬೇಕಾ ದರೆ ನಿಯತವಾದವನ್ನು ಒಪ್ಪಬೇಕಾಗುತ್ತದೆ. ಮುಂದೆ ನಡೆಯಬೇಕಾದು ದೆಲ್ಲವೂ ನಿಯತವಾಗಿ, ಪೂರ್ವ ಸಂಕಲ್ಪಿತವಾಗಿರಬೇಕಾಗುತ್ತದೆ. ಅಷ್ಟನ್ನು ಒಪ್ಪಬೇಕಾದರೆ ಇದೆಲ್ಲವನ್ನು ಒಂದು ನಿಯತವಾದ, ಪೂರ್ವಸಂಕಲ್ಪಿತ ವಾದ ಕ್ರಮದಲ್ಲಿ ನಡೆಯಿಸುವ ಸಾಮರ್ಥ್ಯವನ್ನುಳ್ಳ ದೈವವನ್ನೊ, ದೈವತ ವನ್ನೊ ಒಪ್ಪಬೇಕು. ಕ್ಷಣಕ್ಷಣಕ್ಕೂ ಈ ಪ್ರಪಂಚ ನಮ್ಮ ಕಣ್ಣೆದುರಿ ನಲ್ಲಿಯೇ ಒದಲಾಗುತ್ತಿದ್ದುದನ್ನು, ಬೆಳೆಯುತ್ತಿದ್ದುದನ್ನು ನೋಡುವ ನಾವು

ಈ ನಿಯತವಾದವನ್ನು ಒಪ್ಪುವುದು ಹೇಗೆ ? ಅಲ್ಲದೆ ನಮ್ಮಿಂದ ಲಕ್ಷಾಂತರ ಮೈಲಿಗಳಾಚೆ ಮಿನುಗುತ್ತಿರುವ ಗ್ರಹನಕ್ಷತ್ರಾದಿಗಳು ನಮ್ಮ ಜೀವನಗಳ ಮೇಲೆ ಪ್ರಭಾವ ಬೀರಿ, ಅದನ್ನು ಒಂದೇ ಕ್ರಮದಲ್ಲಿ ನಿಯತಗೊಳಿಸುತ್ತವೆ ಎಂಬ ಮಾತನ್ನು ಬುದ್ಧಿ ಸಹಜವಾಗಿ ಒಪ್ಪಲಾರದು—"

ಶಾಸ್ತ್ರಿಗಳು ಕೇಳುತ್ತಿದ್ದರು. ತುಂಬ ಯೋಚನೆಯಲ್ಲಿದ್ದ ಹಾಗಿತ್ತು. ಏರಿದ ಅವರ ಹುಬ್ಬುಗಳು, ಕಂಡೂ ಕಾಣದಂತೆ ಅವರ ಹಣೆಯಮೇಲೆ ಮೂಡಿದ ಗೆರೆಗಳು ಅವರಲ್ಲಿ ನಡೆದ ಗಾಢಾಲೋಚನೆಯನ್ನೇ ಸ್ಪಷ್ಟಪಡಿಸುತ್ತಿದ್ದವು. ಅರೆನಿಮಿಷ ತಡೆದು ನಿಧಾನವಾಗಿ ಹೇಳಿದರು

"ಜ್ಯೋತಿಷ್ಯವನ್ನು ಒಪ್ಪಬೇಕಾದಾಗ ಇದಾವುದನ್ನೂ ಒಪ್ಪಬೇಕಿಲ್ಲ. ಒಂದು ದೃಷ್ಟಿಯಿಂದ ಈ ಪ್ರಪಂಚದಲ್ಲಿ ಎಲ್ಲವೂ ನಿಯತ. ಎಲ್ಲವೂ ಪೂರ್ವ ಸಂಕಲ್ಪಿತ. ಬದಲಾವಣೆಗೆ ಅವಕಾಶವಿಲ್ಲದಿಲ್ಲ. ಆದರೆ ಈ ಅವಕಾಶ ಅತ್ಯಂತ ಪರಿಮಿತವಾದದ್ದು. ನಮ್ಮ ಮನಸ್ಸಿನ ಓಟ, ನಮ್ಮ ಸ್ವಭಾವದ ಮಾಟ ಎಷ್ಟರಮಟ್ಟಿಗೆ ನಿಯತವೊ ಅಷ್ಟರಮಟ್ಟಿಗೆ ಈ ಪ್ರಪಂಚದ ಗತಿ ನಿಯತ, ಪೂರ್ವಸಂಕಲ್ಪಿತ. ನಮ್ಮ ರಕ್ತದ ಪ್ರತಿಯೊಂದು ಕಣ, ನಮ್ಮ ಚೇತನದ ಪ್ರತಿಯೊಂದು ಚಲನೆ ಶತಮಾನಗಳಾಚೆಯಿಂದ ನಿಧಾನವಾಗಿ ರೂಪುಗೊಳ್ಳುತ್ತ ಬಂದವುಗಳು. ಇಂಥ ಸಾವಿರಾರು ಘಟಕಗಳಿಂದ ಕೂಡಿದ ಒಂದು ವ್ಯಕ್ತಿತ್ವ ಒಂದು ನಿರ್ದಿಷ್ಟವಾದ ಸನ್ನಿವೇಶದಲ್ಲಿ ಹೇಗೆ ನಡೆದುಕೊಳ್ಳಬಹುದೆಂಬುದು ಪೂರ್ವಸಂಕಲ್ಪಿತವಾಗದಿದ್ದರೂ ತಿಳಿದವರ ಎಣಿಕೆಗೆ ಮೀರಿದ ವಿಷಯವಲ್ಲ. ಅಲ್ಲದೆ ಈ ಪ್ರಪಂಚದಲ್ಲಿ ಒಂದಕ್ಕೊಂದು ಸಂಬಂಧ ಪಡದೆ ಯಾವುದೂ ಇಲ್ಲ. ಎಲ್ಲವೂ ಒಂದು, ಒಂದೇ ತತ್ವದ ಸಾವಿರ ಮುಖಗಳು. ಗಿಡಕ್ಕೆ ಮಣ್ಣಿಗೆ ಯಾವ ಸಂಬಂಧ ? ಗಿಡಕ್ಕೆ ಗಾಳಿ ಬೆಳಕುಗಳಿಗೆ ಯಾವ ಸಂಬಂಧ ? ನಮಗೆ ಬುದ್ಧಿಗೆ ಸ್ಪಷ್ಟವಾಗಿ ಗೋಚರಿಸದ ಯಾವುದೊ ಒಂದು ಕ್ರಮಕ್ಕೆ ಸರಿಯಾಗಿ ಸಾಗುವ ವಿಶ್ವಾಂತರಿಕ್ಷದಲ್ಲಿ ಈ ಪೃಥ್ವಿಯೂ ಒಂದು ನಕ್ಷತ್ರವೆ. ಬ್ರಹ್ಮಾಂಡಕೋಟಿಯ ಒಂದು ಅಣುಮಾತ್ರವಾದ ಅಂಶ—"

ಇಬ್ಬರೂ ಸುಮ್ಮನಾದರು, ತಮ್ಮನ್ನೆದುರಿಸಿದ ತೊಡಕಿನ ಅಗಾಧತೆಯ ಅರಿವಿನಿಂದ. ಗೋಪಿ ಒಂದೆರಡು ನಿಮಿಷ ತಡೆದು ಕೇಳಿದ

"ನನ್ನ ತಂದೆಗೆ ನೀವು ಏನೆಂದು ಹೇಳಿದಿರಿ ?"

" ಏನೂ ಹೇಳಲಿಲ್ಲ. ಅವರು ಬಂದಾಗಿನಿಂದ ನನ್ನ ಮನಸ್ಸೇ ಕದಡಿ ಹೋಗಿದೆ. ಮಿತಿಮೀರಿದ ಸಂಕಟಕ್ಕೆ ಒಳಗಾಗಿದೆ. ನಿನ್ನ ಕೂಡ ಮಾತನಾಡಿ ಹೇಳುವೆ ಎಂದೆ."

" ನನ್ನ ಕೂಡ ಮಾತನಾಡಿ ಏನು ? "

" ಅವರೆದುರು ಹೇಳಲಾಗದ, ಒಂದುವೇಳೆ ಹೇಳಿದರೂ ಅವರಿಗೆ ಪೂರ್ತಿಯಾಗಿ ಅರ್ಥವಾಗದ ಮಾತುಗಳನ್ನು ನಿನಗೆ ಹೇಳಿದ್ದೇನೆ. ನನ್ನಲ್ಲಿ ಅವರಿಗೆ ಅಪಾರವಾದ ವಿಶ್ವಾಸವಿದೆ. ಅವರ ವಿಷಯದಲ್ಲಿ ನನಗೆ ಬಾಯಿಂದ ಹೇಳಲಾಗದ ಗೌರವವಿದೆ. ಏನಾದರೂ ಅವರ ಮನಸ್ಸನ್ನು ನೋಯಿಸಲಾರೆ. ಏನುಮಾಡುವುದು ? "

" ನಡೆಯಬೇಕಾದುದನ್ನು ತಡೆಯಬಹುದೆ ? "

" ನೀನು ಮನಸ್ಸುಮಾಡಿದರೆ—"

" ನಾನೇನು ಮನಸ್ಸು ಮಾಡುವುದು? ಶಾಂತಾ ಬೇಡ ಎಂದು ಹೇಳಲೆ?"

ಗೋಪಿಯ ದನಿ ಗದ್ಗದಿತವಾಗಿತ್ತು. ತಡೆದು ಹೇಳಿದ

" ನನ್ನ ಅಂತರಂಗ ನನಗೆ ಬೇಡ ಎಂದು ಹೇಳಿದಹಾಗಿದೆ. ಯಾವ ಮುಹೂರ್ತಕ್ಕೆ ನಾನು ನಿಮ್ಮ ಮನೆಗೆ ಮೊದಲು ಬಂದೆನೊ ! ಅಥವಾ ಯಾವ ಮುಹೂರ್ತಕ್ಕೆ ನಾನು ಇಲ್ಲಿ ಹುಟ್ಟಿದೆನೊ !— "

" ಶಾಂತಳಿಗೆ ಈ ಯಾವ ಸಮಾಚಾರವನ್ನು ನಾನು ಹೇಳಿಲ್ಲ. "

" ಆಕೆಗೆ ಗೊತ್ತೇ ಇಲ್ಲವೆ ? "

" ಇಲ್ಲವೆಂದು ಕಾಣುತ್ತದೆ ! "

ಗೋಪಿಗೆ ಮಧ್ಯಾಹ್ನದಲ್ಲಿಯ ಆಕೆಯ ನೋಟ, ಅವಳ ತಡೆದ ಹೆಜ್ಜೆ ನೆನಪಾದುವು.

" ತಿಳಿದಿರಬೇಕು— "

" ಏನಿದ್ದರೂ ನೀನು ಯೋಚಿಸಬೇಕು ಗೋಪಿ. "

" ಯೋಚನೆಗೆ ನಿಲುಕದ ವಿಷಯ ಇದು. ನನ್ನ ಮಟ್ಟಿಗೆ ನನಗೆ ತಿಳಿಯುವ ಮುನ್ನವೆ ನನ್ನ ಯೋಚನೆ ಮುಗಿದು ಹೋಗಿದೆ. ಅಂತೆಯೆ ಒಂದೇ ಮಾತಿನಲ್ಲಿ ನೇರವಾಗಿ ತಾಯಿಯೆದುರು ಹೇಳಿದೆ. "

ಶಾಸ್ತ್ರಿಗಳೆಂದುಕೊಂಡರು: ಗೋಪಿ ಹೇಳುವುದೇ ನಿಜ. ನಡೆಯಬೇಕಾ

ದುದನ್ನು ತಡೆಯುವುದು ಸಾಧ್ಯವೆ ? ತಡೆಯಬಹುದೆಂಬ ಆಸೆ ಮಾನವನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಲೊಂದು ಸಾಧನ ಮಾತ್ರ. ತಡೆಯಬಹುದು, ಖಂಡಿತವಾಗಿ. ಆದರೆ ಅದಕ್ಕೆ ಸಿದ್ಧತೆ ಯಾವುದು ? ಇಂದಿನ ಒಂದು ಮಾತಿಗೆ ಒಂದು ನಡೆಗೆ ಇಂದು ಒಂದು ಅಣುರೇಣುವೂ ಅಲುಗಾಡಬೇಕಿದ್ದರೆ ಅದಕ್ಕೆ ಹಿನ್ನೆಲೆಯಾಗಿ, ನಿರ್ಣಾಯಕ ಶಕ್ತಿಯಾಗಿ ಅನಂತ ಕಾಲದಿಂದಲೂ, ಪ್ರಪಂಚದ ಆದಿಯಿಂದ ಈವರೆಗೆ ಬದುಕಿ ಬಾಳಿ ಹೋದ ಪ್ರತಿಯೊಂದು ಜೀವ ಕೋಟಿಯ ಪ್ರತಿಯೊಂದು ಕೃತಿ, ಆದರ ಪ್ರತಿಯೊಂದು ಪರಿಣಾಮ ಸತ್ವಯುತವಾಗಿ ನಿಂತಿರುವಾಗ ಈಗ ಒಮ್ಮೆಲೆ ಆ ಮಹಾಪ್ರವಾಹವನ್ನು ತಡೆಯುವೆನೆನ್ನುವುದು ಒಣ ಹೆಮ್ಮೆಯಲ್ಲವೆ ? ಜೀವನಕ್ಕೆ ಪ್ರವಾಹವೆನ್ನುವುದು ಇಷ್ಟಕ್ಕಾಗಿಯೆ ಇರಬಹುದು. ಇಲ್ಲಿಗೆ ಹರಿದು ಬಂದ ನೀರು ಎಷ್ಟು ಕಡೆಗಳಿಂದ, ಎಷ್ಟು ಪರಿಯಿಂದ ಸಾರಸತ್ವದಲ್ಲಿ ರೂಪುಗೊಂಡು ಬೆಳೆದು ಬೇರೆಯಾಗಿ ಬಂದಿರುತ್ತದೆ?.... ಆದರೂ ಗೋಪಿಯ ಬಗೆಯಲ್ಲಿ, ತಮ್ಮ ಮಗಳ ಬಗೆಯಲ್ಲಿ ಅಪಾರವಾದ ಸ್ನೇಹ, ವ್ಯಾಕುಲಗಳು ಅವರ ಹೃದಯವನ್ನು ಮುತ್ತಿದವು. ಬಾಯನ್ನು ಬಂಧಿಸಿದವು. ಅವರ ನೀರವತೆಯನ್ನು ಸಹಿಸಲಾಗದೆ ಗೋಪಿ ಹೇಳಿದ

"ಏನಿದ್ದರೂ ನೀವು ಮನಸ್ಸು ಮಾಡಬೇಕು....ನಿಮ್ಮ ಹರಕೆ ನನಗೆ ಮುಖ್ಯ—"

"ನನ್ನ ಹರಕೆಯಿಂದೇನಾಗಬೇಕು, ಗೋಪಿ ?"

ಶಾಸ್ತ್ರಿಗಳು ಸುಮ್ಮನಾದರು. ಸುತ್ತಲೂ ಮಬ್ಬುಗತ್ತಲು ಕವಿಯುತ್ತಿತ್ತು. ನೇರವಾಗಿ ತನ್ನೆದೆಯಲ್ಲಿದ್ದುದನ್ನು ಹೇಳಲಿಕ್ಕೆ ಗೋಪಿ ಆ ಮಬ್ಬುಗತ್ತಲೆಯಿಂದಲೆ ಧೈರ್ಯ ಪಡೆಯುತ್ತಿದ್ದ ಹಾಗಿತ್ತು.

"ನನಗೆ ನೀವು ಹಿರಿಯರು. ಆದರೆ ನಿಮ್ಮೆದುರು ಧೈರ್ಯವಾಗಿ, ಮನಸ್ಸು ಬಿಚ್ಚಿ ಮಾತನಾಡಬಹುದಾಗಿದೆ ನಾನು. ಅಷ್ಟು ಅಕ್ಕರೆಯನ್ನು, ಆತ್ಮೀಯತೆಯನ್ನು, ಕೆಲವೊಂದು ಸಮಯದಲ್ಲಿ ಸಹಾನುಭೂತಿಯನ್ನೂ ತೋರಿಸಿದ್ದೀರಿ. ನಾನು ಈಗ ಹೇಳಿದ್ದರ ಹೊರತು ಬೇರೆ ಏನನ್ನು ಹೇಳಲಿ ? ನೀವು ಕ್ಷಮಿಸಿ. ಶಾಂತಾ ನನಗಿಂದು ಜೀವನಪ್ರಾಯವಾಗಿದ್ದಾಳೆ. ಅವಳಿಲ್ಲದ ಬದುಕಿನಲ್ಲಿ ನನಗೆ ಯಾವ ಸೊಬಗು, ಯಾವ ಅರ್ಥವೂ ಕಾಣುವುದಿಲ್ಲ. ಆಕೆಯೊಡನೆ ಒಡನಾಟ ಮಾಡಿದ ಈ ನನ್ನ ಮನಸ್ಸು ಒಂದು ದೃಷ್ಟಿಯಿಂದ ಆಕೆಯನ್ನು

ವರಿಸಿ, ಮದುವೆಯಾಗಿದೆ ಎಂದೇ ಹೇಳಬಹುದು. ನೀವು ಒಪ್ಪಿದರೆ ಈ ಜೀವ ಈ ಜನ್ಮದಲ್ಲಿ ಸುಖವಾಗಿರಬಹುದು. ಈವರೆಗಿನ ನನ್ನ ತೊಳಲಾಟ ತಣಿದು ಮನಸ್ಸು ಶಾಂತವಾಗಬಹುದು. ಇಲ್ಲದಿದ್ದರೆ—

ಗೋಪಿಯ ಯೋಚನೆ ಬೇಡವಾದ ಆ ವಿಚಾರವನ್ನು ಎದುರಿಸಲು ಸಿದ್ಧವಾಗಿರಲಿಲ್ಲವೆಂದೇ ಮಾತು ನಿಂತಿತು.

" ಇಲ್ಲದಿದ್ದರೆ—? "

" ಯಾಕೆ ಆ ಮಾತು ? ಇಲ್ಲದ ಮಾತಿನ ಹೆದರಿಕೆಯನ್ನು ನಿಮ್ಮೆದುರು ನಾನು ನಿಲ್ಲಿಸಬೇಕಿಲ್ಲ. ಇದ್ದುದನ್ನು ಹೇಳಿದ್ದೇನೆ. ಈ ಪ್ರಪಂಚದ ಸೌಂದರ್ಯ ವನ್ನು ಸಾಧ್ಯವಾದ ಮಟ್ಟಿಗೆ ಅನುಭವಿಸಿ ಅದರ ಮಡಿಲಲ್ಲಿಯೆ ಕೊನೆಯಾಗಿ ಮಲಗಬೇಕೆಂಬ ಹಂಬಲವನ್ನು ಮೊದಲಿನಿಂದಲೂ ಹೊತ್ತು ಬಂದಿದ್ದೇನೆ. ಶಾಂತಳ ಅಂತರಂಗದ ಸಹವಾಸದಲ್ಲಿ ಈ ಚೆಲುವಿನ ಪರಮಾವಧಿಯನ್ನು ನಾನು ಕಾಣಬಹುದು. ಕಾಣುತ್ತೇನೆ. ಅದಾಗದಿದ್ದರೆ ಆ ಅಂತರಂಗದ ಸಾವಿರ ಬಾಹ್ಯಪ್ರತೀಕಗಳಿಂದ ಈ ರಂಗಭೂಮಿಯ ಗಿಡಮರಗಳ, ನೆಲದ, ನೀರಿನ, ಗಾಳಿಯ ಸಹವಾಸದಲ್ಲಿ ಈ ನಾಡಿ ಮಿಡಿಯುವವರೆಗೂ ಇರುತ್ತೇನೆ–ಬದುಕಿ ನಲ್ಲಿ ನನ್ನ ಪಾಲಿಗೆ ಬರಬಹುದಾಗಿದ್ದ ಭವ್ಯದರ್ಶನವನ್ನೆ ನೆನೆಯುತ್ತ. ಈ ನೀರು–ಆದಿಸೃಷ್ಟಿ ಈ ನೀರೇ ನನಗೆ ಕೊನೆಯ ಆಶ್ರಯ. ಅದು ನನ್ನ ತವರು— "

" ಗೋಪಿ— "

ಶಾಸ್ತ್ರಿಗಳು ಹೆಚ್ಚು ಕಡಿಮೆ ಚೀರಿದರು. ಆದರ ಆ ಕರೆಯಲ್ಲಿಯ ಆರ್ತತೆ ಹಿಂಡಿಹೋದ ಅವರ ಹೃದಯದಾಳದಿಂದ ತೂರಿ ಬಂದಿತ್ತು. ಕತ್ತಲೆ ಯಲ್ಲಿ ಆ ದನಿ ಕೆರೆಯ ನೀರ ಮೇಲೆ, ಅದರಾಚೆಯ ದಿನ್ನೆಯಮೇಲೆ, ಅದ ರಾಚೆಯ ಮಾರ್ಕಂಡೇಯ ತೀರದಮೇಲೆ, ಅದರಾಚೆಯ ಬೆಟ್ಟದಮೇಲೆ, ಬೆಟ್ಟವನ್ನು ದಾಟಿ ಹಬ್ಬಿನಿಂತ ಗಗನಾಂತರಾಳದಾಚೆ ಪ್ರತಿಧ್ವನಿಸಿತು. ತನ್ನೆ ದೆಯ ಕಳವಳಕ್ಕೊಳಗಾಗಿದ್ದ ಗೋಪಿ ಶಾಸ್ತ್ರಿಗಳ ಈ ಆರ್ತರವದ ತೀವ್ರತೆ ಯನ್ನು ಗಮನಿಸಿದನೊ ಇಲ್ಲವೊ ! ತನ್ನ ನಿವೇದನೆಯನ್ನು ಮಾತ್ರ ತಟ್ಟನೆ ನಿಲ್ಲಿಸಿದ.

## ೮

ಮಾರನೆಯ ದಿನ ಮಧ್ಯಾಹ್ನ ಬರುತ್ತೇನೆಂದು ಹೇಳಿದ ಶಂಕರಪ್ಪ ಮೂರು ದಿನಗಳಾದರೂ ಶಾಸ್ತ್ರಿಗಳ ಮನೆಗೆ ಹೋಗಲಿಲ್ಲ. ನಾಲ್ಕನೆಯ ದಿನ ಸಾಯಂಕಾಲದ ಸುಮಾರಿಗೆ ಏನೇನೋ ನೆಪಗಳನ್ನು ಹೂಡಿಕೊಂಡು ದಯ ಮಾಡಿಸಿದ.

ಶಾಸ್ತ್ರಿಗಳಿಗೂ ಅಂದಿನ ಮನಃಸ್ಥಿತಿಯಲ್ಲಿ ಯಾರ ಕೂಡಲಾದರೂ ಮಾತ ನಾಡುತ್ತಿರಬೇಕೆನಿಸುತ್ತಿತ್ತು. ಮೂರು ದಿನದ ಅವರ ಯೋಚನೆ ಯಾವ ನಿಲುಗಡೆಗೂ ಬಂದಿರಲಿಲ್ಲ. ಹೀಗಾಗಿ ಶಂಕ್ರಪ್ಪ ಬಂದದ್ದು ಒಳ್ಳೆಯದೇ ಆಯಿ ತೆಂದೆನಿಸಿರಬೇಕು. ಅವರೆಂದರು

" ಬನ್ನಿ, ಬನ್ನಿ. ಶಂಕ್ರಪ್ಪನವರೆ ? ಅದೇನು ಮೊನ್ನೆಯೆ ಬರುತ್ತೇ ನೆಂದವರು ಈವರೆಗೂ ಈ ಕಡೆಗೆ ಮಿಸುಕಲಿಲ್ಲ ? "

"ಅದೇ, ಅಂದೇ ಬರಬೇಕಾಗಿತ್ತು. ಆದರೆ ಅಷ್ಟರಲ್ಲಿ ಮತ್ತೆ ಎಲ್ಲಿಯೋ ಹೋಗಬೇಕಾಯಿತು. ನಿಮಗೆ ಗೊತ್ತೇ ಇದೆಯಲ್ಲ. ಓಡಾಡುವುದರಲ್ಲಿಯೇ ವೇಳೆ ಹೋಗುತ್ತದೆ. ಏನೋ ಒಂದು ಕೆಲಸ ಒಪ್ಪಿಕೊಂಡಮೇಲೆ ಮಾಡ ಬೇಕಲ್ಲವೆ ? ಒಂದೆಡೆ ಜಾಗ ಹಿಡಿದುಕೊಂಡು ಕುಳಿತರೆ ಹೇಗೆ ಸಾಗಬೇಕು ಹೇಳಿ—"

" ಅದು ಸರಿಯೆ. ಆದರೂ ಏನೋ ವಿಶೇಷ ಗಡಿಬಿಡಿಯಲ್ಲಿ ಬಿದ್ದ ಹಾಗಿದೆಯಲ್ಲ ? ಏನು ಸಮಾಚಾರ—? "

" ಅದೇ ಹೇಳಿದೆನಲ್ಲ. ಏನೋ ನಮ್ಮ ಬಳಗದಲ್ಲಿ ಮದುವೆಯೊಂದನ್ನು ಹೂಡಿಕೊಂಡಿದ್ದಾರೆ. ಹಾಗೆ ನೋಡಿದರೆ ದೂರದ ಸಂಬಂಧ. ನಾನೇನೂ ಓಡಾಡಬೇಕಿಲ್ಲ. ಆದರೂ ಮೊನ್ನೆ ಬಂದಾಗ ಹೇಳಿಬಿಟ್ಟರು, ನಾನೇ ಮುಂದಾಗಬೇಕು ಎಂದು. ಮದುವೆ ಒಂದು ನಡೆಯಬೇಕಾದರೆ ನಾಲ್ಕು ಜನ ಬೇಕು. ಆಗಲಿ ಎಂದೆ. ಅಷ್ಟಕ್ಕಾಗಿ ಈ ಓಡಾಟ, ಅವಸರ—"

" ಒಳ್ಳೆ ಕೆಲಸ. ಇದೆಲ್ಲಾ ನಡೆಯಬೇಕಾದದ್ದೇ—"

ಶಾಸ್ತ್ರಿಗಳು ಮಾತನ್ನೇನೋ ಹೇಳಿದರು. ಆದರೆ ಅವರ ಮನಸ್ಸು ಬೇರೆಡೆ-ಎಲ್ಲಿಯೊ ಹರಿಯುತ್ತಿದ್ದ ಹಾಗಿತ್ತು. "ಯೋಚನೆ ಮಾಡಿದಷ್ಟು ತೊಡಕು ಹೆಚ್ಚು. ಈಗ ಈ ಶಂಕ್ರಪ್ಪನೂ ಬಳಗದಲ್ಲಿಯ ಒಂದು ಮದುವೆಗೆ ತೊಡಗಿದ್ದಾನೆ. ಯಾವ ತೊಡಕುಗಳೂ ಇಲ್ಲ. ಶಂಕ್ರಪ್ಪನಂಥವ ಮುಂದಾಗಿ ದುಡಿಯುತ್ತಿದ್ದಾಗ ನಾಲ್ಕೆಂಟು ದಿವಸಗಳಲ್ಲಿ ಆತ ಯೋಜಿಸುತ್ತಿದ್ದ ಮದುವೆ ಸುಸೂತ್ರವಾಗಿ ನಡೆದುಬಿಡುತ್ತದೆ. ಅಷ್ಟೇ ಸುಸೂತ್ರವಾಗಿ ತಮ್ಮ ಮನೆಯಲ್ಲಿಯೂ ನಡೆಯಬಾರದೇಕೆ ?—" ತಮ್ಮ ಯೋಚನೆಗಳಲ್ಲಿಯೇ ತಾವು ತೊಡಗಿದ್ದು ಶಾಸ್ತ್ರಿಗಳ ಲಕ್ಷ್ಯಕ್ಕೆ ಬಂದಿರಬೇಕು. ಒಮ್ಮೆಲೆ ಎಚ್ಚೆತ್ತವರಂತೆ ಶಂಕ್ರಪ್ಪನನ್ನು ಕೇಳಿದರು

"ಹುಂ-ಯಾವತ್ತು ಮದುವೆ ?"

"ಅಯ್ಯೋ, ಎಲ್ಲಿಯ ಮದುವೆ ಇನ್ನೂ. ಅದಕ್ಕೇ ನಾನೀಗ ಬಂದಿದ್ದು ನಿಮ್ಮ ಹತ್ತಿರ—"

"ಅಂದರೆ ಮುಹೂರ್ತ ಗೊತ್ತು ಮಾಡಬೇಕಿತ್ತೆ ?"

"ಇಲ್ಲ. ಇನ್ನೂ ಅಷ್ಟು ದೂರವೂ ಇಲ್ಲ."

"ಸರಿ. ವಧು ವರ ಒಬ್ಬರನ್ನೊಬ್ಬರು ನೋಡಿದ್ದಾರೆಯೊ ಇಲ್ಲವೊ?"

ಎಂದು ಶಾಸ್ತ್ರಿಗಳು ನಗೆಯಾಡಿದರು. ಆದರೆ ಶಂಕ್ರಪ್ಪನ ಗಮನ ಆ ಕಡೆಗಿರಲಿಲ್ಲ.

"ಇದೊಳ್ಳೆಯ ಮಾತು ಶಾಸ್ತ್ರಿಗಳೆ. ವಧು-ವರರು ಒಬ್ಬರನ್ನೊಬ್ಬರು ಒಪ್ಪದೆ ಮುಂದೆ ಸಾಗಲಿಕ್ಕಾಗುತ್ತದೆಯೆ ಈ ಕಾಲದಲ್ಲಿ ?"

"ಒಪ್ಪಿದ್ದಾರೆ ಅನ್ನಿ ಹಾಗಾದರೆ—"

ಶಾಸ್ತ್ರಿಗಳ ಒಳಯೋಚನೆ ಗೋಪಿಯ ಕಡೆಗೆ ಹರಿಯಿತು. ಒಬ್ಬರೊಬ್ಬರನ್ನು ಒಪ್ಪಬೇಕಾದದ್ದು ಮುಖ್ಯ. ಹೌದು. ಆದರೆ ಆ ಒಪ್ಪಿಗೆಯೊಂದೇ ಮುಖ್ಯವೆ ? ಯಾಕಿರಬಾರದು ? ಉಳಿದ ಎಲ್ಲ ವಿಷಯಗಳೂ ಗೌಣ ಅಲ್ಲವೆ ? ಉಳಿದ ಎಲ್ಲ ವಿಷಯಗಳೂ ಗೌಣವೆ ? ಹೌದೆ ? ಯಾರು ಹೇಳಬೇಕು ? ಮದುವೆಯಾಗಬೇಕು ಎಂಬ ಇಚ್ಛೆಗೆ—ಆ ಇಚ್ಛಾಪೂರ್ತಿಯ ಅಪೇಕ್ಷೆಗೆ—ಉಳಿದ ವಿಷಯಗಳು ಗೌಣ ಎಂದು ಕಾಣಬಹುದು. ಆದರೆ ಮದುವೆ ಎಂಬ ಒಂದು ಬಾಹ್ಯಘಟನೆ ನಡೆಯಬೇಕಾಗಿದ್ದಾಗ ? ಈ ಪ್ರಪಂಚದಲ್ಲಿ ಒಂದು

ಘಟನೆ ನಡೆಯಬೇಕಾದರೆ ಅನಾದಿಕಾಲದಿಂದಲೂ ಚರಾಚರ ಪ್ರಪಂಚದಲ್ಲಿಯ ಪ್ರತಿಯೊಂದು ವಸ್ತುವೂ, ಪ್ರತಿಯೊಂದು ಕಣವೂ ಸಹಕಾರಿಯಾಗಿ ಕೆಲಸ ಮಾಡಬೇಕು—ಸಹಕಾರಿಯಾಗಿಯಲ್ಲದಿದ್ದರೂ ತನಗೆ ಸ್ವಭಾವಸಹಜವಾಗಿ, ತನ್ನ ಸುತ್ತಲಿನ ಶಕ್ತಿಗಳಿಗೆ ಒಳಗಾಗಿ ಆ ಶಕ್ತಿಗಳು ನಡಸಿದ ಹಾಗೆ ನಡೆದು ತನ್ನ ಪ್ರಭಾವವನ್ನು ಕಣ್ಣಿಗೆ ಕಾಣದ ರೀತಿಯಲ್ಲಿ ಬೀರಬೇಕು—

ಶಂಕ್ರಪ್ಪ ಹೇಳುತ್ತಲೇ ಇದ್ದ.

" ಒಪ್ಪಿದ್ದಾರೆ— ಅಂದರೆ— ಆದರೆ ಅದೇ ಈಗ ತೊಡಕಾಗಿದೆ."

" ಒಪ್ಪಿದಮೇಲೆ ಆಗಿಹೋಯಿತಲ್ಲ, ತೊಡಕೇನು ? "

" ತೊಡಕು ಅಂದರೆ ಹೀಗೆ. ಅದಕ್ಕೇ ನಾನೀಗ ಬಂದದ್ದು — "

ಶಂಕ್ರಪ್ಪನ ಮಾತಿನ ರೀತಿ ಶಾಸ್ತ್ರಿಗಳಿಗೆ ತಿಳಿದಿರದಿದ್ದರೆ ಅವರು ಖಂಡಿತವಾಗಿಯೂ ಹೀಗೆ ಸುತ್ತುಸುತ್ತಾಗಿ ಮಾತು ಬೆಳೆಯಿಸುವ ಆತನ ಮೇಲೆ ರೇಗಬಹುದಾಗಿತ್ತು. ಅದೇನೊ ಅವರಿಗೂ ಮಾತನಾಡುತ್ತಿರಬೇಕೆನ್ನಿಸಿತ್ತು.

" ಏನು ತೊಡಕು ಹೇಳಬಾರದೆ ? "

" ಅದೇ ಅಂದರೆ— "

" ಅಂದರೆ ಹಿರಿಯರು ಬೇಡ ಅನ್ನುತ್ತಿದ್ದಾರೆಯೆ ? "

" ಬೇಡ ಏನೆನ್ನುತ್ತಾರೆ ? ಆ ಹುಡುಗಿಯ ಹೆಸರಿಗೆ ಎರಡು ಒಳ್ಳೆ ಜಮೀನಿದೆ. ತಾಯಿಯ ಒಂದಿಷ್ಟು ದುಡ್ಡೂ ಇರಬೇಕು. ಬೇರೆ ಮಕ್ಕಳಿಲ್ಲ. ಅಂತೆಯೆ ಆ ಕನ್ಯೆ ತಂದುಕೊಳ್ಳಬೇಕು ಎಂದು ಹುಡುಗನ ತಂದೆಗೆ ಆಸೆ. "

" ಸರಿಯಾಯಿತಲ್ಲ ಮತ್ತೆ, ಹುಡುಗ ಒಪ್ಪಿದ್ದಾನೆ. ಹುಡುಗನ ತಂದೆಗೂ ಆಸೆ. ಆಮೇಲೆ ಅಭ್ಯಂತರ ಎಲ್ಲಿಂದ ಬಂತು ? "

" ಅಭ್ಯಂತರ ಅಂದರೆ— "

" ಹೊ. ನಾನು ಕೇಳಲು ಮರೆತೇಹೋಯಿತು ಶಂಕ್ರಪ್ಪನವರೆ ? ನೀವು ವರಪಕ್ಷವೊ, ಕನ್ಯಾಪಕ್ಷವೊ ? "

" ಕನ್ಯಾಪಕ್ಷ ಎಂದೇ ಈ ಎಲ್ಲಾ ಓಡಾಟ, ಇಲ್ಲದಿದ್ದರೆ ಕುಳಿತಲ್ಲಿಂದೇ ಕೆಲಸ ಮಾಡಿಸುತ್ತಿದ್ದೆ— "

" ಹುಂ— "

" ಈಗ ಆಗಬೇಕಾದ ಕೆಲಸ ಅಂದರೆ ಜಾತಕ ನೋಡಬೇಕು— "

“ ಅಂದರೆ ಇನ್ನು ಜಾತಕ ನೋಡಿಯೆ ಇಲ್ಲವೆ ? ”

“ ನೋಡಿಯಾಗಿತ್ತು. ಅದೇ ತೊಂದರೆ. ಮೊದಲು ನಮ್ಮ ಕುಂಡಲಿ ಬೇಡಿ ತಮ್ಮದನ್ನು ಕಳಿಸಿದ್ದರು. ಎಲ್ಲವೂ ಸರಿಯಾಗಿದೆ ಎಂದರು. ಆದರೆ ನಾನೊಂದು ಕಡೆಗೆ ಆ ಕುಂಡಲಿ ತೋರಿಸಿದ್ದೆ. ಏನೋ ಹೊಂದಿಕೆಯಾಗುವುದಿಲ್ಲ ಎಂದು ಕಂಡುಬಂತು. ಇದನ್ನು ತಿಳಿದು—ಹೇಗೆ ತಿಳಿದರೊ—ಮೊದಲು ಕಳಿಸಿದ್ದು ತಪ್ಪು ಎಂದು ಏನೇನೋ ಹೇಳಿ ಈಗ ಬೇರೆ ಒಂದು ಕೊಟ್ಟಿದ್ದಾರೆ. ನನಗೇನೋ ಸಂಶಯ. ‘ ಸರಿ ’ ಎಂದು ನೀವು ಹೇಳಿದರೇನೆ ಸಮಾಧಾನ ಎಂದು ಬಂದೆ— ”

“ ಎಲ್ಲಿದೆ ಕುಂಡಲಿ ? ತಂದಿದ್ದೀರಾ ? ”

“ ಹುಂ— ”

ಎಂದು ಶಂಕ್ರಪ್ಪ ಒಂದು ಕಾಗದವನ್ನು ಶಾಸ್ತ್ರಿಗಳೆದುರು ಬಿಡಿಸಿದ. ಶಾಸ್ತ್ರಿಗಳು ಕನ್ನಡಕವನ್ನಿಟ್ಟುಕೊಂಡು ಕಣ್ಣು ಹಾಯಿಸಿದರಷ್ಟೇ—ನಕ್ಕುಬಿಟ್ಟರು;

“ ಚೆನ್ನಾಯಿತು—ಒಳ್ಳೆ ಜಾತಕ ಇದು ” ಎಂದು.

“ ಯಾಕೆ ಶಾಸ್ತ್ರಿಗಳೆ ? ಏನು ? ಸರಿಯಾಗಿಲ್ಲವೆ ? ”

“ ಯಾರು ಇದನ್ನು ಹಾಕಿದ್ದು ? ”

“ ಯಾರೊ, ಯಾರುಬಲ್ಲರು. ಹುಟ್ಟಿದ ದಿನವೇ ಬರೆದಿಟ್ಟದ್ದು ಎಂದು ಹೇಳಿದರು. ”

“ ಅಂದೇ ಬರೆದಿರಬಹುದು. ಆದರೆ ಬರೆದವನಿಗೆ— ”

“ ಯಾಕೆ ? ”

“ ಏನು ಕುಂಡಲಿ ಬರೆಯುವುದು ಇದು ? ಜಾತಕವೆ ? ರಾಹು ಕೇತುಗಳು ಇದಿರು ಮನೆಯಲ್ಲಿಯಾದರೂ ಇರಬೇಡವೆ ? ಏನೋ ಕೈಗೆ ಬಂದ ಹಾಗೆ ಬರೆದ ಹಾಗಿದೆಯಲ್ಲ. ”

ಎಂದು ಶಾಸ್ತ್ರಿಗಳು ಕಾಗದವನ್ನು ಬದಿಗೆ ಸರಿಸಿಬಿಟ್ಟರು. ಶಂಕ್ರಪ್ಪನಿಗೆ ಏನು ಹೇಳಬೇಕೋ ತಿಳಿಯದಾಯಿತು. ಅವನೆಂದ—

“ ಒಳ್ಳೆ ಕೆಲಸವಾಯಿತು ಇದು. ಆದರೆ ಅವರು ಅದೇಕೆ ಹೀಗೆ ಮಾಡುತ್ತಿದ್ದಾರೆಯೊ ತಿಳಿಯದಾಯಿತು. ತುಂಬ ಮೋಸ ಎಂದು ಕಾಣುತ್ತದೆ— ”

“ ಮೋಸ ಯಾಕೆ ಶಂಕ್ರಪ್ಪ ? ಏನೊ ನಕಲು ಮಾಡುವಲ್ಲಿ ತಪ್ಪಾಗಿ

ದ್ದರೂ ಇರಬಹುದು. ಹೀಗೆ ಎಂದು ಹೇಳಿದರೆ ಸರಿಯಾದುದನ್ನು ಕೊಡಬಹುದು. ಅದೇನು ದೊಡ್ಡ ವಿಷಯ ? "

" ಇಲ್ಲ ಶಾಸ್ತ್ರಿಗಳೆ. ಆ ವರನ ಜಾತಕದಲ್ಲಿ ಏನಾದರೂ ಊನ ಇರಬೇಕು. ಇಲ್ಲದಿದ್ದರೆ ಈ ಎಲ್ಲ ಪ್ರಕರಣ ನಡೆಯುತ್ತಲೇ ಇರಲಿಲ್ಲ— "

ಶಾಸ್ತ್ರಿಗಳ ಯೋಚನೆ ಆಗಲೆ ಬೇರೆಡೆ ಓಡಿತ್ತು. ಎಲ್ಲವೂ ಒಪ್ಪಿತವಾಗಿದ್ದಾಗಲೂ ವಧೂವರರ ಕುಂಡಲಿಗಳು ಹೊಂದಿಕೆಯಾಗದಾಗಿ ಮುರಿದು ಹೋದ ಹತ್ತಾರು ಮದುವೆಯ ಉದಾಹರಣೆಗಳು ಅವರ ಕಣ್ಣೆದುರು ನಿಂತಿರಬೇಕು. ಇಂಥ ಸಂದರ್ಭಗಳಲ್ಲಿ ಜ್ಯೋತಿಷದ ಈ ತೊಡಕುಗಳು ಹುಟ್ಟಿಕೊಳ್ಳದಂತೆ ನೋಡಿಕೊಳ್ಳುವುದೇ ಸರಿಯಾದುದಲ್ಲವೆ ಎಂಬ ಅತ್ಯಾಧುನಿಕ ವಿಚಾರವೂ ಬಂದು ಹೋಯಿತು. ಆದರೆ ಆ ವಿಚಾರ ನಿಲ್ಲಲಿಲ್ಲ. ಜ್ಯೋತಿಷದಲ್ಲಿ ತುಂಬಾ ನಂಬಿಕೆಯುಳ್ಳವರು ಅವರು. ಈ ಪ್ರಪಂಚದಲ್ಲಿಯ, ಇಡೀ ವಿಶ್ವದಲ್ಲಿಯ ಪ್ರತಿಯೊಂದು ವಸ್ತುವಿನ ಸತ್ವ ಒಂದೇ ಎಂದು ನಂಬಿದ ಅವರು ಮಾನವನ ಸುಖ ದುಃಖಗಳು ಗ್ರಹಗಳ ಬಲಾಬಲಗಳನ್ನು ಅವಲಂಬಿಸದೆ ಇರಲಾರವೆಂದು ದೃಢವಾಗಿ ನಂಬಿದವರು. ಮನುಷ್ಯನ ತೊಳಲಾಟ ತಿಳಿವಿಲ್ಲದ್ದಕ್ಕಾಗಿ. ಪೂರ್ಣ ಜ್ಞಾನವಿಲ್ಲದೆ ಪೂರ್ಣ ಸುಖವಿಲ್ಲ ಎಂಬ ನಿಲುಮೆಗೆ ಎಂದಿಗೊ ಅವರು ಬಂದಿದ್ದರು. ಆದರೆ ಮಾನವಮಾತ್ರನಾದವನಿಗೆ ಎಷ್ಟನ್ನು ತಿಳಿಯುವುದು ಸಾಧ್ಯ ? ಎಲ್ಲವನ್ನೂ ತಿಳಿಯುವುದು ಅಸಾಧ್ಯವಾಗಿ ಕಾಣುತ್ತಿತ್ತು. ಅಂಥ ಕ್ಷಣದಲ್ಲಿ ಜೀವನ ವಿಫಲವಾಗಿ ಕಾಣುತ್ತಿತ್ತು. ಹುಟ್ಟಿದ ಜೀವ ಏನೋ ಒಂದು ಬಗೆಯಲ್ಲಿ ಬದುಕಿದ್ದು ಮುಂದರಿಯುತ್ತದೆ. ಕಾಣದ ಕಡಲಿನಲ್ಲಿ ಕಣ್ಮರೆಯಾಗುತ್ತದೆ ಎಂದು ವ್ಯಥೆ ಪಡುತ್ತಿದ್ದರು ಅವರ ಮನಸ್ಸಿನ ಈ ತೊಡಕು ಕೇವಲ ತಾತ್ವಿಕವಾದುದಾಗಿರಲಿಲ್ಲ. ತಮ್ಮ ಹತ್ತಿರದವರ ಬಗೆಯಲ್ಲಿ, ಸುತ್ತಲಿನವರ ಬಗೆಯಲ್ಲಿ, ಹೊಣೆಗಾರಿಕೆಯ ಮಾತುಗಳನ್ನು ಹೇಳಬೇಕಾದಾಗ, ಕೇಳಿದ ಯಾವುದೇ ಒಂದು ಪ್ರಶ್ನೆಗೆ ಉತ್ತರ ಹೇಳಬೇಕಾದಾಗ ಈ ಸಮಸ್ಯೆ ಮೂರ್ತಸ್ವರೂಪ ತಾಳಿ ನಿಲ್ಲುತ್ತಿತ್ತು. ಪೂರ್ತಿಯಾಗಿ ತಿಳಿಯದ ಹೊರತು " ಇದಮಿತ್ಥಂ " ಎಂದು ಹೇಳುವುದು ಹೇಗೆ ? ತಮ್ಮ ಹೇಳಿಕೆಯಿಂದಾಗಿ ಇನ್ನೊಂದು ಜೀವ ನೋವಿಗೊಳಗಾದರೆ ಆ ನೋವಿನ ಹೊಣೆ ತಮ್ಮದಲ್ಲವೆ ! ಎಂದು ಒಂದೊಂದು ಸಲ ದಿಙ್ಮೂಢರಾಗುತ್ತಿದ್ದರು.

"ಆಯಿತು. ನನ್ನ ಕೆಲಸವಂತೂ ಮುಗಿದ ಹಾಗಾಯಿತಲ್ಲ. ಇದು ಹೀಗೆ ಎಂದು ಹುಡಿಗೆಯ ತಂದೆಗೆ ಹೇಳಿಬಿಡುತ್ತೇನೆ. ತಮಗೆ ತಿಳಿದ ಹಾಗೆ ಮಾಡಿಕೊಳ್ಳಲಿ. ನಾನೇಕೆ ಇಲ್ಲದ ಜವಾಬುದಾರಿ ಹೊತ್ತುಕೊಳ್ಳಬೇಕು ?"

ಶಂಕ್ರಪ್ಪನ ಕೊನೆಯ ಮಾತು ಶಾಸ್ತ್ರಿಗಳಿಗೆ ಪೂರ್ತಿ ಒಪ್ಪಿಗೆಯಾಗಿರಬೇಕು. ಆ ಮಾತಿನಿಂದಲೆ ಅವರು ತಮ್ಮ ವಿಚಾರತಂದ್ರಿಯಿಂದ ಎಚ್ಚತ್ತಿದ್ದರು.

"ಮತ್ತೇನು ಶಾಸ್ತ್ರಿಗಳೆ, ನಿಮ್ಮಲ್ಲಿಯೂ ಮದುವೆಯಂತಲ್ಲ ?"

"ನಮ್ಮಲ್ಲಿ ಮದುವೆಯೆ ? ಒಳ್ಳೇ ಚೇಷ್ಟೆಯಾಯಿತು ಇದು ಶಂಕ್ರಪ್ಪ— "

"ಏನೋ ಕೇಳಿದೆ ಊರಲ್ಲಿ ಮಾತು. ಅದಕ್ಕೆಂದೆ—"

"ಯಾರು ಹೇಳಿದರು ?"

"ಯಾರೇನು ? ಊರಿಗೆ ಊರೇ ಮಾತನಾಡುತ್ತಿದೆ. ನೀವು ಹೇಳದಿದ್ದರೆ ನಮಗೆ ಗೊತ್ತಾಗದಿರುತ್ತದೆಯೆ ?" ಎಂದು ಹುಸಿನಗೆಯೊಂದನ್ನು ಬೀರಿದ.

"ಗೊತ್ತಾಗದೆ ನಡೆಯುವ ವಿಷಯವೆ ಮದುವೆ ಎಂದರೆ ? ಮಾತುಕತೆ ಎಷ್ಟೇ ಗೌಪ್ಯವಾಗಿ ನಡೆದರೂ ಮದುವೆಯಂತೂ ಬಹಿರಂಗವಾಗಿಯೇ ನಡೆಯಬೇಕಲ್ಲವೆ ?"

"ಅಂತೂ ಮಾತುಕತೆಯಾದರೂ— "

ಎಂದು ಶಂಕ್ರಪ್ಪ ಸಿಕ್ಕ ಆ ಒಂದು ಮಾತಿನ ಎಳೆಯನ್ನೆ ಎಳೆದುಕೊಂಡು ಶಾಸ್ತ್ರಿಗಳು ಮುಂದರಿಯುವಂತೆ ಮಾಡಿದ.

"ಏನೋ ಒಂದು ಮಾತು ಬಂದಿತ್ತು ರಾಘವೇಂದ್ರರಾಯರಿಂದ. ಅಂಥ ದೊಡ್ಡ ಸಂಬಂಧ ನಮ್ಮಂಥವರಿಗೆ ಯಾಕೆ ಎಂದು ನಾನೇ 'ಇದೆಲ್ಲ ದೀರ್ಘವಾಗಿ ಯೋಚಿಸಬೇಕಾದ ವಿಷಯ. ನೋಡುವಾ' ಎಂದೆ. ಅಷ್ಟೇ. ಅಷ್ಟರಿಂದಾಗಿ ಊರು ತುಂಬ ಸುದ್ದಿ."

"ಇಷ್ಟೇನೆಯೆ ?"

"ಮತ್ತಿನ್ನೇನು ?"

"ಅಲ್ಲ ಅಂದರೆ—ನಾನು ಕೇಳಿದ್ದು—ಎಷ್ಟು ನಿಜವೊ— "

" ಯಾಕೆ ಅನುಮಾನ ಶಂಕ್ರಪ್ಪ? ಹೇಳಬಾರದೇ? ನಿಮ್ಮಂಥವರು ಹೇಳ ದಿದ್ದರೆ ನಮಗಾದರೂ ಹೇಗೆ ಗೊತ್ತಾಗಬೇಕು ಸಮಾಚಾರ ? ಏನಂತೆ ? "

" ಅಲ್ಲ—ಅಂದರೆ—ಗೋಪಿ, ಈವರೆಗೆ ಮದುವೆಯೆ ಬೇಡ ಅನ್ನು ತ್ತಿದ್ದವ ಹೀಗೆ ಹೇಗೆ ಒಮ್ಮೆಲೆ—ಅಂದರೆ— "

" ಅಂದರೆ ನಾವೇ ಏನಾದರೂ ಒಳಗಿನಿಂದಲೇ ಸಂಚು ಹೂಡಿದ್ದೇವೆ ಎಂದೆ ?— "

" ಅದೆಲ್ಲಾ ಎಂಥ ಮಾತು ಶಾಸ್ತ್ರಿಗಳೆ ? ನೂರು ಬಾಯಿ ನೂರು ತರಹ ಮಾತನಾಡುತ್ತವೆ. ಅದಕ್ಕೆಲ್ಲಾ ನಾವು ಗಮನ ಕೊಟ್ಟರೆ ಆಗುತ್ತದೆಯೆ ? ಮದುವೆ ಅಂದರೆ ಒಂದು ಯೋಗಾಯೋಗ. ತಾನಾಗಿಯೆ ಕೂಡಿ ಬರಬೇಕು· ಹತ್ತು ಬಾರಿ ಹುಡುಗನನ್ನು ಮನೆಗೆ ಕರೆದೊಯ್ದು ಉಪಚಾರ ಮಾಡಿದರೆ ಆಗಬೇಕಾದ ವಿಷಯವೆ ಅದು ? "

" ಹಾಗೆಲ್ಲಾ ಆಡಿಕೊಳ್ಳುತ್ತಾರೆಯೆ ? "

"ಅಯ್ಯೋ, ಅದನ್ನೆಲ್ಲಾ ಕಟ್ಟಿಕೊಂಡು ಏನು ಮಾಡುತ್ತೀರಿ ಶಾಸ್ತ್ರಿಗಳೆ? ಏನೋ ಮಾತಿಗೆ ಮಾತು ಬಂತು ಎಂದು ಹೇಳಿದೆನಷ್ಟೆ. "

" ಅದು ಹೇಗಾದೀತು ಶಂಕ್ರಪ್ಪ ? ನಮ್ಮ ಕೈ ನಿಲುಕಿದಷ್ಟೇ ಚಾಚ ಬೇಕು. ಇಲ್ಲವಾದರೆ ಇಂಥ ಮಾತು ಆಡಿಸಿಕೊಳ್ಳಬೇಕು. ಅದಕ್ಕೇ ನಾನು ಬೇಡ ಎಂದು ಹೇಳಬೇಕೆಂದಿದ್ದೇನೆ. "

" ಉಂಟೇ ಎಲ್ಲಾದರೂ ? ಮನೆತನಕ ನಡೆದುಬಂದ ಇಂಥ ಸುಸಂಧಿ ಯನ್ನು .ಬಿಡಲಿಕ್ಕಾಗುತ್ತದೆಯೆ ? ಸರ್ವಥಾ ಆಗದು. ಜನ ಆಡಿಕೊಳ್ಳು ತ್ತಲೇ ಇರುತ್ತಾರೆ. ಇಂದು ಒಂದು ತರಹ ಆಡಿದವರು ನಾಳೆ ಇನ್ನೊಂದು ತರಹ ಆಡಿಯಾರು. ನನಗೆ ಕೇಳಿದರೆ— "

ಯೋಚನೆ ಮಾಡಿ ಮಾಡಿ ಶಾಸ್ತ್ರಿಗಳ ಮನಸ್ಸು ಬಧಿರವಾಗುವದ ರಲ್ಲಿತ್ತು. ಅಂತೆಯೇ ಆ ಕ್ಷಣಕ್ಕೆ ಅವರಿಗೆ ಇನ್ನೊಂದು ಮನಸ್ಸಿನ ಸಹಕಾರ ಬೇಕಾಗಿತ್ತೆಂದು ಕಾಣುತ್ತದೆ. ಶಂಕ್ರಪ್ಪನ ಅಭಿಪ್ರಾಯವನ್ನು ಅಪೇಕ್ಷಿಸಿ ಕೇಳಿದರು

" ಹಾಗಿದ್ದರೆ ನಾನು ಒಪ್ಪಬೇಕು ಅನ್ನುತ್ತೀರಾ ? "

" ಖಂಡಿತವಾಗಿ."

" ಹೌದೆ ? "

" ಹುಂ–ಆದರೆ–ಒಂದು ವಿಷಯ ನೀವು–ಆಗಲೆ ನೋಡಿರಬೇಕು."

" ಏನು ? "

" ಜಾತಕ ಹೊಂದಿಸಿ ನೋಡಿದ್ದೀರಾ ? "

ಶಾಸ್ತ್ರಿಗಳು ನೇರವಾಗಿ ಉತ್ತರಹೇಳಲಿಲ್ಲ. ಶಂಕ್ರಪ್ಪ ಹೇಳಬೇಕೆಂದುದನ್ನು ಅವರಿಗೆ ಮೊದಲು ತಿಳಿಯಬೇಕಾಗಿದ್ದಿತು. ಈ ವಿಷಯದಲ್ಲಿ ಆತನಿಗೆ ಏನನ್ನೋ ಹೇಳಬೇಕಾಗಿತ್ತೆಂಬುದು ಆತನ ಮಾತಿನಿಂದ ಸ್ಪಷ್ಟವಾಗಿತ್ತು.

" ಯಾಕೆ ? " ಎಂದರು.

" ಅಂದರೆ–ಅದು ಮುಖ್ಯವಲ್ಲವೆ ? ನೀವು ಏನು ಹೇಳಿದರೂ ನನಗಂತೂ ಅದು ಮುಖ್ಯವಾಗಿ ಕಾಣುತ್ತದೆ. ಅಲ್ಲದೆ—"

" ಮತ್ತೇನು ಶಂಕ್ರಪ್ಪನವರೆ ? "

" ಏನೊ, ನಿಮ್ಮ ಮುಂದೆ ಹೇಳಬೇಕೊ ಬಾರದೊ ? ಆದರೂ ನಿಮ್ಮಂಥವರಿಂದ ನಮಗೆ ತಿಳಿದದ್ದನ್ನು ಮುಚ್ಚಿಡಬಾರದು; ನೋಡಿ ಅದರಲ್ಲಿಯೂ ಮದುವೆಯಂಥ ಮಹತ್ವದ ಸಂದರ್ಭದಲ್ಲಿ, ಎನ್ನುವುದಕ್ಕೆ—"

" ಏನು ಸಮಾಚಾರ—ಹೇಳಬಾರದೆ ? "

ಶಾಸ್ತ್ರಿಗಳು ನಿಜವಾಗಿಯೂ ಆತುರರಾಗಿದ್ದರು.

" ಅಂದರೆ–ನಮ್ಮ ಶಾನುಭೋಗ ಶೀನಪ್ಪನ ಮೊಮ್ಮಗಳು–ವತ್ಸಲೆಯನ್ನೆ ಮೊದಲಿನಿಂದಲೂ ಗೋಪಿಗಾಗಿ—"

" ಕೇಳಿದ್ದರೆ ? " ಗೊತ್ತಿಲ್ಲದವರ ಹಾಗೆ ಕೇಳಿದರು ಶಾಸ್ತ್ರಿಗಳು.

" ಕೇಳುವುದೇನು ? ಮೊದಲಿನಿಂದಲೂ ನಿಶ್ಚಿತವಾಗಿಯೇ ಇತ್ತು."

" ಈಗೇನಾಯಿತು ಮತ್ತೆ ? ಗೋಪಿಯೇ ಒಲ್ಲೆ ಎಂದು ಹೇಳಿದನಂತೆ."

" ಅದೇನೊ ಒಂದು ಕಡೆಯ ಮಾತು. ಆದರೆ ಶೀನಪ್ಪನ ಸಂಬಂಧಿಕರು ನನಗೇನೋ ಬೇರೆಯಾಗಿಯೇ ಹೇಳಿದರು."

" ಏನಂತೆ ? "

" ಹುಡುಗನ ಜಾತಕ ಸರಿಯಾಗಿಲ್ಲ. ನಿಮ್ಮ ಮೊಮ್ಮಗಳನ್ನು ಕೊಡುವ ಯೋಚನೆಯನ್ನೇ ಮಾಡಬೇಡಿ ಎಂದು ಶೀನಪ್ಪನಿಗೆ ಹೇಳಿದರಂತೆ. ಏನೋ–ನಾನು ಕೇಳಿದ ಸಮಾಚಾರ. ಎಷ್ಟು ನಿಜವೊ ಎಷ್ಟು ಸುಳ್ಳೊ—"

ಶಾಸ್ತ್ರಿಗಳು ಸುಮ್ಮನಾಗಿಬಿಟ್ಟರು. ಅವರು ಸುಮ್ಮನಾದುದನ್ನು ನೋಡಿ ಶಂಕ್ರಪ್ಪ ಮುಂದುವರಿದ.

“ ಹಿಂದೆಯೂ ಹೀಗೆಯೆ ಒಂದೆರಡು ಸಲ ಕನ್ಯೆ ಬಂದಾಗಲೂ ಇದಕ್ಕೇ ಮಾತು ಮುರಿದು ಹೋಗಿತ್ತಂತೆ. ಜನ ಹೇಳುವ ಮಾತು. ಎಷ್ಟು ನಿಜವೊ, ಎಷ್ಟು ಸುಳ್ಳೊ? ಅದೆಲ್ಲ ಹೇಗಿದ್ದರೂ, ಈಗ ಪಾಪ ನಮ್ಮ ಶೀನಪ್ಪನಿಗೆ ಮಾತ್ರ ಸಂಕಟ ಬಂದ ಹಾಗಿದೆ. ಆ ಹುಡುಗಿಯಂತೂ ಆದರೆ ಆತನನ್ನೇ ಮದುವೆ ಯಾಗುವುದು, ಇಲ್ಲವಾದರೆ ಮದುವೆಯೇ ಬೇಡ ಎಂದು ಹಟ ಹಿಡಿದಿದ್ದಾ ಳಂತೆ....”

ಶಂಕ್ರಪ್ಪ ಮಾತನಾಡುತ್ತಲೇ ಇದ್ದ. ಶಾಸ್ತ್ರಿಗಳಿಗೆ ಆಗಲೆ ಬೇಸರವೆನಿಸ ತೊಡಗಿತ್ತು. ಮಾತಿಗೊಂದು ಸಲ ಸುಮ್ಮನೆ ಕೇಳುತ್ತಿದ್ದವರಂತೆ ‘ಹುಂ’ಗುಡು ತ್ತಿದ್ದರು ಮಾತ್ರ. ಶಂಕ್ರಪ್ಪ ತನ್ನ ಆಟವನ್ನು ಸಾಧಿಸಿದ್ದ. ಶಾಸ್ತ್ರಿಗಳ ಮೌನವೇ ಅದಕ್ಕೆ ಸಾಕ್ಷಿಯಾಗಿತ್ತು. ಊರುಕಾರುಭಾರಗಳನ್ನೆಲ್ಲ ಶಂಕ್ರಪ್ಪ ರಸವತ್ತಾಗಿ ಬೇಕಾದುದನ್ನು ಹಿಗ್ಗಿಸಿ, ಬೇಡವಾದುದನ್ನು ಕುಗ್ಗಿಸಿ ವಿವರಿಸುತ್ತಿದ್ದ. ಮಾತು ಶಾಸ್ತ್ರಿಗಳ ಕಿವಿಯ ಮೇಲೆ ಬೀಳುತ್ತಿದ್ದವು. ಮನಸ್ಸು ಗ್ರಹಿಸುತ್ತಿದ್ದಿಲ್ಲ. ಆಪ್ತ, ಇಷ್ಟ, ಬಂಧು ಬಳಗ ಎಂದು ಮನುಷ್ಯ ಒಬ್ಬರೊಬ್ಬರ ಹತ್ತಿರ ಬಂದು ಭಾವ ನೆಯ ಬಂಧಗಳನ್ನು ನಿರ್ಮಿಸಿಕೊಂಡು ಸುಮ್ಮನೆ ಒದ್ದಾಡುತ್ತಾನೆ. ಹಾಗೆ ನೋಡಿದರೆ ಯಾರಿಗೆ ಯಾರು ಸಂಬಂಧ ? ಒಂದು ಬೀಜದಿಂದ ಗಿಡ ಹುಟ್ಟಿ ಮತ್ತೆ ಗಿಡವಾಗುವುದರಿಂದ ಸಸ್ಯಜೀವ ಅನಂತಪರಂಪರೆಯಾಗಿ ಸೃಷ್ಟಿಯಲ್ಲಿ ನಿಲ್ಲುವುದಿಲ್ಲವೆ ? ಬೆಳೆದ ಗಿಡ ತನ್ನ ಹುಟ್ಟಿಗೆ ಕಾರಣವಾದ ಬೀಜವನ್ನು ನೆನೆ ಯುತ್ತದೆಯೆ ? ಗಿಡ ಹುಟ್ಟುವುದಕ್ಕೆ ಬೀಜ ಒಂದು ಕಾರಣ. ಮನುಷ್ಯ ಹುಟ್ಟುವುದೂ, ಬೆಳೆದು ಅಳಿಯುವುದೂ ಅದೇ ಕ್ರಮವಾಗಿದ್ದರೆ ಸೃಷ್ಟಿ ನಡ ಸಿದ ಹಾಗೆ ನಡೆಯಬೇಕು. ಮನುಷ್ಯ ತಾನು ಬುದ್ಧಿವಂತನೆಂಬ ಹೆಮ್ಮೆ ಯಾಕೆ ಪಡಬೇಕು ? ಹೆಮ್ಮೆ ಪಡಬೇಕಾದ ಹಿರಿಮೆ ಎಲ್ಲಿದೆ ? ಎಲ್ಲಿಗೂ ತಲುಪಿಸದೆ, ತೊಳಲಾಟಕ್ಕೆ ಮಾತ್ರ ಕಾರಣವಾಗಬಲ್ಲ ಬುದ್ಧಿ ಮನುಷ್ಯನ ಕೀರ್ತಿಪತಾಕೆ ಯಲ್ಲ. ಕೊಡಮಾಡಿ ಕಸಿದುಕೊಳ್ಳುವ ನಿಸರ್ಗದ ಕ್ರೂರ ಶಾಪ. ಭಾವನೆಯ ಬಂಧನವನ್ನು ಬುದ್ಧಿ ಬಿಗಿಯಾಗಿಸಿ ಬೇಡಿಯಾಗುವಂತೆ ಮಾಡುತ್ತದೆ. ಶಾಸ್ತ್ರಿ ಗಳ ಮನಸ್ಸು ಆಕ್ಷಣಕ್ಕೆ ಯಾವ ಬಿಡುಗಡೆಯನ್ನು ಬೇಡುತ್ತಿತ್ತು ? ಜೀವ

ದೇಹದ ಆಶ್ರಯ ಪಡೆದಿರುವಾಗ ಆ ಆಶ್ರಯಕ್ಕೆ ಅನಿವಾರ್ಯವಾದ ಸಾವಿರ ಬಂಧನಗಳಿಂದ ಮುಕ್ತಿಯನ್ನು ಬಯಸುತ್ತಿದ್ದಿತೆ ? ಯಾರು ಬಲ್ಲರು ? ಶಾಸ್ತ್ರಗಳಿಗೆ ಜೀವ ಜಡವಾಗಿ ತೋರಿತು. ದೇಹ ಅದರ ಭಾರವನ್ನು ಹೊರಲಾರದಾಗಿ ತೋರಿತು.

# ೯

ಮಳೆಗಾಲದ ಕಾರ್ಮುಗಿಲುಗಳು ನೂಕುನುಗ್ಗಲಾಗಿ ನಾ ಮುಂದೆ ತಾ ಮುಂದೆ, ತಮ್ಮ ಮುಂದೆ ಇನ್ನಾರು ಎಂಬಂತೆ ಏರಿಬರುತ್ತಿದ್ದವು. ಅವುಗಳನ್ನು ನೋಡುತ್ತಿದ್ದ ಹಾಗೆ ಗೋಪಿ ಎಲ್ಲವನ್ನೂ ಮರೆಯುತ್ತಿದ್ದ. ಶ್ರಾವಣದಲ್ಲಿ ನಡು ಹರಯದ ಮುತ್ತೈದೆಯರು ದೇವಸ್ಥಾನಗಳಲ್ಲಿ ನೂಕುನುಗ್ಗಲು ಮಾಡುವುದಿಲ್ಲವೆ? ಮನೆತನಗಳ ದೇವತೆಯರೆ ಅಲ್ಲವೆ ಅವರು? ಅವರಿಂದ ಮನೆ ಸೌಭಾಗ್ಯಯುತವಾಗಿ ನಿಲ್ಲುವಂತೆಯೆ ಅಲ್ಲವೆ ಈ ಕಾರ್ಮುಗಿಲುಗಳ ವೈಭವ-ಸಾಮರ್ಥ್ಯಗಳಿಂದಲೇ ಸೃಷ್ಟಿಯ ಮನೆ ಸಿಂಗರವಾಗಬೇಕಾದದ್ದು? ಹಾಗೆ ನೂರು ವಿಧದಲ್ಲಿ ಸಿಂಗರಗೊಂಡು ನಿಂತ ಸೃಷ್ಟಿವಿಲಾಸವನ್ನು ಗೋಪಿ ಕಣ್ಣೆದುರೇ ನೋಡುತ್ತಿದ್ದ. ಮೋಡಗಳಲ್ಲಿಯೂ ಎಷ್ಟು ಬಗೆ? ಎಂಥ ವೈವಿಧ್ಯ? ಕಡುಬೇಸಗೆಯಲ್ಲಿ ನೆಲ ನಿಡುಸುಯ್ಯುತ್ತಿದ್ದಾಗ ಅಟ್ಟಹಾಸದಿಂದ ನೆಗೆನೆಗೆದು ಬರುವ ನಟನಂತೆ ಮೇಲೇರಿಬರುವ ಗರಿಗರಿಯಾದ ಭವ್ಯಮೋಡಗಳು ಈ ಮಳೆಗಾಲದವುಗಳಿಂದ ಎಷ್ಟು ಬೇರೆ? ವಸಂತದ ಕೊನೆಯಲ್ಲಿ ಕಾಣಿಸಿಕೊಳ್ಳುವ, ಸಿಡಿಲು ಗುಡುಗುಗಳಿಂದ ಆರ್ಭಟಿಸುವ ಆ ಮುಗಿಲುಗಳು ಯೌವನದ ಪ್ರತೀಕವಾಗಿ ಕಂಡವು ಗೋಪಿಗೆ. ಆ ಮೋಡ, ಆ ಮಿಂಚುಗಳ ವಿದ್ಯುದಾಲಿಂಗನದ ಆನಂದ ಪರಮಾವಧಿ ಎಂಥದು? ಶಾಂತಳನ್ನು ಕುರಿತು ಹೃದಯದಲ್ಲಿ ಪುಟಿದೇಳುತ್ತಿದ್ದ ಭಾವನೆಯ ಸೆಲೆ ಸುತ್ತಲೆಲ್ಲವೂ ನೆಲದಿಂದ-ಅದರ ಒಡಲನ್ನು ಸೀಳಿ—ಮೇಲಕ್ಕೇಳುತ್ತಿದ್ದ ಲಕ್ಷಾಂತರ ಸಸ್ಯಜೀವಿಗಳಂತೆ, ಹೊಸ ಜೀವನದ ಆಸೆಗೆ ಸಂಕೇತವಾಗಿ ನಿಂತಿತು—

ಮಳೆ ಪ್ರಾರಂಭವಾಗಿ ಎರಡು ಮೂರು ವಾರವಾದರೂ ತಡೆಯಿಲ್ಲದೆ ಸುರಿಯುತ್ತಿತ್ತು. ಬಿಸಿಲನ್ನು ಕಾಣದ ಹೊಸ ಸಸಿಗಳು ಬಿಳಿಚಾಗಿ ನಿಂತಿದ್ದವು. ಬೆಳೆದು ನಿಂತ ಗಿಡಗಳು ಹಸನ್ಮುಖಿಯಾಗಿ ನಿಂತಿದ್ದುವು. ಹೆಮ್ಮರಗಳು ಮೈ ತೊಳೆದು ಕಣ್ಣುಕಟ್ಟುವ ಹಸಿರು ಬಟ್ಟೆ ಹೊತ್ತು "ಇದಾವ ಮಳೆ, ಇದೆಂಥ ಗಾಳಿ?" ಎಂಬ ಆತ್ಮವಿಶ್ವಾಸದಿಂದ ತೂರಿಬರುವ ಮಳೆ ಮೋಡಗಳನ್ನು

ಸ್ವಾಗತಿಸಲೆಂದು ನಿಂತ ಹಾಗಿದ್ದವು. ಹುಲ್ಲುಗಾವಲುಗಳಲ್ಲಿ ಹೊಸ ಜೀವ ತುಳುಕಾಡುತ್ತಿದ್ದಿತು. ಮಳೆಯಿಂದಾಗಿ ಈ ಮೂರು ವಾರವೂ ಗೋಪಿ ರಂಗ ಧೂಳಿಗೆ ಬಂದಿರಲಿಲ್ಲ. ಈ ಮೂರು ವಾರಗಳಲ್ಲಿ ಅಲ್ಲಿ ತಲೆದೋರಿದ ಬದಲಾವಣೆಯನ್ನು ನೋಡಿ ಅಚ್ಚರಿ ಪಡುತ್ತ ನಿಂತ-- ಮತ್ತೆ ಮಳೆ ಸುರಿಯಬಹುದು ಎಂಬುದನ್ನೂ ಗಮನಿಸದೆ.

ಹತ್ತು ನಿಮಿಷಗಳಲ್ಲಿ ಮಳೆ ಹನಿಯೊಡೆಯಿತು. ಆದರೆ ಬಂದ ಮೋಡವನ್ನು ಗಾಳಿ ತಳ್ಳಿಕೊಂಡು ಹೋಯಿತು. ಗಾಳಿಯಗುಂಟ ಮಳೆ ಹನಿಗಳ ಸಾಲುಗಳು ಹಾರಿಹಾರಿ ಓಡುತ್ತಿರುವುದನ್ನು ನೋಡುತ್ತಲೇ ನಿಂತ. ಎರಡು ಮೋಡಗಳ ಸಂದಿನೊಳಗಿಂದ ಒಂದೆರಡು ನಿಮಿಷ ಸೂರ್ಯನ ನಯವಾದ ಬಿಸಿಲು ಸೂಸಿ ಬಂದಿತು. ಆ ನೀರು, ನೆಲ, ಗಿಡ, ಮರ, ಕಂಟಿ, ಬಳ್ಳಿಗಳೆಲ್ಲವೂ ಸಂತಸದಿಂದ ಕುಣಿದೆದ್ದ ಹಾಗೆ ಕಂಡವು. ಆದರೆ ಮತ್ತೆ ಮೋಡ ಕವಿಯಿತು. ಕೆರೆಯ ಆಚೆಯ ದಂಡೆಯ ಕಡೆಗೆ ತಿರುಗಿದ. ಮನೆಯ ಹತ್ತಿರಕ್ಕೆ ಹೋಗುವಷ್ಟರಲ್ಲಿ ಮಳೆ ಮತ್ತೆ ಪ್ರಾರಂಭವಾಗುವ ಹಾಗೆ ಕಂಡಿತು. ಸುತ್ತಲೂ ಕಣ್ಣು ಹೊರಳಿಸಿದ. ಹಿಂಬದಿಯಲ್ಲಿ ಮಾರ್ಕಂಡೇಯ ಗಂಭೀರವಾಗಿ ಹರಿಯುತ್ತಿತ್ತು. ಕೆಂಪಡರಿದ ಮಳೆ ನೀರು ಅಬ್ಬರದಿಂದ, ಸುಳಿಸುಳಿಯಾಗಿ, ತೆರೆತೆರೆಯಾಗಿ ಮುನ್ನುಗ್ಗುತ್ತಿತ್ತು. ಕಟ್ಟಿಗೆಯ ತುಣುಕೊಂದು ಎಲ್ಲಿಂದಲೋ ತೇಲಿಬಂದು ಎಲ್ಲಿಗೊ ಸಾಗಿತ್ತು. ನೀರ ಸುಳಿಯ ತಿರುವಿಗೆ ಸಿಕ್ಕಾಗ ಒಂದೆರಡು ಕ್ಷಣ ಕಣ್ಣಿಗೆ ಕಾಣಿಸದಾಗಿ ಮತ್ತೆ ಮೇಲಕ್ಕೇಳುತ್ತಿತ್ತು— ಬಯಕೆಗಳ ಮಡುವಿನಲ್ಲಿ ಸಿಕ್ಕ ಮನಸ್ಸಿನಂತೆ ! ಮನೆ ನೀರಿನಿಂದ ತೋಯ್ದು ಭಾರವಾದ ಚಪ್ಪರವನ್ನು ಹೊತ್ತು ನಿಂತಿತ್ತು. ಎದುರಿನ ಅಂಗಳದಲ್ಲಿ ಬಂದ. ಮಲ್ಲಿಗೆಯ ಕಂಟಿಗಳು ತಮ್ಮ ಹೂವುಗಳನ್ನು, ಅವುಗಳ ಸೌರಭವನ್ನು ಎಲ್ಲಿಯೊ ಬಚ್ಚಿಟ್ಟು "ಅವು ಎಲ್ಲಿವೆ, ಹೇಳಬಲ್ಲೆಯಾ ?" ಎಂದು ಕೇಳುತ್ತಿರುವಂತೆ, "ನಿನಗೇನು ಗೊತ್ತು ನಮ್ಮ ಗೌಪ್ಯ ?" ಎಂದು ಹೇಳಿ ನಗುತ್ತಿರುವಂತೆ ನಿಂತಿದ್ದವು. ಎದುರಿನಲ್ಲಿ ಕೆರೆಯ ನೀರು ವಿಸ್ತೀರ್ಣವಾಗಿ ಹಬ್ಬಿತ್ತು. ಕಲಕಿ ಹೋದ ನೀರು ಮಾಸಿದ ಕನ್ನಡಿಯಾಗಿತ್ತು. ನಡುವೆ ನಿಂತ ಕಮಲದ ಬಳ್ಳಿಗಳು ಬೀಸುಗೈಯಿಂದ ಈಜಿ ಮುಂದೆ ಬರುತ್ತಿದ್ದ ಹಾಗೆ, ತಮ್ಮ ತೋಳುಗಳಿಂದ ನೀರ ನೆಲೆಯನ್ನೊ, ಕೊಳದ ವಿಸ್ತೀರ್ಣತೆಯನ್ನೊ ಅಳತೆಮಾಡುತ್ತಿದ್ದಂತಿತ್ತು. ಎರಡು

ಮೂರು ವಾರಗಳಲ್ಲಿ ಎಷ್ಟು ಚೆಂದವಾಗಿ, ಎಷ್ಟು ವಿಶಾಲವಾಗಿ ಬೆಳೆದಿದೆ ಬಳ್ಳಿ ಎಂದುಕೊಂಡ ಗೋಪಿ. ಬಿಳಿದಾವರೆಗಳು ಬೆಡಗನ್ನು ಸೂಸುತ್ತ ಗಾಳಿಯಲ್ಲಿ ಓಲಾಡುತ್ತಿದ್ದವು—

ಪಶ್ಚಿಮದ ಕ್ಷಿತಿಜ ಮತ್ತೆ ಹುಬ್ಬುಗಂಟಿಕ್ಕಿತು. ದೂರದಬೆಟ್ಟ ಕಪ್ಪಿಟ್ಟಿತು. ನಡುವಿನ ಗಿಡಮರಗಳೆಲ್ಲವೂ ಒಂದು ಭವ್ಯವಾದ ಮಂಜಿನ ತುರಾಯಿಯನ್ನು ಹೊತ್ತು ನಿಂತ ಹಾಗೆ ಕಾಣುತ್ತಿತ್ತು. ಒಂದು ಗಾಳಿಯ ಹೊಡೆತಕ್ಕೆ ಮಳೆಯ ಸೆಳಕು ಗೋಪಿ ನಿಂತೆಡೆಗೆ ಧಾವಿಸಿ ಬರುತ್ತಿದ್ದ ಹಾಗಿತ್ತು. ಮನೆಯೆದುರಿನ ತೊಟ್ಟಿಯಲ್ಲಿ ಹೋಗಿನಿಂತ. ಮಳೆಗಾರಂಭವಾಯಿತು. ಅಡ್ಡಾಡಿ, ನಿಂತು ನಿಂತು, ಕಾಲು ನೋಯುತ್ತಿದ್ದವು. ಕೆರೆಯ ನೀರ ಮೇಲೆ ಬೀಳುತ್ತಿದ್ದ ಮಳೆ ಹನಿಗಳು ಕುಣಿಯುತ್ತಿದ್ದುದನ್ನು ನೋಡುತ್ತ ಕುಳಿತ. ಮನೆಗೆ ಹಿಂದಿರುಗುವ ಯೋಚನೆ ಆತನನ್ನು ತಟ್ಟುತ್ತಲೇ ಇದ್ದ ಹಾಗಿರಲಿಲ್ಲ.

ಒಮ್ಮೆ ಆ ಯೋಚನೆ ಬಂದಿತು. ಆದರೆ ಹೋಗಿಯಾದರೂ ಏನು ಎಂದುಕೊಂಡ. ಆಕಡೆಯ ಉತ್ಸಾಹವೆಲ್ಲವೂ ಕ್ರಮವಾಗಿ ಬಯಲಾಗುತ್ತಿದ್ದಿತು. ಎಲ್ಲಿದ್ದರೂ ಆಯಿತು, ಏನು ಮಾಡಿದರೂ ಆಯಿತು, ಊಟಮಾಡಿದರೂ ಅಷ್ಟೇ ಮಾಡದಿದ್ದರೂ ಅಷ್ಟೇ ಎಂಬ ಮನಃಸ್ಥಿತಿಯಲ್ಲಿದ್ದ. ಒಂದೊಂದು ಸಲ ಇದೆಲ್ಲ ಹೀಗೇಕಾಗಬೇಕು ಎಂದು ಯೋಚಿಸುತ್ತಿದ್ದ. ಈಗಲೂ ಅಷ್ಟೇ. ಮನಸ್ಸು ಸುತ್ತಲಿನ ದೃಶ್ಯದಿಂದ ದೂರವಾಯಿತು. ಕಣ್ಣುಗಳು ಕೆರೆಯ ನೀರನ್ನು, ಅದರ ಮಧ್ಯದಲ್ಲಿ ಓಲಾಡುತ್ತಿದ್ದ ಬಿಳಿದಾವರೆಗಳನ್ನು ನೋಡುತ್ತಿದ್ದವು. ಆದರೆ ಅಂತಶ್ಚಿತ್ತ ಬೇರೆಡೆಯಲ್ಲಿತ್ತು. ಶಾಸ್ತ್ರಿಗಳು ಹೀಗೇಕೆ ಮಾಡಿದರು ? ತನ್ನೊಡನೆ ಮಾತನಾಡಿ ಎರಡು ತಿಂಗಳಾಗುತ್ತ ಬಂದಿತ್ತು. ಅವರ ಮನಸ್ಸಿನ ತೊಡಕು ಗೋಪಿಗೆ ಅರ್ಥವಾಗಿದ್ದರೂ ಅವರ ಕೊನೆಯ ನಿರ್ಣಯ ಅರ್ಥವಾಗಿರಲಿಲ್ಲ. ಕೊನೆಯ ಮಾತು ಎಂದು ಅವರು ಹೇಳಿರದಿದ್ದರೂ ತನ್ನ ತಾಯಿತಂದೆಗಳು ಹಾಗೆಯೆ ತಿಳಿದಿದ್ದರು. ನಡೆಯಲಿದ್ದ ಮದುವೆಯ ಮಾತುಕತೆ ಯಾವುದೊ ಕಾರಣಕ್ಕಾಗಿ ಮುರಿದು ಹೋಯಿತೆಂದು ಆಗಲೆ ಊರಲ್ಲಿ ಜನ ಮಾತಾಡುತ್ತಿದ್ದರು. ಶಂಕ್ರಪ್ಪ ಅಂತರಂಗದಲ್ಲಿಯೇ ಸಂತೋಷಪಟ್ಟು ಇದನ್ನು ಸಾಧಿಸಿದವ ತಾನು ಎಂದು ಹೆಮ್ಮೆಯನ್ನು ಪಟ್ಟಿದ್ದ. ಶಾಸ್ತ್ರಿಗಳ ಹೆಂಡತಿ, ಕಮಲಮ್ಮ, ರಾಘವೇಂದ್ರರಾಯರು ಎಲ್ಲರೂ ನಿರಾಶೆಪಟ್ಟಿದ್ದರು.

" ಈ ವಿಷಯದಲ್ಲಿ ನನ್ನ ಮನಸ್ಸು ತುಂಬಾ ಆತಂಕಪಡುತ್ತಿದೆ, ರಾಯರೆ. ಮನಸ್ಸು ನೆಮ್ಮದಿಯಾಗುವತನಕ ಯಾವ ಮಾತನ್ನೂ ಹೇಳಲಾರೆ. ಸ್ವಾಮಿಗಳ ಹತ್ತರ ಹೋಗಿ ಬರುತ್ತೇನೆ. ಬಂದನಂತರ ಮತ್ತೆ ಮಾತನಾಡುವಾ. ಗೋಪಿಯ ಹಿತಕ್ಕಾಗಿ ನಾನು ಏನನ್ನೂ ಮಾಡಿಯೇನು. ನೀವು ತಪ್ಪು ತಿಳಿದುಕೊಳ್ಳಬಾರದು. ನೀವು ಧಾರಾಳವಾಗಿ ನನ್ನನ್ನು ಕ್ಷಮಿಸಬೇಕು." ಎಂದು ರಾಯರನ್ನು ಶಾಸ್ತ್ರಿಗಳು ಬೇಡಿಕೊಂಡಿದ್ದರು. ಮಾತು ಹೀಗೆ ನಡೆದಿದ್ದರೂ ರಾಯರು ಆ ಮಾತಿನಲ್ಲಿ ಭರವಸೆಯನ್ನು ಕಾಣುತ್ತಿದ್ದಿಲ್ಲ. ಏನೊ, ಗೋಪಿಯ ಮದುವೆಯ ಯೋಗಾಯೋಗವೇ ಅಷ್ಟು ಸುಲಭವಾಗಿ ಹೊಂದಿ ಬರುವ ಹಾಗೆ ಕಾಣುವುದಿಲ್ಲ ಎಂದು ಕಳವಳಪಟ್ಟಿದ್ದರು ಮಾತ್ರ ಎಷ್ಟಾದರೂ ಶಾಸ್ತ್ರಿಗಳು ತಿಳಿದವರು. ಅವರು ಹೇಳಿದ ಹಾಗೆಯೆ ಆಗಲಿ ಎಂದು ಸುಮ್ಮನಾಗಿ ಬಿಟ್ಟಿದ್ದರು. ಶಾಸ್ತ್ರಿಗಳು ಊರಿಗೆ ಹೊರಡುವ ಮುನ್ನ ಗೋಪಿಯನ್ನು ಕಾಣಲಿಲ್ಲ. ಈ ಸಮಾಚಾರ ಗೋಪಿಗೆ ತಿಳಿದದ್ದು ರಾಘವೇಂದ್ರರಾಯರಿಂದಲೆ. ಅಂದಿನಿಂದ ಇಂದಿನವರೆಗೆ ಗೋಪಿ ಯೋಚನೆಗೆ ಒಳಗಾಗಿದ್ದ. ಆತನ ಯೋಚನೆ, ಇರುವಿಕೆ, ಯಾವುದರಲ್ಲಿಯೂ ಆತ ತೋರುತ್ತಿದ್ದ ಅನಾಸ್ಥೆ ತಾಯಿತಂದೆಗಳಿಬ್ಬರಿಗೂ ಚಿಂತೆಯನ್ನುಂಟು ಮಾಡಿದ್ದವು. ಸಮಾಧಾನದ ಯಾವ ಮಾತೂ ಅವನ ಬಗೆಯಲ್ಲಿ ಎಲ್ಲಿಗೂ ನಿಲುಕುವ ಹಾಗೆ ಕಾಣಲಿಲ್ಲ.

" ಅಂಥ ಯಾವ ಅಪ್ಸರೆ ಎಂದು ಇಷ್ಟೊಂದು ಮನಸ್ಸನ್ನು ಚಿಕ್ಕದಾಗಿ ಮಾಡಿಕೊಂಡು ಒದ್ದಾಡುತ್ತೀ, ಗೋಪಿ ? ನೀನು ಒಂದು ಮಾತು ಹೇಳು. ಬೇಕಾದಂಥ ಚೆಲುವೆಯನ್ನು ತಂದು ಮದುವೆ ಮಾಡುತ್ತೇನೆ." ಎಂದು ಕಮಲಮ್ಮ ಹತ್ತಾರು ಬಾರಿ ಹೇಳಿದ್ದರು. ಗೋಪಿ ಕೆಲವೊಂದು ಬಾರಿ ಯಾವ ಉತ್ತರವನ್ನೂ ಹೇಳದೆ ಸುಮ್ಮನಾಗಿ ಬಿಡುತ್ತಿದ್ದ. ಉತ್ತರ ಏನೆಂದು ಹೇಳಿಯಾನು ? ಕಮಲಮ್ಮನ ಕಣ್ಣಿಗೆ ಶಾಂತಾ ಅಪ್ಸರೆಯಾಗಿ ಕಾಣುತ್ತಿರಲಿಲ್ಲ. ನಿಜ. ಆದರೆ ಗೋಪಿಯ ಒಳಗಣ್ಣಿಗೆ ? ಆಕೆ ಅಪ್ಸರೆಯೇ ಏಕೆ ? ರಂಭೆ, ಊರ್ವಶಿ, ತಿಲೋತ್ತಮೆ ಎಲ್ಲರೂ ಆಗಿದ್ದರು. ಶಕುಂತಲೆಯೂ ಹೌದು. ಆದರೆ ಇವರೆಲ್ಲರಿಗೂ ಮಿಗಿಲಾಗಿ ಆಕೆ ಆತನ ಹೃದಯದಲ್ಲಿ ಸಾವಿತ್ರಿಯಾಗಿ ಕಾಣುತ್ತಿದ್ದಳು. ಇದನ್ನು ತಾಯಿಗೆ ತಿಳಿಹೇಳಬಹುದೆ ? ತಿಳಿಹೇಳಿದರೆ ಆಕೆ ಕೇಳುವಳೆ ? ಕೇಳಬೇಕಾದುದೂ ಇರಲಿಲ್ಲ. ಯಾರಿಂದ ಏನಾಗಬೇಕು ? ಒಂದು

ಮಾತು ಹೀಗೆ ನಡೆಯಬೇಕು ಎಂದು ಬಯಸುವ ಅಧಿಕಾರ ಮಾತ್ರ ಮಾನವ ನಿಗೆ ಇದೆಯಲ್ಲದೆ ಅದನ್ನು ಬಯಸಿದ ರೀತಿಯಲ್ಲಿ ನಡಸಿಯೇ ತೀರುವೆನೆಂಬ ಹೆಮ್ಮೆ ಒಂದು ವೃಥಾಭಿಮಾನ ಮಾತ್ರ ಎಂದು ತೋರಿತು ಗೋಪಿಗೆ. ಆದರೆ ಈ ಮಾತು ನಡೆಯಬಾರದೇಕೆ? ಶಾಂತಳ ಜೊತೆಯಲ್ಲಿಯ ತನ್ನ ಜೀವನ ಸೊಬಗಿನ ಸಮೃದ್ಧಿಯಾಗುವುದೆಂಬುದರಲ್ಲಿ ಆತನಿಗೆ ಸಂದೇಹವೇ ಇರಲಿಲ್ಲ. ಈ ಪರಿಯ ಸೊಬಗಿಗಾಗಿ ಹೃದಯಾಂತರಾಳದಿಂದ ತನ್ನ ಬಗೆಯೆಲ್ಲವೂ ಬಯಕೆಯಾಗಿ ಬೇಡುತ್ತಿದ್ದಾಗ ಅಂಥ ಆಸೆ ಯಾಕೆ ಫಲಿಸಬಾರದು? ಫಲಿಸ ಬಹುದು. ಫಲಿಸುತ್ತದೆ. ಯಾವ ಆತಂಕ ಬಂದರೂ ಬೆಳಗಿನಲ್ಲಿಯ ಮಂಜಿನ ತೆರೆಯ ಹಾಗೆ ಸರಿಯುತ್ತದೆ. ಹಾಗೆ ಸರಿಯುವುದು ಸೃಷ್ಟಿಯ ನಿಯಮ. ಎಂದು ಮುಂತಾಗಿ ಎಲ್ಲಿಯೋ ಒಂದು ಆಸೆಯ ಕಿರುದನಿ ಸಮಾಧಾನ ಹೇಳು ತ್ತಿತ್ತು. ಹೌದು. ಅದೂ ಸೃಷ್ಟಿಯ ಕ್ರಮ. ಮುಂದೆ ನಡೆಯಬೇಕಾದುದಕ್ಕೆ ಇಂದಿನದೆಲ್ಲವೂ ಪೂರ್ವಪೀಠಿಕೆ. ಪೂರ್ವಪೀಠಿಕೆಯಲ್ಲಿಯೆ ಸುಖದ ಪರಮ ಸರ್ವಸ್ವವನ್ನು ಕಾಣುತ್ತಿದ್ದ ಆತನಿಗೆ ಆ ಸೃಷ್ಟಿಯ ಕ್ರಮದ ಕೊನೆ, ಅದಕ್ಕೆ ಸಿದ್ಧತೆಯಾಗಿ ನಿಲ್ಲಬೇಕಾಗಿದ್ದ ದೂರದ ಹಂಚಿಕೆಗಳು ಗೋಚರಿಸದಿದ್ದರೆ ಆಶ್ಚರ್ಯವಲ್ಲ. ಗೋಪಿ ಮಾನವ. ಭವಿಷ್ಯದ ತೆರೆಯನ್ನು ಇರಿದು ಅದರಾಚೆ ನಡೆಯಲಿದ್ದುದನ್ನು ಕಾಣಬಹುದಾದ ದೃಷ್ಟಿ ಆತನಿಗೆಲ್ಲಿಂದ ಬರಬೇಕು?

ಗೋಪಿ ಕುಳಿತಲ್ಲಿ ಕುಳಿತೇ ಇದ್ದ. ಸಂಜೆಗತ್ತಲೂ ಸಮೀಪಿಸುತ್ತಿತ್ತು. ಮಳೆ ಒಮ್ಮೆ ತುಂತುರು ಹನಿಯಾಗಿ, ಒಮ್ಮೆ ರಭಸವಾಗಿ ಬೀಳುತ್ತಲೇ ಇದ್ದಿತು. ಕಣ್ಣೆದುರು ಹಚ್ಚಹಸಿರಾಗಿ ಬೆಳೆದುನಿಂತ ಗರಿಕೆ ಗಾಳಿಯ ಹೊಡೆ ತಕ್ಕೆ ಒಮ್ಮೆ ತಲೆಬಾಗುತ್ತಿತ್ತು. ಮತ್ತೆ ತಲೆಯೆತ್ತಿ ನಿಲ್ಲುತ್ತಿತ್ತು. ಗಾಳಿ ಗಿಡ ಗಳ ಗೀತದ ಹೊರತಾಗಿ ಇನ್ನಾವುದೂ ಆ ಕಾಡಿನ ಮೌನವನ್ನು ಮುರಿಯುತ್ತಿ ರಲಿಲ್ಲ. ಮಳೆಯ ಚಳಿಯ ಕೊರೆತಕ್ಕೆ ಸೃಷ್ಟಿ ಬಧಿರವಾಗಿ ನಿಂತಹಾಗಿತ್ತು— ಗೋಪಿಯ ಒಳಮನಸ್ಸಿನಂತೆಯೆ.

ಕುಳಿತು ಕುಳಿತು, ಯೋಚಿಸಿ ಯೋಚಿಸಿ, ಗೋಪಿಗೆ ಬೇಸರವಾಯಿತು. ಯೋಚನೆಯಲ್ಲಿ ಮುಳುಗಿದಾಗ ಗೋಪಿಗೆ ಸ್ಥಳಕಾಲಾದಿಗಳ ಪರಿವೆಯೇ ಉಳಿಯುತ್ತಿರಲಿಲ್ಲ. ಮೊತ್ತಮೊದಲನೆಯ ಸಾರೆ ಆ ಸಾಯಂಕಾಲ ಅಲ್ಲಿಗೆ ಬಂದಾಗಿನಿಂದ ತನ್ನ ಭಾವನೆಗಳ ವ್ಯೂಹದಿಂದ ಹೊರಬಿದ್ದ. ಸುತ್ತಲೂ

ನೋಡಿದ. ಬೇಗನೆ ಕತ್ತಲು ಕವಿಯುವುದರಲ್ಲಿತ್ತು. ತಟ್ಟನೆ ಎದ್ದು ಮನೆಯ ದಾರಿಯನ್ನು ಹಿಡಿದು ಸಾಗಿದ. ಮುಸುಕಿದ ಮೋಡದಾಚೆಯಿಂದ ಅರೆಬೆಳಕು ಸೂಸುತ್ತಲೇ ಇದ್ದಿತು. ಊರನ್ನು ಸೇರಿದಾಗ ಸಂಜೆಯ ದೀಪಗಳು ಅದೇ ಬೆಳಗುತ್ತಿದ್ದವು.

ಮನೆಗೆ ಸಾಗಬೇಕಾದರೆ ಸಾಮಾನ್ಯವಾಗಿ ಶಾಸ್ತ್ರಿಗಳ ಮನೆಯೆದುರಿನಿಂದಲೇ ಸಾಗಬೇಕು. ಬೇರೆಡೆಯಿಂದಲೂ ಹೋಗಬಹುದಿತ್ತು. ಆದರೆ ಸಾಧ್ಯವಾದರೆ ಬಾಗಿಲಲ್ಲಿ ನಿಂತಿರಬಹುದಾದ ಶಾಂತಳನ್ನು ನೋಡಲು ಸಿಕ್ಕಬಹುದೆ ? ಎಂಬ ಆಸೆ ಮನಸ್ಸಿನಲ್ಲಿ ಮೂಡಿತು. ಹೆಜ್ಜೆ ಸಾಗುತ್ತಿದ್ದ ಹಾಗೆ ಆಸೆ ಬಲವಾಯಿತು. ಆಕೆಯನ್ನು ನೋಡಿ ಎಷ್ಟೋ ದಿವಸವಾಗಿತ್ತು. ಶಾಸ್ತ್ರಿಗಳು ಊರಲ್ಲಿಲ್ಲದಾಗ ಅವರ ಮನೆಗೆ ಹೋಗುವಹಾಗಿರಲಿಲ್ಲ....ಆದರೆ ಆಕೆ ಬಾಗಿಲಲ್ಲಿ ಇದ್ದೇ ಇರುವಳೆಂಬ ಭರವಸೆ ಎಲ್ಲಿಯದು ? ಏನಾದರೂ ಆಕೆಯನ್ನು ಕಂಡೇ ಕಾಣಬೇಕೆಂದುಕೊಂಡ. ಹೆಚ್ಚಾದರೆ ಶಾಸ್ತ್ರಿಗಳು ಹಿಂತಿರುಗುವುದು ಯಾವತ್ತು ಎಂದು ಒಳಗಡೆ ಹೋಗಿ ಕೇಳಿದರೂ ಆಯಿತು ಎಂದು ನೆಪವನ್ನೂ ಹುಡುಕಿಕೊಂಡ.

ಬಾಗಿಲಲ್ಲಿ ಶಾಂತಾ ಇರಲಿಲ್ಲ. ತಾಯಿ ಇದ್ದರು. ಗೋಪಿಯ ಹೆಜ್ಜೆ ತನಗೇ ತಿಳಿಯದಲೆ ನಿಧಾನಿಸಿತು. ಶಾಸ್ತ್ರಿಗಳ ಹೆಂಡತಿ ಕುಳಿತವರು ಎದ್ದು ನಿಂತರು. ಗೋಪಿಯೂ ತಡೆದ. ಶಾಸ್ತ್ರಿಗಳು ಬಂದಿರಲಿಲ್ಲವೆಂಬುದು ತಿಳಿದಿದ್ದರೂ ಕೇಳಿದ

" ಬಂದರೇ ಶಾಸ್ತ್ರಿಗಳು ಊರಿಂದ ? "

" ಇಲ್ಲವಲ್ಲ—"

" ಯಾವಾಗ ಬರುತ್ತಾರೆ, ಗೊತ್ತೆ ? "

" ಹುಂ-ಬನ್ನಿ ಒಳಗಡೆ. ಹನಿಮಳೆ ಬೀಳುತ್ತಿದೆ—ಬನ್ನಿ—"

" ಬೇಡ ತಾಯಿ. ಹೊರಡುತ್ತೇನೆ. ಕತ್ತಲಾಯಿತು—"

ಎಂದು ಬಾಯಿಂದ ಹೇಳಿದರೂ ಪಾವಟಿಗೆಯನ್ನೇರಿದ. ಹೊಸ್ತಿಲನ್ನು ದಾಟುತ್ತಿರುವಾಗಲೇ ಕೇಳಿದ.

" ಏನಾದರೂ ಕಾಗದ ಬಂದಿದೆಯೆ ? "

" ಹೌದು. ಇಂದೇ ಬಂದಿದೆ. ಶಾಂತಾ—ಏ, ಶಾಂತಾ—"

ಗೋಪಿಯ ನಾಳಗಳಲ್ಲಿ ರಕ್ತ ವಾಡಿಕೆಗಿಂತ ಹೆಚ್ಚು ವೇಗವಾಗಿ ಓಡುತ್ತಿದ್ದ ಹಾಗೆನಿಸಿತು. ನಡುಮನೆಯ ಬಾಗಿಲೆಡೆಗೇ ನೋಡುತ್ತಿದ್ದ.

"ಶಾಂತಾ, ಇಂದು ಬಂದ ಆ ಕಾಗದವನ್ನೆಲ್ಲಿಟ್ಟೆ? ತಂದು ಕೊಡು ನೋಡುವಾ."

ಗೋಪಿ ತಾನಾಗಿಯೆ ತಮ್ಮಲ್ಲಿಗೆ ಬಂದುದು ಶಾಸ್ತ್ರಿಗಳ ಹೆಂಡತಿಗೊಂದು ಹಬ್ಬವಾಗಿತ್ತೆಂಬುದನ್ನು ಬೇರೆಯಾಗಿ ಹೇಳಬೇಕಿಲ್ಲ. ಶಾಸ್ತ್ರಿಗಳು ಮದುವೆಯ ಮಾತನ್ನು ಅರೆಮಾರ್ಗ ಮುರಿದು ಮುಗಿಸಿದ್ದಾರೆಂಬುದು ಅವರಿಗೆ ತಿಳಿದು ಬಂದಿದ್ದರೂ ಅವ್ವರು ಆಸೆ ಬಿಟ್ಟಿರಲಿಲ್ಲ. ಗೋಪಿಯೇ ಒಪ್ಪಿದ್ದಾನಲ್ಲದೆ, ಹಟವನ್ನೇ ಹಿಡಿದಿದ್ದಾನೆಂಬುದನ್ನು ತಿಳಿದ ಅವರು ಯಾಕೆ ನಿರಾಶರಾಗಬೇಕು? ಸಮಯ ಸಾಧಿಸಿದಾಗ ಕಮಲಮ್ಮನವರ ಹತ್ತಿರ ಹೋಗಿ ಪ್ರಸ್ತಾಪವನ್ನೆತ್ತುತ್ತಿದ್ದರು. "ಅವರ ಸ್ವಭಾವವೇ ಹೀಗೆ. ಯಾವುದಕ್ಕೂ ಸ್ವಲ್ಪ ನಿಧಾನವೆ. ಕೂಡಲೆ ಒಪ್ಪಿದರೆ ದೇವರಾಣೆ" ಎಂದು ಮುಂತಾಗಿ ಗಂಡನ ವಿಷಯ ಆಡಿಕೊಂಡು ಮಾತು ಬೆಳಸುತ್ತಿದ್ದರು. ಆಗೀಗ ಏನಾದರೊಂದು ನೆಪವನ್ನು ಹೂಡಿ ಶಾಂತಳನ್ನು ಕಮಲಮ್ಮನ ಹತ್ತಿರ ಹತ್ತಾರು ಬಾರಿ ಕಳಿಸುತ್ತಲೂ ಇದ್ದರು. ಹೀಗೆ ಹೋಗಿ ಹಿಂತಿರುಗಿದಾಗಲೆಲ್ಲವೂ ಮಗಳನ್ನು ಕೇಳುತ್ತಿದ್ದರು. "ಗೋಪಿ ಮನೆಯಲ್ಲಿದ್ದನೆ? ಏನು ಮಾಡುತ್ತಿದ್ದ? ನಿನ್ನನ್ನು ಏನಾದರೂ ಮಾತನಾಡಿಸಿದನೆ? ಮಾತನಾಡಿಸಿದರೂ ನೀನು ಮಾತನಾಡುವವಳೆ?" ಎಂದು ಮುಂತಾಗಿ ಮಾತು ನಡೆಯುತ್ತಿದ್ದಿತು. ಶಾಸ್ತ್ರಿಗಳು ಊರಲ್ಲಿರದಿದ್ದುದು ಅವರಿಗೊಂದು ಅನುಕೂಲವೇ ಆಗಿತ್ತು. ಕಮಲಮ್ಮನಿಂದ ಈ ವಿಷಯದಲ್ಲಿ ವಿಶೇಷವಾದ ಸಹಕಾರ ದೊರಕುತ್ತಿರಲಿಲ್ಲವಾದ್ದರಿಂದಲೇ ಗೋಪಿ ಶಾಂತೆಯರು ಕೂಡಿ ಮಾತನಾಡುವುದು ಸಾಧ್ಯವಾಗಿರಲಿಲ್ಲ. ಶಾಸ್ತ್ರಿಗಳ ಮನೋವೃತ್ತಿ ಕಮಲಮ್ಮನವರನ್ನು ತುಂಬಾ ನೋಯಿಸಿತ್ತು. ಹೀಗಾಗಿ ಅವರು ಶಾಂತಾ ಮನೆಗೆ ಬಂದಾಗ ಒಂದೆರಡು ಒಳ್ಳೆಯ ಮಾತುಗಳನ್ನಾಡಿ ಕಳಿಸುತ್ತಿದ್ದರಲ್ಲದೆ ಹೆಚ್ಚಿನ ಯಾವ ಉತ್ಸಾಹವನ್ನೂ ತೋರಿಸುತ್ತಿರಲಿಲ್ಲ—

ಕಾಗದವೊಂದನ್ನು ಕೈಯಲ್ಲಿ ಹಿಡಿದುಕೊಂಡು ಶಾಂತಾ ಪಡಸಾಲೆಗೆ ಬಂದಳು. ಗೋಪಿಯ ನಾಡಿ ಒಮ್ಮೆ ನಿಂತು ಮತ್ತೆ ನಡೆದಂತೆನಿಸಿತು. ತಮ್ಮೆಡೆಗೆ ಬರುತ್ತಿದ್ದವಳನ್ನುದ್ದೇಶಿಸಿ ತಾಯಿ ಹೇಳಿದರು.

" ಅವರಿಗೇ ಕೊಡು. ನನಗೇನು ತಿಳಿಯಬೇಕು ಅದರಲ್ಲಿ ಬರೆದದ್ದು ? ಚೆನ್ನಾಗಿ ಓದಿಯಾದರೂ ಹೇಳಲಿ— "

ಶಾಂತಳನ್ನು ಗೋಪಿಯ ಎದುರಿಗೆ ತರಲಿಕ್ಕೆ ಇದೊಂದು ಯುಕ್ತಿ ಇದ್ದರೂ ಇದ್ದಿರಬಹುದು. ಏನಿದ್ದರೂ ಗೋಪಿ ಕೃತಜ್ಞನೇ ಇದ್ದ. ತಾಯಿಯ ಮಾತಿನ ಕಡೆಗೆ ಆತನ ಲಕ್ಷ್ಯವೇ ಇರಲಿಲ್ಲ. ಶಾಂತಳ ಮುಖವನ್ನೇ ನೋಡುತ್ತಿದ್ದ. ಮಿಣುಕು ದೀಪದ ಅರೆಬೆಳಕಿನಲ್ಲಿ ಹೆಚ್ಚು ಕಡಿಮೆ ಮುಸುಕಾಗಿಯೇ ಕಾಣುತ್ತಿದ್ದ ಆ ಮುಖದಲ್ಲಿಯ ಕಣ್ಣುಗಳು ಆತನನ್ನು ಸೆಳೆದವು. ಹತ್ತಿರಕ್ಕೆ ಬಂದು ಶಾಂತಾ ಕಾಗದವನ್ನು ಗೋಪಿಯ ಕೈಗೆ ಇಡುತ್ತಿರುವಾಗ ಆಕೆಯ ಕೈ ನಡುಗಿರಬೇಕು. ಬೆರಳಿಗೆ ಬೆರಳು ತಗಲಿತು. ಗೋಪಿ ಈ ಪ್ರಪಂಚದಲ್ಲಿಯೇ ಇರಲಿಲ್ಲ ತಾನು ಕಾಗದವನ್ನು ಬಿಡಿಸಿ ಓದಬೇಕಾಗಿತ್ತೆಂಬುದನ್ನೂ ಮರೆತಿದ್ದ. ಶಾಸ್ತ್ರಿಗಳ ಹೆಂಡತಿಯ ಪ್ರಶ್ನೆ ಆತನನ್ನು ವಾಸ್ತವ ಪ್ರಪಂಚಕ್ಕೆಳೆಯಿತು.

" ನಾಳೆ ಬುಧವಾರ ಬರುತ್ತೇನೆಂದು ಬರೆದಿದ್ದಾರಲ್ಲವೆ ? "

" ಆಂ ?—ಹುಂ—ಹೌದು. ಪತ್ರ ಬರೆದು ಆಗಲೆ ಮೂರು ದಿನವಾಯಿತು. ಒಂದು ವಾರದಲ್ಲಿ ಎಂದು ಬರೆದಿದ್ದಾರೆ. ಹುಂ. ಬುಧವಾರ ಬರಬಹುದು ಎಂದು ಕಾಣುತ್ತದೆ. ಇಲ್ಲವಾದರೆ ಗುರುವಾರ— "

" ದೂರದ ದಾರಿ. ಪ್ರವಾಸವೇ ಒಂದು ದಿನವಾಗುತ್ತದೆ— "

" ಹುಂ—ಬಹಳ ದಿವಸವಾಯಿತು. ಅವರೂ ಹೊರಟುಹೋಗಿ— "

" ಒಂದು ತಿಂಗಳು, ಮೊನ್ನಿನ ಗುರುವಾರಕ್ಕೆಯೆ ಆಯಿತು— "

ಇಬ್ಬರಿಗೂ ಮುಂದೇನು ಮಾತನಾಡುವದೆಂದು ಬಗೆಹರಿಯದಾಗಿತ್ತು. ಗೋಪಿಗೆ ಕೂಡಲೆ ಹೊರಡುವ ಮನಸ್ಸಾಗಲಿಲ್ಲ. ಶಾಸ್ತ್ರಿಗಳ ಹೆಂಡತಿಗೂ ಗೋಪಿ ಸಾಧ್ಯವಿದ್ದಷ್ಟು ವೇಳೆ ಮನೆಯಲ್ಲಿರುವುದೇ ಬೇಕಾಗಿತ್ತು. ಶಾಂತಳಿಗೆ? ಆಕೆಯ ಹೃದಯದಾಳವನ್ನು ಯಾರು ಬಲ್ಲರು? ಆದರೆ ಎಂದಿಗೂ ಗೋಪಿಯ ಎದುರಿಗೆ ಬಂದವಳು ಪಟಕ್ಕನೆ ಒಳಗಡೆ ಓಡಿ ಹೋಗುತ್ತಿದ್ದವಳು ಇಂದು ಬಾಗಿಲ ಹತ್ತಿರವೇ ಕಾಯುತ್ತಿದ್ದಳಲ್ಲದೆ ಗೋಪಿ ತನ್ನನ್ನು ನೋಡದಿದ್ದಾಗ ಆತನನ್ನೇ ನೋಡುತಿದ್ದಳೆಂದಮೇಲೆ ?

" ಒಂದಿಷ್ಟು ಕಾಫಿಯನ್ನಾದರೂ ಮಾಡಿಕೊಂಡು ಬಾ ಶಾಂತಾ—ಒಳ್ಳೆ

ಬಿಸಿಬಿಸಿಯಾಗಿ. ಎಂಥ ಮಳೆ-ಏನು ಚಳಿ—"

"ಹುಂ. ಇಂದಂತೂ ತುಂಬಾ ಮಳೆ ಬಿದ್ದಿತು."

"ಶಾನುಭೋಗರಿಗೆ ಮೈಯಲ್ಲಿ ಸರಿಯಾಗಿಲ್ಲವಂತೆ. ಹೌದೆ ?"

"ಹೌದು."

"ಏನಂತೆ ?"

"ಏನು ?-ಹೀಗೆಯೆ. ಅವರಿಗೂ ವಯಸ್ಸಾಯಿತಲ್ಲ. ಇಂಥ ಮಳೆ ಹವೆ ಅವರಿಗೆ ಯಾವಾಗಲೂ ತೊಂದರೆಯೆ. ಅದರಲ್ಲಿ ಈಸಲ ಕೆಮ್ಮಿನಿಂದಲೂ ಹೆಚ್ಚು ಆತಂಕವಾಗಿದೆ."

"ಕಳೆದ ವಾರ ನಿಮಗೂ ಮೈಯಲ್ಲಿ ಸ್ವಸ್ಥವಾಗಿರಲಿಲ್ಲವಂತೆ. ಕಮಲಮ್ಮ ಹೇಳುತ್ತಿದ್ದರು—"

"ಹೌದು. ಏನೊ ಕೆಮ್ಮು ನೆಗಡಿ ಅಷ್ಟೇ—"

"ಯಾಕೆ ಸುಮ್ಮನೆ ಇಂಥ ಮಳೆಯಲ್ಲಿ ಹೋಗಬೇಕು, ಹಾಗಿದ್ದರೆ—"

"ಮನೆಯಲ್ಲಿ ಕುಳಿತಾದರೂ ಏನು ಮಾಡುವುದು ಮತ್ತೆ ? ತೀರ ಬೇಸರವಾಗಿ ಬಿಡುತ್ತದೆ. ಅತ್ತಿತ್ತ ಅಡ್ಡಾಡಿಕೊಂಡು ಬರುತ್ತೇನೆ, ಆಯಿತು."

ಶಾಂತಾ ಕಾಫಿ ತಂದಿರಿಸಿದಳು.

"ಈಗ ಯಾತಕ್ಕೆ ಕಾಫಿ ಬೇಕಿತ್ತು? ಏನೊ ಶಾಸ್ತ್ರಿಗಳು ಬಂದಿದ್ದಾರೆಯೆ ಎಂದು ಕೇಳೋಣ ಎಂದು—"

"ಏನು ತಪ್ಪಾಯಿತು ? ನಮ್ಮಲ್ಲಿಗೆ ಬಂದು ಎಷ್ಟು ದಿನವಾಯಿತೊ !"

"ಹುಂ-ಒಂದು ಒಂದೂವರೆ ತಿಂಗಳಾಗಿರಬೇಕು—"

"ನೀನೂ ಕಾಫಿ ತೆಗೆದುಕೊ ಶಾಂತಾ—"

"______"

"ಕಾಫಿ ಕುಡಿಯುವುದೇ ಇಲ್ಲವೆ ?"

ಗೋಪಿ ಪ್ರಶ್ನೆಯನ್ನು ಯಾರನ್ನು ಉದ್ದೇಶಿಸಿ ಕೇಳಿದ್ದನೊ ! ಉತ್ತರ ಮಾತ್ರ ತಾಯಿಯಿಂದ ಬಂದಿತು.

"ಕುಡಿಯುತ್ತಾಳೆ. ಕುಡಿಯದೆ ಏನು ?"

ಶಾಂತಾ ಅಲ್ಲಿಯೇ ನಿಂತಿದ್ದಳು. ನೆಟ್ಟದೃಷ್ಟಿಯಿಂದ ಗೋಪಿಯನ್ನು ನೋಡುತ್ತಿದ್ದಳು. ಗೋಪಿ ತನ್ನನ್ನು ನೋಡಿದಾಗ ನೋಟ ನೆಲವನ್ನರಸು

ತ್ತಿತ್ತು. ಅದು ಇದು ಎಂದು ಮಾತು ನಡೆದು ಗೋಪಿ ಹತ್ತಿಪ್ಪತ್ತು ನಿಮಿಷ ಗಳಲ್ಲಿ ಹೊರಟು ಮನೆ ಸೇರಿದ. ಮನೆಯಲ್ಲಿ ಗೋಪಿಗಾಗಿ ವತ್ಸಲೆಯಿಂದ ಬಂದ ಒಂದು ಕಾಗದ ಕಾಯುತ್ತಿತ್ತು. ಬಿಡಿಸಿ ಓದಿದ. ವಿಶೇಷವಾದ ಯಾವ ವಿವರವೂ ಇರಲಿಲ್ಲ. ಎರಡು ಮೂರು ದಿನಗಳಲ್ಲಿ ತಾನು ಬರುವುದಾಗಿ ತಿಳಿ ಸಿದ್ದಳು !

## ೧೦

" ಎಷ್ಟು ರಾತ್ರಿಯಾಗಿ ಬಿಟ್ಟಿತು. ಎಲ್ಲಿಗೆ ಹೋಗಿದ್ದೆ ಗೋಪಿ ? "

" ಎಲ್ಲಿಯೂ ಇಲ್ಲ. ಸುಮ್ಮನೆ ರಂಗಧೂಳಿಯ ಕಡೆಗೆ ಹೋಗಿದ್ದೆ."

" ರಂಗಧೂಳಿಗೆ ? ಇಂಥ ಮಳೆಯಲ್ಲಿ? ಏನೋಪ್ಪ, ಎಷ್ಟು ಹೇಳಿದರೂ ನೀನು ಕೇಳುವುದಿಲ್ಲ. ಮೊದಲೇ ಮೈಯಲ್ಲಿ ಸ್ವಸ್ಥವಿಲ್ಲ. ಇಂಥ ಚಳಿ-ಮಳೆಗಳಲ್ಲಿ ಹೀಗೆ ಅಡ್ಡಾಡಿದರೆ ಏನುಗತಿ ? "

ನಿಜವಾಗಿಯೂ ಕಮಲಮ್ಮನವರ ದನಿಯಲ್ಲಿ ಮರುಕ ಮೂಡಿತ್ತು. ಇತ್ತೀಚೆ ಬಡಕಲಾಗಿ ಕಾಣುತ್ತಿದ್ದ ಗೋಪಿಯ ದೇಹದ ಅಸ್ವಾಸ್ಥ್ಯದ ಬಗ್ಗೆ ಅವರಲ್ಲಿ ಚಿಂತೆಯುಂಟಾಗಿದ್ದರೆ ಅದೂ ಸಹಜವೆ. ಆದರೆ ಗೋಪಿಯ ಆಗಿನ ಮನಃಸ್ಥಿತಿಯಲ್ಲಿ ತನ್ನ ಪಾಲಿಗೆ ತಾನಾಗಿರುವಂತೆ, ಸುತ್ತಲಿನ ಸೃಷ್ಟಿಯ ಸೌಭಾಗ್ಯವನ್ನು ನೋಡಿ ಕೆಲವುಟ್ಟಿಗಾದರೂ ಎದೆಯ ದುಗುಡವನ್ನು ಮರೆಯಲು ಸಾಧ್ಯವಾಗುವಂತೆ ಇದ್ದರೆ ಅದು ರಂಗಧೂಳಿಯ ಪರಿಸರದಲ್ಲಿಯೇ ಎಂಬುದನ್ನು ಕಮಲಮ್ಮ ತಿಳಿಯುವುದು ಹೇಗೆ ? ಒಂದು ಕಾಲಕ್ಕೆ ರಾಘವೇಂದ್ರರಾಯರೇ ಅದೇ ರಂಗಧೂಳಿಯಿಂದ ಇಂಥದೇ ಸನ್ನಿವೇಶದಲ್ಲಿ ಸಮಾಧಾನ ಪಡೆಯುತ್ತಿರಲಿಲ್ಲವೆ ? ರಂಗಧೂಳಿಯ ಚೆಲುವು ಸೂರ್ಮಡಿಯಾಗಿ ಬೆಳೆಯುವಂತಾದದ್ದೇ ಇಂಥ ಸನ್ನಿವೇಶದಿಂದಾಗಿ. ಇದನ್ನು ಕಮಲಮ್ಮನವರು ತಿಳಿದಿದ್ದರೂ ಗೋಪಿ ಈ ಪರಿಯಾಗಿ ಹಗಲೆನ್ನದೆ, ಇರುಳೆನ್ನದೆ, ಮಳೆಗಾಳಿಯೆನ್ನದೆ ದೇಹಸ್ವಾಸ್ಥ್ಯವನ್ನೂ ದುರ್ಲಕ್ಷಿಸಿ ಅಲೆದಾಡುತ್ತಿರುವುದನ್ನು ಅವರಲ್ಲಿಯ ತಾಯ್ತನ ಸಹಿಸಲಿಲ್ಲ. ಆತನ ಹಿತಕ್ಕಾಗಿ, ಸುಖಕ್ಕಾಗಿ ಹಗಲಿರುಳೂ ತವಕಪಡುತ್ತಿದ್ದರು. " ಹೀಗೆ ಅಲೆದಾಡಿದರೆ ಏನುಗತಿ ? " ಎಂದು ಅವರೆಂದಾಗ ಅವರ ಕರುಳಿನ ಕಳವಳ ಕಣ್ಣೀರಾಗುವುದರಲ್ಲಿತ್ತು.

ಗೋಪಿ ಉತ್ತರ ಹೇಳಲಿಲ್ಲ. ಅರೆಮರ್ಧ ಒದ್ದೆಯಾಗಿದ್ದ ಬಟ್ಟೆಗಳನ್ನು ಬದಲಾಯಿಸಿ ಕೈಕಾಲು ತೊಳೆಯಲೆಂದು ಬಚ್ಚಲೆಡೆಗೆ ಹೊರಟಾಗ ಕಮಲಮ್ಮ ಕೇಳಿದರು

"ಆ ಮನೆಗೆ ಹೋಗಿದ್ದೆಯಾ ?"

"ಎಲ್ಲಿ, ಅಜ್ಜಯ್ಯನಲ್ಲಿಯೆ ? ಇಲ್ಲವಲ್ಲ. ಯಾಕೆ ?"

"ಸಂಜೆ ನಾನು ಹೋದಾಗ ಕೇಳುತ್ತಿದ್ದ. ಮೂರು ನಾಲ್ಕು ದಿನಗಳಿಂದಲೂ ನೀನು ಬಂದೇ ಇಲ್ಲ ಎನ್ನುತ್ತಿದ್ದ—"

"ಹೌದು. ಹೋಗಿಯೇ ಇಲ್ಲ. ಹೇಗಿದ್ದಾನೆ ?"

"ಇದ್ದ ಹಾಗೆಯೆ. ಏನೊ, ನಿಶ್ಶಕ್ತಿ ಹೆಚ್ಚಾಗುತ್ತಿದೆ ಎಂದು ಕಾಣುತ್ತದೆ. ಇಂದು ಮಧ್ಯಾಹ್ನ ಕೆಮ್ಮಿನಿಂದ ತುಂಬ ತೊಂದರೆಯಾಯಿತು—"

"ನಾಳೆ ಹೋಗಿ ಬರುತ್ತೇನೆ. ಅಪ್ಪ ಎಲ್ಲಿ ?"

"ಅಲ್ಲಿಯೇ ಇದ್ದಾರೆ—"

ಶೀನಪ್ಪನ ಆರೋಗ್ಯ ಇತ್ತೀಚೆ ತೀರ ಕೆಟ್ಟಿದ್ದು ಈ ಮಳೆಗಾಲವನ್ನು ಆತ ದಾಟುವುದು ಕಷ್ಟವೆಂಬುದನ್ನು ಗೋಪಿ ತಿಳಿದಿದ್ದ. ತನ್ನ ತಂದೆ ಇಂದು ಅಲ್ಲಿಯೇ ಇದ್ದಾರೆಂಬುದು ತಿಳಿದ ಮೇಲೆ ಶೀನಪ್ಪನ ದೇಹಸ್ಥಿತಿಯಲ್ಲಿ ವಿಶೇಷ ಬದಲಾವಣೆಯಾಗಿರಬೇಕೆಂದುಕೊಂಡ. ಆದರೆ ನೇರವಾಗಿ ತನ್ನ ವಿಚಾರಗಳನ್ನು ತಾಯಿಗೂ ಹೇಳುವುದು ಅಸಾಧ್ಯವಾಗಿ ಕಂಡಿತು.

ಊಟಕ್ಕೆ ಕುಳಿತಾಗ ತಾಯಿ ಮುಂದುವರಿದಿದ್ದರು.

"ನಿಶ್ಶಕ್ತಿ ಹೆಚ್ಚಾದ ಹಾಗೆ ಗಾಬರಿಯೂ ಹೆಚ್ಚು. ಈಗ ನಾಲ್ಕು ದಿನದಿಂದಂತೂ ವತ್ಸಲೆ ಬರಲಿಲ್ಲ, ಬರಲಿಲ್ಲ ಎಂದು ಜಪ ಮಾಡುತ್ತಿದ್ದಾನೆ. ಆಕೆ ಏನು ಬಂದು ಬೇನೆ ಕಡಿಮೆ ಮಾಡುವ ಹಾಗಿದ್ದಾಳೆಯೆ ?"

"ಹೊ, ಹೇಳಲು ಮರೆತೇ ಇದ್ದೆ. ವತ್ಸಲೆಯಿಂದ ಕಾಗದ ಬಂದಿದೆ."

"ಈ ಹೊತ್ತು ಬಂದ ಕಾಗದ ವತ್ಸಲೆಯದೆ ?"

"ಹುಂ. ಎರಡು ಮೂರು ದಿನಗಳಲ್ಲಿ ಬರುತ್ತೇನೆಂದು ಬರೆದಿದ್ದಾಳೆ. ಆಕೆಗೆ ಬರಬೇಕೆಂದು ಬರೆದಿದ್ದರೆ ?"

"ಹೌದು, ಬರೆದು ಆಗಲೆ ಎಂಟು ದಿನವಾಯಿತು. ಅಲ್ಲಿಗೂ ಇಂದು ಕಾಗದ ಬಂದಿದೆ. ಅದನ್ನೋದಿದ ಮೇಲೆ ಎಷ್ಟೊ ಸಮಾಧಾನದಿಂದಿದ್ದಾನೆ. ಅಂತೂ ಈ ಮಳೆ ಹವೆ ತೀರ ಸತಾಯಿಸಿಬಿಟ್ಟಿದೆ ಆತನನ್ನು. ಮಳೆ ನಿಂತರೆ ಒಂದಿಷ್ಟು ಗುಣವಾಗಬಹುದೆಂದು ಕಾಣುತ್ತದೆ."

"ಆತನಿಗೀಗ ಎಪ್ಪತ್ತಾಗಿರಬೇಕಲ್ಲವೆ ?"

" ಹುಂ. ಎಷ್ಟುತ್ತಕ್ಕೆ ಸಮೀಪಿಸಿರಬೇಕಷ್ಟೆ. ನನಗೆ ಮದುವೆಯಾದಾಗಲೆ ನಲವತ್ತು ಎನ್ನುತ್ತಿದ್ದ.

* * *

ಮರುದಿನ ಮಧ್ಯಾಹ್ನ ಗೋಪಿ ಅಜ್ಜ ಶೀನಪ್ಪನನ್ನು ನೋಡಹೋದ. ಮುನ್ನಾದಿನದಕಿಂತಲೂ ಹುಷಾರಾಗಿದ್ದನೆಂದೇ ಹಾಸಿಗೆಯಿಂದೆದ್ದು ಹತ್ತಿರ ದಲ್ಲಿಯೇ ಪಡಸಾಲೆಯಲ್ಲಿ ದಿಂಬಿಗೆ ಆತುಕೊಂಡು ಕುಳಿತಿದ್ದ. ಗೋಪಿ ಆತ ನನ್ನು ನೋಡಿಯಾದ ಮೇಲಿನ ಇತ್ತೀಚಿನ ಮೂರು ನಾಲ್ಕು ದಿನಗಳಲ್ಲಿ ಇಷ್ಟೊಂದು ಬದಲಾವಣೆಯಾಗಿರಬಹುದೆಂದು ಗೋಪಿಗೆನಿಸಿರಲಿಲ್ಲ. ಮುಖ ತೀರ ಕ್ಷೀಣವಾಗಿತ್ತು. ಕಣ್ಣುಗಳು ನಿಸ್ತೇಜವಾಗಿದ್ದುವು. ಬಡಕಲಾದ ದೇಹ ವನ್ನು ಕೆಮ್ಮು ಪೂರ್ತಿಯಾಗಿ ದಣಿಯಿಸಿತ್ತು. ಮುಖದ ಮೇಲೆ ಬೆಳೆದ ಗಡ್ಡ ದಿಂದಾಗಿ, ಬಿಳಿಚಾಗಿ ಎದ್ದು ಕಾಣುತ್ತಿದ್ದ ಕಣ್ಣ ಕೆಳಗಿನ ಎಲುಬುಗಳಿಂದಾಗಿ ಮುಖ ಇನ್ನೂ ವಿವರ್ಣವಾಗಿ ಕಾಣುತ್ತಿತ್ತು.

" ಬಾ, ಗೋಪಿ, ಬಂದೆಯಾ— "

ಗೋಪಿ ಹತ್ತಿರದಲ್ಲಿ ಹೋಗಿ ಕುಳಿತ.

" ಮೂರು ನಾಲ್ಕು ದಿನವಾಯಿತು. ಏನು ಬಹಳ ಅಪರೂಪ ಮಾಡಿ ಬಿಟ್ಟೆ ?—ಅಥವಾ ಬಂದಾದರೂ ಏನು, ಮುದುಕನ ಕೆಮ್ಮು ಕೇಳಲಿಕ್ಕೆ ಎನ್ನುತ್ತೀಯೊ ? "

ಎಂದು ಮ್ಲಾನವಾದ ಒಂದು ನಗೆಯೊಂದನ್ನು ಬೀರಿದ. ಆ ನಗೆಯಿಂದ ಭರವಸೆ ಪಡೆದು ಅದರ ಸುಳಿವನ್ನೆ ಹಿಡಿದು ಸಾಗುತ್ತಿದ್ದವನಂತೆ ಗೋಪಿಯೂ ನಕ್ಕು ಕೇಳಿದ.

" ನಿನ್ನೆ ಏನೋ ಮಧ್ಯಾಹ್ನ ತುಂಬಾ ಗಾಬರಿ ಮಾಡಿಸಿದ್ದೆಯಂತಲ್ಲ ? "

" ಹುಂ—ಮತ್ತಿನ್ನೇನು ಮಾಡುವುದು ? ಸುಮ್ಮನೆ ಯಾರಾದರೂ ನನ್ನ ಹತ್ತಿರ ಬಂದು ಕುಳಿತಿರಿ ಎಂದು ಹೇಳಿದರೆ ಕುಳಿತಿರುತ್ತಾರೆಯೆ ? "

" ಅಂತೂ ಅಷ್ಟಕ್ಕೆಯೆ ಅನ್ನು ಈ ಎಲ್ಲ ನಾಟಕ ? "

" ನಾಟಕ ಅನ್ನು ಏನೂ ಅನ್ನು. ಈಗ—ಉಹುಃ,—ಉಹುಃ— "

ಶೀನಪ್ಪನಿಗೆ ಕೆಮ್ಮು ಉಸಿಲುಸಾಲದ ಹಾಗೆ ಒತ್ತರಿಸಿಬರುತ್ತಿತ್ತು. ಆತನ ಸಂಕಟವನ್ನು ಗೋಪಿಗೆ ನೋಡಲಾಗಲಿಲ್ಲ. ಆದರೇನು ಮಾಡು

ವುದು ? ಬಂದ ಕೆಮ್ಮು ತಾನಾಗಿಯೇ ನಿಲ್ಲಬೇಕು. ನದಿಗೆ ಬಂದ ನೆರೆ ತಾನಾಗಿಯೇ ಅಲ್ಲವೆ ಇಳಿಯಬೇಕಾದದ್ದು ? ಗೋಪಿಯ ಕಣ್ಣೆದುರು ತುಂಬ ಹರಿಯುತ್ತಿದ್ದ ಮಾರ್ಕಂಡೇಯದ ನೀರ ಪ್ರವಾಹ ನಿಂತಿತು. ಶೀನಪ್ಪ ಬಂದ ಕೆಮ್ಮನ್ನು ತಡೆಯಲು ಪ್ರಯತ್ನಿಸುತ್ತಿದ್ದ. ಆದರೆ ಅದು ನಿಂತದ್ದು ಪೂರ್ತಿ ಒಂದೆರಡುನಿಮಿಷ ಕೆಮ್ಮಿದ ನಂತರವೆ.

" ಅಲ್ಲ — ಏನೆನ್ನುತ್ತಿದ್ದೆ ?— ಹಾಂ. ಈಗ ನೋಡು, ನಿನ್ನೆ ನಿನಗೆ ಶಾರದೆ ಹೇಳಿರಬೇಕು. ಅಂತೆಯೆ ಅಲ್ಲವೆ ನೀನು ಬಂದದ್ದು ?— ಅದಿರಲಿ ಬಿಡು. ನಿನ್ನೆ ಮಧ್ಯಾಹ್ನವೇ ನಾನು ಹೇಳಿಕಳಿಸಿದ್ದು. ಎಲ್ಲಿಗೆ ಹೋಗಿದ್ದೆ ? "

" ನಿನ್ನೆ ಮಧ್ಯಾಹ್ನ— ಅಂ— ನಿನ್ನೆ ರಂಗಧೂಳಿಗೆ ಹೋಗಿದ್ದೆ— "

" ಇಂಥ ಮಳೆಯಲ್ಲಿ ? ಹಾಂ, ಈಗ ರಂಗಧೂಳಿ ಭವ್ಯವಾಗಿರಬೇಕು."

ಯಾವುದೋ ಒಂದು ಕಾಲ ನೋಡಿದ ದೃಶ್ಯ ಕಣ್ಣುಕಟ್ಟಿರಬೇಕು. " ಇನ್ನೇನು ನಾನು ಅಲ್ಲಿಗೆ ಹೋಗಿ ಕಣ್ಣಾರೆ ಕಾಣುವುದು ಸಾಧ್ಯವಿಲ್ಲ " ಎಂಬ ವ್ಯಥೆಯ ಸೂಚನೆ ಇದ್ದಿತು ಆ ಮಾತಿನಲ್ಲಿ. ಆದರೆ ಯೋಚನೆ ಬೇರೆಡೆಗೆ ಹರಿದು ಕೇಳಿದ

" ಈಗಾಗಲೆ ಬಿತ್ತಿಯಾಗಿರಬೇಕಲ್ಲವೆ ? "

" ಆಗದೆ ಏನು ? ಕಬ್ಬಿನ ಸಸಿ ಆಗಲೆ ಒಳ್ಳೆ ಹುಲುಸಾಗಿ ಬಂದುಬಿಟ್ಟಿದೆ. ಈಚೆಯ ತೋಟದಲ್ಲಿಯೂ ಅಷ್ಟೆ. ಒಳ್ಳೆ ನೋಡುವ ಹಾಗಿದೆ. ಈಗ— "

ಶೀನಪ್ಪನ ಮನಸ್ಸು ಹಳೆಯ ನೆನಹನ್ನು ಹಿಂಬಾಲಿಸಿತ್ತು.

" ಏನೋ ನಿಮ್ಮಪ್ಪ ಧೈರ್ಯಮಾಡಿದ ಒಂದು ಕಾಲಕ್ಕೆ ಎಂದು ಇಷ್ಟೆಲ್ಲ ಆಯಿತು. ಎಂಥ ಕಾಡು ? ಈಗಿನ ಕೆರೆ ಕಾಲುವೆ ಒಂದೂ ಇರಲಿಲ್ಲ. ಕೆರೆಯಲ್ಲಿ ನೀರು ತುಂಬಾ ಬಂದಿರಬೇಕಲ್ಲವೆ ? "

" ಓ, ತುಂಬಿ ತುಳುಕಾಡುತ್ತಿದೆ. ನಡುವಿನ ಕಮಲದ ಬಳ್ಳಿಯಂತೂ ಕೈ-ಮೈಚಾಚಿ ವಿಸ್ತಾರವಾಗಿ ನಿಂತಿದೆ. ನೋಡಿ ನೋಡಿ ಕಣ್ಣುದಣಿಯಬೇಕು."

" ಯಾತಕ್ಕೆ ಹಚ್ಚಿದನೋ ನಿಮ್ಮಪ್ಪ ಆ ಬಳ್ಳಿಯನ್ನು ? ನೀರ ಕಂಟಿ ಬೆಳೆದುಬಿಟ್ಟು ಕೆರೆಯ ತಳ ರೇವೆಗಟ್ಟುತ್ತದೆ. ಹತ್ತಿಪ್ಪತ್ತು ವರ್ಷಗಳಲ್ಲಿ ಕೆರೆಗೆ ನೀರು ಕಡಿಮೆಯಾಗುತ್ತದೆ. ಹಚ್ಚಬಾರದಾಗಿತ್ತು. ಅದನ್ನು— "

ಗೋಪಿ ಈ ಮಾತನ್ನು ಒಪ್ಪುವುದು ಸಾಧ್ಯವೇ ಇರಲಿಲ್ಲ. ಆ ಕಮ ಲದ ಬಳ್ಳಿ ರಂಗಧೂಳಿಯ ಚೆಲುವಿಗೊಂದು ಸಂಕೇತವಾಗಿತ್ತು. ಶೀನಪ್ಪನ ದೃಷ್ಟಿ ಯಾವಾಗಲೂ ವ್ಯವಹಾರದ ದೃಷ್ಟಿ. ಶೀನಪ್ಪನ ಮನಸ್ಸು ಆ ಕಾಡಿನೊಳ ಗಿನಿಂದ ತನ್ನ ಅಳಿಯ ಎಷ್ಟು ದುಡ್ಡು ಗಳಿಸಿದ ಎಂಬುದನ್ನು ನೆನೆಯುತ್ತಿತ್ತಾ ದರೆ ಗೋಪಿ ಅದೇ ಕಾಡು ತನ್ನ ತಂದೆಯಿಂದಾಗಿ ಬೆಡಗಿನ ಬೀಡಾದುದನ್ನು ನೆನೆಯುತ್ತಿದ್ದ. ಈ ಮಾತನ್ನೆತ್ತಿ ಗೋಪಿಗೆ ವಾದ ಹೂಡಬೇಕಾಗಿರಲಿಲ್ಲ. ಬೇರೆ ಏನಾದರೊಂದು ಮಾತೆಂದು ಕೇಳಿದ

" ವತ್ಸಲೆ ಬರುವವಳಿದ್ದಾಳಂತೆ ? "

" ಹುಂ—ನಾಡಿದ್ದು ಬರುತ್ತೇನೆಂದು ಬರೆದಿದ್ದಾಳೆ. ಮೂರು ಕಾಗದ ಬರೆದರೆ ಒಂದು ಉತ್ತರ. ಏನೋ ಒಂದು ತರಹ ಆಕೆಯ ಸ್ವಭಾವ ಆಗಿಬಿಟ್ಟಿದೆ. ಏನು ಓದುತ್ತಾಳೊ, ಏನು ಮಾಡುತ್ತಾಳೊ, ನನ ಗಂತೂ ಒಂದೂ ತಿಳಿಯುವುದಿಲ್ಲ. ಅವರಪ್ಪನನ್ನು ಕೇಳಿದರೆ ' ಮನೆಯಲ್ಲಿ ಕುಳಿತಾದರೂ ಏನು ? ತನ್ನ ಮನಸ್ಸಿದ್ದ ಹಾಗೆ ಮಾಡಲಿ. ಓದಬೇಕೆನಿಸಿ ದಷ್ಟು ಓದಲಿ ' ಎಂದುಬಿಡುತ್ತಾನೆ. ಸುಮ್ಮನೆ ಎಲ್ಲಾದರೂ ಒಂದು ಮದುವೆ ಮಾಡಿಕೊಂಡು ಸುಖವಾಗಿರಬಾರದೆ ? ಆದರೆ ನನ್ನ ಮಾತು ಯಾರು ಕೇಳುತ್ತಾರೆ ? "

ಈ ಮಾತಿನಿಂದ, ಮಾತಿಗಿಂತಲೂ ಹೆಚ್ಚಾಗಿ ಅದನ್ನು ಪ್ರೇರಿಸಿದ ಭಾವವೆ ಯಿಂದ ಶೀನಪ್ಪನಿಗೆ ಆಯಾಸವಾಯಿತು. ಕೆಮ್ಮಿನ ' ಠಸಿಕೆ ' ಯೂ ಬಂದಿತು. ಅದನ್ನು ನಿವಾರಿಸಿಕೊಂಡು ಕೇಳಿದ.

" ಹೌದೊ ಅಲ್ಲವೊ ? ಅಂದರೆ— "

" ನಾನೇನು ಹೇಳಲಿ, ಅಜ್ಜಯ್ಯ ? ಮೊದಲಿನಿಂದಲೂ ಆಕೆಯದು ಒಂದಿಷ್ಟು ವಿಚಿತ್ರವಾದ ಸ್ವಭಾವವೆ. ಏನಾದರೂ ತಲೆಯಲ್ಲಿ ಹೊಕ್ಕಿತೆಂದರೆ ಅದನ್ನು ಕೊನೆಯವರೆಗೂ ಬಿಡುವುದಿಲ್ಲ. ಈಗ ಏನೊ ಸಂಶೋಧನೆ ಮಾಡು ತ್ತಿದ್ದಾಳಂತೆ— "

" ಏನು ಸಂಶೋಧನೆಯೊ ಏನು ಮಣ್ಣೊ ! ನನಗೆ ಕೇಳಿದರೆ ವರ ಸಂಶೋ ಧನೆ ಮುಖ್ಯ. ಅದಿಲ್ಲದಿದ್ದರೆ ಈ ಓದುಬರಹ ಯಾತಕ್ಕೆ ? "

ಎಂದು ತನ್ನ ಮಾತಿಗೆ ತಾನೇ ನಕ್ಕ. ಗೋಪಿಗೂ ಆ ಮಾತು ಮೋಜೆನಿ

ಸಿತು. ಮಾತು ಎಲ್ಲಿಗೊಯ್ಯುಬಹುದೆಂದು ಕೊಂಚ ಬೆದರಿದ. ಆದರೆ ಮೊದಲಿ ನಿಂದಲೂ ಶೀನಪ್ಪ ತನ್ನನ್ನು ಎಲ್ಲಿಲ್ಲದ ಅಕ್ಕರೆಯಿಂದ ಕಾಣುತ್ತಿದ್ದ. ತನ್ನ ಮಗ ನಲ್ಲಿಯೂ ಇಡದ ವಿಶ್ವಾಸವನ್ನು ತನ್ನಲ್ಲಿ ಇಟ್ಟಿದ್ದ. ಆದ್ದರಿಂದ ಯಾವ ಮಾತು ಬಂದರೂ ನೇರವಾಗಿ ಉತ್ತರ ಹೇಳಬಹುದೆಂಬ ಭರವಸೆಯಿಂದಲೇ ಕೇಳಿದ, ಆತನ ಮಾತಿನ ಜಾಡವನ್ನೇ ಹಿಡಿದು.

"ವರಸಂಶೋಧನೆ! ಒಳ್ಳೆ ಮಾತು ಇದು. ಆಕೆಯೆ ಹುಡುಕಿಕೊಳ್ಳ ಬೇಕೆ? ನೀವೆಲ್ಲರೂ ಮನೆಯಲ್ಲಿ ಹಿರಿಯರು ಇರುವಾಗ—"

"ಸರಿಯಾಯಿತು. ನಾವು ಹೇಳಿದ್ದು ಆಕೆಗೆ ಒಪ್ಪಿಗೆಯಾಗುತ್ತದೆಯೆ? ಕಳೆದ ಸಲ ಬಂದಾಗ ನಾನೇನೊ ಚೇಷ್ಟೆಗೆಂದು ಮದುವೆಯ ಮಾತನ್ನೆತ್ತಿದರೆ 'ಆ ಒಂದು ಮಾತನ್ನು ಬಿಟ್ಟು ಬೇರೆ ಮಾತೇ ಇಲ್ಲವೆ?' ಎಂದು ಸಿಡಿಪಿಡಿ ಮಾಡಿ ಸಾಕು ಬೇಕು ಮಾಡಿಕೊಟ್ಟಳು."

ಏನು ಮಾತನಾಡುವುದು ತಿಳಿಯದ್ದಕ್ಕಾಗಿ ಗೋಪಿ ಸುಮ್ಮನಾದ. ಗೋಪಿ ವತ್ಸಲೆಯನ್ನು ನಿರಾಕರಿಸಿದ್ದು ಶೀನಪ್ಪನಿಗೆ ತಿಳಿಯದಿರಲಿಲ್ಲ. ಆದರೆ ಆತನ ಮೇಲೆ ಮೊದಲಿನಿಂದಲೂ ತುಂಬ ಅಕ್ಕರೆಯಾದ್ದರಿಂದ "ಬೇಡವಾದರೆ ಬಿಡಲಿ. ಮನಸ್ಸಿಲ್ಲದ ಮದುವೆ ಎಂಥದು? ವತ್ಸಲೆ ನೋಡುವುದಕ್ಕೆ ಚೆಲುವೆಯಾಗಿದ್ದಾಳೆ. ಆಕೆಗೆ ಗಂಡನೊಬ್ಬ ಇನ್ನು ಮುಂದೆ ಹುಟ್ಟಬೇಕಾಗಿರಲಿಲ್ಲ. ತನಗೆ ತಿಳಿದ ಹಾಗೆ ಮಾಡಿಕೊಂಡಾಳು," ಎಂದು ಮುಂತಾಗಿ ಕಮಲಮ್ಮನಿಗೇ ಸಮಾಧಾನ ಹೇಳಿದ್ದ. ಶೀನಪ್ಪ ಮತ್ತೊಮ್ಮೆ ಕೆಮ್ಮಿನ ಕಾರ್ಯಕ್ರಮವನ್ನು ಮುಗಿಯಿಸಿ ಗೋಪಿಯನ್ನೇ ದಿಟ್ಟಿಸುತ್ತ ಕೇಳಿದ.

"ಯಾಕೆ ಗೋಪಿ, ಇಷ್ಟೊಂದು ಸೊರಗಿಹೋಗಿದ್ದೀ? ಮೈಯಲ್ಲಿ ಸ್ವಸ್ಥವಿಲ್ಲವೆ?"

"ಸ್ವಸ್ಥವಿಲ್ಲದೇನು? ಚೆನ್ನಾಗಿ ಎರಡು ಹೊತ್ತು ಊಟ ಮಾಡಿಕೊಂಡು ಕೆಲಸವಿಲ್ಲದೆ ತಿರುಗಾಡುತ್ತೇನೆ. ಸೊರಗಲಿಕ್ಕೇನಾಯಿತು?"

"ಬರೀ ಊಟದಿಂದ ಮನುಷ್ಯ ಸೊಕ್ಕುತ್ತಾನೆಯೆ? ಮನಸ್ಸು ಸುಖವಾಗಿರಬೇಕಾದದ್ದು ಮುಖ್ಯ—"

ಶೀನಪ್ಪ ಯಾವುದಕ್ಕಾಗಿ ದಾರಿ ಕಡಿಯುತ್ತಿದ್ದನೆಂಬುದನ್ನು ಗೋಪಿ ಗುರುತಿಸಿದ. ಆತನಿಂದ ಖಂಡಿತವಾಗಿ ಸಹಾನುಭೂತಿ ಯಾವಾಗಲೂ ಸಿಕ್ಕು

ಕ್ತಿತ್ತು. ಆದರೆ ಈ ವಿಷಯದಲ್ಲಿ ಆತನ ಸಹಾನುಭೂತಿಯಿಂದೇನಾಗಬೇಕು ? ಎಂದುಕೊಂಡು ಹೇಳಿದ.

" ಸುಖವಾಗಿಯೇ ಇದ್ದಿದೇನೆ. ನನಗೇನಾಗಿದೆ ? "

" ಏನಾಗಿದೆಯೆ ? ನನ್ನ ಮುಂದೆ ಯಾಕೆ ಈ ಮುಚ್ಚುಮರೆ ? ನನಗೆಲ್ಲವೂ ಗೊತ್ತು— " ಎಂದು ಆಚೆ ಈಚೆ ಯಾರೂ ಇರಲಿಲ್ಲವೆಂಬುದನ್ನು ತಿಳಿದುಕೊಂಡು ಮೆತ್ತಗಾಗಿ ಕೇಳಿದ.

" ಕೊನೆಗೆ ಏನಾಯಿತು ಗೋಪಿ ? "

" ಏನು ಏನಾಯಿತು ? "

" ಅದನ್ನೆಲ್ಲ ಬಿಡು. ನನ್ನೆದುರು ಹೇಳು. ಶಾಸ್ತ್ರಿಗಳ ಮಗಳ ವಿಚಾರ— "

" ಏನಾಗುವುದು ? ಏ-ನೂ ಆಗಲಿಲ್ಲ ! "

ಈ ಮಾತನ್ನು ಹೇಳುವಾಗ ಗೋಪಿಯ ಎದೆಯಲ್ಲಿ ನೋವು ಉಕ್ಕಿ ಬರುತ್ತಿತ್ತು.

" ಅಂದರೆ—? "

" ಅಂದರೆ ಏನು ? ಶಾಸ್ತ್ರಿಗಳು ಯಾವ ಮಾತನ್ನೂ ಹೇಳದೆ ಊರಿಗೆ ಹೊರಟು ಹೋಗಿದ್ದಾರೆ. ಆದರೆ ಒಪ್ಪಲಾರರು ಎಂದು ಕಾಣುತ್ತದೆ. ಶಂಕ್ರಪ್ಪನೇನೊ ತಂದೆಯ ಎದುರು ಹೇಳುತ್ತಿದ್ದನಂತೆ—ಶಾಸ್ತ್ರಿಗಳು ಒಪ್ಪುವ ಹಾಗೆ ಕಾಣುವುದಿಲ್ಲ ಎಂದು."

" ಕೆಲಸವಿಲ್ಲ ಆ ಶಂಕ್ರಪ್ಪನಿಗೆ. ಊರ ಕಾರುಭಾರ ಎಷ್ಟು ಮಾಡಿದರೂ ಸಾಲದು ಆತನಿಗೆ. ಶಾಸ್ತ್ರಿಗಳೆ ಹಾಗೆ ಹೇಳಬೇಕಿದ್ದರೆ ಶಂಕ್ರಪ್ಪನ ಮಧ್ಯಸ್ತಿಕೆ ಯಾತಕ್ಕೆ ಬೇಕಾಗಿತ್ತು ? "

" ಅದೇನೊ ಯಾರು ಬಲ್ಲರು ? ನಡೆದದ್ದಂತೂ ಇಷ್ಟು— "

" ಎಂದು ಬರುತ್ತಾರಂತೆ ಶಾಸ್ತ್ರಿಗಳು ? ಮೂರು ದಿನ ಹಿಂದೆ ನಾನೇ ಹೇಳಿಕಳಿಸಿದ್ದೆ. ಆದರೆ ಅವರಿಂದ ಬರುವ ಯಾವ ಸಮಾಚಾರವೂ ತಿಳಿದಿಲ್ಲವೆಂದು ಹೇಳಿದ್ದರು."

" ಈಗೇನೊ ಕಾಗದ ಬಂದಿದೆಯಂತೆ. ನಾಳೆ ಬುಧವಾರ ಅಥವಾ ಗುರುವಾರ ಬರಬಹುದು ಎಂದು ಕಾಣುತ್ತದೆ— "

" ಹಾಗಿದ್ದರೆ— "

ಶೀನಪ್ಪ ತನ್ನ ಯೋಚನೆಯಿಂದಾಗಿ ಮುಂದೆ ಮಾತನಾಡಲಿಲ್ಲ. ಆಡಿದ ಮಾತಿನಿಂದ ಆಯಾಸವೂ ಆಗಿತ್ತು. ಆದರೆ ಗೋಪಿಗೆ ಕುತೂಹಲ.

" ಹಾಗಾದರೆ ಏನು ? " ಎಂದ.

" ಏನೂ ಇಲ್ಲ. ಶಾಸ್ತ್ರಿಗಳು ತಿರುಗಿ ಬಂದ ಮೇಲೆ ನಾನೇ ಕರೆಯಿಸಿ ಹೇಳುತ್ತೇನೆ."

" ಹೇಳಿದರೆ ಕೇಳುತ್ತಾರೆಯೆ ಅವರು ? "

" ನಾನೇನು ಅವರಿಗೆ ಕೆಡಕು ಹೇಳುತ್ತೇನೆಯೆ ? ನೋಡುತ್ತಿರು ಬೇಕಾದರೆ, ನಾನು ಶಾಸ್ತ್ರಿಗಳನ್ನು ಒಪ್ಪಿಸುತ್ತೇನೆಯೊ ಇಲ್ಲವೊ— "

ಶೀನಪ್ಪ ಯಾವ ಭರವಸೆಯಿಂದ ಹಾಗೆ ಹೇಳಿದನೊ ! ಗೋಪಿಗೆ ಮಾತ್ರ ಹಿಡಿಸಲಾಗದಷ್ಟು ಸಮಾಧಾನವಾಯಿತು. ಇಷ್ಟು ನೇರವಾಗಿ ಆತನಿಗೆ ಯಾರೂ ಸಹಾಯ-ಸಹಾನುಭೂತಿಗಳನ್ನು ತೋರಿಸುತ್ತಿದ್ದಿಲ್ಲ. ಒಂದು ಕಾಲಕ್ಕೆ ತನ್ನ ಮಗಳಾದ ಶಾರದೆಗಾಗಿ ರಾಘವೇಂದ್ರರಾಯರು ಪಟ್ಟ ಪಾಡನ್ನು, ಅವರ ಆತುರ ಆಕಾಂಕ್ಷೆಗಳನ್ನು ಕಣ್ಣಾರೆ ಕಂಡ ಶೀನಪ್ಪನಿಗೆ ಗೋಪಿಯ ಒಳ ಮನಸ್ಸಿನ ನೋವು ಪೂರ್ತಿಯಾಗಿ ಅರ್ಥವಾಗಿತ್ತೆಂದು ಕಾಣುತ್ತದೆ. ಅಲ್ಲದೆ ಒಬ್ಬನೇ ಒಬ್ಬ ಮೊಮ್ಮಗನ ಸುಖದ ಹೊರತಾಗಿ ಬದುಕಿನ ಕೊನೆಯಲ್ಲಿ ಆತ ಬಯಸುವುದಕ್ಕಾದರೂ ಏನಿತ್ತು ? ಆದರೆ ವತ್ಸಲೆ ?—

* * * *

ವತ್ಸಲೆ ಊರಿಗೆ ಬಂದು ಎರಡು ದಿನವಾದರೂ ಗೋಪಿಯನ್ನು ಕಾಣಲಿಲ್ಲ. ಬಂದ ಸಮಾಚಾರ ಗೋಪಿಗೆ ತಿಳಿದಿದ್ದರೂ ತಾನಾಗಿಯೇ ಬೇಕೆಂತಲೆ ಹೋಗಲಿಲ್ಲ—ಶೀನಪ್ಪ ಒಂದು ಸಲ ಹೇಳಿಕಳಿಸಿದ್ದರೂ. ವತ್ಸಲೆಯನ್ನು ಕಾಣಬಾರದು ಎಂದಲ್ಲ. ಆಕೆ ತಾನಾಗಿಯೇ ಯಾಕೆ ಬರಬಾರದು ? ಎಂಬ ವಿಚಾರಕ್ಕಾಗಿ. ಆಕೆ ಬಂದ ದಿನ ಹೀಗಿದ್ದ ವಿಚಾರ ಮರುದಿನ ಸಾಯಂಕಾಲದವರೆಗೂ ಆಕೆ ಬಾರದಿದ್ದಾಗ ಅಭಿಮಾನದ ಪ್ರಶ್ನೆಯಾಯಿತು. ಆಕೆ ಬಾರದಿದ್ದರೆ ತಾನಾದರೂ ಯಾತಕ್ಕೆ ಹೋಗಬೇಕು ಎನ್ನುವಂತಾಯಿತು. ಇಷ್ಟು ಬೇಡವಾಗಿದ್ದರೆ ನಾನಾದರೂ ಹೋಗಿ ಏನು ? ಆದರೆ ಮರುದಿನ ಸಾಯಂಕಾಲ—ಅಥವಾ ರಾತ್ರಿ—ಶೀನಪ್ಪನ ದೇಹಸ್ಥಿತಿಯಲ್ಲಾದ ಬದಲಾವಣೆಯಿಂದಾಗಿ ಗೋಪಿಯ ವಿಚಾರವೂ ಬದಲಾಗಬೇಕಾಗಿ ಬಂದಿತು. ಅಂದು ರಾತ್ರಿ ಶೀನಪ್ಪ ಇದ್ದಕ್ಕಿದ್ದ

ಹಾಗೆ ತೀರ ನಿತ್ರಾಣನಾಗಿ ಕೆಮ್ಮಿಲಿಕ್ಕೂ ಅವಸಾನ ಉಳಿಯದೆ ಗಾಬರಿ ಮಾಡಿದ ನಂತೆ. ನಡುರಾತ್ರಿಯಲ್ಲಿಯೇ ಎದ್ದು ಹೋದ ಕಮಲಮ್ಮ, ರಾಘವೇಂದ್ರ ರಾಯರು ಬೆಳಗಿನವರೆಗೂ ಅಲ್ಲಿಯೇ ಇದ್ದದ್ದು, ಗೋಪಿಗೆ ತಿಳಿದದ್ದು ಬೆಳಗಾದ ಮೇಲೆಯೆ. ಹೀಗಾಗಿ ಮೂರನೆಯ ದಿನ ಬೆಳಿಗ್ಗೆ ವತ್ಸಲೆಗಾಗಿ ಅಲ್ಲದಿದ್ದರೂ ಶೀನಪ್ಪನಿಗಾಗಿ ಗೋಪಿಗೆ ಅವರ ಮನೆಗೆ ಹೋಗಲೇಬೇಕಾಯಿತು. ಹೋದ. ಆದರೆ ಹೋಗುವಾಗ ಗೋಪಿಯ ಮನಸ್ಸಿನಲ್ಲಿ ಶೀನಪ್ಪನಿಗಿಂತಲೂ ಹೆಚ್ಚಾಗಿ ವತ್ಸಲೆಯ ಯೋಚನೆಯೆ ಹೆಚ್ಚಾಗಿತ್ತು ಎಂದು ಹೇಳಿದರೆ ಶೀನಪ್ಪನಿಗಿಂತಲೂ ವತ್ಸಲೆಯನ್ನೇ ಹೆಚ್ಚಾಗಿ ಪ್ರೀತಿಸುತ್ತಿದ್ದ ಎಂದು ತಿಳಿಯಬೇಕಾಗಿಲ್ಲ. ಆಗಿನ ಪರಿಸ್ಥಿತಿಯಲ್ಲಿ ಆತ ವತ್ಸಲೆಯನ್ನು ಕುರಿತು—ಆಕೆಯನ್ನು ಹೇಗೆ ಮಾತನಾಡಿ ಸುವುದು? ಏನೆಂದು? ಏನು ಮಾತು ನಡೆಯಬಹುದು? ಹಳೆಯ ವಿಷಯವನ್ನೆ ಮತ್ತೆ ಆಕೆ ಎತ್ತಿದರೆ ಹೇಗೆ? ಶಾಂತಳ ಪ್ರಸ್ತಾಪ ಆಕೆಗೆ ಗೊತ್ತಾಗಿರಬಹುದು, ಆಕೆ ಏನೆನ್ನಬಹುದು? ಎಂದು ಮುಂತಾಗಿ-ಆತ ಯೋಚಿಸುತ್ತ ಮನೆಯಿಂದ ಹೊರಟಿದ್ದರೆ ಅದು ಸ್ವಾಭಾವಿಕವೆ. ಆದರೆ ಗೋಪಿ ಎಷ್ಟು ಎಣಿಕೆ ಹಾಕಿ ಕೊಂಡು ಸರ್ವಸಿದ್ಧತೆಯಿಂದ ಹೊರಟರೂ ನಡೆದ ಸಂದರ್ಭ ಬೇರೆಯಾಗಿಯೆ ನಡೆಯಿತು. ಮನುಷ್ಯನ ಊಹೆ ಪರಿಮಿತವಾದದ್ದು. ಜೀವನದಲ್ಲಿಯ ಸಾಧ್ಯಾ ಸಾಧ್ಯತೆಗಳು ಲಕ್ಷಾಂತರ. ಅಲ್ಲವೆ ?

ತಾನು ಹೋಗಿ ಶೀನಪ್ಪನೊಡನೆ ಮಾತನಾಡುತ್ತಿರುವಾಗ ತಾನು ಬಂದ ದ್ದನ್ನು ತಿಳಿದು ವತ್ಸಲೆ ಅಲ್ಲಿಗೆ ಬರುತ್ತಾಳೆ, ಮಾತಿಗೆ ಮೊದಲಾಗುತ್ತದೆ, ಒಬ್ಬ ರೊಬ್ಬರನ್ನು ಕಾಣದೆ ಇದ್ದುದರ ಸಂಕೋಚ ಕಳೆಯಲಿಕ್ಕೆ ಅನುಕೂಲವಾಗು ತ್ತದೆ ಎಂದು ಹಾಕಿದ ಗೋಪಿಯ ಎಣಿಕೆ ತಪ್ಪಿತು. ಶೀನಪ್ಪ ಅದೇ ನಿದ್ರೆ ಹೋದ ಹಾಗಿತ್ತು. ಗೋಪಿಗೆ ನೇರವಾಗಿ ಒಳಗಡೆ ಹೋಗದೆ ಗತ್ಯಂತರ ಉಳಿಯಲಿಲ್ಲ. ವತ್ಸಲೆಯ ತಾಯಿ ಆಕೆ ಹಿಂದಿನ ಕೋಣೆಯಲ್ಲಿರುವುದಾಗಿ ಹೇಳಿದಳು. ನೇರವಾಗಿ ಅಲ್ಲಿಗೇ ಹೋದ.

ವತ್ಸಲೆ ಮುಸುಕೆಳೆದು ಉದ್ದವಾಗಿ ಮಲಗಿದ್ದಳು. ನಡುಮನೆಯಲ್ಲಿ ಗೋಪಿಯ ದನಿಯನ್ನು ಕೇಳಿ ಹಾಗೆ ಮುಸುಕನ್ನೆಳೆದಿದ್ದಳು. ಕಾಲು ಸದ್ದು ಮಾಡಿದ. ಹೊದ್ದಿಕೆ ಮಿಸುಕಾಡಿದ್ದರ ಮೇಲೆ ಆಕೆ ಎಚ್ಚರವಾಗಿರಬೇಕೆಂದು ನೇರವಾಗಿ ಹತ್ತಿರಕ್ಕೆ ಬಂದು "ನಿದ್ರೆ ಒಳ್ಳೆ ಬಲವಾಗಿ ಹತ್ತಿದ ಹಾಗಿದೆ ?"

ಎಂದ. ಹೊದ್ದಿಕೆ ಮತ್ತೆ ಮಿಸುಕಾಡಿತು. ಆದರೆ ವತ್ಸಲೆ ಉತ್ತರ ಹೇಳಲಿಲ್ಲ. ಗೋಪಿ ನಸುನಗುತ್ತ ನಿಧಾನವಾಗಿ ಮುಖದ ಮೇಲಿಂದ ಹೊದ್ದಿಕೆಯನ್ನು ಸರಿಸಿದ. ವತ್ಸಲೆ ಕಣ್ಣು ಮುಚ್ಚಿದ್ದಳು-ಪ್ರಯತ್ನಪೂರ್ವಕವಾಗಿ ಎಂಬುದು ಸ್ಪಷ್ಟವಾಗಿತ್ತು.

"ಓಹೋಹೋ. ಏನು ನಿದ್ರೆಯಪ್ಪಾ ಇದು! ಇಷ್ಟು ಗಾಢವಾಗಿ ನಿದ್ರೆ ಹತ್ತಿದ್ದರೂ ಕಣ್ಣೆವೆ ಮಾತ್ರ ಎಚ್ಚರವಾಗಿಯೆ ಇವೆ!"

ವತ್ಸಲೆ ಏಳಲಿಲ್ಲ. ಕಣ್ಣು ತೆರೆಯಲಿಲ್ಲ.

"ಆಗಲಿ, ಹಾಗಿದ್ದರೆ ನಿನ್ನ ನಿದ್ರೆಯಾದರೂ ಮುಗಿಯಲಿ. ನನಗಾದರೂ ಏನು ಕೆಲಸ! ನಿನ್ನ ನಿದ್ರೆ ಮುಗಿಯುವವರೆಗೆ ಕಾಯುತ್ತಲೆ ಇರುತ್ತೇನೆ."

ಎಂದು ಹತ್ತಿರ ಕುರ್ಚಿಯೊಂದನ್ನು ದರ್‍ರೆಂದು ಎಳೆದುಕೊಂಡು ಕುಳಿತ. ವತ್ಸಲೆ ಮನಸ್ಸಿನಲ್ಲಿ ಅಂದುಕೊಂಡಿರಬೇಕು "ಯಾರು ಕಾಯುತ್ತಿದ್ದುದನ್ನು ಯಾರು ಗಮನಿಸುತ್ತಾರೆ? ಕಾಯುತ್ತಿರುವವರು ಕಾಯುತ್ತಲೇ ಇರಬೇಕು" ಎಂದು. ಒಂದೆರಡು ನಿಮಿಷಗಳಲ್ಲಿ ಗೋಪಿ ಹಾಗೆ ನೋಡುತ್ತಲೇ ಇರುವಾಗ ಕಣ್ಣು ಮುಚ್ಚಿಕೊಂಡು ಇರುವುದು ಅಸಾಧ್ಯವಾಗಿ ಕಂಡಿತು ವತ್ಸಲೆಗೆ. ಕೊನೆಗೆ ಎದ್ದು ಕುಳಿತು ಬಲಗಡೆಯ ಹೊದ್ದಿಕೆಯನ್ನು ಎಡಹೆಗಲಮೇಲೆ ಹಾರಿಸಿ ಮೈಯೆಲ್ಲವನ್ನೂ ಮುಚ್ಚಿಕೊಂಡು

"ಹುಂ—" ಎಂದಳು.

"ನಿದ್ರೆ ಮುಗಿಯಿತೆ?"

"ಮುಗಿಯದೇನು ಮಾಡುತ್ತದೆ? ಹೀಗೆ ಎದುರಿನಲ್ಲಿ ಕಣ್ಣಿನಿಂದ ಇರಿಯುತ್ತ ಕುಳಿತರೆ?"

"ಅಂತೂ ನಿನ್ನ ನಿದ್ರೆ ಸೊಗಸಾಗಿದೆ. ನಿದ್ರೆಯಲ್ಲಿ ಅದೂ ಗೊತ್ತಾಗುತ್ತಿತ್ತು ನಿನಗೆ!"

"ಗೊತ್ತಾಗದೆ ಏನು ಮಾಡುತ್ತದೆ? ಕೋಣೆಯಲ್ಲಿ ಬರುತ್ತಿರುವಾಗಲೆ ದಡದಡ ಎಂದು ನೂರೆಂಟು ಸದ್ದು ಮಾಡುತ್ತಲೆ ಬಂದರೆ?"

"ಮತ್ತಿನ್ನೇನು ಮಾಡುವುದು ನಿದ್ರೆಯ ಸೋಗುಮಾಡುವವರಿಗೆ—"

ಆದರೆ ಗೋಪಿಯ ನಗುಮಾತು ವತ್ಸಲೆಯ ಹೃದಯವನ್ನು ಮುಟ್ಟುತ್ತಿದ್ದ ಹಾಗೆ ಕಾಣಲಿಲ್ಲ. ತನ್ನ ಬಿಗುವಿನಲ್ಲಿದ್ದ ಹಾಗೆಯೆ ಇದ್ದಳು. ಅಳೆ

ಯನ್ನು ನೋಯಿಸುವುದು ಗೋಪಿಗೆ ಬೇಡವಾಗಿತ್ತು. ಆದರೆ ಅಂಥ ಯೋಚನೆ ವತ್ಸಲೆಯ ಪಾಲಿಗೆ ಮಾತ್ರ ಇದ್ದಂತೆ ಕಾಣಲಿಲ್ಲ. ಒಂದೆರಡು ನಿಮಿಷ ಸುಮ್ಮನಾಗಿದ್ದು ಕೇಳಿದ

"ನಾನು ಬರಬಾರದಾಗಿತ್ತೇನು ?"

ವತ್ಸಲೆ ಉತ್ತರ ಹೇಳಲಿಲ್ಲ.

"ಇಷ್ಟು ನಿನಗೆ ಬೇಡವಾಗಿದ್ದರೆ, ಇಕೊ, ಹೊರಟೆ—"

ಎಂದು ಗೋಪಿ ಎದ್ದು ನಿಂತ. ವತ್ಸಲೆ ಬೇಡ ಎನ್ನಲಿಲ್ಲ. ಕಿಟಿಕಿಯ ಆಚೆ ನೋಡುತ್ತಿದ್ದಳು ಮಾತ್ರ. ಆಕೆಯ ಮನಸ್ಸು ಏನನ್ನು ಯೋಚಿಸುತ್ತಿತ್ತೊ ? ಆಕೆಯ ನೆಟ್ಟನೋಟ ಆಕೆಯಲ್ಲಿ ನಡೆದ ಯಾವುದೊ ಒಂದು ಭಾವನೆಯ ತುಮುಲವನ್ನು ಸ್ಪಷ್ಟವಾಗಿ ತೋರ್ಪಡಿಸುತ್ತಿತ್ತು. ಅದನ್ನು ತಿಳಿದೇ ಗೋಪಿಯ ಕಾಲುಗಳು ಮುಂದಕ್ಕೆ ಅಡಿಯಿಡಲಿಲ್ಲ—ಮನಸ್ಸಿಗೆ ಬೇಸರವೆನಿಸುತ್ತಿದ್ದರೂ. ಅರೆನಿಮಿಷ ಹಾಗೆಯೆ ಕುರ್ಚಿಯಲ್ಲಿ ಮತ್ತೆ ಕುಳಿತ. ವತ್ಸಲೆ ಕೇಳಿದಳು

"ನನ್ನ ಕಾಗದ ಬಂದಿತ್ತಲ್ಲವೆ ?"

"ಹುಂ—"

"ಆದರೂ ನಿಲ್ದಾಣಕ್ಕೆ ಬರಲಿಕ್ಕೆ ಪುರಸತ್ತಾಗಲಿಲ್ಲ."

"ಅಷ್ಟಕ್ಕೇ ಇದೆಲ್ಲ ?"

"ಅಷ್ಟಕ್ಕೊ ಎಷ್ಟಕ್ಕೊ ? ಬರಲಿಲ್ಲವೆಂದಮೇಲೆ—"

"ಅಂದು ಯಾವ ಪರಿಯಾಗಿ ಮಳೆ ಬೀಳುತ್ತಿತ್ತು, ಜ್ಞಾಪಕವಿದೆಯೆ?"

"ಹೊ ! ಮಳೆ—ಹೌದು ಮಳೆ ಬೀಳುತ್ತಿತ್ತು. ಬೇಕಾದ ಹಾಗೆ ಮಳೆ ಬೀಳುತ್ತಿರುವಾಗ ಐದು ಮೈಲಿ ನಡೆದು ರಂಗಧೂಳಿಗೆ ಹೋಗಲು ಬರುತ್ತದೆ. ಒಂದು ಮೈಲಿ ನಡೆದು ನಿಲ್ದಾಣಕ್ಕೆ—"

ಗೋಪಿ ಹೇಳಬಹುದಿತ್ತು. "ರಂಗಧೂಳಿಯೆ ? ಅಲ್ಲಿಗೆ ಹೋಗಲಿಕ್ಕೆ ಯಾವುದೂ ತಡೆಮಾಡದು. ಮಳೆ ಹೊಳೆಯಾಗಿ ಹರಿದರೂ ಸರಿ. ಅಲ್ಲಿ ಶಾಂತಾ ಇದ್ದಾಳೆ. ಊರಲ್ಲಿ ಆಕೆಯನ್ನು ಕಾಣಲಾಗದ್ದಕ್ಕೆ ಆಕೆಯನ್ನು ಅಲ್ಲಿಯ ಚೆಲುವಿನಲ್ಲಿ ಕಾಣುತ್ತೇನೆ," ಎಂದು. ಆದರೆ ಸುಮ್ಮನಾಗಿಬಿಟ್ಟ. ವತ್ಸಲೆ ಅನಿರೀಕ್ಷಿತವಾಗಿ ತಟ್ಟನೆ ಕೇಳಿಬಿಟ್ಟಳು

" ಮದುವೆ ಯಾವಾಗ ? "

" ಮದುವೆ ?—"

" ಹುಂ-ಹುಂ-ಮದುವೆ. ಶಾಸ್ತ್ರಿಗಳ ಶಾಂತಿಯ ಕೂಡ ! "

ಗೋಪಿ ಅರೆನಿಮಿಷ ಅವಾಕ್ಕಾದ. ಕೊನೆಗೆ ನಿಧಾನವಾಗಿ ಹೇಳಿದ.

" ನಾನು ಮದುವೆಯಾಗುವುದೇ ಇಲ್ಲ ಎಂದು ಕಾಣುತ್ತದೆ ! "

ಆ ಮಾತಿನಲ್ಲಿಯ ಭಾವನೆಯ ಆಳವನ್ನು, ಅದರ ನೋವನ್ನು ವತ್ಸಲೆ ತಿಳಿಯುವುದು ಸಾಧ್ಯವೇ ಇರಲಿಲ್ಲ.

" ಅದೆಲ್ಲ ಬರೀ ಮಾತು, ಗೋಪಿ. ಇಂಥ ಮಾತಿನಿಂದ ನಾನು ಇನ್ನು ಮುಂದೆ ಮೋಸ ಹೋಗಬೇಕಿಲ್ಲ. ಮೋಸ ಹೋಗುವುದೂ ಇಲ್ಲ. ಕಣ್ಣು ತೆರೆದು ನೋಡುತ್ತಿದ್ದೇನೆ. ಮನಸ್ಸು ಬಿಚ್ಚಿ—"

" ಇದರಲ್ಲಿ ಮೋಸ ಯಾವುದೂ ಇಲ್ಲ, ವತ್ಸಲೆ ! ಮೋಸ ಎಂದು ಯಾಕೆ ತಿಳಿಯಬೇಕು ? ಯಾರು ಯಾರನ್ನು ಮೋಸ ಮಾಡುವುದು ? ಯಾರನ್ನು ಯಾರೂ ಮೋಸ ಮಾಡುವುದು ಸಾಧ್ಯವಿಲ್ಲ. ಮಾಡಿದ ಮೋಸ ಯಾವಾಗಲೂ ತನ್ನ ಪಾಲಿಗೆಯೆ. "

" ಹಾಗಿದ್ದರೆ ನೀನು ಆಕೆಯನ್ನು ಮದುವೆಯಾಗುವುದು ಸುಳ್ಳೆ ? "

" ಆಗಬೇಕು ಎಂದು ಆಸೆ ಇದೆ. ಆದರೆ ಆಗಬಹುದು ಎಂದು ತೋರುವುದಿಲ್ಲ."

" ನಾನು ಮೋಸ ಎನ್ನುವುದು ಇದಕ್ಕೆಯೆ."

" ಮೋಸ ಏನಾಯಿತು ? "

" ಆಗಬಹುದೆಂದು ತೋರುವುದಿಲ್ಲ ಎಂಬ ಸುಳ್ಳು ಯಾಕೆ ? ಈ ಸುಳ್ಳು ಸಮಾಧಾನದ ಮಾತು ಯಾಕೆ ನನ್ನೆದುರು ? "

" ನಿನ್ನ ಸಮಾಧಾನಕ್ಕಾಗಿ ನಾನು ಹೇಳಲಿಲ್ಲ. ನನ್ನ ಒಳಮನಸ್ಸಿನ ಅಸಮಾಧಾನಕ್ಕಾಗಿ ಹಾಗೆ ಹೇಳಿದೆ. ಇಲ್ಲದಿದ್ದರೆ ಆಸೆ ಇದೆ ಎಂದು ಯಾತಕ್ಕೆ ಹೇಳುತ್ತಿದ್ದೆ ? "

ವತ್ಸಲೆ ಸುಮ್ಮನಾದಳು. ಹಣೆಯ ಮೇಲಿನಿಂದ, ಕೂದಲುಗಳ ಮೇಲಿನಿಂದ ಎಡಹಸ್ತವನ್ನು ಸಾಗಿಸಿ ಬೇರೆಡೆಗೆ ನೋಡಿದಳು. ಗೋಪಿಯ ನೇರವಾದ ಮಾತು ತನ್ನ ಎದೆಯಲ್ಲಿಯ ನಿರಾಶೆಗೆ ಮೂರ್ತಸ್ವರೂಪ ಕೊಟ್ಟಿದ್ದರೂ

ಆತನ ಬಗೆಯಲ್ಲಿ ಕನಿಕರವೆನಿಸದಿರಲಿಲ್ಲ. ಒಂದು ಕ್ಷಣ ಗೋಪಿಯನ್ನೇ ದಿಟ್ಟಿಸಿ ನೋಡಿದಳು. ಆ ಒಂದು ಕ್ಷಣದಲ್ಲಿ ಹೆಣ್ಣು ಹೃದಯದಲ್ಲಿಯ ರಕ್ತ ಯಾವ ಮಾಯಾಶಕ್ತಿಗೆ ಒಳಗಾಗಿ ಮಿಡಿಯಿತೊ ! ಖತಿಗೊಂಡು ಹೋದ ಹೃದಯದಲ್ಲಿಯ ಕರುಣೆ ಅವತರಿಸಿತು. ಬಡಕಲಾಗಿ ಸೊರಗಿಹೋದ ಗೋಪಿಯ ದೇಹ ಆಕೆಯನ್ನು ಗಾಸಿ ಮಾಡಿತು: ಮೊದಲು ಕಣ್ತೆರೆದು ಗೋಪಿಯನ್ನು ನೋಡಿದಾಗಿನ ತ್ವೇಷ, ಬಿಗಿಹಿಡಿದ ಉದ್ವೇಗಗಳೆಲ್ಲವೂ ಮಾಯವಾದುವು. ತನಗೆಯೆ ತಿಳಿಯದ ಹಾಗೆ ಯಾವುದೊ ಒಂದು ಭವ್ಯವಾದ ಪರಿವರ್ತನೆ ತನ್ನಲ್ಲಿ ನಡೆಯುತ್ತಿದ್ದ ಹಾಗೆ ಭಾಸವಾಯಿತು. ಆ ಕ್ಷಣಕ್ಕೆ ಆಕೆ ಗೋಪಿಯನ್ನು ಬಯಸುತ್ತಿದ್ದ ವತ್ಸಲೆಯಾಗಿ ಉಳಿಯಲಿಲ್ಲ.

ವತ್ಸಲೆಯ ಹೃದಯದಲ್ಲಿ ಒಡಮೂಡಿದ ಈ ಹೊಸ ಭಾವನೆಯನ್ನು ವಿಂಗಡಿಸಿ ವಿವರಿಸುವುದು ಸಾಧ್ಯವಿಲ್ಲವೆಂದು ಕಾಣುತ್ತದೆ. ಶಾಂತಳನ್ನು ಮದುವೆಯಾಗುವ ಆಸೆ ಇದೆ ಎಂದು ನೇರವಾಗಿ ಹೇಳಿದ ಮಾತಿನಿಂದ ಆಕೆಯ ಆಸೆಗಳೆಲ್ಲವೂ ಕುಪ್ಪಳಿಸಿದುವು. ಒಂದು ಕ್ಷಣ ನಿರಾಶೆ ತಾನೇ ತಾನಾಗಿ ನಿಂತಿತು. ಆದರೆ ಆ ನಿರಾಶೆಯ ಮಡಿಲಲ್ಲಿಯೆ ಗೋಪಿಯ ಹೃದಯದ ಸರಳತನದ ಅರಿವು ಮೂಡಿನಿಂತಿತ್ತು. ಆತನ ಅಸಹಾಯತೆಯ ಅರಿವೂ ಬಂದಿತ್ತು. ಶಾಂತಳನ್ನು ಅನಿವಾರ್ಯವಾಗಿ ಪ್ರೀತಿಸುತ್ತಿದ್ದ ಆತ ಅನಿವಾರ್ಯವಾಗಿಯೇ ಆ ಮಾತನ್ನು ಹೇಳುತ್ತಿದ್ದಾನೆ ಎಂದು ತೋರಿತ್ತು. ಆತನ ಹೃದಯವಂತಿಕೆಯನ್ನು ಹತ್ತಾರು ಸಂದರ್ಭಗಳಲ್ಲಿ ತಿಳಿದಿದ್ದ ಆಕೆಗೆ ಆತನನ್ನು ಹೆಚ್ಚಾಗಿ ನೋಯಿಸಲು ಮನಸ್ಸಾಗಲಿಲ್ಲ. ಮಾತ್ರವಲ್ಲದೆ, ಇಂಥ ಪರಿಸ್ಥಿತಿಯಲ್ಲಿ ಗೋಪಿಯನ್ನು ತಾನು ಬಯಸಿ, ಅಥವಾ ಇದ್ದ ಬಯಕೆಯನ್ನು ಮುಂದುವರಿಸಿ ಆತನನ್ನು ದುಃಖಕ್ಕೀಡುಮಾಡುವುದರಲ್ಲಿ ಯಾರ ಸುಖವಿದೆ ? ಎಂದೂ ತೋರಿರಬೇಕು. ಈ ಯೋಚನೆಯಲ್ಲಿ ಆಕೆಯ ನಿರಾಶೆ ನಿರುತ್ತರವಾಯಿತು. ತನ್ನ ನಿಷ್ಪ್ರಯೋಜಕತೆಯನ್ನು ತಾನೇ ಕಂಡಿತು. ಗೋಪಿಯೊಡನೆ ಮದುವೆಯಾಗಿ ತಾವಿಬ್ಬರೂ ಸುಖವಾಗಿರಬೇಕೆಂದಲ್ಲವೆ ತನ್ನಲ್ಲಿದ್ದ ಹಳೆಯ ಹಂಬಲ ? ಇಂದು ಆತನಿಗೆ ಸುಖ ಬೇರೆಡೆಯಲ್ಲಿ ಕಾಣುತ್ತಿತ್ತು. ಸತಿಯಾಗಿ ಆತನ ಸುಖವನ್ನೇ ಬಯಸಬೇಕಾಗಿದ್ದ ತಾನು ಸತಿಯಾಗಿ ಅಥವಾ ಅಗಲೆಳಸಿ, ಆತನಿಗೆ ದುಃಖವನ್ನುಂಟುಮಾಡಿದರೆ ಏನು ಮಾಡಿದ ಹಾಗಾಯಿತು ? ಆತ ಸುಖವಾಗಿರುವುದೇ ತನಗೆ

ಮುಖ್ಯವಾದರೆ ಅದನ್ನು ಸಾಧ್ಯವಾಗಿಸುವ ದಾರಿಯನ್ನು ಕಾಣಬೇಕು. ತನ್ನ ಪಾಲಿಗೆ ಸುಖವಿಲ್ಲದಿದ್ದರೆ ಇಲ್ಲ. ಈ ಯೋಚನೆಯಲ್ಲಿ ಮೊದಲು ಸಿಡಿದೆದ್ದ ನಿರಾಶೆಯ ಜ್ವಾಲಾಮುಖಿ ನಿಧಾನವಾಗಿ ಶಾಂತವಾಯಿತು. ಕೊನೆಗೆ ಆರಿತು. ಅದರ ಶಾಂತತೆಯಲ್ಲಿ ಗೋಪಿಯನ್ನು ಕಣ್ತೆರೆದು, ಹೊಸದೃಷ್ಟಿಯಿಂದ ನೋಡಿದಳು. ಸೊರಗಿ, ಬಡಕಲಾಗಿ ಹೋದ ಗೋಪಿ ಕಣ್ಣೆದುರು ನಿಂತಿದ್ದ. ಧಾರಿಗಾಣದ ಆಸೆಗಳ ಭಾರವನ್ನು ಹೊತ್ತು ಅವುಗಳ ಭಾರಕ್ಕೆ ಮುಗ್ಗರಿಸುತ್ತಿದ್ದ. ಆತನನ್ನು ತಾನು ನಿಸ್ವಾರ್ಥಳಾಗಿ ಪ್ರೀತಿಸುತ್ತಿದ್ದುದೇ ಆದರೆ ಆತನನ್ನು ಕೈ ಹಿಡಿದು ಮೇಲಕ್ಕೇಳಿಸಬೇಡವೆ? ಇಲ್ಲದಿದ್ದರೆ ತಾನು ಪ್ರೀತಿಸುತ್ತಿದ್ದುದು ಎಂಥದು ?—

ವತ್ಸಲೆಯ ವಿಚಾರಚಕ್ರ ತಿರುಗುತ್ತಲೇ ಇದ್ದಿತು. ಆಕೆಯ ಅಂತರಂಗದಲ್ಲಿ ನಡೆದ ಈ ಕೋಲಾಹಲವನ್ನು ಗೋಪಿ ತಿಳಿಯದೆ ಹೋದ. ತನ್ನ ನೇರವಾದ ಮಾತಿನಿಂದಾಗಿ ಹುಟ್ಟಿದ ನಿರಾಶೆ ಆಕೆಯ ಬಾಯನ್ನು ಕಟ್ಟಿರಬೇಕು ಎಂದುಕೊಂಡ. ಆದರೆ ಇದರಲ್ಲಿ ಹೊಸದೇನಿದೆ ? ತನ್ನ ಮನಸ್ಸನ್ನು ಆಕೆ ಎಂದಿಗೋ ತಿಳಿದಿದ್ದಾಳೆ. ತಿಳಿದಿರಬೇಕು. ಪುಣೆಯಲ್ಲಿಯೇ ಒಂದೆರಡು ಸಲ ಹೇಳಿಲ್ಲವೆ ? ಆದರೆ ತಾನು ಆಗ ಮದುವೆಯಾಗುವ ಯೋಚನೆಯನ್ನೇ ಮಾಡಿಲ್ಲ ಎಂದು ಹೇಳಿದ್ದ. ಈಗ ಶಾಂತಳನ್ನು ಮಾಡಿಕೊಳ್ಳುವ ಆಸೆ ಇದೆ ಎಂದು ಹೇಳಿದ್ದ. ಏನಿದ್ದರೂ, ವತ್ಸಲೆಗೆ ಸಮಾಧಾನ ಹೇಳಬೇಕೆನಿಸಿದರೂ ಹೇಳುವ ಮಾತು ಬಾಯಿಗೆ ಬರಲಿಲ್ಲ. ಆದರೆ ಆಕೆಯನ್ನು ಸದ್ಯದ ಮನಃಸ್ಥಿತಿಯಲ್ಲಿಯೂ ಬಿಡಲಾಗಲಿಲ್ಲ.

"ವತ್ಸಲಾ ?" ಎಂದ.

"ಏನು ?— " ನಿದ್ರೆಯಿಂದ ಎಚ್ಚತ್ತವಳಂತೆ ಕೇಳಿದಳು.

"ನನ್ನ ಮಾತಿನಿಂದ ತುಂಬ ನಿರಾಶೆಯಾಯಿತೆ ?"

"ನಾನೇನು ಹೇಳಲಿ ಗೋಪೀ— ?"

"ನಾನು ನಿರುಪಾಯನಾಗಿದ್ದೇನೆ, ವತ್ಸಲಾ. ನಿಜವಾಗಿಯೂ ನಿರುಪಾಯನಾಗಿದ್ದೇನೆ. ಬಯಸಿದ್ದು ಕೈಗೆ ಸಿಕ್ಕುವದಿಲ್ಲ. ಕೈಗೆ ಸಿಕ್ಕಬಹುದಾದ್ದನ್ನು ಈ ಹೃದಯ ಬೇಡುವುದಿಲ್ಲ. ಏನು ಮಾಡಲಿ ? ನಿನಗೆ ನಾನು ಕೊಟ್ಟ ನಿರಾಶೆಗಾಗಿ ಈ ಜೀವ ಬದುಕಿರುವವರೆಗೂ ನಾನು ಕ್ಷಮೆ ಬೇಡಿದರೂ ಕಡಿಮೆ. ನಿನ್ನ ಬಯ

ಕೆಯು ಆಳ ನನಗೆ ಗೊತ್ತು. ನೀನು ನನ್ನನ್ನು ನಿಜವಾಗಿಯೂ ಕ್ಷಮಿಸಬೇಕು–"

ಗೋಪಿಯ ಕಣ್ಣು ಹನಿಗೂಡುವುದರಲ್ಲಿತ್ತು.

" ಎಂಥ ಮಾತು ಗೋಪಿ ಇದು ? ಹಾಗೆಲ್ಲ ಹೇಳಬೇಡ— "

" ಹಾಗಾದರೆ ಏನು ಹೇಳಲಿ ? "

ಗೋಪಿಯ ಅಸಹಾಯತೆಯನ್ನು ನೋಡಿ ತನ್ನ ಮನಸ್ಸಿನಲ್ಲಿದ್ದುದನ್ನು ಹೇಳದೆ ಇರುವುದು ವತ್ಸಲೆಗೆ ಅನ್ಯಾಯವಾಗಿ ಕಂಡಿತು.

" ಗೋಪಿ ಇಂದಿನ ನಿನ್ನ ಮಾತು, ನಿನ್ನ ಸ್ಥಿತಿಯನ್ನು ನೋಡಿ ನಾನು ಏನು ಹೇಳಬೇಕೊ ಅದೇ ನನಗೆ ತಿಳಿಯದಾಗಿದೆ. ಒಂದು ಮಾತನ್ನು ಮಾತ್ರ ಖಂಡಿತವಾಗಿ ಹೇಳಬಲ್ಲೆ. ನಾವಿಬ್ಬರೂ ಕೂಡಿ ಸುಖವಾಗಿರಬೇಕು–ಇರಬಹುದು–ಎಂದುಕೊಂಡಿದ್ದೆ. ಆದರೆ ನನ್ನ ಬಯಕೆ ಹೇಗೊ ಕೈಗೂಡಿಬಂದರೂ ಅದರಲ್ಲಿ ನಿನಗೆ ಸುಖವಿಲ್ಲ, ಆದ್ದರಿಂದ ನನಗೂ ಸುಖವಿಲ್ಲವೆಂಬುದನ್ನು ಪೂರ್ತಿಯಾಗಿ ಮನಗಂಡಿದ್ದೇನೆ. ನಿನ್ನ ಸುಖ ಬೇರೆಡೆಯಲ್ಲಿದೆ. ಅದು ಸಾಧ್ಯವಾಗಿ ನೀನು ಸುಖವಾಗಿದ್ದುದನ್ನು ನಾನು ನೋಡಬೇಕೆನ್ನುವುದೊಂದೇ ಆಸೆ ನನಗಿಂದು ಉಳಿದಿದೆ—"

ವತ್ಸಲೆಗೆ ಮುಂದೆ ಮಾತು ಬಾರದಾಯಿತು. ಗೋಪಿಯ ಕಣ್ಣಲ್ಲಿ ನೀರು ಕೋಡಿಯಾಗಿ ಹರಿಯುತ್ತಿತ್ತು. ಕೊರಳ ಸೆರೆ ಬಿಗಿದಿದ್ದರೂ ನಿರಾಶೆಯ ನಿರುತ್ಸಾಹದಲ್ಲಿ ಹೇಳಿದ

" ನನ್ನ ಪಾಲಿಗೆ ಸುಖವೆಂಬುದೇ ಇಲ್ಲವೆಂದು ಕಾಣುತ್ತದೆ. "

" ಹಾಗೇಕೆ ಹೇಳುತ್ತೀ ಗೋಪಿ ? ನೀನು ಸುಖವಾಗಿರುವಂತೆ ನಾನೇನಾದರೂ ಮಾಡಬಹುದಾಗಿದ್ದರೆ ಏನು ಬೇಕಾದುದನ್ನೂ ಮಾಡಿಯೇನು. "

" ಯಾರೂ ಏನೂ ಮಾಡುವ ಹಾಗಿಲ್ಲ ! "

" ಯಾಕೆ ? ಶಾಂತಳ ಕೂಡ ಮದುವೆಯಾಗುವೆ ಎಂದೆಯಲ್ಲ ? "

" ಆಸೆಯಿದೆ. ಆದರೆ ಅದು ಕೈಗೂಡುವ ಆಸೆ ಇದ್ದ ಹಾಗಿಲ್ಲ. ಈ ಬಡ ಮಾನವನಿಗೆ ಚೆಲುವು ಕೈಗೆ ಸಿಕ್ಕುತ್ತದೆಯೆ ? "

" ಶಾಸ್ತ್ರಿಗಳು ಬೇಡ ಎನ್ನುತ್ತಾರೆಯೆ ? "

" ಬೇಡ ಎನ್ನಲಿಲ್ಲ. ಒಪ್ಪಲೂ ಇಲ್ಲ. ಈಗ ಒಂದು ತಿಂಗಳಿಂದ ಅವರು ಊರಲ್ಲಿಯೂ ಇಲ್ಲ. ಈ ಪ್ರಸ್ತಾಪದಿಂದಾಗಿ ಅವರ ಮನಸ್ಸೇ ಒಂದು ತೆರ

ನಾಗಿ ಎಲ್ಲಿಗೊ ಸ್ವಾಮಿಗಳ ಹತ್ತಿರ ಹೋಗಿದ್ದಾರೆ. ನನಗಾಗಿ ಏನನ್ನೂ ಮಾಡಲು ಸಿದ್ಧರಾಗಿದ್ದ ಅವರು ಈ ವಿಷಯದಲ್ಲಿ ನಾನು ಹಟಹಿಡಿಯಬಾರದು ಎಂದು ಹೇಳಿದ್ದಾರೆ. ಅದಕ್ಕೆಂದೇ ನನಗೆನಿಸುತ್ತದೆ, ಸುಖವನ್ನು ನಾನು ಬೇಡಿ ಬರಲಿಲ್ಲ ಎಂದು."

"ಶಾಸ್ತ್ರಿಗಳು ಎಂದು ಬರುತ್ತಾರೆ ಗೊತ್ತೆ ? ಅವರ ಮನೆಯವರಿಂದ ತಿಳಿಯಬಹುದಲ್ಲ ? "

"ಇನ್ನು ಎರಡು ಮೂರು ದಿನಗಳಲ್ಲಿ ಬರಬಹುದು."

"ಹಾಗಿದ್ದರೆ—"

"ಏನು ? "

"ನನ್ನಿಂದಾಗಿಯೆ ಅವರು ಆತಂಕಪಡುತ್ತಿರಬಹುದು. ಬಹಳ ದೂರದ ಯೋಚನೆ ಅವರದು ಯಾವಾಗಲೂ. ಯಾವುದಕ್ಕೂ ಇನ್ನೊಬ್ಬರನ್ನು ನೋಯಿಸುವವರಲ್ಲ. ಸ್ವಾರ್ಥಕ್ಕಾಗಿ ಇನ್ನೊಬ್ಬರನ್ನು ನೋಯಿಸುವುದಂತೂ ಸಾಧ್ಯವೆ ಇಲ್ಲ. ನನಗಾಗಿ ಅವರು ಹಿಂತೆಗೆಯುತ್ತಿದ್ದರೆ—"

"ಏನು ಮಾಡಬೇಕೆನ್ನುತ್ತೀ ? "

"ಏನಾದರೂ ಮಾಡುತ್ತೇನೆ. ಅದೆಲ್ಲ ನಿನಗೆ ಯಾಕೆ ? "

ಎಂದು ನಕ್ಕಳು. ಗೋಪಿಗೆ ಆಶ್ಚರ್ಯವಾಯಿತು. ಮನಸಾರೆ ನಕ್ಕ ನಗೆ ಅದು. ಹೆಣ್ಣು ಹೃದಯದ ಈ ವಿಚಿತ್ರ ಸಂಸ್ಕಾರದ ಹಿರಿಮೆಯೆದುರು ತಾನೊಂದು ಮಗು ಎಂದುಕೊಂಡ. ಆತನ ಹೃದಯದಲ್ಲಿ ಆಕ್ಷಣಕ್ಕೆ ವತ್ಸಲೆಯ ಬಗೆಯಲ್ಲಿ ಆಶ್ಚರ್ಯ, ಅಕ್ಕರೆ, ಕೃತಜ್ಞತೆಗಳೆಲ್ಲವೂ ಒಟ್ಟಾಗಿ ನಲಿದಾಡುತ್ತಿದ್ದವು.

"ಶಾಂತಾ ಏನೆನ್ನುತ್ತಾಳೆ ? "

"ಆಕೆ ಏನೆನ್ನುತ್ತಾಳೆ ಯಾರು ಹೇಳಬೇಕು ? ನಾನಂತೂ ಆಕೆಯ ದನಿಯನ್ನೇ ಕೇಳಲಿಲ್ಲ."

"ಆಕೆಯ ಕೂಡ ಒಮ್ಮೆಯೂ ಮಾತನಾಡಿಲ್ಲವೆ ? "

"ಸರಿ ಹೋಯಿತು. ಹತ್ತಾರು ಬಾರಿ ನೋಡಿದ್ದೇನೆ. ಆದರೆ ಮಾತು— ಅದು ಹೇಗೆ ಸಾಧ್ಯ ? "

"ಆಕೆಗೆ ಗೊತ್ತಾದರೂ ಇದೆಯೆ ? "

" ಇದೆ ಎಂದು ಕಾಣುತ್ತದೆ ! "

" ಕಾಣುತ್ತದೆ ! ಬಹಳ ವಿಚಿತ್ರವಾಯಿತು. ಈ ಪ್ರೀತಿಯ ರೀತಿ ! "

" ವಿಚಿತ್ರ—ಹೌದು. ಇನ್ನೇನು? ಅಥವಾ ದೈವ ಎಂದೇ ಹೇಳಬೇಕೆಂದು ಕಾಣುತ್ತದೆ ! "

ಗೋಪಿ ಆಡುತ್ತಿದ್ದ ಮಾತುಗಳಿಗಿಂತ ಹೆಚ್ಚಾಗಿ ತಾನು ಮಾಡಬೇಕಾದುದೇನು ? ಅದನ್ನು ಮಾಡುವುದು ಹೇಗೆ ? ಎಂಬುದರ ಕಡೆಗೆಯೇ ವತ್ಸಲೆಯ ಗಮನವಿದ್ದ ಹಾಗಿತ್ತು. ಗೋಪಿ ತನ್ನ ಯೋಚನೆಯಲ್ಲಿಯೇ ಮುಳುಗಿದ. ವತ್ಸಲೆಯ ಸತ್ವವೂ ಸಾಮಾನ್ಯವಾದುದಲ್ಲ, ಎಂದುಕೊಂಡ. ಈ ಪ್ರಪಂಚದಲ್ಲಿ ಹೆಣ್ಣು ಸೃಷ್ಟಿಯಲ್ಲಿಯ ಸೌಂದರ್ಯಕ್ಕೆ ಸಂಕೇತವಾಗಬಹುದಂತೆ ಆ ಸೃಷ್ಟಿಯ ಜೀವನ ಕ್ರಮ, ಹೆಚ್ಚೇನು ಅದರ ಜೀವನಾಡಿಯಾಗಿಯೇ ಇದ್ದುದಾಗಿ ತೋರಿತು. ಜೀವಬೆಳೆಯುವುದು ಹೆಣ್ಣಿನಿಂದ. ಹೆಣ್ಣಿನಲ್ಲಿ ಅದು ಬೆಳೆಯುವ, ಅದನ್ನು ಬೆಳೆಯಿಸುವ ಬಗೆಯೆ ಚೆಲುವು. ಈ ಪರಿಯ ಸೊಬಗನ್ನು ಇನ್ನೆಲ್ಲಿ ನೋಡಲು ಸಿಕ್ಕೀತು ? ಹುಟ್ಟು ಸಾವುಗಳ ಸಂಪರ್ಕವಿಲ್ಲದ ಸ್ವರ್ಗದಲ್ಲಿ ಈ ಪರಿಯ ಸೊಬಗು ಇರಲಾರದೆಂದು ತೋರಿತು. ಆ ಮನಃಸ್ಥಿತಿಯಲ್ಲಿ ಗೋಪಿಗೆ ಜೀವನದ ಚೆಲುವು ನೂರ್ಮಡಿಯಾಗಿ ತೋರಿತು. ಅದರ ಅಗಾಧ ಸತ್ವದೆದುರು ಅವಾಕ್ಕಾಗಿ ನಿಲ್ಲುವಂತಾಯಿತು. ವತ್ಸಲೆ ತನ್ನ ಯೋಚನೆಗಳಿಂದಾದರೆ ಗೋಪಿ ತನ್ನ ವಿವಂಚನೆಯಿಂದ ಇಬ್ಬರೂ ಸುಮ್ಮನಾಗಿದ್ದರು. ಎಷ್ಟು ಹೊತ್ತು ಹಾಗೆಯೆ ಕುಳಿತಿದ್ದರೊ ! ಹೊರಗಡೆ ನೆಳಲು ಬೆಳಕುಗಳು ಕಣ್ಣುಮುಚ್ಚಾಲೆಯಾಡುತ್ತಿದ್ದವು. ಬಿಸಿಲು ಮೋಡಗಳೊಡನೆ ಯುದ್ಧ ನಡಸಿಯೇ ಇತ್ತು. ಇದೇ ಇಲ್ಲಿಯ ಚೆಲುವು. ಈ ಯುದ್ಧದಲ್ಲಿ ನೋವಿದೆ. ಆದರೆ ನಲಿವೂ ಇದೆ. ನೋವಿನ ಹಿನ್ನೆಲೆಯಲ್ಲಿಯೇ ಅಲ್ಲವೆ ನಲಿವಿಗೆ ಬೆಲೆ ? ಮೋಡಗಳಾಚೆ ಬಿಸಿಲು ತಾನೇ ತಾನಾಗಿ ಮೆರೆಯುತ್ತಿರಬಹುದು. ಅದು ಸ್ವರ್ಗ. ಆದರೆ ಪೃಥ್ವಿಗೆ ಮೋಡ ಬೇಕು. ಮಳೆಯಿಲ್ಲದೆ ಬೆಳೆಯಿಲ್ಲ, ನೋವಿಲ್ಲದ ನಲಿವಿಲ್ಲ. ಇದ್ದರೂ ಇರಬಹುದು—ಮಾನವ ಪ್ರಪಂಚದ ವಿಸ್ತೀರ್ಣ ಕ್ಷಿತಿಜಗಳ ಆಚೆಯಲ್ಲಿ ! ಆದರೆ ಅದರಿಂದ ಯಾವ ಪ್ರಯೋಜನ ?....

ವತ್ಸಲೆಯ ತಾಯಿ ಬಂದು " ಇದೇನು ಹೀಗೆ ಒಬ್ಬರೆದುರು ಒಬ್ಬರು ದೆವ್ವ ಹಿಡಿದ ಹಾಗೆ ಕುಳಿತಿದ್ದೀರಿ ? ಜಗಳವಾಡುತ್ತಿದ್ದೀರಾ ? " ಎಂದು ನಕ್ಕು

ಕೇಳಿದಾಗಲೆ ಇಬ್ಬರಿಗೂ ಎಚ್ಚರ. ವತ್ಸಲೆ ಎದ್ದು "ಚಹ ಮಾಡಿ ತರುತ್ತೇನೆ" ಎಂದು ಹೇಳಿ ಹೊರಟಳು.

"ಗೋಪಿ, ಮಾವನವರು ನಿನ್ನನ್ನು ಆಗಲೆ ಕೇಳುತ್ತಿದ್ದರು. ನೀನು ಹೊರಟುಹೋದೆ ಎಂದು ತಿಳಿದು ಹಾಗೆ ಹೇಳಿದೆನಲ್ಲ ?"

ಗೋಪಿ ಎದ್ದು ಶೀನಪ್ಪನ ಹಾಸಿಗೆಯ ಹತ್ತಿರ ಬಂದು ಕುಳಿತ.

# ೧೧

ಮರುದಿನ ಸಾಯಂಕಾಲ ಕಟ್ಟೆಯ ಮೇಲೆ ಎಂದಿನಂತೆ ಚರ್ಚೆ ನಡೆದೇ ಇತ್ತು. ಶಂಕ್ರಪ್ಪ ತನ್ನ ಗೆಲುವಿನಲ್ಲಿ, ವಾಮನಪ್ಪ "ಇವರಿಗೇನು ಗೊತ್ತಾಗುತ್ತದೆ ? ನಿಜವಾದ ಸಮಾಚಾರ ತಿಳಿದವ ನಾನು" ಎಂಬ ಹೆಮ್ಮೆಯಲ್ಲಿ, ಬಹಾದ್ದೂರ ಬಂಡೇರಾಯ ತನ್ನ ಸ್ವಭಾವಸಿದ್ಧವಾದ ಪೆದ್ದುತನದಲ್ಲಿ ಮಾತನಾಡುತ್ತಿದ್ದರು.

"ಏನು ವಾಮನಪ್ಪ, ನಿನ್ನ ರಾಯಟರ್ ಏಜನ್ಸಿ ಸುಳ್ಳಾಗುವ ಹೊತ್ತು ಬಂದಿತಲ್ಲೋ ? ಏನೇನು ಹೇಳಿದ್ದೆ, ಏನೇನಾಯಿತು ? ನಿನ್ನ ಬಿರುದು ಬಿಟ್ಟು ಬಿಡು ಇನ್ನು."

"ಏನು ಹೇಳಿದ್ದೆ ? ಏನಾದದ್ದು ?"

"ಮೊದಲು ಮದುವೆ ಆಗುವುದಿಲ್ಲ ಎಂದು ಹೇಳಿದ್ದೆ. ಆಮೇಲೆ ಖಂಡಿತವಾಗಿ ಆಗುತ್ತದೆ ಎಂದೆ. ನೀನು ಹೇಳಿದ ಪ್ರಕಾರ ಇಷ್ಟರಲ್ಲಿ ಶಾಸ್ತ್ರಿಗಳಿಗೆ ಮೊಮ್ಮಗ ಹುಟ್ಟಬೇಕಿತ್ತು. ಮದುವೆಗೂ ಗತಿಯಿಲ್ಲದೆ ಹೋಯಿತಲ್ಲೋ ?" ಎಂದು ಶಂಕ್ರಪ್ಪ.

"ಸ್ವಲ್ಪ ನಿಧಾನಿಸು, ಶಂಕ್ರಪ್ಪ. ಸ್ವಲ್ಪ ನಿಧಾನಿಸು. ಕುಳಿತವನಿಗೆ ಕೊಡಲೆ ಓಡಲಿಕ್ಕಾಗುತ್ತದೆಯೇನೊ ?"

"ಕುಳಿತವ ಓಡುತ್ತಾನೇನು ? ಕುಳಿತವ ಮಲಗುತ್ತಾನೆ, ಬೇಕಾದರೆ. ಆ ಮದುವೆಯ ಮಾತು, ನನ್ನನ್ನು ಕೇಳಿದರೆ, ಮಲಗಿ ನಿದ್ರೆಹೋಯಿತು. ಎಂಥ ನಿದ್ರೆ ಅನ್ನುತ್ತೀ ? ಇನ್ನು ಏಳುವುದೇ ಇಲ್ಲ !"

"ಹೌದೆ ? ಹೀಗಾಯಿತೆ ? ಪಾಪ, ಶಾಸ್ತ್ರಿಗಳಿಗೆ—"

ಎಂದು ಬಂಡೇರಾಯ ಎಂದಿನಂತೆ ಮಾತು ಮುಗಿಸದೆ ಇಬ್ಬರ ಮುಖಗಳನ್ನೂ ಮಿಕಿಮಿಕಿ ನೋಡಿದ. ವಾಮನಪ್ಪ ನಕ್ಕು ಬಿಟ್ಟನಷ್ಟೆ. "ನೀನು ಮಾತನಾಡುವವ. ನಿಜವಾದ ಸಮಾಚಾರ ನಿನಗೇನು ಗೊತ್ತು ?" ಎನ್ನುವ ನಗೆ ಅದು. ಆ ನಗೆ ಶಂಕ್ರಪ್ಪನಿಗೆ ಹಿಡಿಸಲಿಲ್ಲ. ಅವನೆಂದ.

" ಒಳ್ಳೆ ತಿಳಿದವನ ಹಾಗೆ ಸುಮ್ಮನೆ ನಕ್ಕರೆ ಆಯಿತೆ? ಮದುವೆ ಯಾವಾಗ ಹೇಳು ಹಾಗಿದ್ದರೆ— "

" ಮದುವೆ—ಮಾಘದಲ್ಲಿ ನಡೆಯುತ್ತದೆ ! "

" ಆಂ ? ಈ ಮಾಘದಲ್ಲಿ ? ಆಂ-ಏನು ? ಹೌದೆ ? "—ಬಂಡೇರಾಯ.

" ನಿನಗೇನೊ ಕನಸು ಬಿದ್ದಿರಬೇಕು ವಾಮನಪ್ಪ. ಅದಕ್ಕೇ ಹೇಳಿದೆ, ನಿನ್ನ ರಾಯಿಟರ್ ಏಜನ್ಸಿ ಬಿಟ್ಟು ಬಿಡು ಎಂದು. "

" ಬಿಡಬೇಕಾದಾಗ ಬಿಡುವೆ, ಆದರೆ ಇನ್ನು ಎಂಟು ದಿವಸ ತಡೆ. ಆಮೇಲೆ ಮತ್ತೆ ಮಾತನಾಡುವಿಯಂತೆ, ಶಂಕ್ರಪ್ಪ. "

" ಎಂಟು ದಿವಸದಲ್ಲಿ ಏನಾಗುತ್ತದೆ ? "

"ಅದೆಲ್ಲ ಈಗ ಯಾಕೆ? ಶಾಸ್ತ್ರಿಗಳು ಊರಿಂದ ಬಂದಮೇಲೆ ನೋಡುವಿಯಂತೆ. ಅವರು ಬರುವುದು ನಾಳೆ ಅಥವಾ ನಾಡಿದ್ದು. "

" ಹುಂ-ಹೌದು. ನಾಳೆ ಅಥವಾ ನಾಡಿದ್ದು ಬರಬಹುದು. "

ಎಂದು ಬಂಡೇರಾಯ ದನಿಗೂಡಿಸಿದ. ತನಗೂ ಗೊತ್ತಿದೆ ಎಂದೆನಿಸಿ ತಾನೂ ಸಮಾಚಾರ ಹೇಳಬಲ್ಲೆನೆಂಬ ವಿಶ್ವಾಸದ ದನಿಯಲ್ಲಿ ಮಾತನಾಡಿದ್ದ. ಆದರೆ ಆ ಮಾತನ್ನು ಆಗಲೆ ವಾಮನಪ್ಪ ಹೇಳಿದ್ದನೆಂಬುದು ಆತನ ಲಕ್ಷ್ಯಕ್ಕೆಯೆ ಬಂದಿರಲಿಲ್ಲ. ಅದಕ್ಕೆಂದೇ ವಾಮನಪ್ಪ ಕೇಳಿದ

" ನಿನಗೆ ಯಾರು ಹೇಳಿದರೊ, ಬಂಡೇರಾಯ ? "

" ಅವನಿಗೆ ಬೇರೆ ಯಾರು ಹೇಳಬೇಕು ? ಅವನ ಸುದ್ದಿ ಯಾವಾಗಲೂ ಹೋಂ ಡಿಪಾರ್ಟಮೆಂಟಿನಿಂದೇ ಬರುವವು ! ಅಲ್ಲವೇನಪ್ಪಾ ? "

" ಆಂ ? ಹುಂ-ಅಂದರೆ-ಅದು ಏನಾಯಿತೆನ್ನುತ್ತೀ ? ನಿನ್ನೆ ಏನೊ ಈಕೆ ಏಕಾದಶಿ ಕೇಳಿಕೊಂಡು ಬರಲಿಕ್ಕೆ ಶಾಸ್ತ್ರಿಗಳ ಮನೆಗೆ ಹೋಗಿದ್ದಳಂತೆ-"

" ಅದೇ ಅದೇ. ನಾನು ಹೇಳಲಿಲ್ಲವೆ ? ಬಂಡೇರಾಯನ ಸುದ್ದಿ ಯಾವಾಗಲೂ ಒಂದೇ ಒಂದು ಕಡೆಯಿಂದ— "

" ಅಂದರೆ ಅದು ಸುಳ್ಳು ಎನ್ನುತ್ತೀಯಾ ? "

" ಸುಳ್ಳು ಹೇಗಾದೀತಪ್ಪಾ ? ನಾವು ಏನೂ ಅನ್ನಬಹುದು. ನೀನು ಮಾತ್ರ ಸುಳ್ಳು ಎಂದು ಹೇಳಿದರೆ ಮನೆಯಲ್ಲಿ— "

" ಮನೆಯಲ್ಲಿ ಏನು ? ಹೇಳಿಬಿಡಪ್ಪ. " ಎಂದ ವಾಮನಪ್ಪ.

" ಬಂಡೇರಾಯ ಖಂಡೇರಾಯನಾಗುತ್ತಾನೆ ! "

" ಆಂ ? ಏನೆಂದಿ ? "

ಬಂಡೇರಾಯನಿಗೆ ಶಂಕ್ರಪ್ಪನ ಅರ್ಥ ಪೂರ್ತಿಯಾಗಿ ಒಮ್ಮೆಲೆ ಮಿದುಳನ್ನು ಮುಟ್ಟಲಿಲ್ಲವೆಂದು ಕಾಣುತ್ತದೆ. ವಾಮನಪ್ಪ ಶಂಕ್ರಪ್ಪ ಇಬ್ಬರೂ ಗಟ್ಟಿಯಾಗಿ ನಕ್ಕುಬಿಟ್ಟರು. ಬಂಡೇರಾಯ ಅವರಿಬ್ಬರ ಮುಖವನ್ನು ನೋಡುತ್ತ ತಾನೂ ನಕ್ಕ.

" ಅಲ್ಲ, ಶಂಕ್ರಪ್ಪ, ಶಾನುಭೋಗರಿಗೆ ತುಂಬಾ ಖಾಯಿಲೆಯಂತಲ್ಲೋ? ನೀನೇನಾದರೂ ಹೋಗಿದ್ದೆಯಾ ? ಹೋಗಿ ನೋಡಿಕೊಂಡು ಬರಬೇಕು–"

" ಹೋಗಿದ್ದೆ ನಿನ್ನೆ— "

" ಓಹೋ. ಹೋಗಿರಲೇಬೇಕು ಅನ್ನು ! "

" ಸಾಕುಬಿಡೊ ನಿನ್ನ ಚೇಷ್ಟೆ. ಶಾನುಭೋಗರನ್ನು ನೋಡಿಕೊಂಡು ಬರೋಣ ಎಂದು ನಾನು ಹೋದದ್ದು. "

" ನಾನೆಲ್ಲಿ ಇಲ್ಲ ಎಂದು ಹೇಳಿದೆ ? ಹೋಗಿರಲೇಬೇಕು ಎಂದೆ. ಶಾನುಭೋಗರನ್ನು ನೋಡಿದೆಯೊ, ಅಥವಾ—? "

ಬಂಡೇರಾಯರಿಗೆ ಅರ್ಥವಾಗಲಿಲ್ಲ. ಆದರೂ ತಿಳಿದವನಂತೆ ನಡುವೆ ಬಾಯಿಹಾಕಿದ

" ಶಾನುಭೋಗರನ್ನು ನೋಡಿಕೊಂಡು ಬರಲಿಕ್ಕೆ ಎಂದು ಹೇಳಿದ. ಅಲ್ಲವೇನೊ ? "

" ಸರಿ. ನೀನು ಬಂಡೇರಾಯ. ನಿನಗೇನು ಗೊತ್ತಾದೀತು ? ಶಾನುಭೋಗರ ಮೊಮ್ಮಗಳು ಬಂದಿದ್ದಾಳೆ ! "

" ಯಾರು ವತ್ಸಲೆಯೇ ? "

" ಅಲ್ಲವೇನೊ ಶಂಕ್ರಪ್ಪ ? ಬಂದಿದ್ದಾಳಲ್ಲವೇನೊ ? "

" ಬಂದಿದ್ದಾಳಂತೆ. ಶಾನುಭೋಗರೆ ಹೇಳಿದರು. ಆದರೆ ನನ್ನ ಕಣ್ಣಿಗೇನೂ ಬೀಳಲಿಲ್ಲ— "

" ಅಯ್ಯೊ, ಪಾಪ—ಹಾಗಿದ್ದರೆ ಮತ್ತೆ ಶಾನುಭೋಗರನ್ನು ನೋಡಲಿಕ್ಕೆ ಹೋಗಬೇಕಾಯಿತು ! "

" ಸಾಕುಬಿಡೊ ನಿನ್ನ ಚೇಷ್ಟೆ. ನಾನು ಇನ್ನೊಮ್ಮೆ ನೋಡಲಿಕ್ಕೆಂದು

ಹೋಗುವವರೆಗೆ ಶೀನಪ್ಪ ಉಳಿಯುವ ಹಾಗೆ ಕಾಣುವುದಿಲ್ಲ."

"ಆಂ! ಹೌದೆ? ಅಲ್ಲ—ಅಂದರೆ—ಹೀಗೆ ಒಮ್ಮಿಂದೊಮ್ಮೆ—"

"ಅಂತೆಯೆ ಏನು ಮೊಮ್ಮಗಳು ಬಂದದ್ದು? ಯಾಕೆ ಅಂದರೆ ಈಗೇನೂ ರಜೆಯ ದಿನಗಳಲ್ಲ. ಯಾತಕ್ಕೆ ಬಂದಿರಬಹುದು ಅಂದುಕೊಳ್ಳುತ್ತಿದ್ದೆ—"

"ಯಾತಕ್ಕೇನು? ಅದೇ ನಾನು ಹೇಳಿದ್ದು ಆಗಲೆ" ಎಂದು ಶಂಕ್ರಪ್ಪ ತನಗೇ ಹೆಚ್ಚು ತಿಳಿದಿದೆಯೆಂದು ಮುಂದುವರೆದ. "ನೀನೇನೊ ಹೇಳಿದೆ, ಶಾಸ್ತ್ರಿಗಳು ಬಂದ ಮೇಲೆ ನೋಡು ಎಂದು. ಆದರೆ ಶಾಸ್ತ್ರಿಗಳು ಬರುವ ಮೊದಲೇ—"

"ಏನಾಗುತ್ತದೆ ಶಾಸ್ತ್ರಿಗಳು ಬರುವ ಮೊದಲೆ?"

"ಶೀನಪ್ಪ ಗೋತಾ ಹೊಡೆಯಬಹುದು—"

"ಹೊಡೆಯಬಹುದು. ಅದರದೇನು ಸಂಬಂಧ?"

"ಅದರದೇನು ಸಂಬಂಧವೆ? ಅದಕ್ಕೇ ನಾನು ಹೇಳಿದ್ದು. ಈಗ ವತ್ಸಲೆಯನ್ನು ಯಾತಕ್ಕೆ ಕರೆಯಿಸಿರಬಹುದು ಹೇಳು ನೋಡುವಾ. ನಿನ್ನ ಏಜನ್ಸಿ ಸುದ್ದಿ ಎಷ್ಟು—ನೋಡಿಯೇ ಬಿಡುವಾ."

"ಆ ವಿಷಯ ಇನ್ನೂ ಪೂರ್ತಿ ಸಮಾಚಾರ ತಿಳಿದಿಲ್ಲ. ಈಗ ನನಗೆ ತಿಳಿದ ಅರ್ಧ-ಮರ್ಧದ ಮೇಲೆ ಏನೂ ಹೇಳಲು ಬರುವ ಹಾಗಿಲ್ಲ."

"ನಿನಗೆ ಹೇಳಬರದಿದ್ದರೆ ನಾನು ಹೇಳುತ್ತೇನೆ ಕೇಳು—ಮುದುಕ ಸಾಯುವ ಮೊದಲು ಮೊಮ್ಮಗಳ ಕೈಯನ್ನು ಗೋಪಿಯ ಕೈಯಲ್ಲಿ ಇಟ್ಟೇ ಸಾಯುತ್ತಾನೆ. ನೋಡುತ್ತಿರು ಬೇಕಾದರೆ—"

"ಸಾಧ್ಯವಿಲ್ಲ!"

"ಆಂ? ಏನೆಂದಿ? ಸಾಧ್ಯವಿಲ್ಲ ಅನ್ನುತ್ತೀಯಾ? ಹೌದು-ಅಂದರೆ-"

"ನೋಡುವಿಯಂತೆ ವಾಮನಪ್ಪ. ಈಗ ಯಾಕೆ?"

"ಆಗಲಿ, ನಮಗೇನು? ಶಾನುಭೋಗರ ಮನೆಯ ಮದುವೆಯಾದರೆ ಔತಣದ ಊಟವಾದರೂ ಆದೀತು. ಶಾಸ್ತ್ರಿಗಳ ಮನೆಯದಾದರೂ ಅಷ್ಟೇ. ಶಾನುಭೋಗರ ಮನೆಯದಾದರೂ ಅಷ್ಟೇ."

"ಶಾಸ್ತ್ರಿಗಳ ಮನೆಯದೂ ಆದೀತು ಅನ್ನು. ಈಗೇನೋ ಆತ ಒಂದು ತಿಂಗಳು ಹೋದದ್ದು ಮಗಳಿಗಾಗಿ ವರ ಹುಡುಕಿ ತರುತ್ತೇನೆಂದು ಹಟದಿಂ

ದಲೇ ಹೋಗಿದ್ದಾನಂತೆ. ವರ ಅಂದರೇನು ಪೇಟೆಯಲ್ಲಿ ಸಿಕ್ಕುತ್ತದೆಯೆ? ಒಂದು ಮಾತು ಖಂಡಿತ. ಆತ ಬೀಸಿದ ಜಾಲ ಆತನ ಕೈಮೀರುವಂತೆ ಮಾಡಿ ಬಿಟ್ಟಿದ್ದೇನೆ. ಇನ್ನೇನು ಮದುವೆ ಗೊತ್ತಾಗಿಯೇ ಬಿಟ್ಟಿತು ಎನ್ನುತ್ತಿದ್ದವರು ಈಗ ಏನು ಹೇಳುತ್ತಾರೆ? ಏನೊ ಕೂಡಿಬರಲಿಲ್ಲ ಹಾಗೆ—ಹೀಗೆ ಎಂದು ಮಾತು ತಪ್ಪಿಸುವುದಿಲ್ಲವೆ?"

"ಆಗಲಿ ಬಿಡಪ್ಪ, ನಿನ್ನಂತೆಯೆ ಆಗಲಿ. ಶಾಸ್ತ್ರಿಯಂತೂ ಊರಿಂದ ಬರಲಿ—"

"ನೀನು ಹೇಳಿದ ಒಂದು ಮಾತೇನೋ ನಿಜವೆ, ವಾಮನಪ್ಪ. ಮದುವೆ ಮಾಘದಲ್ಲಿ ಎಂದು ಹೇಳಿದೆಯಲ್ಲ! ಹಾಗೇ ಆಗಬಹುದು ಯಾಕೆ ಅಂದರೆ ಶೀನಪ್ಪ ಈಗ ಹೋಗಿಬಿಟ್ಟರೆ—"

ವಾಮನಪ್ಪ ಮುಂದೆ ಮಾತನಾಡಲಿಲ್ಲ. ಶಂಕ್ರಪ್ಪ ಹೇಳಿಕೊಳ್ಳುತ್ತಲೇ ಇದ್ದ. ಬಂಡೇರಾಯ ಒಮ್ಮೆ ವಾಮನಪ್ಪನನ್ನು ಒಮ್ಮೆ ಶಂಕ್ರಪ್ಪನನ್ನು ನೋಡು ತ್ತಲೇ ಇದ್ದ.

* * *

ಮೇಲಿನ ಮಾತು ನಡೆದು ನಾಲ್ಕೈದು ದಿನಗಳ ನಂತರದ ಮಾತು. ಮಳೆಯೂ ತಡೆದಿತ್ತಾದ್ದರಿಂದ ಗೋಪಿಗೆ ಮತ್ತೆ ನಿತ್ಯ ರಂಗಧೂಳಿಗೆ ಹೋಗಲು ಅನುಕೂಲವಾಗಿತ್ತು. ಮುನ್ನಾದಿನ ಶಾಸ್ತ್ರಿಗಳು ತಿರುಗಿ ಬರುವವರಿದ್ದರು. ಬಂದದ್ದು ತಿಳಿಯಲಿಲ್ಲ. ನೇರವಾಗಿ ಹೋಗಿ ವಿಚಾರಿಸುವ ಮನಸ್ಸಾಗಲಿಲ್ಲ. ಆಗಲೆ ಅವರ ಮನೆಗೆ ತಾನು ಹೋದ ಸಮಾಚಾರ ಅವರಿಗೆ ತಿಳಿದಿರುತ್ತದೆ. ಊರಿಂದ ಬಂದದ್ದೇ ಆದರೆ ಇಷ್ಟರಲ್ಲಿ ತಿಳಿಯುತ್ತಿತ್ತು. ತಾವಾಗಿಯೇ ಬಂದರೂ ಬರುತ್ತಿದ್ದರು. ಬಂದೇ ಇರಲಿಕ್ಕಿಲ್ಲವೆಂದು ಸುಮ್ಮನಾಗಿದ್ದ. ಮಧ್ಯಾಹ್ನದ ಸುಮಾರಿಗೆ ಬೇಸರವೆನಿಸತೊಡಗಿತು. ಒಳಮನಸ್ಸು ಶಾಸ್ತ್ರಿಗಳನ್ನು ಕಾಣುವ ಕುತೂಹಲವನ್ನು ತಳೆದಿತ್ತು. ಮಧ್ಯಾಹ್ನದವರೆಗೂ—ಅವರು ತನ್ನೆಡೆಗೆ ಬರು ವುದು ಹಾಗಿರಲಿ—ಅವರು ಹಿಂತಿರುಗಿದ ಸಮಾಚಾರವೂ ತಿಳಿಯದಿದ್ದಾಗ ಅಸ್ಪಷ್ಟವಾಗಿ ನಿರಾಶೆಗೊಂಡು ರಂಗಧೂಳಿಯ ಹಾದಿಯನ್ನು ತುಳಿದಿದ್ದ. ಅಲ್ಲಿಗೆ ತಲುಪಿದಾಗ ಮಧ್ಯಾಹ್ನದ ನಾಲ್ಕು ಗಂಟೆಯಾಗಿರಬಹುದು. ಕಳೆದ ನಾಲ್ಕಾರು ದಿನಗಳಲ್ಲಿ ಮೋಡಗಳು ಸರಿದು ಚುರುಕಾಗಿ, ಮಸೆದ ಹೊಳಪಿನಿಂದ, ಹಿತ

ವಾದ ಕಾವಿನಿಂದ ಬಿಸಿಲು ಸೂಸಿ ಬರುತ್ತಿದ್ದುದರಿಂದ ಗಿಡ-ಸಸಿಗಳು ಉಬ್ಬರದಿಂದ ಮೇಲೆದ್ದು ಮೆರೆಯುತ್ತಿದ್ದವು. ನವಯೌವನದ ಚೆಲುವು ಉನ್ಮಾದಗಳು ಸೃಷ್ಟಿಯಲ್ಲಿ ಎತ್ತ ನೋಡಿದರೂ ಕಣ್ಣನ್ನು ಕೋರೈಸುತ್ತಿದ್ದವು. ತಾನು ನಿತ್ಯವೂ ಕೂಡುತ್ತಿದ್ದ (ಮನೆಗೆ ಎದುರಿನ ದಂಡೆಯ ಮೇಲಿನ) ಕಲ್ಲುಕಟ್ಟೆಯ ಮೇಲೆ ಕುಳಿತು ಮನೆಯಾಚೆ ಶಾಂತ ಗಂಭೀರವಾಗಿ ನಿಂತಿದ್ದ ಬೆಟ್ಟವನ್ನು ನೋಡುತ್ತಿದ್ದ. ಮಾರ್ಕಂಡೇಯ: ನಿಮ್ನಗಭೀರವಾಗಿ ಹರಿಯುತ್ತಿದ್ದುದರ ಶಬ್ದ ದೂರದಿಂದ ಕೇಳಬರುತ್ತಿತ್ತು.

ಗೋಪಿಯ ದೃಷ್ಟಿ ಬೆಟ್ಟದಿಂದಿಳಿದು ಕೆಳಗಡೆ ಹರಿಯುತ್ತಿದ್ದ ನದಿಯೆಡೆಗೆ ತಿರುಗಿತು. ಈ ನದಿಗೆ ಮಾರ್ಕಂಡೇಯ ಎಂದು ಹೆಸರು ಯಾಕೆ, ಹೇಗೆ ಬಂದಿತು ? ಏನು ಕತೆ ? ಕಾಡಿನೊಳಗಿಂದ ಹೊರಬಿದ್ದು ಮೊತ್ತಮೊದಲ ಬಾರಿ ಜನರ ಕಣ್ಣಿಗೆ ಬೀಳುತ್ತಿದ್ದಾಗ ಕಾಡಿನ ಗೂಡಿನಿಂದ ಹರಿದು ಬರುವ ಈ ಪ್ರವಾಹವನ್ನು ಜನರು ಇದೇ ಜಾಗದ ಆಸುಪಾಸಿನಲ್ಲಿ ಮೊದಲು ಗುರುತಿಸಿರಬೇಕು. ಈ ಸ್ಥಳಕ್ಕೂ ಮಾರ್ಕಂಡೇಯನ ಕತೆಗೂ ಏನಾದರೂ ಸಂಬಂಧವಿದ್ದಿರಬಹುದೇ ? ಮಾರ್ಕಂಡೇಯನ ಕತೆ ಇಲ್ಲಿಯೋ ಎಲ್ಲಾದರೂ ನಡೆದಿರಬಹುದೆ ? ಯಾರು ಹೇಳಬೇಕು ? ನಡೆಯದಿದ್ದರೂ ಜನ ಅಂಥ ಐತಿಹ್ಯಗಳನ್ನು ಕಟ್ಟಿಕೊಳ್ಳುವುದೂ ಸುಲಭ. ಬೆಟ್ಟದ ಆಚೆಯ ಮಗ್ಗುಲಲ್ಲಿ ದೊಡ್ಡದೊಂದು ಶಿವಲಿಂಗವಿದ್ದುದನ್ನು ನೋಡಿದ್ದ. ಅದನ್ನೇ ಗಟ್ಟಿಯಾಗಿ ಹಿಡಿದುಕೊಂಡು ಯಮರಾಯನನ್ನು ಮಾರ್ಕಂಡೇಯ ಹಿಂದಿರುಗಿಸಿರಬಹುದು. ಅಗಾಧ ಜೀವನ ಮಾರ್ಕಂಡೇಯನದು ! ಎಂಥ ನಿಷ್ಠೆ ? ಸಾವನ್ನು ಮೀರಿದ ನಿಷ್ಠೆ ಅದು. ಅವನ ತಾಯಿ ತಂದೆಗಳೆಂಥವರು ? ಅಲ್ಪಾಯುಷಿಯಾಗಿದ್ದರೂ ಗುಣಶಾಲಿಯಾದ, ಸತ್ವಶಾಲಿಯಾದ ಮಗನನ್ನೇ ಬೇಡಿದರು. ಗುಣ ಸತ್ವಗಳೆದುರು ಆಯುರ್ಮಾನ—ಚಿಕ್ಕದೊ, ದೊಡ್ಡದೊ—ಅದಕ್ಕೆ ಯಾವ ಬೆಲೆ ? ಒಂದು ವೇಳೆ ಮಾರ್ಕಂಡೇಯ, ಅವನ ಹಿರಿಯರು ಈ ಕಾಡಿನಲ್ಲಿ, ಈ ನದಿಯ ಹತ್ತಿರದಲ್ಲಿಯೇ ಇದ್ದುದಾದರೆ— ಅವರ ವಂಶಪರಂಪರೆಯಲ್ಲಿ ಹುಟ್ಟಿದವರು ಇಂದಿಗೂ ಇರಬೇಕಲ್ಲವೆ ? ಇದ್ದಿರಬಹುದು. ಆದರೆ ಆ ಸತ್ವ, ಆ ಶ್ರದ್ಧೆ ಉಳಿದಿರಬಹುದೆ ? ಈ ಕಾಡು, ಬೆಟ್ಟ, ಸುತ್ತಲಿನ ನೆಲ ನೀರುಗಳು ವಂಶಾನುವಂಶವಾಗಿ ತಮಗೆ ಬಂದಿವೆ ಎಂದು ಹೇಳಿದ ಗೋಪಿ ತಾವೇ ಆ ಋಷಿಗಳ

ವಂಶದವರೇಕಾಗಿರಬಾರದು ಎಂದೂ ಸಂದೇಹಪಟ್ಟ. ಆದರೆ ಎಂಥ ಹುಚ್ಚು ಯೋಚನೆ? ಎಂದು ನಕ್ಕುಬಿಟ್ಟ.

ಆದರೆ ಮತ್ತೆ ಮತ್ತೆ ಅದೇ ಯೋಚನೆ ಆತನ ಮನಸ್ಸಿನೆದುರು ನಿಲ್ಲುತ್ತಿತ್ತು. ಮಾರ್ಕಂಡೇಯನ ಹಾಗೆ ತಾನೂ ತನ್ನ ತಂದೆಗೆ ಒಬ್ಬನೇ ಮಗ. ಎಲ್ಲವನ್ನು ಮರೆಯಿಸಿ ಗೆಲ್ಲುವ ಶಿವಭಕ್ತಿ ಮಾರ್ಕಂಡೇಯನಲ್ಲಿದ್ದಿತು. ತನ್ನಲ್ಲಿ? ಹುಚ್ಚು ವಿಚಾರ ಎಂದುಕೊಂಡ. ತನ್ನಲ್ಲೇನಿದೆ? ಇಲ್ಲವೆಂದರೂ ಒಂದಿದೆ. ಎಲ್ಲವನ್ನೂ ಮೀರಿಸಿ, ಎಲ್ಲವನ್ನೂ ಮರೆಯಿಸಿ ಗೆಲ್ಲುವ ಸೌಂದರ್ಯ ಭಕ್ತಿಯಿದೆ. ಆದರೆ ಅದೆಂಥ ಭಕ್ತಿ? ಅದರಿಂದ ಯಾವ ಉದ್ಧಾರ? ಯಾವ ಮುಕ್ತಿ? ಯಾವುದಿಲ್ಲ ಎಂದು ಕೇಳಿಕೊಂಡ. ದೈವಭಕ್ತಿಯಿಂದ ಮಾನವನಿಗೆ ಪ್ರಪಂಚದ ಪರಾತ್ಪರಸತ್ತ್ವದ ಸಾಕ್ಷಾತ್ಕಾರವಾಗುತ್ತಿದ್ದರೆ ಈ ಭಕ್ತಿಯಿಂದ ಆಗುವುದಿಲ್ಲವೆ? ಆಗುತ್ತದೆ—ಖಂಡಿತವಾಗಿ. ಬ್ರಹ್ಮಾನಂದ ದೊರಕುತ್ತದೆ. ಈ ಆವರಣ ಸರಿದು ಇಲ್ಲಿಯ ಎಲ್ಲ ಬಂಧನಗಳಿಂದಲೂ ಮನಸ್ಸು ದೂರವಾಗುತ್ತದೆ. ಮುಕ್ತಿಯಲ್ಲವೆ ಅದು? ಸಾವಿನ ಸೋಲಲ್ಲವೆ ಅದು? ಹಾಗಿದ್ದರೆ—ತಾನು ಮಾರ್ಕಂಡೇಯ! ಹುಚ್ಚುವಿಚಾರ ಎಂದುಕೊಂಡ ಮತ್ತೆ.

ಹಾಗೆಯೆ ಕುಳಿತು ಯೋಚಿಸುತ್ತಲೇ ಇರಬಹುದಾಗಿತ್ತು. ಯಾವುದಕ್ಕೊ ಎಡಗಡೆಯಲ್ಲಿ ದೃಷ್ಟಿ ತಿರುಗಿದಾಗ ದೂರದ ಗಿಡಗಳ ಗುಂಪಿನಾಚೆಯಿಂದ ಯಾರೋ ಬರುತ್ತಿದ್ದ ಹಾಗೆ ಕಾಣಿಸಿತು. ಗುರುತು ಸಿಕ್ಕಲಾರದಷ್ಟು ದೂರವಾಗಿತ್ತು ಆಕೃತಿ. ಗೋಪಿಯ ಕುತೂಹಲ ಕೆರಳಿತು. ತನ್ನನ್ನೇ ಕರೆಯಲು ಮನೆಯಿಂದ ಯಾರಾದರೂ ಬರುತ್ತಿರಬಹುದೆ? ಶೀನಪ್ಪನಿಗೆ ಅಕಸ್ಮಾತ್ತಾಗಿ ಏನಾದರೂ ಹೆಚ್ಚು ಕಡಿಮೆಯಾಯಿತೆ? ಬರುತ್ತಿದ್ದ ವ್ಯಕ್ತಿ ಗಿಡಗಳ ಗುಂಪಿನಲ್ಲಿ ಮರೆಯಾಯಿತು. ತೀರ ಸಮೀಪ ಬಾರದ ಹೊರತು ಇನ್ನು ಮುಂದೆ ಕಾಣುವಂತಿರಲಿಲ್ಲ. ಗೋಪಿ ಎದ್ದು ನಿಂತ. ಒಂದೆರಡು ನಿಮಿಷ ಕಾಯ್ದ. ಹತ್ತು ಹೆಜ್ಜೆ ಆಚೆಗೆ ನಡೆದು ಹೋದ. ಮುಂದೆ ಒಂದೆರಡು ನಿಮಿಷಗಳಲ್ಲಿ ಗೊತ್ತಾಯಿತು—ಬರುತ್ತಿದ್ದ ವ್ಯಕ್ತಿ ಇನ್ನಾರೂ ಇರದೆ ಶಾಸ್ತ್ರಿಗಳು ಎಂದು!

ಗೋಪಿಗೆ ಅದೊಂದು ವಿಚಿತ್ರವಾದ ಅನುಭವ. ಶಾಸ್ತ್ರಿಗಳು ಬಂದದ್ದು ಯಾವಾಗ? ಇಲ್ಲಿಯವರೆಗೆ ಈ ಬಿಸಿಲಿನಲ್ಲಿ ಬಂದದ್ದೇಕೆ? ಯಾವುದನ್ನೂ

ತಿಳಿಯುದ್ದಕ್ಕಾಗಿ ಯೋಚನೆ ಒಂದೇ ದಿಕ್ಕಿನಲ್ಲಿ ನಡೆಯದಾಯಿತು. ತನಗೆ ತಿಳಿಯದಲೆ ಶಾಸ್ತ್ರಿಗಳು ಬರುತ್ತಿದ್ದ ದಾರಿಗುಂಟ ಇದಿರಾಗಿ ಹೊರಟ— ಸ್ವಾಗತಿಸುವವನಂತೆ. ಹತ್ತಿರ ಬಂದಕೂಡಲೆ ಕೇಳಿದ.

" ಅಯ್ಯೊ, ಇಲ್ಲಿಯವರೆಗೇತಕ್ಕೆ ಬಿಸಿಲಲ್ಲಿ ನಡೆದುಕೊಂಡು ಬರಬೇಕಿತ್ತು ? ನನಗೇ ಹೇಳಿಕಳಿಸಿದ್ದರೆ ಬರುತ್ತಿರಲಿಲ್ಲವೆ ? "

ಶಾಸ್ತ್ರಿಗಳನ್ನು ದೂರದಲ್ಲಿ ನೋಡಿದಾಗಿನ ಭಾವನೆಗಳೆಲ್ಲವೂ ಗೋಪಿಯಲ್ಲಿ ಮಾಯವಾದ ಹಾಗಿದ್ದುವು. ಹತ್ತಿರದಲ್ಲಿ ನೋಡಿದಾಗ ನಿಜವಾಗಿಯೂ ಅವರು ಹೇಳಿಕಳಿಸಬೇಕಿತ್ತು ಎಂದೆನಿಸಿ ಹೇಳಿದ್ದ. ಶಾಸ್ತ್ರಿಗಳು ಹೇಳಿದರು.

" ಅಂಥದೇನಾಯಿತು ? ಮನೆಗೇ ಹೋಗಿದ್ದೆ. ನೀನು ಅದೇ ಹೊರಟು ಹೋದೆ ಎಂದು ಹೇಳಿದರು. ನನಗೆ ನಿನಗೆ ಒಂದರ್ಧ ಗಂಟೆ ವ್ಯತ್ಯಾಸವಾಗಿರಬೇಕು. ಅಷ್ಟೆ. ಅಲ್ಲದೆ ಮನೆಯಲ್ಲಿ ರಾಯರೂ ಇರಲಿಲ್ಲ— "

" ಹೌದು. ಬೆಳಿಗ್ಗೆಯೆ ಭೀಮನಕೊಪ್ಪಕ್ಕೆ ಹೋಗಿದ್ದಾನೆ. "

" ಯಾವಾಗ ಬರುತ್ತಾರೆ ? "

" ರಾತ್ರಿ ಬರುತ್ತಾನೆ ಎಂದು ಕಾಣುತ್ತದೆ. ಹುಂ. ನೀವು ಯಾವಾಗ ಬಂದದ್ದು ? ನಿನ್ನೆಯೆ ? ನನಗೆ ಬೆಳಿಗ್ಗೆ ಗೊತ್ತೇ ಆಗಲಿಲ್ಲವಲ್ಲ ? "

" ಸರಿ ಮಧ್ಯಾಹ್ನ ನಾನೇ ಬರಬೇಕೆಂದಿದ್ದೆ. ಬಂದೆ. ಅಲ್ಲ ಗೋಪಿ, ಎಷ್ಟೊಂದು ಬಡವಾಗಿ ಹೋಗಿದ್ದೀ ? ಏನು ಸಮಾಚಾರ ? ಮೈಯಲ್ಲಿ ಸ್ವಸ್ಥವಾಗಿಲ್ಲವೆ ? "

ಆ ಮಾತು ಗೋಪಿಯನ್ನು ಸುಮ್ಮನಾಗಿಸಿತು. ನೇರವಾಗಿ ಏನೆಂದು ಉತ್ತರ ಹೇಳಬಹುದಿತ್ತು ? ಆದರೂ ಉತ್ತರ ಹೇಳಬೇಕು.

" ಸ್ವಸ್ಥವಾಗಿಯೆ ಇದ್ದೇನೆ— "

" ನನಗೆ ಅಷ್ಟೂ ತಿಳಿಯುವುದಿಲ್ಲವೆ ? ಅದು ಹೋಗಲಿ. ನಾನೀಗ ಇಲ್ಲಿಯವರೆಗೆ ಯಾತಕ್ಕಾಗಿ ನಡೆದು ಬಂದೆ ಗೊತ್ತಾಯಿತೆ ? " ಎಂದು ನಸುನಕ್ಕರು.

" ಯಾತಕ್ಕೆ ? ನನಗೆ ಹೇಗೆ ಗೊತ್ತಾಗಬೇಕು ? ನೀವು ಬಂದದ್ದೇ ತೀರ ಅನಿರೀಕ್ಷಿತವಾಗಿ. ದೂರದಲ್ಲಿ ನೋಡಿಯಂತೂ ಯಾರು ಏನು ಸಮಾಚಾರ ತೆಗೆದುಕೊಂಡು ಬಂದರೊ ಎಂದು ಗಾಬರಿಯಾಗಿದ್ದೆ— "

"ನಾನೂ ಒಂದು ಸಮಾಚಾರವನ್ನೇ ತೆಗೆದುಕೊಂಡು ಬಂದಿದ್ದೇನೆ--"

ಎಂದು ಮತ್ತೆ ಅದೇ ನಗೆ. ಆ ನಗೆಯಿಂದ ಆಗಲೇ ಗೋಪಿ ಉತ್ತೇಜಿತನಾಗಿದ್ದ. ಸಂತಸದ ಬೆಳಕು ಕಣ್ಣುಗಳಲ್ಲಿ ಆಗಲೆ ಹೊಳೆಯುತ್ತಿದ್ದಿತು. ತಾನು ಅಪೇಕ್ಷಿಸಿದಂತೆಯೆ ಇರಬಹುದೆ? ಅಥವಾ ಶಾಸ್ತ್ರಿಗಳು ಮತ್ತೇನನ್ನಾದರೂ ಹೇಳಲು ಬಂದಿರಬಹುದೆ? ಕುತೂಹಲ ತೀರ ತಡೆಯದಾಗಿ ಕೇಳಿದ.

"ಏನು ಸಮಾಚಾರ— ?"

"ಏನಿರಬಹುದು ಹೇಳು ನೋಡುವಾ— "

"ನಾನೇನು ಹೇಳಲಿ, ಶಾಸ್ತ್ರಿಗಳೆ— ಯಾವ ಸಂದರ್ಭವೂ ತಿಳಿಯದೆ?"

"ಸ್ವಲ್ಪ ಯೋಚನೆ ಮಾಡಿದರೆ ತಿಳಿಯುತ್ತದೆ!"

"ಹೊಳೆಯುವುದಿಲ್ಲ."

"ಸರಿ. ನಿನ್ನ ಬುದ್ಧಿಗೆ ಮಂಕು ಹಿಡಿದಿದೆ. ಆ ದಿನ ನಾವು ಇಲ್ಲಿ ಯಾವ ವಿಷಯವನ್ನು ಮಾತನಾಡಿದ್ದು ?"

"ಅದರದೇನಾಯಿತು ?"

"ನಿನ್ನ ಮನಸ್ಸಿನಂತೆಯೆ ಆಗಲಿ ಎಂದು ಹೇಳಲು ಬಂದೆ, ಗೋಪಿ!"

"ಶಾಸ್ತ್ರಿಗಳೆ— "

ಎಂದವನೆ ಗೋಪಿ ಅವರ ಪಾದಗಳನ್ನು ಹಿಡಿದುಕೊಂಡ. ಬಾಯಿಗೆ ಮುಂದೆ ಮಾತೇ ಬಾರದಾಯಿತು. ಕೈಹಿಡಿದು ಆತನನ್ನು ಶಾಸ್ತ್ರಿಗಳು ಮೇಲಕ್ಕೆತ್ತಿದರು. ಗೋಪಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಿದ್ದಿತು. ಅದನ್ನು ನೋಡಿ ಶಾಸ್ತ್ರಿಗಳಿಗೂ ತಡೆಯದಾಯಿತು. ಶಾಸ್ತ್ರಿಗಳು ಗೋಪಿಯ ಬೆನ್ನಮೇಲೆ ಕೈಯಾಡಿಸುತ್ತಿದ್ದರು. ಮಾತು ಹೇಳದಿದ್ದರೂ "ಎಷ್ಟು ನೊಂದೆ, ಮಗು. ನನ್ನಿಂದಲೇ ಅಲ್ಲವೆ ಇಷ್ಟು ನೋವು ನಿನಗಾದದ್ದು? ಯಾವುದಕ್ಕೂ ಕಾಲ ಒದಗಬೇಕು. ಇದಕ್ಕೂ ಕಾಲ ಒದಗಬೇಕಾಗಿತ್ತು. ಇದುವರೆಗೆ ನೀನು ಕಾಯಬೇಕಾಯಿತು. ಯಾರೇನು ಮಾಡುವುದು ?" ಎಂದು ಸಮಾಧಾನ ಹೇಳುತ್ತಿದ್ದುವು ಅವರ ಕೈಗಳು. ಇಬ್ಬರಿಗೂ ಭಾವನೆಯ ಉದ್ವೇಗ ಕಡಿಮೆಯಾದ ಮೇಲೆ ಮತ್ತೆ ಅದೇ ಕಟ್ಟೆಯ ಮೇಲೆ ಬಂದು ಕುಳಿತರು. ಸಂಜೆಯ ಇಳಿಬಿಸಿಲು ಸುತ್ತಲಿನ ಸೃಷ್ಟಿಯನ್ನು ಬೆಳಗುತ್ತಿತ್ತು.

"ನಾನಿಂದು ಧನ್ಯನಾದೆ ಶಾಸ್ತ್ರಿಗಳೆ. ತೀರ ನಿರಾಶನಾಗಿದ್ದೆ— "

" ಯಾರ ಕೈಯಲ್ಲಿಯ ಮಾತಪ್ಪಾ ? ದೈವಸಂಕಲ್ಪವಿದ್ದ ಹಾಗೆ ನಡೆಯ ಬೇಕು. ನಮಗೆ ಬೇಕು ಬೇಡ ಎಂದರೆ ಎಲ್ಲವೂ ನಮ್ಮ ಇಷ್ಟದಂತೆಯೆ ಎಲ್ಲಿ ನಡೆಯುತ್ತದೆ ? "

" ಈಗ ನಡೆಯಿತಲ್ಲ ಮತ್ತೆ ನನ್ನ ಇಷ್ಟದಂತೆಯೆ ! "

" ದೈವಸಂಕಲ್ಪ ಎಂದು ಅದಕ್ಕೇ ಹೇಳಿದೆ. "

" ಅಥವಾ ನನ್ನ ಇಚ್ಛಾಬಲ— "

" ಎರಡೂ ಒಂದೇ. ಇಷ್ಟೆ, ಇಚ್ಛಾಬಲ ಪರಿಶುದ್ಧವಾಗಿರಬೇಕು. ನಿರ್ಹೇತುಕವಾಗಿರಬೇಕು. ಅಂತಃಕರಣಗಳ ತಪಸ್ಸಿಗೆ ಸಿದ್ಧಿ ಯಾವಾಗಲೂ ಸಿಕ್ಕೇ ಸಿಕ್ಕುತ್ತದೆ, ಎಂದು ಕಾಣುತ್ತದೆ. "

ಗೋಪಿ ಸುಮ್ಮನಾದ. ಅದೇನು ಹೀಗೆ ಶಾಸ್ತ್ರಿಗಳು ತಮ್ಮ ಯೋಚನೆ ಯನ್ನು ಬದಲಾಯಿಸಿದರು ? ಒಂದು ಒಂದೂವರೆ ತಿಂಗಳ ಸಮಯದಲ್ಲಿ ಅವರ ಅಂತರಂಗದ ಕಳವಳ ಹೇಗೆ ನಿಂತಿತು ? ಕುತೂಹಲ ಬೆಳೆದರೂ ನೇರವಾಗಿ ಕೇಳಲು ಮನಸ್ಸಾಗಲಿಲ್ಲ. ಹಳೆಯ ಕಹಿ ನೆನಹಿನಿಂದ ಸದ್ಯದ ಸಂತಸವನ್ನು ಕೆಡಿಸಬೇಕೆನಿಸಲಿಲ್ಲ. ಶಾಸ್ತ್ರಿಗಳು ಹೇಳಿದರು.

" ನಿನ್ನ ತಂದೆಗೇ ಮೊದಲು ಹೇಳುವಾ ಎಂದೇ ನಾನು ಮನೆಗೆ ಹೋದದ್ದು. ನೀನೂ ಇರಲಿಲ್ಲ. ನೀವಿಬ್ಬರೂ ಹಿಂದಿರುಗುವವರೆಗೆ ತಡೆಯ ಲಾಗಲಿಲ್ಲ. ಇಲ್ಲಿಯವರೆಗೆ ನಡದು ಬಂದೆ. ನಿನಗೆ ಹೇಳಿದಾಗಲೆ ನನ್ನ ಮನ ಸ್ಸಿಗೆ ಸಮಾಧಾನ— ಯಾಕೆಂದರೆ ನಾನು ಊರಿಂದ ಹೊರಡುವಾಗ ನಿನಗೆ ಒಂದು ಮಾತನ್ನೂ ಹೇಳದೆ ಹೋಗಿದ್ದೆ— "

" ಹೌದು. ನನಗಂತೂ ಮೊದಮೊದಲು ಯಾವುದೂ ಅರ್ಥವಾಗಲಿಲ್ಲ. ಕೇಳುವುದಾದರೂ ಯಾರನ್ನು ? ಹೀಗೆಂದು ಎಷ್ಟೋ ದಿವಸ ತೀರ ಒದ್ದಾ ಡುತ್ತಲೇ ಇದ್ದೆ— "

" ಅದೆಲ್ಲ ಮುಗಿಯಿತು ಗೋಪಿ. ನೀನು ಸುಖವಾಗಿರುವುದು ಮುಖ್ಯ."

" ಅದನ್ನು ಸಾಧ್ಯವಾಗಿಸಿದವರು ನೀವು, ಶಾಸ್ತ್ರಿಗಳೆ. "

" ನಾನೇನು ಮಾಡಿಯೇನು? ನಾನು ಹಾಗೆಂದೂ ತಿಳಿಯಲಾರೆ. 'ಅಹಂ ಕರೋಮೀತಿ ವೃಥಾಭಿಮಾನಃ' ನೀನೇ ಕೇಳಿದ್ದೆಯಲ್ಲವೆ- ನಡೆಯಬೇಕಾದು ದನ್ನು ತಡೆಯುವುದು ಸಾಧ್ಯವೆ ಎಂದು? ಜ್ಞಾಪಕವಿದೆಯೆ? ಇದೆಲ್ಲದರ ಅರ್ಥ

ಇಷ್ಟೆ. ಮತ್ತಿನ್ನೇನೂ ಅಲ್ಲ."

"ಆದರೆ ಒಂದು ಮಾತನ್ನು ನೀವು ನನ್ನೆದುರು ಹೇಳಲೇಬೇಕು. ಆಗ ಬೇಡ ಎಂದು ಹತ್ತು ಪರಿಯಾಗಿ ಹೇಳಿದವರು ಇಂದು ಇಷ್ಟು ಸಂತೋಷ ದಿಂದ ಒಪ್ಪಿಗೆಯನ್ನು ಹೇಳುತ್ತಿದ್ದೀರಿ. ಅಂದಿನ ನಿಮ್ಮ ಮನಸ್ಸಿನಲ್ಲಿಯ ಆತಂಕ ದೂರವಾಯಿತೆ!"

"ಆತಂಕ ದೂರವಾಯಿತೆಂದೇ ಹೇಳುತ್ತಿದ್ದೇನೆ, ಗೋಪಿ. ಅಥವಾ ಅದರ ಯೋಚನೆ ನಿಷ್ಪ್ರಯೋಜಕ ಎಂದು ಮನವರಿಕೆಯಾಗಿದೆ."

"ಅಂದರೆ?"

"ಅದನ್ನೆಲ್ಲ ಕಟ್ಟಿಕೊಂಡು ಏನು ಮಾಡುತ್ತೀ? ಏನೊ ಒಂದು ತರಹ ಮನಸ್ಸನ್ನು ಮೋಡ ಮುಸುಕಿತ್ತು. ಈಗ ಸರಿಯಿತು ಅಷ್ಟೆ."

"ಅದು ಹೇಗೆ ಸಾಧ್ಯವಾಯಿತು?"

"ನಾನು ಶೃಂಗೇರಿಗೆ ಹೋದದ್ದು ಯಾತಕ್ಕೆ ಮತ್ತೆ?"

"ಬರೀ ಅಲ್ಲಿಗೆ ಹೋದರೆ ಏನಾಗಬೇಕು ಶಾಸ್ತ್ರಿಗಳೆ? ಸಾವಿರಾರು ಜನ ಹೋಗುತ್ತಾರೆ, ಬರುತ್ತಾರೆ. ಅಲ್ಲಿಗೆ ಹೋಗುವುದಕ್ಕಿಂತ ಅಲ್ಲಿ ನಡೆದದ್ದು ಮುಖ್ಯ. ಏನು ನಡೆಯಿತು? ನಿಮಗೆ ಸಿಕ್ಕ ಸಮಾಧಾನ ನನ್ನ ಮನಸ್ಸಿಗೂ ಬೇಡವೆ?"

"ಅದನ್ನೆಲ್ಲ ಬಾಯಿಂದ ಹೇಳುವುದು ಸಾಧ್ಯವೆ? ನಾನು ಹೊರಡುವ ಮುನ್ನ ರಾಯರೆದುರು ಹೇಳಿದ್ದೆ—'ಏನೊ ನನ್ನ ಮನಸ್ಸು ಸರಿಯಾಗಿಲ್ಲ. ಸ್ವಾಮಿ ಗಳ ಹತ್ತಿರ ಹೋಗಿ ಬಂದಮೇಲೆಯೆ ಮಾತನಾಡುವುದು ಒಳಿತು' ಎಂದು. ಅಲ್ಲಿ ಸುಮಾರು ತಿಂಗಳು ಇದ್ದುದಕ್ಕೆ ಸಾರ್ಥಕವಾಯಿತು, ಇಷ್ಟೆ. ಇನ್ನೇನು?"

"ಏನೊ, ಈ ಮಾತಂತೂ ನನ್ನ ಬುದ್ಧಿಗೆ ಅರ್ಥವಾಗುವುದಿಲ್ಲ."

"ಅಂದು ನನ್ನ ಮನಸ್ಸನ್ನು ಎದುರಿಸಿದ ತೊಡಕೆ ಬುದ್ಧಿಗೆ ಅರ್ಥ ವಾಗದಂಥದು."

"ಅದಕ್ಕೆ ಸ್ವಾಮಿಗಳು ಸಮಾಧಾನ ಹೇಳಿದರೆ?"

"ನಾನು ನೇರವಾಗಿ ಕೇಳಲೇ ಇಲ್ಲ!"

"ಆದರೂ ನಿಮ್ಮ ಸಂದೇಹ ನಿವಾರಣೆಯಾಯಿತೆ? ತೀರ ವಿಚಿತ್ರ—"

"ವಿಚಿತ್ರವೇನೂ ಇಲ್ಲ, ಗೋಪಿ. ಮಹಾನುಭಾವರ ಸಹವಾಸದ ಫಲ

ಅಷ್ಟೊ ಅಲ್ಲವೆ ? ಸಾಮಾನ್ಯವಾಗಿ ಈ ಮನಸ್ಸು ಒಂದೇ ಕಡೆಯಲ್ಲಿ ಉಳಿದರೆ ಅಲ್ಲಿಯೇ ನಟ್ಟು ನಿಲ್ಲುತ್ತದೆ. ಅದಕ್ಕೂ ಹೆಚ್ಚಿನದೆಲ್ಲವನ್ನೂ ಮರೆತು ಬಿಡುತ್ತದೆ. ಈ ಸಂಸಾರಕ್ಕೆ ವ್ಯಾಮೋಹ ಎನ್ನುವುದು ಅದಕ್ಕೆಯೆ ಎಂದು ಕಾಣುತ್ತದೆ. ಅದರಲ್ಲಿಯೆ ಸಿಲುಕಿಕೊಂಡು ಒದ್ದಾಡುತ್ತಿರುವವರಿಗೆ ಪರಿಹಾರಮಾರ್ಗ ಕಾಣುವುದೇ ಇಲ್ಲ. ನೀರಲ್ಲಿಯೆ ಇರುವ ಮೀನಿಗೆ ನೀರ ಹೊರಗಿನ ವಿಶಾಲ ಪ್ರಪಂಚದ ಅರಿವು ಹೇಗೆ ಬರಬೇಕು ?—"

" ನೀವು ಒಂದು ಮಾತನ್ನು ಕೇಳಲಿಲ್ಲ, ಅವರೂ ಒಂದು ಮಾತನ್ನೂ ಹೇಳಲಿಲ್ಲ ಎನ್ನುತ್ತೀರಿ. ಆದರೂ ಪರಿಹಾರ ಸಿಕ್ಕಿತು ಎನ್ನುತ್ತೀರಿ. ನಾನು ವಿಚಿತ್ರ ಎಂದದ್ದು ಅದಕ್ಕೆ—"

" ಮಾತಿಗೆ ಮೀರಿದ ಪ್ರಭಾವವನ್ನು ಮಹಾನುಭಾವರು ಬೀರಬಹುದು— ತಮ್ಮ ಜೀವನದ ಪರಿಶುದ್ಧ ಸಂಸ್ಕಾರದ ಬಲದಿಂದ. ಅವರ ಹತ್ತಿರ ಇರುವುದರಿಂದ, ಅವರ ಅಂತರಂಗದ ಬೆಳಕಿನಲ್ಲಿ ಎಲ್ಲವೂ ಬೇರೆಯಾಗಿ ಕಾಣುತ್ತದೆ. ಈಗ ನಡೆದದ್ದೂ ಅಷ್ಟೆ. ನಾನು ಒಂದು ತಿಂಗಳು ಸುಮ್ಮನೆ ಅವರ ಜೊತೆಯಲ್ಲಿ ಬ್ರಹ್ಮಸೂತ್ರಭಾಷ್ಯ ಓದಿದೆ. ಹತ್ತಾರು ಬಾರಿ ಓದಿದ್ದರೂ ಈ ಸಲ ಅವರ ಜೊತೆಯಲ್ಲಿ ಓದುತ್ತಿದ್ದ ಹಾಗೆ ಬೇರೆ ಪ್ರಶ್ನೆಗಳು ಮನಸ್ಸಿನೆದುರು ನಿಲ್ಲುತ್ತಿದ್ದವು. ಚರ್ಚೆಗೆ ಅವಕಾಶ ಉಂಟಾಗುತ್ತಿದ್ದಿತು. ಅಂಥಲ್ಲಿಯೇ ನನ್ನನ್ನು ಕಂಗೆಡಿಸುವ ಅನೇಕ ಸಂದೇಹಗಳು ದೂರವಾಗುತ್ತಿದ್ದವು."

" ಮದುವೆಯ ವಿಚಾರವಾಗಿ ನೀವು ನೇರವಾಗಿ ಕೇಳಲೇ ಇಲ್ಲವೆ ? "

" ಇಲ್ಲವೆಂದರೂ ಕೊನೆಗೆ ಒಂದು ದಿನ ನನ್ನ ಮನಸ್ಸಿನಲ್ಲಿಯ ತೊಡಕನ್ನು ವಿವರಿಸಿದೆ. ಆಗಲೆ ನನಗೆ ಬೇಕಾದ ಉತ್ತರ ತಾನಾಗಿಯೆ ಸಿಕ್ಕಿದ್ದಿತು. ಆದರೂ ಹೇಳಬೇಕಾದ ಸಂದರ್ಭವೂ ಒಂದು ಬಂದಿತು."

" ಏನು—ಸಂದರ್ಭ ? "

" ಅಂದರೆ ಒಂದು ರಾತ್ರಿ ತೀರ ವಿಚಿತ್ರವಾದ ಕನಸು. ಮೂರು ದಿನವೂ ಆ ಕನಸಿನಲ್ಲಿ ಕಂಡದ್ದು ಕಣ್ಣೆದುರಿನಿಂದ ಸರಿಯುತ್ತಲೇ ಇರಲಿಲ್ಲ. ಆಗ ಹೇಳಬೇಕಾಯಿತು."

" ಏನೆಂದು ಕನಸು ? ಇದಕ್ಕೆ ಸಂಬಂಧವಿದ್ದಹಾಗೆಯೆ ? "

" ಅರೆಮರ್ಧ ಸಂಬಂಧವಿದ್ದ ಹಾಗೆ. ಉಳಿದದ್ದು ಏನೇನೊ—"

" ಏನು ಕನಸು ? "

" ನಾನೆಲ್ಲಿಯೊ ಒಂದು ಕಾಡಿನಲ್ಲಿದ್ದ ಹಾಗೆ. ಎಲ್ಲವೂ ಬೇರೆಯಾಗಿಯೇ ಇದ್ದಿತು. ಬಹುಶಃ ಆ ಕಾಡು ರಂಗಧೂಳಿಯೆ ಇರಬೇಕು. ನನ್ನ ಮನಸ್ಸು ತೀರ ತಲ್ಲಣಗೊಂಡಿತ್ತು. ಅದೂ ಶಾಂತಳ ಮದುವೆಯ ವಿಚಾರದಲ್ಲಿ. ಇಷ್ಟರ ಮಟ್ಟಿಗೆ ಕನಸು ನನ್ನ ಒಳಮನಸ್ಸಿನ ಪ್ರತೀಕವೇ ಸರಿ. ಆದರೆ ಮುಂದೆ ಬೇರೆ ಯಾಗಿ ಏನೇನೋ ನಡೆಯುತ್ತಿತ್ತು. ಕೊನೆಗೆ ಶಾಂತಳನ್ನೆ ಕೇಳಿದರಾಯಿತು ಎಂದುಕೊಂಡು ಆಕೆಯನ್ನು ಕರೆದೆ. ಆಕೆ ಕಾಡಿನಲ್ಲಿ ಎಲ್ಲಿಯೋ ಹೊರಟ ಹಾಗಿತ್ತು. ಈಗಿನಕಿಂತಲೂ ದೊಡ್ಡವಳಾಗಿ ಕಾಣುತ್ತಿದ್ದಳು. ಕರೆದು ಹತ್ತಿರ ದಲ್ಲಿ ಕುಳ್ಳಿರಿಸಿಕೊಂಡು ಕೇಳಿದೆ. ಕೇಳಿದ ಮಾತೂ ನನ್ನ ಮನಸ್ಸಿನಲ್ಲಿಯ ಮಾತೇ. ' ಇದು ನೋಡು ಶಾಂತಾ. ಗೋಪಿ ನಿನ್ನನ್ನು ಮದುವೆಯಾಗ ಬೇಕೆನ್ನುತ್ತಿದ್ದಾನೆ, ಇದಕ್ಕೆ ನೀನೇನ್ನುತ್ತೀ ? ನಿನ್ನ ಮನಸ್ಸು ಹೇಗಿದೆ ಹಾಗೆ ಮಾಡುವಾ ' ಎಂದೆ. ಆ ಮಾತನ್ನು ಕೇಳಿ ಶಾಂತಾ ತಿರುಗಿ ನೇರವಾಗಿ ನನ್ನ ಮುಖವನ್ನೇ ಬೆರಗುಪಟ್ಟು ನೋಡಿದಳು. ಆ ಮುಖವನ್ನು ನಾನು ಇನ್ನು ಎಂದಿಗೂ ಮರೆಯುವ ಹಾಗಿಲ್ಲ. ಹಾಗಿತ್ತು ಮುಖ. ಆಗಿನ ಆ ಮುಖ ದಲ್ಲಿಯ ಉಜ್ವಲ ಭಾವ ನನಗೆ ಇಂದಿಗೂ ಅರ್ಥವಾಗುವದಿಲ್ಲ. ಆಕೆ ಹಾಗೆಯೇ ಉಳಿದದ್ದನ್ನು ನೋಡಿ ಮತ್ತೆ ಕೇಳಿದೆ ' ಏನೆನ್ನುತ್ತೀ ? ' ಎಂದು. ಆಕೆ ಅರೆನಿಮಿಷ ತಡೆದು ಉತ್ತರ ಹೇಳಿದಳು. ಆ ಮಾತೂ ಅಚ್ಚಳಿಯದೆ ಉಳಿದುಬಿಟ್ಟಿದೆ ನನ್ನ ಮನಸ್ಸಿನಲ್ಲಿ. ' ಇದೇನು ಹೀಗೆ ಕೇಳುತ್ತೀ, ಅಪ್ಪಾ ? ನನಗೆ ಮದುವೆಯಾಗಿಲ್ಲವೆ ? ಅವರ ಕೂಡ ನನ್ನ ಮದುವೆ ಆಗಿ ಹೋಗಿದ್ದನ್ನು ಮರೆತೆಯಾ ? ಮದುವೆಯಾದ ನನ್ನನ್ನು ಅವರು ಪ್ರೀತಿಸುತ್ತಾರೆ ಎನ್ನುವುದ ರಲ್ಲಿ ಹೊಸದೇನು ? ನಿನ್ನ ಮಾತೇ ನನಗೆ ಅರ್ಥವಾಗುವುದಿಲ್ಲ.' ಎಂದು ಹೇಳಿ ನನ್ನ ಹತ್ತಿರದಿಂದ ಎದ್ದು ಹೊರಟೇಬಿಟ್ಟಳು. ನಾನು ಎಷ್ಟು ಕೂಗಿ ದರೂ, ಎಷ್ಟು ಕರೆದರೂ ಆಕೆ ನಿಲ್ಲಲೇ ಇಲ್ಲ. ' ಇದೇನು, ಶಾಂತಾ, ಎಲ್ಲಿಗೆ ಹೊರಟೆ ? ' ಎಂದು ಗಟ್ಟಿಯಾಗಿ ಕೂಗಿದೆ. ಆಕೆ ಅಷ್ಟರಲ್ಲಿ ಎಲ್ಲಿಯೋ ದೂರ ಹೊರಟುಹೋಗಿದ್ದಳು. ಕಣ್ಣಿಗೆ ಕಾಣುತ್ತಲೇ ಇರಲಿಲ್ಲ. ಆಕೆಯ ದನಿ ಮಾತ್ರ ಎಲ್ಲಿಯೋ ದೂರದ ಕಾಡಿನೊಳಗಿಂದ ಬರುತ್ತಿದ್ದ ಹಾಗೆ ಕೇಳಬರುತ್ತಿತ್ತು. ' ಅವರು ಎಲ್ಲಿಯೊ ಕಾಡಿನಲ್ಲಿ ಹೊರಟಿದ್ದಾರೆ. ಅವರು ಹೊರಟಿರುವಾಗ ನಾನು ಒಬ್ಬಳೇ ಹಿಂದುಳಿಯಲೆ? ಅವರನ್ನು ನಾನು ನೋಡಿಕೊಳ್ಳಲೇಬೇಕು. ಅವರಿಗೆ

ಏನಾದರೂ ಅಪಾಯ ಸಂಭವಿಸಿದರೆ ? ನಾನು ಹೋಗಬೇಡವೆ ? ಸುಮ್ಮನೆ ಯಾತಕ್ಕೆ ಕೂಗುತ್ತೀ ? ' ಎಂದು ಮೂದಲಿಸುತ್ತಿದ್ದ ಹಾಗೆ ಕೇಳಿಸಿತು. ದನಿ ಮಾಯವಾಯಿತು. ನನಗೆ ಶಾಂತಾ ಕಣ್ಮರೆಯಾದುದನ್ನು, ದನಿಯೂ ಮಾಯ ವಾದುದನ್ನು ನೆನೆದಾಗ ತಡೆಯದಾಗಿ ' ಶಾಂತಾ ' ಎಂದು ಗಟ್ಟಿಯಾಗಿ ಕೂಗ ಬೇಕೆಂದೆ. ಬಾಯಿಗೆ ದನಿಯೇ ಬರಲಿಲ್ಲ. ಉಸಿರುಕಟ್ಟಿದಂತಾಗಿ ತಟ್ಟನೆ ಎಚ್ಚರ ವಾಗಿ ಬಿಟ್ಟಿತು. ಏನು ಕನಸೊ, ಎಂದು ದಿಗಿಲುಪಡುತ್ತ ಎದ್ದು ಕುಳಿತೆ. ವಿಚಿತ್ರ ಅಲ್ಲವೆ ? "

" ತೀರ ವಿಚಿತ್ರ—"

ಎಂದು ಗೋಪಿ ಸುಮ್ಮನಾದ. ಕನಸಿನ ಉತ್ತರಾರ್ಧ ಶಾಸ್ತ್ರಿಗಳಂತೆ ಗೋಪಿಗೂ ಅರ್ಥವಾಗಲಿಲ್ಲ. ಅದೆಲ್ಲ ಶಾಂತಳ ಮನಸ್ಸಿನ ಪ್ರತೀಕವಾಗಿರ ಬಹುದೆ? ಆಕೆ ಆಗಲೆ ಮದುವೆ ತನ್ನೊಡನೆ ಆಗಿದೆ— ಅಥವಾ ಆದಹಾಗೆಯೆ– ಎಂದು ಭಾವಿಸುತ್ತಿರಬಹುದೆ ? ಹಾಗಿದ್ದರೆ ಅದು ಶಾಸ್ತ್ರಿಗಳ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತು ಅವರಿಗೆ ಯಾಕೆ ಕನಸಾಗಿ ಕಾಣಬೇಕು ? ಅಥವಾ ಶಾಂತಾ ಇನ್ನಾವ ರೀತಿಯಲ್ಲಿಯೊ ತನ್ನ ಮನಸ್ಸಿನಲ್ಲಿದ್ದುದನ್ನು ಶಾಸ್ತ್ರಿಗಳಿಗೆ ತಿಳಿಸಿದ್ದು ಅದು ಅವರ ಒಳಮನಸ್ಸಿನ ಮೇಲೆ ಆ ರೀತಿಯಾಗಿ ಪರಿಣಾಮ ಮಾಡಿರಬಹುದೆ ? ಎಂದು ಮುಂತಾಗಿ ಯೋಚಿಸಿ ಏನಾದರೂ ಒಂದು ಅರ್ಥ ವನ್ನು ಹೊಂದಿಸಹೋದ. ಅಂತೆಯೆ ಕೇಳಿದ

" ನೀವು ಊರಿಗೆ ಹೊರಡುವ ಮೊದಲು ಶಾಂತಾ ನಿಮಗೆ ಏನಾದರೂ ಹೇಳಿದ್ದಳೆ ? "

" ಸಾಧ್ಯವೇ ಇಲ್ಲ. ನನ್ನ ಮನಸ್ಸು ನಿರಾತಂಕವಾಗಿ ಒಪ್ಪುವ ವರೆಗೆ ಯಾವ ಊಹಾಪೋಹ, ಯಾವ ಯೋಚನೆಯೂ ಬೇಡ ಎಂದು ಮನೆಯಲ್ಲಿ ನಾನು ಈ ವಿಷಯವನ್ನು ನೇರವಾಗಿ ಎತ್ತಿಯೇ ಇಲ್ಲ."

" ಹಾಗಿದ್ದರೆ, ಏನು ಕನಸೊ, ಏನು ಅರ್ಥವೊ—"

"ಯಾವಾಗಲೂ ಕನಸಿಗೊಂದು ಅರ್ಥ ಹಚ್ಚಬೇಕಾದುದೇ ಇಲ್ಲ. ನಿದ್ರೆ ಯಲ್ಲಿ ಬುದ್ಧಿಯ ಹಿಡಿತ ತಪ್ಪಿದಾಗ ಅಂತಶ್ಚೇತನ ಇದ್ದುದನ್ನು ಇರಬಹುದನ್ನು ಏನೇನನ್ನೋ ವಿಕಾರವಾಗಿ ಕಲೆ ಹಾಕಿ ಕಣ್ಣ ಮುಂದೆ ಚಿತ್ರವನ್ನು ಕಟ್ಟು ತ್ತದೆ. ಆದರೆ ನನಗೆ ಕನಸಿನಲ್ಲಿ ವಿಚಿತ್ರವೆನಿಸಿದ, ಯೋಚನೆಗೀಡುಮಾಡಿದ ಅಂಶ

ಬೇರೆಯಾಗಿದೆ. ಈ ಕನಸನ್ನು ನೆನೆಯುತ್ತಿದ್ದ ಹಾಗೆಲ್ಲ ನನಗೆ ಸಾವಿತ್ರಿಯ ಕತೆಯೇ ಮನಸ್ಸಿನೆದುರು ನಿಲ್ಲುತ್ತಿತ್ತು. ಅಂತೆಯೆ ತಡೆಯದಾಗಿ ಕೊನೆಗೆ ಸ್ವಾಮಿಗಳೆದುರು ನನ್ನ ಮನಸ್ಸಿನ ಆತಂಕವನ್ನೆಲ್ಲವನ್ನೂ ತಿಳಿಸಿದೆ. ತಿಂಗಳು ಗಟ್ಟಲೆ ನಾನು ತೊಳಲಾಡುತ್ತಿದ್ದುದನ್ನು ವಿವರಿಸಿದೆ. "

" ಅದಕ್ಕೆ ಅವರೇನೆಂದರು ? "

" ಏನೂ ಅನ್ನಲಿಲ್ಲ. ಹೇಳಿದುದೆಲ್ಲವನ್ನೂ ಕೇಳಿಕೊಂಡು ನಕ್ಕರು. ಒಂದೆರಡು ನಿಮಿಷ ತಡೆದು ನನ್ನನ್ನು ಕೇಳಿದರು. ' ಇಷ್ಟು ತಿಳಿದವ ನೀನು. ಇಷ್ಟಕ್ಕಾಗಿ ಎಷ್ಟು ಒದ್ದಾಟ ? ನಿನ್ನ ಮನಸ್ಸಿನಲ್ಲಿ ಆತಂಕ ಯಾತರಿಂದಾಗಿ ಉಂಟಾಗಿದೆ ಎಂಬುದನ್ನು ಯೋಚಿಸಿದ್ದೀಯಾ ? ' ಎಂದು ಕೇಳಿದರು. 'ನನಗೆ ಯಾವುದೂ ತಿಳಿಯದಾಗಿದೆ, ಸ್ವಾಮಿಗಳೆ' ಎಂದೆ. 'ನಿನ್ನ ಮಗಳು ಅಳಿಯ ಸುಖವಾಗಿರಬೇಕು ಎಂಬ ಬಯಕೆಯೆ ಇದಕ್ಕೆ ಮೂಲ. ಅಲ್ಲವೆ? ' ಎಂದರು. ' ಹೌದು, ಅದರಲ್ಲಿ ತಪ್ಪೇನು? ' ಎಂದೆ ನಾನು. ಅದಕ್ಕೆ ಪ್ರತಿಯಾಗಿ ಅವರು ' ಸುಖವೆಂದರೇನು ? ' ಎಂದು ಕೇಳಿ ಮುಂದುವರಿದರು 'ಸುಖಕ್ಕೆ ಅಳತೆ ಗೋಲು ಯಾವುದು ? ಕಾಲಮಾನದಿಂದ ಹೆಚ್ಚು ದಿವಸ ಸುಖವಾಗಿದ್ದವನ ಸುಖ ಹೆಚ್ಚೊ, ಅಥವಾ ಕೆಲಕಾಲವೇ ಇದ್ದರೂ ಅದೇ ಬಗೆಯ ಸುಖದ ಪರಮಾವಧಿಯನ್ನು ಅನುಭವಿಸಿದವನ ಸುಖ ಹೆಚ್ಚೊ ? ' ಎಂದು ಕೇಳಿದರು. ಮುಂದೆ ಅವರು ಸಾವಿತ್ರಿಯ ಉದಾಹರಣೆಯನ್ನೆ ವಿವರಿಸಿದರು. 'ನಾರದ ಬಂದು ಹೋದ ಮೇಲೆ ಸಾವಿತ್ರಿ ದ್ಯುಮತ್ಸೇನನಿಗೆ ಏನೆಂದು ಉತ್ತರ ಹೇಳಿದಳು ? ಆಕೆ ಹಾಗೆ ಹೇಳಿದ್ದು ಯಾಕೆ ? ಅದರ ಅರ್ಥವೇನು ? ಪರಿಹಾರ್ಯವಾದ ಆತಂಕಗಳ ಯೋಚನೆಯನ್ನು ಬೆಳಸಿಕೊಂಡು ಪ್ರಸ್ತುತದಲ್ಲಿಯ ಸುಖವನ್ನೂ ಹಾಳು ಮಾಡಿಕೊಳ್ಳುವುದು ಮನುಷ್ಯನ ಸ್ವಭಾವವೇ ಆಗಿದೆ. ಬಂಧಮೋಕ್ಷಗಳೆರಡಕ್ಕೂ ಒಂದೇ ಮನಸ್ಸು ಕಾರಣ. ಬಯಸಿದ್ದು ಸಿಕ್ಕುತ್ತದೆ. ನಿನ್ನ ಮನಸ್ಸು ತೀರ ಒಂದು ಚಿಕ್ಕ ಯೋಚನೆಯಲ್ಲಿ ಸಿಕ್ಕು ಒದ್ದಾಡುತ್ತಿದೆ. ನಾರದರ ಸ್ಪಷ್ಟವಾದ ಮಾತನ್ನು ಕೇಳಿದ ದ್ಯುಮತ್ಸೇನ ನಿನ್ನ ಮಟ್ಟಿಗೆ ಒದ್ದಾಡಿರಲಿಕ್ಕಿಲ್ಲ. ನಿನಗಂತೂ ಯಾವುದೂ ನೇರವಾಗಿ ತಿಳಿದಿಲ್ಲ. ಜೀವನದಲ್ಲಿದ್ದು ಜೀವನದಿಂದ ಓಡಿ ಹೋಗಬೇಕೆಂದರೆ ಹೇಗೆ ಸಾಧ್ಯ? ' ಎಂದು ಹೇಳಿ ಸುಮ್ಮನಾದರು. ಅವರ ಮಾತೇ ನಿಜ ಎನಿಸಿತು ನನಗೆ. ಇದೆಲ್ಲ ಸಲ್ಲದ ಯೋಚನೆ

ಯೆಂದು ಅದನ್ನು ತತ್‌ಕ್ಷಣ ಮನಸ್ಸಿನಿಂದ ದೂಡುವುದು ಸಾಧ್ಯವಾಯಿತು. ಆಗಲೆ ನಿರ್ಧರಿಸಿಕೊಂಡೆ. ಬಂದಕೂಡಲೆ ನಿನಗೆ ತಿಳಿಸಿ ಬೇಗನೆ ಮದುವೆ ಮಾಡಿ ಬಿಡುವುದು ಎಂದು— ”

ಶಾಸ್ತ್ರಿಗಳ ಮಾತಿನಲ್ಲಿ ಗೆಲುವು ಸಂತೋಷಗಳಿದ್ದುವು. ಮುಸುಕಿದ ಮೋಡ ಪೂರ್ತಿಯಾಗಿ ಸರಿದಿತ್ತು. ಅವರ ಮಾತುಗಳನ್ನು ಕೇಳುತ್ತಿದ್ದ ಹಾಗೆ ಗೋಪಿಯ ಮನಸ್ಸಿನಲ್ಲಿ ನೂರಾರು ಯೋಚನೆಗಳು ಸುಳಿದು ಹೋದುವು. ಕೆಲಹೊತ್ತು ಮನಸ್ಸು ಅಶಾಂತವಾಯಿತು. ಆದರೆ ಶಾಂತಳ ಚಿತ್ರ ಕಣ್ಣೆದುರು ನಿಂತಾಗ ಆ ಅಶಾಂತಿಯೆಲ್ಲವೂ ಮಾಯವಾಗುತ್ತಿತ್ತು. ಕೊನೆಗೆ ಶಾಸ್ತ್ರಿಗಳು ಒಪ್ಪಿದರು ಎಂದು ಸಂತಸ ತಲೆದೋರುತ್ತಿತ್ತು. ಶಾಂತಾ—ಶಾಂತಾ ಎಂದು ರಕ್ತದ ಪ್ರತಿಯೊಂದು ಕಣ ಪ್ರತಿಧ್ವನಿಸುತ್ತ ತನ್ನ ಜೀವನಾಡಿಯನ್ನು ನಡಸುತ್ತಿದ್ದ ಹಾಗೆ ಭಾಸವಾಯಿತು. ಶಾಂತಾ ತನ್ನವಳು—ಇನ್ನು ಮುಂದೆ ಯಾವಾಗಲೂ ತನ್ನವಳು—ಎಂಬ ಭರವಸೆ ಎಲ್ಲ ಯೋಚನೆಗಳನ್ನೂ ತಗ್ಗಿಸಿ ತಾನೇ ತಾನಾಗಿ ನಿಲ್ಲುತ್ತಿತ್ತು.

ಇಬ್ಬರೂ ಮನೆಯ ದಾರಿಯನ್ನು ಹಿಡಿದು ಹಿಂದಿರುಗಿದಾಗ ಮಬ್ಬುಗತ್ತಲು ಕವಿಯುತ್ತಿತ್ತು. ಪಶ್ಚಿಮದ ದಿಗಂತದಲ್ಲಿ ಹತ್ತು ನಿಮಿಷ ಮೊದಲು ಬೆಂಕಿಯ ತೆರೆಯ ಹಾಗೆ ಉರಿಯುತ್ತಿದ್ದ ಮೇಘಮಾಲಿಕೆಯೊಂದು ನಿಧಾನವಾಗಿ ಬಣ್ಣಗೆಡುತ್ತಲಿದ್ದಿತು. ಸುತ್ತಲಿನ ಚರಾಚರ ಪ್ರಪಂಚದಲ್ಲಿಯ ಪ್ರತಿಯೊಂದು ವಸ್ತುವೂ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತ ಅನಾದಿ ಕಾಲದಿಂದಲೂ ಪೃಥ್ವಿಯನ್ನು ಮುಸುಕುತ್ತ ಬಂದ ಕತ್ತಲೆಯ ಪಾಶಕ್ಕೆ—ಪ್ರಳಯ ಕಾಲದಲ್ಲಿಯ ಸೃಷ್ಟಿಯ ಹಾಗೆ—ಒಳಗಾಗುತ್ತಿತ್ತು. ಗೋಪಿ ಯೋಚಿಸುತ್ತಿದ್ದ. ಸೃಷ್ಟಿ ಹುಟ್ಟುವ ಮೊದಲು ಎಲ್ಲವೂ ಕತ್ತಲಾಗಿರಬೇಕಲ್ಲವೆ ? ಈ ಕತ್ತಲೆಯ ಅರ್ಥವೇನು ? ಬೆಳಕಿಗೊಂದು ಬೆಲೆ ಬರಬೇಕಾದರೆ ಕತ್ತಲು ಬೇಕೇಬೇಕು. ಬೆಳಕು ಜೀವನ—ಕತ್ತಲು ಸಾವು. ಈ ಕತ್ತಲೆಯ ಒಡಲಲ್ಲಿಯೇ ಬೆಳಕು ಮೂಡುತ್ತದೆ. ಸಾವಿಲ್ಲದ ಬದುಕಿಲ್ಲ. ಸಾವಿನಲ್ಲಿಯೇ ಬದುಕು ಶಾಶ್ವತವಾಗುತ್ತದೆ ಎಂದು ಹೇಳಲಿಲ್ಲವೆ ಶಾಸ್ತ್ರಿಗಳು ? ಪ್ರಳಯವಾದರೆ ಅದು ಹೊಸ ಸೃಷ್ಟಿಯ ನಿರ್ಮಿತಿಗಾಗಿ. ಸಂಜೆಗತ್ತಲು ಮುಸುಕುತ್ತದೆಯೆಂದೇ ಸುಪ್ರಭಾತ ಬೆಳಗುತ್ತದೆ.... ಇಬ್ಬರೂ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದರು. ಮನೆಯ ಹತ್ತಿರ

ಬಂದದ್ದು ಇಬ್ಬರಿಗೂ ಗಮನಕ್ಕೆ ಬಂದ ಹಾಗೆ ಕಾಣಲಿಲ್ಲ.

" ಓ, ಬಂದೇಬಿಟ್ಟೆವಲ್ಲ. ಎಷ್ಟು ಬೇಗ ದಾರಿ ಸರಿಯಿತು ! "

" ಹುಂ. ಒಳ್ಳೇ ಜೋರಾಗಿಯೆ ಬಂದೆವು. ರಾಯರು ಇಷ್ಟರಲ್ಲಿ ಬಂದಿರಬೇಕಲ್ಲವೆ ? "

" ಬಂದಿರಬೇಕು. ಒಳಗೆ ಬನ್ನಿ— "

" ನೋಡಿಕೊಂಡು ಬಾ. ಆಗಲೆ ತಡವಾಗಿ ಬಿಟ್ಟಿದೆ. ಬಂದಿದ್ದರೆ ಬರುತ್ತೇನೆ. ಇಲ್ಲವಾದರೆ ನಾಳೆ ಬೆಳಿಗ್ಗೆ ಬರುತ್ತೇನೆ. "

ಎಂದು ಹೇಳಿ ಶಾಸ್ತ್ರಿಗಳು ಹೊರಗೆಯೆ ಕಾಯುತ್ತ ನಿಂತರು. ಗೋಪಿ ಒಳ್ಳೆ ಉತ್ಸಾಹದಿಂದ ಒಳಗಡೆ ಹೋದ. ಒಂದೆರಡು ನಿಮಿಷಗಳಲ್ಲಿಯೆ ರಾಯರ ದನಿ ಕೇಳಿಸಿತು.

" ಬನ್ನಿ, ಶಾಸ್ತ್ರಿಗಳೆ. ಹೊರಗೆಯೆ ನಿಂತುಬಿಟ್ಟಿರಲ್ಲ— "

" ಬಂದೆ—ನೀವು ಬಂದದ್ದು ನೋಡಿಕೊಂಡು— "

" ಬನ್ನಿ-ಬನ್ನಿ. ಎಲ್ಲಿ, ರಂಗಧೂಳಿಗೆ ಹೋಗಿದ್ದಿರಾ ಗೋಪಿಯ ಜೊತೆಯಲ್ಲಿ ?—ಬನ್ನಿ, ಯಾವಾಗ ಬಂದಿರಿ ಊರಿಂದ ? ಏನು ಸಮಾಚಾರ ? "

"ಒಂದು ಸಮಾಚಾರವಂತೂ ಮುಖ್ಯ, ಆಗಲೆ ಗೋಪಿ ಹೇಳಿದನೆ?— "

" ಗೋಪಿ ಇದೇ ಬಂದನಲ್ಲ ? ಆದರೂ ತಿಳಿಯಿತು. ನಿಮ್ಮ ಮನೆಯವರು ಬಂದಿದ್ದರಂತೆ ಸಾಯಂಕಾಲ. ಸಂತೋಷ, ಶಾಸ್ತ್ರಿಗಳೆ, ತುಂಬಾ ಸಂತೋಷ. ಕೊನೆಗೆ ಒಪ್ಪಿದಿರಲ್ಲ. "

" ದೇವರ ಇಚ್ಛೆ— "

" ಬನ್ನಿ, ಕುಳಿತುಕೊಳ್ಳಿ. ಊರಿಂದ ಯಾವಾಗ ಬಂದಿರಿ ? "

" ನಿನ್ನೆ ಸಾಯಂಕಾಲ ಬಂದೆ. ಇಂದು ಬೆಳಿಗ್ಗೆಯೆ ಬರೋಣ ಅಂದೆ. ಏನೋ ಅದು ಇದು ಎಂದು ಕೆಲಸದಲ್ಲಿ ಬರಲಾಗಲಿಲ್ಲ. ಮಧ್ಯಾಹ್ನ ಬಂದಿದ್ದೆ. ನೀವು ಭೀಮನಕೊಪ್ಪಕ್ಕೆ ಹೋದದ್ದು ಗೊತ್ತಾಯಿತು. ಗೋಪಿಯನ್ನೇ ನೋಡುವಾ ಎಂದು ರಂಗಧೂಳಿಗೆ ಹೋಗಿಬಿಟ್ಟೆ— "

" ಗೋಪಿಗೆ ಹೇಳಿದಿರೊ ಇಲ್ಲವೊ ಈ ಸಮಾಚಾರವನ್ನು ? "

" ಹೇಳಿದೆ. ಆದರೆ ನಿಮಗೆಯೆ ಮೊದಲಿಗೆ ಹೇಳಬೇಕಿತ್ತು— "

" ಸರಿ. ಯಾರಿಗೆ ಹೇಳಿದರೆ ಏನು ? ಮುಖ್ಯ ಆತನಿಗೆ ಹೇಳಬೇಕಾ

ದದ್ದು. ನೀವು ಊರಲ್ಲಿ ಇಲ್ಲದಾಗ ಎಂಥ ಚಿಕ್ಕ ಮೋರೆ ಮಾಡಿಕೊಂಡು ತಿರುಗಾಡುತ್ತಿದ್ದ. ನಾನಾದರೂ ಆತನಿಗೆ ಏನು ಹೇಳಬಹುದಿತ್ತು ? ನೀವು ಹೊರಡುವಾಗ ಯಾವ ಭರವಸೆಯ ಮಾತನ್ನೂ ಹೇಳಲಿಲ್ಲ. ಅವನನ್ನು ಸಮಾಧಾನ ಹೇಳುವುದೇ ಕಷ್ಟವಾಗಿತ್ತು—"

" ಅದಕ್ಕೆಯೆ ನಾನು ನಿಮ್ಮನ್ನು ಎಷ್ಟು ಕ್ಷಮೆ ಕೇಳಿದರೂ ಕಡಿಮೆಯೆ. ಈ ಎಲ್ಲಾ ತೊಳಲಾಟಕ್ಕೆ, ಅನಿಶ್ಚಿತತೆಗೆ ನಾನೇ ಅಲ್ಲವೆ ಕಾರಣ ? ನಾನಾದರೂ ಏನು ಮಾಡಲಿ ? ಅಂದಿನ ನನ್ನ ಮನಃಸ್ಥಿತಿಯೆ ಹಾಗಿತ್ತು—"

" ಆಯಿತಲ್ಲ, ಶಾಸ್ತ್ರಿಗಳೆ—ಮುಖ್ಯ ಗೋಪಿಯ ಸುಖಕ್ಕಾಗಿ ಇದೆಲ್ಲ. ಆತನಿಗೆ ಬೇಕಾದ ಹಾಗೆಯೆ ಕೊನೆಯಲ್ಲಿ ನಿಮಗೂ ಒಪ್ಪಿಗೆಯಾಯಿತು. ನೀವು ಬೇಡ ಎಂದು ಹೇಳಿದ್ದರೆ ಆತನಿಗೆ, ನನಗೆ ತುಂಬ ನಿರಾಶೆಯಾಗುತ್ತಿತ್ತು—"

" ಅದೆಲ್ಲ ಸರಿ, ರಾಯರೆ. ಆದರೆ ಒಂದು ವಿಷಯದಲ್ಲಿ ನನ್ನ ಮನಸ್ಸಿನಲ್ಲಿಯ ಸಂಕೋಚ ಉಳಿದೇ ಉಳಿಯುತ್ತದೆ. ಎಷ್ಟಾದರೂ ನಾನು ಬಡವ. ಏನೋ ನೂರು ರೀತಿಯಲ್ಲಿ ನೀವು ವಿಶ್ವಾಸ ತೋರಿಸಿದ್ದೀರಿ. ಈಗ ಬಾಂಧವ್ಯದ ಪ್ರಸ್ತಾಪ ಬಂದಿದೆ. ನನ್ನ ಕೈಲಾದಷ್ಟು ಮಾಡುವೆ. ಮುಖ್ಯ, ನನ್ನ ಮಗಳನ್ನು ಮಡಿಲೊಳಗೆ ಸ್ವೀಕರಿಸಬೇಕು—"

" ಎಂಥ ಮಾತು, ಶಾಸ್ತ್ರಿಗಳೆ ? ಈಗ ನಿಮ್ಮನ್ನು ವರದಕ್ಷಿಣೆ ಎಷ್ಟು ಎಂದು ಕೇಳಿದ ಹಾಗೆ ಮಾತನಾಡುತ್ತಿದ್ದೀರಲ್ಲ ? ಹತ್ತು ಬಾರಿ ನಾನು ನಿಮಗೆ ಹೇಳಿದ್ದೇನೆ. ನಿಮ್ಮ ಬಡತನದ ಮಾತು ಯಾಕೆ ? ನಾವು ನಮ್ಮ ಮಡಿಲೊಳಗೆ ಸ್ವೀಕರಿಸುವುದೇನು? ಎಂಥ ದೊಡ್ಡ ಮಾತುಗಳು ಇವೆಲ್ಲ ! ಮುಖ್ಯ ಗೋಪಿ ಆಕೆಯನ್ನು ಮನಸಾರೆ ಸ್ವೀಕರಿಸಿದ್ದಾನೆ. ಇದಕ್ಕೂ ಹೆಚ್ಚಿನದು ಯಾವುದು ಬೇಕು ಮದುವೆಗೆ ? ಹಿರಿಯರೆಂದೆನಿಸಿಕೊಳ್ಳುವ ನಾವು ಸಾಧ್ಯವಿದ್ದಷ್ಟು ಬೇಗ ಅವರಿಗೆ ಮದುವೆ ಮಾಡಿ ಅವರು ಸುಖವಾಗಿ ಇರುವುದನ್ನು ನೋಡಿದರೆ ಆಯಿತು—"

ರಾಯರ ಧಾರಾಳವಾದ ಅಂತಃಕರಣದ ಮಾತುಗಳಿಂದ ಶಾಸ್ತ್ರಿಗಳಿಗೆ ಮಾತೇ ಬಾರದಾಯಿತು. ತಮ್ಮ ಮಗಳನ್ನು ಸ್ವೀಕರಿಸಬೇಕೆಂದು ಅವರು ಹೇಳಿದ್ದು ಕೇವಲ ಉಪಚಾರದ ಮಾತಾಗಿರಲಿಲ್ಲ. ದೈವಾಯತ್ತವಾಗಿ ಕೂಡಿ

ಬಂದ ಈ ಸಂಬಂಧದ ವಿಚಾರದಲ್ಲಿ ಉಳಿದವರು–ಊರವರು–ಹೇಗೆ ಮಾತ ನಾಡಬಹುದೆಂಬುದು ಅವರಿಗೆ ತಿಳಿದೇ ಇದ್ದಿತು. ಅದಕ್ಕೂ ಹೆಚ್ಚಾಗಿ ತಮ್ಮ ಮಗಳು ಊರಿಗೆ ಹಿರಿಯ ಮನೆತನದಲ್ಲಿ ಒಬ್ಬನೇ ಒಬ್ಬ ಮಗನ ಮಡದಿಯಾಗ ಲಿರುವುದು ತಮ್ಮ ಮತ್ತು ರಾಯರ ಮನೆತನಗಳ ನಡುವಿನ ಸಾಮಾಜಿಕ ಅಂತರವನ್ನು ಎತ್ತಿ ತೋರಿಸುತ್ತಿದ್ದರೆ ಅದೂ ಸ್ವಾಭಾವಿಕವೆ. ಎಲ್ಲಕ್ಕೂ ಮಿಗಿ ಲಾಗಿ ರಾಯರು ಇಷ್ಟೊಂದು ಉದಾರ ಹೃದಯದಿಂದ ಎಲ್ಲವನ್ನು ಸಹಿಸಿ ಕೊಂಡು ತಾವು ಒಪ್ಪಿಗೆ ಹೇಳಿದ ಕೂಡಲೆ ತಮ್ಮ ಸಂತೋಷವನ್ನು ಹೇಳಿದ್ದು ಶಾಸ್ತ್ರಿಗಳ ಬಾಯನ್ನು ಕಟ್ಟಿಬಿಟ್ಟಿತ್ತು. ರಾಯರು ಹೇಳಿದ್ದರು

“ ನಿಮ್ಮ ಮಾತಿನಲ್ಲಿ ನನಗೆ ವಿಶ್ವಾಸವಿರದಿದ್ದರೆ ಇಷ್ಟು ಮಾತನ್ನು ನಾನು ಹೇಳುತ್ತಲೇ ಇರಲಿಲ್ಲ. ಎಂದಿನಿಂದಲೂ ಒಂದೇ ಮನೆಯವರ ಹಾಗೆಯೆ ಇದ್ದ ನಾವು ಈಗ ಒಂದು ಹಬ್ಬದ ತರಹ ಈ ಸಮಾರಂಭವನ್ನು ನಡಸಿ ಬಿಡೋಣ. ಹತ್ತು ಜನ ಹತ್ತು ತರಹ ಯಾವಾಗಲೂ ಮಾತನಾಡುತ್ತಾರೆ. ಮದುವೆ ಮಾಡುವುದು ನಮ್ಮ ಕೆಲಸ. ಅಷ್ಟಾದರೆ ಮುಗಿಯಿತು. ನೀವು ಯಾವಾಗ ಮುಹೂರ್ತ ಹೇಳುತ್ತೀರೊ ಆಗ ಆಗಲಿ—”

ಶಾಸ್ತ್ರಿಗಳು ಒಂದೆರಡು ನಿಮಿಷ ತಡೆದು ಕೇಳಿದರು.

“ ಶಾನುಭೋಗರಿಗೆ ತುಂಬಾ ಖಾಯಿಲೆಯಂತಲ್ಲ ? ನಾನು ಹೋಗ ಬೇಕಾಗಿತ್ತು, ಈಗಲೆ. ಬೆಳಿಗ್ಗಾದರೂ ಹೋಗಿ ನೋಡಿಕೊಂಡುಬರುತ್ತೇನೆ.”

“ ಹೌದು. ಈಗ ಮೂರು ದಿನದಿಂದ ದೇಹಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ನಿಮ್ಮನ್ನು ಕೇಳುತ್ತಲೇ ಇದ್ದಾರೆ. ನೀವು ಊರಿಂದ ಬಂದದ್ದು ಅವರಿಗೆ ಇನ್ನೂ ಗೊತ್ತಾಗಿಲ್ಲವೆಂದು ಕಾಣುತ್ತದೆ. ಇಲ್ಲವಾದರೆ ಕರಸಿಯೋ ಬಿಡು ತ್ತಿದ್ದರು. ಈಗ ನಾನೂ ಆಕಡೆಗೇ ಹೋಗಬೇಕು.”

“ ಹಾಗಿದ್ದರೆ ನಿಮ್ಮ ಊಟ ಮುಗಿಯಲಿ. ನಾನೂ ನನ್ನ ಆಹ್ನಿಕ ಮುಗಿ ಯಿಸಿಕೊಂಡು ಬರುತ್ತೇನೆ. ಆಗಲೆ ತಡವಾಗಿಬಿಟ್ಟಿದೆ.”

“ ಆಗಲಿ. ನಾನು ಹೋಗಿ ಹೇಳುತ್ತೇನೆ ಹಾಗಿದ್ದರೆ— ”

“ ಹುಂ— ನಾನು ಬರಲಾ ? ”

ಎಂದು ಶಾಸ್ತ್ರಿಗಳು ಮನೆಯ ದಾರಿಯನ್ನು ಹಿಡಿದರು. ರಾಯರು ಊಟಕ್ಕೆ ಕೂಡುವ ಮುನ್ನ ಗೋಪಿ ಬಂದಿರದಿದ್ದುದನ್ನು ನೋಡಿ ಕಮಲವ

ನವರನ್ನು ಕೇಳಿದರು

" ಗೋಪಿ ಬರುವುದಿಲ್ಲವೆ ಊಟಕ್ಕೆ ? "

" ಹಸಿವಿಲ್ಲ ಎಂದ. ಅವನ ಹೊಟ್ಟೆ ಆಗಲೆ ತುಂಬಿಹೋಗಿದೆ—"

ಆ ಮಾತಿನಲ್ಲಿ ಮೂದಲಿಕೆ ಇರಲಿಲ್ಲ, ನಿಜ. ಆದರೆ ಇರಬೇಕಾದ ಗೆಲುವಾಗಲಿ, ಮದುವೆ ಗೊತ್ತಾದ ಸಮಯದಲ್ಲಿ ಸಹಜವಾಗಿರಬಹುದಾದ ಸರಸವಾಗಲಿ ಇರಲಿಲ್ಲ. ಮುಖ್ಯವಾಗಿ ಶಾಂತಳನ್ನು ಗೋಪಿ ವರಿಸಿದಾಗಿನಿಂದ ಅವರಿಗೆ ಉತ್ಸಾಹವೆ ಉಳಿದಿರಲಿಲ್ಲ. ಇತ್ತೀಚೆ ನಾಲ್ಕಾರು ದಿನಗಳಲ್ಲಿ ವತ್ಸಲೆಯ ಕೂಡವೂ ಮಾತನಾಡಿಯಾಗಿದ್ದಿತು. ಅವರಿಗೆ ಆಶ್ಚರ್ಯವೆನಿಸಬಹುದಾದ ರೀತಿಯಲ್ಲಿ ವತ್ಸಲೆಯ ಪರಿವರ್ತನೆಯಾದುದನ್ನು ಕಂಡಿದ್ದರು. ಒಬ್ಬನೇ ಮಗನ ಮದುವೆಯನ್ನು ಒಳ್ಳೆ ವಿಜೃಂಭಣೆಯಿಂದ ಮಾಡಬೇಕೆಂದು ಕೊಂಡ ಅವರ ಅಪೇಕ್ಷೆಗಳೆಲ್ಲವೂ ಅಪೇಕ್ಷೆಗಳಾಗಿಯೇ ಉಳಿಯುವುದರಲ್ಲಿದ್ದವು. ಆಯಿತು, ಮದುವೆ ಎಂದು ಆಗುತ್ತದೆ. ಬೇಕಾದ ಹಾಗೆ ಮಾಡುವ ಮಟ್ಟುವ ಅತ್ತೆಮಾವಂದಿರನ್ನು ಬಿಟ್ಟು ತಮ್ಮ ಆಶ್ರಿತರನ್ನೇ ಆತ ಆಶ್ರಯಿಸಿದ್ದು ಅವರಿಗೆ ಹೇಳತೀರದ ನಿರಾಶೆಯನ್ನುಂಟುಮಾಡಿತ್ತು. ಹೀಗೆಂದೇ ಸಾಯಂಕಾಲ ಶಾಸ್ತ್ರಿಗಳ ಹೆಂಡತಿ ಮನೆಯವರಿಗೆ ಬಂದು ಸಮಾಚಾರವನ್ನು ತಿಳಿಸಿದಾಗ ಯಾವ ವಿಶೇಷವಾದ ಉತ್ಸಾಹವನ್ನೂ ತೋರಿರಲಿಲ್ಲ. ಶಾಸ್ತ್ರಿಗಳ ಹೆಂಡತಿಗೆ ಇದರಿಂದ ತುಸು ಉತ್ಸಾಹಭಂಗವೆನಿಸಿದ್ದರೂ ಮಗಳ ಸುದೈವದ ಅನೇಕ ಚಿಂತನೆಗಳಲ್ಲಿ ಅವರು ಯಾವುದನ್ನೂ ಮನಸ್ಸಿಗೆ ತಂದುಕೊಂಡಿರಲಿಲ್ಲ. ಗೋಪಿ ಬಂದು " ಶಾಸ್ತ್ರಿಗಳು ಒಪ್ಪಿದ್ದಾರೆ " ಎಂದು ಹೇಳಿದಾಗಲೂ ಅಷ್ಟೆ. " ಯಾವಾಗ ಹೇಳಿದರು? " ಎಂದಿಷ್ಟೆ ಕೇಳಿ "ಇಂದು ಮಧ್ಯಾಹ್ನ ರಂಗಧೂಳಿಗೆಯ ಬಂದಿದ್ದರು " ಎಂದು ಹೇಳಿದಾಗ " ಒಳ್ಳೆಯದಾಯಿತಪ್ಪ. ನಿನ್ನ ಮನಸ್ಸಿನ ಹಾಗಾಯಿತಲ್ಲ." ಎಂದು ಹೇಳಿ ಮಾತು ಮುಗಿಯಿಸಿದ್ದರು. ಗೋಪಿಗೆ ಆಗ ಮಾತನ್ನು ಮುಂದುವರಿಸಲು ಮನಸ್ಸಾಗಲಿಲ್ಲ. ಅಲ್ಲದೆ ಶಾಸ್ತ್ರಿಗಳು ಹೊರಗೆ ತನಗಾಗಿ ಕಾಯುತ್ತಿದ್ದರು.

ಕಮಲಮ್ಮನವರಲ್ಲಿ ನಿರಾಶೆಗಿಂತ ನಿರುತ್ಸಾಹ ಹೆಚ್ಚಾಗಿದ್ದಿತು. ಅದಕ್ಕೆ ಕೆಲಮಟ್ಟಿಗೆ ತಂದೆ ಶೀನಪ್ಪನ ದೇಹಸ್ಥಿತಿಯೂ ಕಾರಣವಾಗಿದ್ದಿತು. ಏನಿದ್ದರೂ ಆತ ಈ ಸಲ ಬೇನೆಯಿಂದ ಮೇಲಕ್ಕೇಳಲಾರನೆಂಬ ಮನವರಿಕೆ ರಾಯರಂತೆ

ಆವರಿಗೂ ಆದ ಹಾಗಿತ್ತು, ಬೇರೆ ಸಂದರ್ಭದಲ್ಲಿ ಶಾಸ್ತ್ರಿಗಳ ಒಪ್ಪಿಗೆ ತಿಳಿದಿದ್ದರೆ ಇದಕ್ಕೂ ಹೆಚ್ಚಿನ ಉತ್ಸಾಹವನ್ನು ತೋರಬಹುದಿತ್ತೇನೊ ! ಮದುವೆಯ ಮಾತಿಗೆ, ಅದರ ಉತ್ಸಾಹಕ್ಕೆ ತಕ್ಕುದಾದ ವಾತಾವರಣ ಮಾತ್ರ ಮನೆಯಲ್ಲಿ ಇರಲೇ ಇಲ್ಲವೆಂದರೂ ಸರಿಯೆ.

ಈ ಕಡೆ ಈ ಮಾತುಕತೆ ನಡೆದಾಗ ಶೀನಪ್ಪನ ದೇಹಸ್ಥಿತಿಯಲ್ಲಿ ವಿಶೇಷವಾದ ಬದಲಾವಣೆ ನಡೆದಿತ್ತೆಂಬುದನ್ನು ಯಾರೂ ಗಮನಿಸಿರಲಿಲ್ಲ. ಸಾಯಂಕಾಲದಿಂದ ಆತ ಹೆಚ್ಚಾಗಿ ಮಾತನಾಡುತ್ತಿದ್ದಿಲ್ಲವೆಂಬುದನ್ನು ಮನೆಯಲ್ಲಿ ಸಾಮಾನ್ಯವಾಗಿ ಎಲ್ಲರೂ ತಿಳಿದಿದ್ದರೂ ಅದು ಹೀಗೇಕೆ ಎಂದು ಯಾರೂ ಯೋಚಿಸಿರಲಿಲ್ಲ. ಆಯಾಸದಿಂದಾಗಿ ಸುಮ್ಮನೆ ನಿದ್ರೆ ಬರುತ್ತಿರಬಹುದು ಎಂದು ಭಾವಿಸಿದ್ದರು. ಶೀನಪ್ಪನಿಗೆ ಆಯಾಸವೇನೋ ಆಗಿತ್ತು. ಆದರೆ ಅದು ಬೇನೆಯ ಆಯಾಸವಾಗಿರದೆ ಎಪ್ಪತ್ತು ವರ್ಷದ ದುಡಿಮೆಯ ಬಾಳ್ವೆಯಿಂದಾದ ಆಯಾಸವಾಗಿತ್ತು. ಉದ್ದವಾಗಿ ಕಾಲುಚಾಚಿ ಕಣ್ಣು ಮುಚ್ಚಿಕೊಂಡು ಮಲಗಿದ ಆತನನ್ನು ಯಾರು ನೋಡಿದ್ದರೂ ಎಂಥ ಆಯಾಸ ಇದು ? ಎಷ್ಟು ದೀರ್ಘವಾದ ನಿದ್ರೆ ಇದರ ಪರಿಹಾರಕ್ಕೆ ಬೇಕು! ಇದು ಆ ನಿದ್ರೆಯ ಪೂರ್ವಸಿದ್ಧತೆಯಿರಬಹುದೆ ? ಎಂಬ ಸಂದೇಹ ಬಾರದಿರಲಿಲ್ಲ. ರಾಘವೇಂದ್ರರಾಯರು ಊಟ ಮುಗಿಯಿಸಿಕೊಂಡು ಬಂದಾಗ ಅವರಿಗೆನಿಸಿದ್ದು ಇಷ್ಟು. ಆದರೆ ಯಾರಿಗೆ ಏನೆಂದು ಹೇಳುವುದು ? ಹೆಂಡತಿ ಆಗಲೆ ಉದ್ವಿಗ್ನಳಾದ ಹಾಗಿತ್ತು. ಅವರ ಕರುಳು ಕೊರೆಯುತ್ತಿತ್ತು. ಹೀಗಾಗಿ ಸುಮ್ಮನಾಗಿಯೇ ಇದ್ದರು.

ಒಂಬತ್ತೂವರೆಯ ಸುಮಾರಿಗೆ ಶಾಸ್ತ್ರಿಗಳು ಬಂದರು. ರಾಯರು ಬಾಗಿಲಲ್ಲಿಯೇ ಇದ್ದುದನ್ನು ನೋಡಿ ಕೇಳಿದರು.

“ ಹೇಗಿದ್ದಾರೆ, ಶೀನಪ್ಪನವರು ?—”

“ ಏನೋ—ನಿದ್ರೆ ಹೋದ ಹಾಗಿದೆ. ಆದರೆ—”

ಎಂದು ಅರ್ಧಕ್ಕೆಯೆ ತಡೆದರು. ಶಾಸ್ತ್ರಿಗಳಿಗೆ ವಿವರವಾಗಿ ಹೇಳಬೇಕಿರಲಿಲ್ಲ. ಮೆಲುದನಿಯಲ್ಲಿಯೇ ಹೇಳಿದರು.

“ ಆಯಿತು, ಅವರಿಗೂ ವಯಸ್ಸು. ಅದರಲ್ಲಿ ಈ ಕೆಮ್ಮು ವಿಶೇಷವಾಗಿ ತೊಂದರೆ ಮಾಡಿತು. ಇಷ್ಟು ಬೇಗ ಹಣ್ಣಾಗುವ ಜೀವವೇ ಇಲ್ಲವಾದರೆ ?

ಎಪ್ಪತ್ತಾಗಿರಬೇಕಲ್ಲವೆ ?—"

"ಇಂದು ಸಾಯಂಕಾಲ ಎರಡು ಮೂರು ಸಲ ನಿಮ್ಮನ್ನೇ ಕೇಳುತ್ತಿದ್ದರಂತೆ—"

"ಹೌದೆ ? ಅಯ್ಯೋ—ನಾನು ಮಧ್ಯಾಹ್ನವೇ ಬರಬೇಕಿತ್ತು—"

ಶೀನಪ್ಪನಿಗೆ ಎಚ್ಚರವಾಯಿತು. ನಿಚ್ಚಳವಾಗಿ ಎಚ್ಚರವಾದ ಹಾಗಿತ್ತು. ಒಂದೆರಡು ಸಲ ನರಳಿ ಹತ್ತಿರವೇ ಕುಳಿತಿದ್ದ ಮಗಳನ್ನುದ್ದೇಶಿಸಿ ಕೇಳಿದ

"ಶಾಸ್ತ್ರಿಗಳು ಬಂದರೆ ?—"

"ಹೌದು. ಬಂದಿದ್ದಾರೆ. ಹೊರಗಡೆ ಇರಬಹುದು. ಕರೆಯಲೆ ?"

"ಹುಂ—ಆಂ—ಆಂ—"

ಶಾಸ್ತ್ರಿಗಳು ಬಂದು ಹತ್ತಿರ ಕುಳಿತರು. ಅಂಥ ಸ್ಥಿತಿಯಲ್ಲಿಯೂ ಶೀನಪ್ಪ ಎದ್ದು ಕೂಡುವ ಪ್ರಯತ್ನ ಮಾಡುತ್ತಿದ್ದ ಹಾಗಿತ್ತು. ಶಾಸ್ತ್ರಿಗಳೇ ಹೇಳಿದರು.

"ಏಳಬೇಡಿ, ಆಯಾಸವಾಗುತ್ತದೆ. ಏಳಬೇಡಿ—"

"ಬಂದಿರಾ ? ಶಾಸ್ತ್ರಿಗಳೇ—"

"ಹುಂ-ಬಂದಿದ್ದೇನೆ—"

ಅರೆನಿಮಿಷ ಕಣ್ಣು ಮುಚ್ಚಿ ಆಯಾಸದಿಂದೆಂಬಂತೆ ಮತ್ತೆ ಕಣ್ಣು ತೆರೆದು ಶೀನಪ್ಪ ಶಾಸ್ತ್ರಿಗಳ ಮುಖವನ್ನೇ ದಿಟ್ಟಿಸುತ್ತಿದ್ದ ಹಾಗಿತ್ತು. ನಿಧಾನವಾಗಿ ಶೀನಪ್ಪ ಹೇಳಿದ

"ನೋಡಿದಿರಾ-ಏನಾಗಿದೆ ನನ್ನ ಸ್ಥಿತಿ ?—ಆಂ—ಅಯ್ಯೋ—"

"ಮಾತನಾಡಬೇಡಿ. ಏನಾಗಿದೆ ? ಏನೂ ಆಗಿಲ್ಲ. ತುಂಬಾ ಆಯಾಸವಾಗಿದೆ. ಎಲ್ಲ ಸರಿಯಾಗುತ್ತದೆ. ನೀವು ಮಾತನಾಡಿ ಮತ್ತೆ ಆಯಾಸ ಮಾಡಿಕೊಳ್ಳಬೇಡಿ—"

"ಯಾವಾಗ-ಬಂದಿರಿ ?—"

"ನಿನ್ನೆಯೆ ಬಂದೆ."

"ಶೃಂಗೇರಿಗಲ್ಲವೆ—ನೀವು—ಹೋದದ್ದು ?"

"ಹೌದು—"

ಶೀನಪ್ಪ ಮತ್ತೆ ಒಂದೆರಡು ನಿಮಿಷ ಸುಮ್ಮನಾದ. ಏನೋ ಯೋಚನೆ ಮಾಡುತ್ತಿದ್ದ ಹಾಗಿತ್ತು. ಮತ್ತೆ ನಿಧಾನವಾಗಿ ದಣಿದ ದನಿ ಹೊರಬಿದ್ದಿತು.

"ಪುಣ್ಯವಂತರಪ್ಪಾ—ನೀವು. ಒಂದು ಕ್ಷೇತ್ರ—ಯಾತ್ರೆ—ಮಾಡ ಲಿಲ್ಲ. ರಾಮಾ—ಅಂ—ಅಯ್ಯೋ—ಆ ಪುಣ್ಯಬರಲಿಲ್ಲ—"

"ಅದನ್ನೆಲ್ಲಾ ಸುಮ್ಮನೆ ಮನಸ್ಸಿಗೆ ತಂದುಕೊಳ್ಳಬೇಡಿ. ಪುಣ್ಯ ಗಳಿ ಸಲಿಕ್ಕೆ ಕ್ಷೇತ್ರವೇ ಬೇಕೆ ? ಮೈಯಲ್ಲಿ ಸರಿಯಾದ ಮೇಲೆ ಬೇಕಾದಷ್ಟು ತೀರ್ಥಯಾತ್ರೆ ಮಾಡುವಿರಂತೆ. ಅದಕ್ಕೇನಂತೆ—"

"ಆಯಿತು—ಮುಗಿಯಿತು—ಶಾಸ್ತ್ರಿಗಳೆ— ಮುಗಿದ ಹಾಗಾಯಿತು. ಇನ್ನೇನು ಸರಿಯಾಗುತ್ತದೆ ? ಹುಂ—ಹುಂ—"

"ಆಗದೇನು ? ಅಂಥದೇನು ಈಗ ಆದದ್ದು ? ಬರೀ ನಿಶ್ಶಕ್ತಿ, ನೀವು ಏನಾದರೂ ಸುಮ್ಮನೆ ಮನಸ್ಸಿನಲ್ಲಿ ತಂದುಕೊಳ್ಳಬಾರದು. ಎಲ್ಲವೂ ಸರಿ ಯಾಗುತ್ತದೆ."

ಇಷ್ಟು ಮಾತೇ ಶೀನಪ್ಪನಿಗೆ ಹೆಚ್ಚಾಯಿತು. ಆಯಾಸದಿಂದ ಕಣ್ಣು ಮುಚ್ಚಿದ. ಶಾಸ್ತ್ರಿಗಳು ಮೈಮುಟ್ಟಿ ನೋಡಿದರು. ಜ್ವರ ಇರಲಿಲ್ಲ. ಹಾಗೆ ನೋಡಿದರೆ ಉಷ್ಣತಾಮಾನ ಇರಬೇಕಾದುದಕ್ಕಿಂತ ಕಡಿಮೆ ಇದ್ದ ಹಾಗಿತ್ತು. ರಾಘವೇಂದ್ರರಾಯರು ಅತ್ತಿತ್ತ ಅಡ್ಡಾಡುತ್ತಿದ್ದರು. ಹಿತ್ತಲ ಕಡೆಯಲ್ಲಿ ವತ್ಸ ಲೆಯ ಕೂಡ ಮಾತನಾಡುತ್ತಿದ್ದ ಗೋಪಿ ಪಡಸಾಲೆಗೆ ಬರುವುದಕ್ಕೂ ಶೀನಪ್ಪ ಮತ್ತೆ "ಶಾಸ್ತ್ರಿಗಳೆ—" ಎನ್ನುವುದಕ್ಕೂ ಸರಿಹೋಯಿತು.

"ಶಾಸ್ತ್ರಿಗಳೆ-ನಿಮ್ಮ-ಹತ್ತಿರ-ಒಂದು ಮಾತು—"

"ಅದನ್ನೆಲ್ಲ ಆ ಮೇಲೆ ಹೇಳುವಿರಂತೆ. ಈಗ ಸುಮ್ಮನಾಗಿರಿ—"

"ಇಲ್ಲ—ಈಗಲೇ ಹೇಳಿಬಿಡುತ್ತೇನೆ. ನೀವು—"

ಎಂದು ತಡೆದ. ಹತ್ತಿರದಲ್ಲಿಯೇ ಕುಳಿತಿದ್ದ ಕಮಲಮ್ಮನವರಿಗೆ ದಿಗಿ ಲಾಯಿತು. ರಾಘವೇಂದ್ರರಾಯರು, ಗೋಪಿ ಇದೇನು ಮಾತು ಎಂದು ತಡೆಯಲಾಗದ ಕುತೂಹಲದಿಂದ ಹತ್ತಿರ ಸರಿದರು.

"ನೀವು-ನನ್ನ-ಒಂದು ಮಾತು-ನಡಸಬೇಕು-ಶಾಸ್ತ್ರಿಗಳೆ."

ಅಂಥ ಮನಃಸ್ಥೈರ್ಯವುಳ್ಳ ಶಾಸ್ತ್ರಿಗಳು ಕೂಡ ಕಕ್ಕಾವಿಕ್ಕಿಯಾದ ಹಾಗಿತ್ತು. ಯಾವ ಮಾತು ಶೀನಪ್ಪನ ಬಾಯಿಂದ ಬರಬಹುದೊ ಎಂದು. ರಾಘವೇಂದ್ರರಾಯರು ಮುಂದೆ ಬಂದು ಹೇಳಿದರು

"ನೀವು ಸುಮ್ಮನೆ ಮಲಗಿರಿ. ಮಾತನಾಡಿದರೆ ತುಂಬಾ ಆಯಾಸ

ವಾಗುತ್ತದೆ. ಈಗ ಏನು ಅಂಥ ಮಾತು ? "

ಆದರೆ ಶೀನಪ್ಪ ಸುಮ್ಮನಾಗುವ ಮನಃಸ್ಥಿತಿಯಲ್ಲಿರಲಿಲ್ಲ.

" ಗೋಪಿಯ—ವಿಚಾರದಲ್ಲಿ— "

" ಏನು—? "

ಗೋಪಿಗೆ ಅರಿಭರವಸೆ. ಕಮಲಮ್ಮನವರಿಗೆ ಆಸೆ-ನಿರಾಶೆ, ಕುತೂಹಲ. ರಾಘವೇಂದ್ರರಾಯರಿಗೆ ಉಸಿರು ಕಟ್ಟಿದ ಹಾಗಾಗಿತ್ತು.

" ನನ್ನ ಈ ಮಾತು—ನೀವು ನಡ-ಸ-ಲೇ-ಬೇ-ಕು."

" ಏನು ಮಾತು ? "

ಶಾಸ್ತ್ರಿಗಳು ಕಾತರರಾಗಿ ಕೇಳಿದರು.

" ಶಾಂತಳನ್ನು—ಆತನಿಗೆ ಕೊಟ್ಟು-ಮದುವೆ ಮಾಡಿ— "

ರಾಘವೇಂದ್ರರಾಯರು ನಿಟ್ಟುಸಿರೆಳೆದರು. ಶಾಸ್ತ್ರಿಗಳ ಕಣ್ಣಲ್ಲಿ ನೀರು ತುಂಬಿತು. ಅವರಿಗೆ ಮಾತೇ ಬಾರದಾಯಿತು. ಕಮಲಮ್ಮನಿಗೆ ಇದೆಲ್ಲವೂ ಅನಿರೀಕ್ಷಿತವಾಗಿತ್ತಾದ್ದರಿಂದ ಏನೂ ತಿಳಿಯದೆ ಕಣ್ಣು ಬಿಟ್ಟು ನೋಡುತ್ತ ಕುಳಿತಿದ್ದರು.

" ನಡ-ಸು-ಸಿರಲ್ಲ-ವೆ ನನ್ನ-ಮಾತು— ? "

" ನಿಮ್ಮ ಅಪ್ಪಣೆ-ಶೀನಪ್ಪನವರೆ—ನಾನು ಆಗಲೆ ಒಪ್ಪಿದ್ದೇನೆ— "

ಎಂದು ಶಾಸ್ತ್ರಿಗಳು ಗದ್ಗದಿತರಾಗಿ ಹೇಳಿದರು. ಎತ್ತಿಕೊಂಡ ಶೀನಪ್ಪನ ಕೈಯನ್ನು ತಮ್ಮ ಹಣೆಗೊತ್ತಿಕೊಂಡರು. ಅದನ್ನು ನೋಡಿ ಗೋಪಿಗೆ ತಡೆಯಲಾಗಲಿಲ್ಲ. ಕಣ್ಣೀರು ಕೋಡಿಯಾಗಿ ಹರಿಯಿತು. ಆ ದಿನ ಮಧ್ಯಾಹ್ನ ಶೀನಪ್ಪ ಹೇಳಿರಲಿಲ್ಲವೆ—" ಶಾಸ್ತ್ರಿಗಳನ್ನು ಒಪ್ಪಿಸುತ್ತೇನೆ " ಎಂದು ?

ಮುಂದೆ ಶೀನಪ್ಪ ಮಾತನಾಡಲೇ ಇಲ್ಲ. ಅದೇ ಆತನ ಕೊನೆಯ ಮಾತಾಯಿತು. ಇಡೀ ರಾತ್ರಿ ಪ್ರಯಾಣದ ಸಿದ್ಧತೆಯೆಂಬಂತೆ ಸ್ವಸ್ಥವಾಗಿ ಮಲಗಿದ್ದು ಬೆಳಗು ಮುಂಜಾನೆಯ ಸುಮಾರಿಗೆ ಇಲ್ಲಿಯ ಯಾತ್ರೆಯನ್ನು ಮುಗಿಸಿದ. ಅಗ್ನಿಸಂಸ್ಕಾರ ಮುಗಿದು ಹಿಂದಿರುಗಬೇಕಾದರೆ ಬೆಳಗಿನ ಹತ್ತು ಗಂಟೆಯಾಗಿತ್ತು. ಶಂಕ್ರಪ್ಪ, ವಾಮನಪ್ಪ, ಬಂಡೇರಾಯ ಊರಲ್ಲಿಯ ಇಕ್ಕು ಹತ್ತಿಪ್ಪತ್ತು ಜನ ಕೂಡಿದ್ದರು. ಹಿಂದಿರುಗುವಾಗ ತಮತಮಗೆ ತಿಳಿದ ಹಾಗೆ ಎಲ್ಲರೂ ಶೀನಪ್ಪನ ಗುಣಗಾನ ಮಾಡುವವರೇ. ಮುನ್ನಾ ದಿನ ಶೀನಪ್ಪ ಶಾಸ್ತ್ರಿ

ಗಳ ಕಡೆಯಿಂದ ತೆಗೆದುಕೊಂಡ ವಚನದ ಸಮಾಚಾರದಿಂದಾಗಿ ಶಂಕ್ರಪ್ಪ ಮಾತ್ರ ತೆಪ್ಪಗಾಗಿದ್ದ.

ಎಲ್ಲಕ್ಕೂ ಹಿಂದಿನಿಂದ ರಾಯರು ಶಾಸ್ತ್ರಿಗಳೊಡನೆ ಬರುತ್ತಿದ್ದರು. ರಾಯರು ಹೇಳುತ್ತಿದ್ದರು.

" ನಿನ್ನೆ ಸಾಯಂಕಾಲವೆ ನನಗೆ ಸಂದೇಹ ಬಂದಿತ್ತು. ಆದರೆ ಇಷ್ಟು ಬೇಗನೆ ಹೋಗಿ ಬಿಡಬಹುದೆಂದು ಅನಿಸಿರಲಿಲ್ಲ. ರಾತ್ರಿಯಂತೂ ನಿಮಗಾಗಿಯೆ ಕಾಯುತ್ತಿದ್ದ ಹಾಗಿತ್ತು. "

" ತೀರ ವಿಚಿತ್ರವಾಯಿತು. ಈ ಮಾತನ್ನು ಶೀನಪ್ಪನವರು ನನಗೆ ಹೇಳಬಹುದು ಎಂದು ನಾನು ಎಂದೂ ತಿಳಿದಿರಲಿಲ್ಲ."

" ಮೊದಲಿನಿಂದಲೂ ಅವರಿಗೆ ಗೋಪಿಯ ಮೇಲೆ ಪ್ರೀತಿ. ಎರಡೂ ಮನೆಗೆ ಒಬ್ಬನೇ ಮಗ ಎನ್ನುತ್ತಿದ್ದರು. ಆದರೆ ನನಗೇನೊ ವಿಚಿತ್ರವೆನಿಸಿದ್ದೆಂದರೆ ನಿನ್ನೆಯೆ ನೀವು ಬಂದು ಒಂದು ಸಂತೋಷದ ಸಮಾಚಾರ ಹೇಳಿದ ದಿನವೆ ಇದು ಹೀಗೆ ನಡೆಯಿತಲ್ಲ ಎಂದು."

" ಅದೂ ಯೋಗಾಯೋಗವೆ. ಕೊನೆಯಲ್ಲಿ ಅಷ್ಟಕ್ಕಾಗಿಯೆ ಅವರು ಜೀವ ಹಿಡಿದ ಹಾಗಿತ್ತು. ಆಯಿತು, ನಾವು ಮೊದಲೇ ಒಪ್ಪಿದ್ದಕ್ಕೆ ಹಿರಿಯರೊಬ್ಬರ ಆಶೀರ್ವಾದ ಬಲ ಸಿಕ್ಕಹಾಗಾಯಿತು."

ರಾಘವೇಂದ್ರರಾಯರು ದೀರ್ಘಾಲೋಚನೆಯಲ್ಲಿದ್ದ ಹಾಗಿತ್ತು. ಶಾಸ್ತ್ರಿಗಳು ವತ್ಸಲೆಯನ್ನು ಕುರಿತು ಚಿಂತಿಸುತ್ತಿದ್ದರು. ತಾವು ಊರಿಂದ ಬರುವ ಮುನ್ನಾದಿನ ವತ್ಸಲೆ ಮನೆಯ ವರೆಗೆ ಬಂದು ತಮ್ಮ ಮಗಳೊಡನೆ ಒಳ್ಳೆ ವಿಶ್ವಾಸದಿಂದ ಮಾತನಾಡಿದ್ದನ್ನು, ತಾನು ಯಾವ ಬಗೆಯಲ್ಲಿಯೂ ಅಸಂತೋಷ ಪಡಲಾರಳೆಂಬುದನ್ನು ನೇರವಾಗಿ ಬಾಯಿಂದ ಹೇಳಿರದಿದ್ದರೂ ನಡೆಯಿಂದ ತಿಳಿಸಿಕೊಟ್ಟದ್ದನ್ನು ನೆನೆಯುತ್ತಿದ್ದರು. ಇದು ಹೇಗೆ ಹೀಗಾಯಿತು ? ಒಂದು ಕಾಲಕ್ಕೆ ಆತನನ್ನೇ ಮದುವೆಯಾಗುವುದೆಂದು ಹಟದಿಂದಿದ್ದ ವತ್ಸಲೆ ಅದೇನು ಹೀಗೆ ಮನೆಯವರೆಗೆ ಬಂದು ತಮ್ಮ ಹೆಂಡತಿಯೊಡನೆ, ಮಗಳೊಡನೆ ಅಷ್ಟೊಂದು ಆತ್ಮೀಯತೆಯಿಂದ ಮಾತನಾಡಿದ್ದಳು ?....ರಾಯರ ಮಾತಿನಿಂದ ಶಾಸ್ತ್ರಿಗಳ ಯೋಚನೆ ಕಡಿಯಿತು

" ನಮ್ಮ ಮನೆತನದಲ್ಲಿ ಒಂದು ಮದುವೆ ಎಂದರೆ ಒಂದು ಸಾವು

ಎಂದು ಕಾಣುತ್ತದೆ. ಈಕೆಯನ್ನು ಮಾಡಿಕೊಳ್ಳುವುದು ಎಂದು ನಾನು ಗೊತ್ತು ಮಾಡಿಕೊಂಡ ಹೊಸತರಲ್ಲಿಯೆ ಅಲ್ಲವೆ ಅಚ್ಚಪ್ಪ ಹೋದದ್ದು ? ಆತ ಇನ್ನು ಕೆಲವು ಕಾಲ ಇದ್ದಿದ್ದರೆ ನನ್ನ ಮದುವೆಯ ಯೋಚನೆ ಏನೇನಾಗುತ್ತಿತ್ತೊ ? ಅಚ್ಚಪ್ಪನ ಮದುವೆಯ ಕಾಲಕ್ಕೂ ಹೀಗೆಯೆ ಏನೋ ನಡೆದಿತ್ತಂತೆ—"

"ಅದೆಲ್ಲ ಏನು ? ಕಾಕತಾಲೀಯ ನ್ಯಾಯ—"

"ಇರಬಹುದು. ಆದರೂ ಮೂರು ತಲೆಮಾರು ಹೀಗೆ ನಡೆಯಬೇಕೆಂದರೆ ಏನೋ ಒಂದು ಸಂಬಂಧ ಇರಬೇಕು. ಇದನ್ನೆಲ್ಲ ನೆನೆದರೆ ಯಾವುದೊ ಒಂದು ಕ್ರಮದಲ್ಲಿ ಇದೆಲ್ಲವನ್ನು ನಡೆಸುತ್ತಿದ್ದ ದೈವ ಎನ್ನುವ ಮಾತನ್ನು ಒಪ್ಪಬೇಕಾಗುತ್ತದೆ. ಅಲ್ಲವೆ ಶಾಸ್ತ್ರಿಗಳೆ ?"

"ಇಷ್ಟು ಒಪ್ಪಬೇಕಾದರೆ ಅಷ್ಟು ದೂರ ಯಾತಕ್ಕೆ ? ಒಬ್ಬ ಮನುಷ್ಯ ಹುಟ್ಟುತ್ತಾನೆ, ಬೆಳೆಯುತ್ತಾನೆ, ಕೊನೆಗೆ ಸಾಯುತ್ತಾನೆ ಎನ್ನುವ ಮಾತು ಸಾಮಾನ್ಯವೆ ? ಇಂದು ಒಂದು ಹೂವು ಅರಳುತ್ತದೆ, ನಾಳೆಗೆ ಬಾಡುತ್ತದೆ ಎನ್ನುವ ಮಾತು ಅಷ್ಟೇ ರಹಸ್ಯಮಯವಾದದ್ದು. ಈ ಕ್ಷಣಕ್ಕೆ ಜೀವಂತವಾಗಿದ್ದು, ಜ್ಞಾನ, ಅಜ್ಞಾನ, ಪ್ರೀತಿ, ವಿಶ್ವಾಸ, ಆಕಾಂಕ್ಷೆ, ಅಭಿಲಾಷೆ, ಲೋಭ, ಮೋಹ, ವ್ಯಸನ, ವೈರಾಗ್ಯಗಳೆಲ್ಲಕ್ಕೂ ಆಶ್ರಯವಾಗಿದ್ದ ಒಂದು ವ್ಯಕ್ತಿ ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಒಂದು ಮಣ್ಣು ಮುದ್ದೆಗೆ ಸಮನಾಗಿ ಬಿಡುವುದಿಲ್ಲವೆ ? ನಿನ್ನೆ ಇದ್ದ ಶೀನಪ್ಪನವರು ಇನ್ನು ಮುಂದೆ ಇಲ್ಲ. ಇದ್ದಾಗ ಬೇಕಾದುದನ್ನು ಮಾಡಿದವರು. ಒಳ್ಳೆಯವರಾಗಿ ಬಾಳಿದವರು. ಇಂದಿಗೆ ಅವರು ಒಂದು ಹೆಸರು ಮಾತ್ರ. ಆದರೂ ಒಂದೇ ಸಮಾಧಾನ. ಅವರು ಹೋದರೂ ಅವರು ಮಾಡಿದ ಹತ್ತಾರು ಉಪಕಾರಗಳಿಗೆ, ನೂರಾರು ಜನರಿಗೆ ಅವರು ತೋರಿದ ಒಳ್ಳೆಯತನಕ್ಕೆ ಸಾವಿಲ್ಲ. ಅದೇ ಕೊನೆಯವರೆಗೂ ಉಳಿಯುವದು. ಒಂದು ಹೂವು ಅರಳಿ ನಿಲ್ಲುತ್ತದೆ ಎನ್ನುವುದೇ ಜೀವನದ ಅಮರ ತತ್ವ. ಅದಕ್ಕೆಯೆ ನಮ್ಮವರು ಆತ್ಮ ಎಂದು ಕರೆದರೆಂದು ಕಾಣುತ್ತದೆ—"

ರಾಘವೇಂದ್ರರಾಯರ ಹೃದಯದಲ್ಲಿ ತಮ್ಮ ಮಾವನವರ ಮರಣದಿಂದುಂಟಾದ ದುಃಖವನ್ನೂ ಮರೆಯಿಸುವ ಬೇರೆ ಯಾವುದೊ ಒಂದು ದುಗುಡ ಅವರನ್ನು ಯೋಚನೆಗೀಡುಮಾಡಿತ್ತು. ಬದುಕಿನ ಯಾವ ಅಂಶವನ್ನು ನೆನೆದರೂ "ಏನು ವಿಚಿತ್ರ?" ಎಂದುಕೊಳ್ಳುವಂತಾಗುತ್ತಿತ್ತು. ಬೇರೆ ಯಾವುದೊ

ಒಂದು ಚರ್ಚೆಯಲ್ಲಿ ತೊಡಗಿದ ರಾಮನಪ್ಪ, ಶಂಕ್ರಪ್ಪರಿಗೆ ಇಂಥ ಯಾವ ಯೋಚನೆಯ ಸೋಂಕೂ ಇರಲಿಲ್ಲ. ಅವರಿಬ್ಬರ ಪಾಲಿಗೆ ಜೀವನವೆನ್ನುವುದು ಕೇವಲ ಒಂದು ಚರ್ಚೆಗೆ, ಊಹಾಪೋಹಕ್ಕೆ ವಿಷಯವಾಗಿತ್ತು. ಬಂಡೇ ರಾಯನಿಗೆ ಅದೊಂದು ಕುತೂಹಲದ ಕಟ್ಟು; ಅದನ್ನು ಕಂಡಾಗ ಕಣ್ಣು ಬಿಡುವುದೊಂದೇ ಆತನಿಗೆ ಕೆಲಸ. ಬದುಕನ್ನು ತಿಳಿಯಬೇಕೆಂಬ ಹಂಬಲ ರಾಯರಲ್ಲಿದ್ದಿತಾದರೆ, ಕೆಲಮಟ್ಟಿಗಾದರೂ ತಿಳಿದ ಸಮಾಧಾನ ಶಾಸ್ತ್ರಿಗಳಲ್ಲಿ ದ್ದಿತು. ಆ ಮೂವರಲ್ಲಿ ತಿಳಿಯಬೇಕೆಂಬ ಹಂಬಲವೂ ಇರಲಿಲ್ಲ. ತಿಳಿದು ಕೊಳ್ಳುವ ಯೋಗ್ಯತೆಯೂ ಇರಲಿಲ್ಲ. ಪ್ರಪಂಚ ಎಂದಮೇಲೆ ಎಲ್ಲ ತರಹದ ಜನರೂ ಇರಬೇಕಲ್ಲವೆ ?

## ೧೨

ಮಾಘದ ಶುಕ್ಲಪಕ್ಷದಲ್ಲಿಯ ಒಂದು ಶುಭಮುಹೂರ್ತದಲ್ಲಿ ಶಾಂತಾ-ಗೋಪಿಯರ ಮದುವೆ ವಿಜೃಂಭಣೆಯಿಂದ ನಡೆಯಿತು. ರಾಘವೇಂದ್ರರಾಯರು ಯಾವುದಕ್ಕೂ ಕಡಿಮೆ ಮಾಡಲಿಲ್ಲ. ಹೆಜ್ಜೆಹೆಜ್ಜೆಗೆ ಶಾಸ್ತ್ರಿಗಳಿಗೆಯೆ ಸಂಕೋಚವೆನಿಸುತ್ತಿತ್ತು. ತಾವು ಬಡವರು ಎಂಬ ಭಾವನೆ ಮಾತುಮಾತಿಗೆ ಅವರ ಬಾಯನ್ನು ಕಟ್ಟುತ್ತಿತ್ತು. ನಾಲ್ಕಾರು ಸಂದರ್ಭಗಳಲ್ಲಿ ರಾಯರು ಶಾಸ್ತ್ರಿಗಳನ್ನುದ್ದೇಶಿಸಿ ಹೇಳಿದ್ದರು. " ನೀವು ಯಾವುದನ್ನೂ ಮನಸ್ಸಿಗೆ ತಂದುಕೊಳ್ಳಬೇಡಿ. ಹತ್ತು ಜನ ಒಂದೆಡೆ ಸೇರಿದಲ್ಲಿ ಹತ್ತು ತರಹ ಮಾತನಾಡುವವರೆ. ಅದನ್ನೆಲ್ಲ ನೆನೆಯುತ್ತ ಕುಳಿತರೆ ಹೇಗೆ ? ಸೌಹಾರ್ದ ಮುಖ್ಯ. ಅದಕ್ಕೆ ಕೊರತೆ ಇಲ್ಲವಲ್ಲ ? " ಎಂದು. ಶಾಸ್ತ್ರಿಗಳು ಹೇಳಿದ್ದರು " ನೀವು ಹೇಳುವುದು ನಿಮ್ಮ ದೊಡ್ಡಿಸ್ತಿಕೆ, ರಾಯರೆ. ನಿಮ್ಮ ಒಳ್ಳೆಯತನವೆ ನನಗೊಂದು ಬಲ, ಆಧಾರ. ಏನಿದ್ದರೂ ನಾನು ನನ್ನ ಯೋಗ್ಯತೆಯನ್ನು ಮೀರಿ ಕೈಚಾಚಿದ ಹಾಗಾಗಿದೆ. ಜನ ಅನ್ನುವುದರಲ್ಲಿ ಯಾವ ತಪ್ಪು ? " " ಸರಿಯಾಯಿತು. ಏನು ಯೋಗ್ಯತೆ ? ಯಾವುದೊ ಒಂದು ಕಾಲಕ್ಕೆ ನಮ್ಮ ಪೂರ್ವಜರು ನಾಲ್ಕು ಹೊಲಗದ್ದೆಗಳನ್ನು ಮಾಡಿಟ್ಟು ನಮಗೆ ಅನುಕೂಲ ಮಾಡಿದರು. ಸುದೈವದಿಂದ ನಾಲ್ಕು ಕಾಸು ನಮ್ಮ ಹತ್ತಿರ ಉಳಿಯಿತೆಂದ ಮಾತ್ರಕ್ಕೆ ನಮ್ಮ ದೊಡ್ಡಿಸ್ತಿಕೆ ಹೆಚ್ಚಾಯಿತೆ? ನಮ್ಮ ಜೀವನಾನುಕೂಲ ನಿಮಗಿಲ್ಲವೆಂದ ಮಾತ್ರಕ್ಕೆ ನಿಮ್ಮ ಯೋಗ್ಯತೆ ಕಡಿಮೆಯಾಯಿತೆ ? ಅದೆಲ್ಲದರಿಂದ ಏನಾಗಬೇಕು ? ನೀವೇ ಹೇಳುತ್ತಿರಲಿಲ್ಲವೆ, ಮದುವೆಯೆಂದರೆ ಒಂದು ಯೋಗಾಯೋಗ. ತಾನಾಗಿಯೇ ಕೂಡಿಬರಬೇಕು. ಈಗ ಕೂಡಿ ಬಂದಿದೆ. ಗೋಪಿಯ ಸಂತೋಷ ಮುಖ್ಯ. ನಾವಿಬ್ಬರು, ಉಳಿದವರು ಏನೆಂದರೆ ಏನು ? "

ಬಾಯಿಂದ ಶಾಸ್ತ್ರಿಗಳು ಹಾಗೆ ಹೇಳುತ್ತಿದ್ದರೂ ತಮ್ಮ ' ಯೋಗ್ಯತೆ'ಗೆ ಮೀರಿಯೆ ಮದುವೆಗಾಗಿ ವೆಚ್ಚಮಾಡಿದ್ದರು. ವರದಕ್ಷಿಣೆಗೆ ಎಂದಲ್ಲದಿದ್ದರೂ ಮಗಳಿಗೆ ಮನೆಯ ಕಾಣಿಕೆಯೆಂದು, ಅಳಿಯನಿಗೆ ಉಪಚಾರವೆಂದು ಚಿನ್ನದ

ಒಡವೆ, ಬಟ್ಟೆಬರೆಯೆಂದು ಸಾವಿರಕ್ಕೂ ಮಿಕ್ಕಿ ವೆಚ್ಚಮಾಡಿದ್ದರು. ಮದುವೆಗೆ ಒಂದೆರಡು ವಾರ ಮೊದಲು ಗೋಪಿಯನ್ನು ಕರೆಯಿಸಿಕೊಂಡು ಆತನಿಗೆ ಬೇಕಾದುದನ್ನು ಕೇಳಿಕೊಂಡಿದ್ದರು.

" ಮದುವೆಯ ಸಮಯದಲ್ಲಿ ನಿನಗೆ ಇಷ್ಟವಾದುದನ್ನು ಏನಾದರೂ ಕೊಡಬೇಕೆಂದಿದ್ದೇನೆ, ಗೋಪಿ. ನಾನೇ ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ. ಬಟ್ಟೆಬರೆಯಂತೂ ಆಯಿತು. ಏನಾದರೂ ಒಂದು ವಿಶೇಷ ಕಾಣಿಕೆಯನ್ನು ಕೊಡಬೇಕು. ಏನೆಂಬುದನ್ನು ನೀನೇ ಹೇಳಬೇಕು—"

" ಶಾಂತಳನ್ನು ಕೊಡುತ್ತೀರಲ್ಲವೆ ? " ಎಂದು ಗೋಪಿ ನಕ್ಕಿದ್ದ.

" ಆಕೆಯನ್ನು ಕೊಡದೆ ಮದುವೆ ಮಾಡುತ್ತೇನೆಯೆ ? ಆದರೂ—"

" ಆಕೆಗಿಂತ ಹೆಚ್ಚಿನ ಯಾವುದನ್ನು ಕೊಟ್ಟೀರಿ, ಶಾಸ್ತ್ರಿಗಳೆ ? ಹೆಚ್ಚಿನದು ಯಾವುದೂ ಇಲ್ಲ. ಇದ್ದರೂ ನನಗೆ ಬೇಡ."

ಶಾಸ್ತ್ರಿಗಳು ಈ ವಿಷಯದಲ್ಲಿ ಗೋಪಿಯಿಂದ ಪ್ರಯೋಜನವಾಗದೆಂದು ಸುಮ್ಮನಾಗಿದ್ದರು. ಅರೆನಿಮಿಷ ಸುಮ್ಮನಾಗಿದ್ದು ಗೋಪಿ ಮುಂದುವರಿದಿದ್ದ.

" ಇಲ್ಲವೆಂದರೂ ಒಂದನ್ನು ಬೇಡಬಹುದು—"

" ಏನು ? "

" ವೀಣೆ ? "

" ಅಯ್ಯೊ, ಅದನ್ನೇನು ಕೇಳುವುದು ? ಅದು ಆಕೆಯದೆ. ಆಕೆ ನುಡಿಸತೊಡಗಿದಾಗಿನಿಂದ ನಾನು ಅದನ್ನು ಕೈಮುಟ್ಟಿಲ್ಲ. ಆಕೆ ಹೊರಟು ಹೋದ ಮೇಲೆ ಅದನ್ನಿಟ್ಟುಕೊಂಡಾದರೂ ಏನು ಮಾಡಲಿ ? ಸಂತೋಷವಾಗಿ ಆಕೆ ನುಡಿಸುತ್ತಾಳೆ—ಅದು ಯಾವಾಗಲೂ ಆಕೆಯದೆ."

ಶಾಸ್ತ್ರಿಗಳು ವೀಣೆಯನ್ನು ಸಂತೋಷವಾಗಿಯೆ ಕೊಡಲೊಪ್ಪಿದ್ದರು. ಆದರೆ ಆ ಸಂತೋಷದಲ್ಲಿ ವ್ಯಥೆಯೂ ಇದ್ದಿತು. ವ್ಯಥೆ ಬೇರೆ ಕಾರಣಕ್ಕಾಗಿ. ಶಾಂತಾ " ತನ್ನ " ಮನೆಗೆ ಹೊರಟು ಹೋದನಂತರ ತಮಗಾಗಿ ವೀಣೆ ನುಡಿಸುವವರು ಯಾರು ? ತಮ್ಮ ಕೀರ್ತನೆ ಆಕೆಯ ಸಹಕಾರವಿಲ್ಲದೆಯೆ ಸಾಗಬೇಕು. ಆಯಿತು. ಶ್ರೀರಾಮಚಂದ್ರನಿಗೆ ಬೇಕಾದದ್ದು ಸಂಗೀತವೊ, ಭಕ್ತಿಯೊ ? ಈ ಮೊದಲು ಇಬ್ಬರೂ ಸೇರಿ ಭಕ್ತಿಯ ಕಾಣಿಕೆಯನ್ನು ಸಲ್ಲಿಸುತ್ತಿದ್ದರೆ ಇನ್ನುಮುಂದೆ ತಾವಿಬ್ಬರೂ ಬೇರೆಬೇರೆಯಾಗಿ ಸಲ್ಲಿಸಬೇಕು.

ಅಷ್ಟೆ. ಅದರಿಂದಾಗಿ ಮನಸ್ಸಿಗೆ ವ್ಯಥೆ ಯಾಕೆ ?

" ಶಾಂತಳಿಗೆ ವೀಣೆ ನುಡಿಸಲು ನೀವೆ ಕಲಿಸಿದಿರಾ ? "

" ಹುಂ-ಮೊದಲು ಪಾಠ ಹೇಳಿದೆ, ಅಷ್ಟೆ. ನಾನೇನು ಕಲಿಸಿಯೇನು ? ಆದರೆ ತಾನಾಗಿಯೆ ನನ್ನ ಹಾಡಿಗೆ ಸರಿಯಾಗಿ ನುಡಿಸಿ, ಕೇಳಿ ಅಭ್ಯಾಸ ಮಾಡಿ ಕೊಂಡಿದ್ದಾಳೆ. ಆಕೆಯನ್ನು ನಾನು ಪ್ರಶಂಸೆ ಮಾಡಬಾರದು. ಆದರೆ ಆಕೆ ಗಳಿಸಿದ ಸಾಮರ್ಥ್ಯ ನಾನು ಹೇಳಿಕೊಟ್ಟ ಪಾಠದ ದೃಷ್ಟಿಯಿಂದ ಅಸಾಧಾರ ಣವೆ. ಭಕ್ತಿಯಿಂದಲೇ ಅದು ಸಾಧ್ಯ ಎಂದು ಕಾಣುತ್ತದೆ. ಸಂಗೀತವೂ ಅಷ್ಟೆ. ಯಾವ ಕೆಲಸವೂ ಅಷ್ಟೆ. ಮುಖ್ಯವೆಂದರೆ ಮನಸ್ಸು ಅದರಲ್ಲಿಯೇ ಲೀನವಾಗಬೇಕು, ಅಲ್ಲವೆ ? "

* * *

ಶಾಸ್ತ್ರಿಗಳ ತಿಳಿವಾಗಲಿ, ರಾಯರ ಸೌಜನ್ಯವಾಗಲಿ, ಗೋಪಿಯ ಉಲ್ಲಾಸವಾಗಲಿ, ಶಾಂತಳ ಶಾಂತತೆಯಾಗಲಿ ಮದುವೆಯ ಸಮಯದಲ್ಲಿ ಕಮ ಲಮ್ಮನವರಿಗಿರಲಿಲ್ಲ. ಗೋಪಿ ಒಪ್ಪಿದ್ದಾನೆ, ಅವನ ಸಮಾಧಾನಕ್ಕೆ ಈ ಮದುವೆ, ಎಂಬ ಒಂದೇ ಮಾತು ಅವರಿಗೆ ಕೆಲಮಟ್ಟಿಗೆ ಸಮಾಧಾನ ಹೇಳುತ್ತಿತ್ತು. ಆದರೆ ಅದು ತೋರಿಕೆಯ ಸಮಾಧಾನ. ಅವರಿಗೆ ಶಾಂತಾ ಒಪ್ಪಿಗೆಯಿರಲಿಲ್ಲ ವೆಂಬುದು ಸ್ಪಷ್ಟವಾಗಿಯೆ ಇತ್ತು. ಶಾಸ್ತ್ರಿಗಳು ಮಾತನ್ನು ಮುಂದೂಡಿದ್ದು ಅವರಿಗೆ ಹಿತಕರವಾಗಿತ್ತು. ಆದರೆ ಗೋಪಿ ಹಟಬಿಡುವುದಿಲ್ಲವೆನ್ನುವುದೂ ಅವರಿಗೆ ಗೊತ್ತು. ಒಂದು ಕಡೆ ಗೋಪಿಯನ್ನು ಅಸಮಾಧಾನಗೊಳಿಸಬಾರ ದೆಂಬ ತಾಯ್ತನ. ಇನ್ನೊಂದೆಡೆ ತಮ್ಮ " ಯೋಗ್ಯತೆ "ಗೆ ಸರಿಯಾಗಿ ಸೊಸೆ ಯಾಗಲಿ, ಆಕೆಯನ್ನು ಬರಮಾಡಿಕೊಳ್ಳುವ ಮದುವೆಯಾಗಲಿ ಆಗಲಿಲ್ಲ ವೆಂದು ಒಳಮನಸ್ಸನ್ನು ಕೊರೆಯುವ ಹೆಣ್ಣುತನ. ಒಟ್ಟಿನಲ್ಲಿ ಎಲ್ಲವನ್ನೂ ಸಮಾಧಾನದಲ್ಲಿಯೇ ನಡಸಿಕೊಂಡು ಹೋಗಿದ್ದರು. ರಾಯರು ಮೊದಲಿಗೆಯೆ ಎಚ್ಚರಹೇಳಿದ ಹಾಗಿತ್ತು. " ಏನಾದರೊಂದು ಸಣ್ಣ ಮಾತಿಗಾಗಿ ಕಿರುಕುಳ ಬೇಡ. ಸಂತೋಷದ ಸಂದರ್ಭ ಸಂತೋಷದಲ್ಲಿಯೇ ನಡೆಯಲಿ " ಎಂದು. ಹೀಗಿದ್ದರೂ ಶಾಸ್ತ್ರಿಗಳ ಹೆಂಡತಿಯೊಡನೆ ಒಂದೆರಡು ಚುಚ್ಚು ಮಾತು ನಡೆ ದಿದ್ದವು. ಅವರೂ ಮುಖ ಚಿಕ್ಕದಾಗಿ ಮಾಡಿಕೊಂಡಿದ್ದರು. ಉಪಾಯವಿರ ಲಿಲ್ಲ. ತಮ್ಮ ಮಗಳ ತೆರೆದ ಭಾಗ್ಯದೆದುರು ಅವರು ಎಲ್ಲವನ್ನೂ ಮರೆಯಲು

ಸಾಧ್ಯವಾಗಿತ್ತು.

ಕಮಲಮ್ಮನವರಿಗೆ ಒಂದೆಡೆ ವತ್ಸಲೆಯ ಯೋಚನೆ. ಇನ್ನೊಂದೆಡೆ ಈ ಒಳಗಿನ ಅಸಮಾಧಾನ. ಹಾಗೆ ನೋಡಿದರೆ ವತ್ಸಲೆಯೆ ತಾನು ಊರಿಗೆ ಹೊರಡುವಾಗ ಹೇಳಿದ್ದಳು. " ನನಗೆ ನಿರಾಶೆಯೆನಿಸಿಲ್ಲ ಎಂದು ಹೇಳಲಾರೆ. ಎಂದಿಗೂ ಆ ನಿರಾಶೆಯನ್ನು ಮರೆಯಲಾರೆ. ಆದರೆ ಏನು ಪ್ರಯೋಜನ ? ಒತ್ತಾಯದಿಂದ-ಬಲವಂತಕ್ಕಾಗಿ-ನಡೆಯಬೇಕಾದ ವಿಷಯವೇ ಇದಲ್ಲ. ಆದರಿಂದ ಯಾರಿಗೆ ಸುಖ ? ಇದರಿಂದ ಗೋಪಿಯಾದರೂ ಸುಖವಾಗಿರುತ್ತಾನೆ. ಹಾಗೆಯೆ ಆಗಲಿ, " ಎಂದು. ಆ ದಿನ ವತ್ಸಲೆಯನ್ನು ಬೀಳ್ಕೊಡುವಾಗ ಕಮಲಮ್ಮನವರಿಗೆ ಕಣ್ಣುತುಂಬ ನೀರು. ವತ್ಸಲೆ ಕಣ್ಣೀರು ಹಾಕಲಿಲ್ಲ. ಮುಖ ಮಾತ್ರ ನಿರ್ವಿಕಾರವಾಗಿತ್ತು. ತನ್ನ ಬುದ್ಧಿಯಿಂದಾಗಿ ಆಕೆ ಪಡೆಯುತ್ತಿದ್ದ ಸಮಾಧಾನವನ್ನು, ಭಾವನೆಯಿಂದಾಗಿ ಅನುಭವಿಸುತ್ತಿದ್ದ ಅಸಮಾಧಾನವನ್ನು, ಆಕೆಯ ಆ ಕ್ಷಣದಲ್ಲಿಯ ಮುಖದಲ್ಲಿ ಕಾಣಬಹುದಿತ್ತು.

ಮದುವೆ ಮುಗಿದಮೇಲೂ ಕಮಲಮ್ಮನವರ ಅಸಮಾಧಾನ ತಗ್ಗಲಿಲ್ಲ. ಒಬ್ಬನೇ ಒಬ್ಬ ಮಗನ ಮದುವೆ ಬೇಕಾದ ವಿಜೃಂಭಣೆಯಿಂದ ನಡೆದಿದ್ದರೂ ಹೇಗೋ ನಡೆದುಹೋಯಿತು ಎಂದೇ ಅನಿಸುತ್ತಿತ್ತು ಅವರಿಗೆ. ಒಂದು ನಡೆಯಬಾರದಾದ ಘಟನೆ ನಡೆದಾಗ ಮನಸ್ಸು ಖಿನ್ನವಾಗುವುದಿಲ್ಲವೆ ? ಆ ತರಹದ ಮನಃಸ್ಥಿತಿಯಲ್ಲಿ ಅವರಿದ್ದಹಾಗಿತ್ತು. ಯಾವುದೋ ಒಂದು ಹೇಳಲಾಗದ ಕಾರಣಕ್ಕಾಗಿ ಅವರ ಕರುಳು ಕೊರೆಯುತ್ತಿತ್ತು. ಒಂದು ಮೂಕ ನೋವು, ಉಸಿರುಕಟ್ಟುವಂಥ ಒಂದು ಮನಸ್ಸಿನ ಉಬ್ಬಸ, ಅವರನ್ನು ನೋಯಿಸುತ್ತಿದ್ದವು. ಗೋಪಿ ಸುಖವಾಗಿದ್ದರೆ ಆಯಿತು ಎಂದು ರಾಯರು ಹತ್ತು ಬಾರಿ ಸಮಾಧಾನ ಹೇಳಿದ್ದರೂ ಗೋಪಿ ಇದರಿಂದಾಗಿ ನಿಜವಾಗಿಯೂ ಸುಖವಾಗಿರಬಲ್ಲನೆ ? ಎಂಬ ಒಂದು ಅಸ್ಪಷ್ಟ ಸಂಶಯ ಅವರ ಅಂತರಂಗದಲ್ಲಿ ಮೂಡಿ ಮನಸ್ಸನ್ನು ಮುದುಡಿಸುತ್ತಿತ್ತು. ನಿರುಪಾಯರಾಗಿ ಸುಮ್ಮನಿರುತ್ತಿದ್ದರು. ಗೋಪಿ ನಕ್ಕು ನಲಿದಾಡುತ್ತಿದ್ದುದನ್ನು ಕಣ್ಣಾರೆ ಕಂಡಾಗ ಕೆಲಮಟ್ಟಿಗಾದರೂ ಈ ಆಂತರ್ಯದ ದುಗುಡವನ್ನು ಮರೆಯುತ್ತಿದ್ದರು. ಅವರಿಬ್ಬರಿಗೆ ಸರಸ-ಸುಖಗಳು ಸಿಕ್ಕುವಂತೆ ಸೌಕರ್ಯ ಒದಗಿಸುತ್ತಿದ್ದರು.

* * * *

ವತ್ಸಲೆ ಮದುವೆಗೆ ಬರಲಿಲ್ಲ. ಶೀನಪ್ಪನ ಮರಣದ ನಂತರ ಹದಿನೈದು ಇಪ್ಪತ್ತು ದಿವಸಗಳು ಸರಿಯುವಷ್ಟರಲ್ಲಿ ವತ್ಸಲೆ ತಿರುಗಿ ಹೊರಡಲು ಅನುವಾಗಿದ್ದಳು. ಹೊರಡುವ ಮುನ್ನಾದಿನ ಕಮಲಮ್ಮನವರನ್ನು ನೋಡಿದಂತೆ ಗೋಪಿಯನ್ನೂ ಕಂಡಿದ್ದಳು. ಎಷ್ಟೋ ಹೊತ್ತು ಮಾತನಾಡಿದ್ದಳು—

"ಈ ವಿಷಯದಲ್ಲಿ ನೀನು ಹಟ ಹಿಡಿಯಬೇಡ, ಗೋಪಿ. ನಾನು ಮದುವೆಗೆ ಬರುವುದರಿಂದ ಇಬ್ಬರಿಗೂ ಸುಖವಿಲ್ಲ. ಸಂತೋಷದ ಸಮಯದಲ್ಲಿ ಸುಮ್ಮನೆ ವಿರಸ ಬೇಡ. ನಾನು ಎಷ್ಟು ಗಟ್ಟಿ ಮನಸ್ಸು ಮಾಡಿದರೂ ಕಣ್ಣೆದುರಿಗೆ ಮದುವೆ ನಡೆಯುತ್ತಿದ್ದಾಗ ತಡೆಯುವುದು ನನ್ನಿಂದಾಗದು. ಅಸಂತೋಷದಿಂದಲ್ಲ–ನನ್ನ ಹಳೆಯ ಹಂಬಲದಿಂದಾಗಿ—"

"ಹಾಗಿದ್ದರೆ ನೀನು ಬರುವುದು ಯಾವಾಗ ?"

"ಯಾವಾಗ ಬಂದರೂ ಏನು ?"

"ಹಾಗೆಲ್ಲ ಮಾತನಾಡಬೇಡ. ಇನ್ನು ಮುಂದೆ ಬರುವುದೇ ಇಲ್ಲವೆ?"

"ಬರುತ್ತೇನೆ. ಮನೆಯಿದೆ. ಬಾರದೇನು ? ಆದರೆ—"

"ಯಾವಾಗ ಬರುತ್ತೀ ?"

"ನೋಡಬೇಕು. ಈಗಿನ ನನ್ನ ಸಂಶೋಧನೆಯ ಕೆಲಸ ಬರುವ ಜೂನ್ ವರೆಗೂ ನಡೆಯುತ್ತದೆ. ಇನ್ನೊಂದು ವರ್ಷ ಶಿಷ್ಯವೃತ್ತಿ ಸಿಕ್ಕರೂ ಸಿಕ್ಕಬಹುದು. ಸಿಕ್ಕರೆ, ಕೆಲಸವನ್ನು ಮತ್ತೆ ಮುಂದುವರಿಸಬೇಕೆಂದಿದ್ದೇನೆ. ಆ ಸುಮಾರಿಗೆ ಬಿಡುವು ಮಾಡಿಕೊಂಡು ಒಂದು ತಿಂಗಳು ಬಂದರೂ ಬರಬೇಕು ಎಂದುಕೊಂಡಿದ್ದೇನೆ."

"ಹುಂ. ಜೂನ್ ತಿಂಗಳಲ್ಲಿ ಬಾ. ಆಗಲೆ ರಂಗಧೂಳಿಗೆ ಹೋಗಿ ಇರುವಾ. ಆಗ ರಂಗಧೂಳಿ ರಮಣೀಯವಾಗಿರುತ್ತದೆ."

ಆದರೆ ವತ್ಸಲೆಯ ಭಗ್ನ ಹೃದಯವನ್ನು ನೂರು ರಂಗಧೂಳಿಗಳ ರಮಣೀಯತೆಯೂ ತಣಿಸುವುದು ಸಾಧ್ಯವಿರಲಿಲ್ಲವೆಂಬುದನ್ನು ಗೋಪಿ ತಿಳಿಯದೆ ಹೋದ. ಗೋಪಿಯನ್ನು ಬಿಟ್ಟು ಹೊರಡುವಾಗ ವತ್ಸಲೆಗೆ ಅತೀವ ದುಃಖವಾಯಿತು. ಗೋಪಿಯ ಯಾವ ಸಮಾಧಾನದ ಮಾತೂ ಆಕೆಯಲ್ಲಿ ಸಮಾಧಾನವನ್ನುಂಟು ಮಾಡುವಂತಿರಲಿಲ್ಲ. ಗೋಪಿಯಾದರೂ ಏನೆಂದು ಸಮಾಧಾನ ಹೇಳಬೇಕು ? ಮೂಕ ಸಹಾನುಭೂತಿಯಿಂದ ಆಕೆಯನ್ನು ಬೀಳ್ಕೊ

ಟ್ಟಿದ್ದ. ಕಣ್ಣೀರ ತೆರೆಯ ಆಚೆ ಗೋಪಿ ಕಣ್ಮರೆಯಾಗುವವರೆಗೂ ವತ್ಸಲೆ ರೈಲಿನಿಂದ ಆತನನ್ನು ನೋಡಿದ್ದಳು. ನಾನಾದರೂ ಏನು ಮಾಡಬಹುದು ? ಎಂಬ ಅಸಹಾಯತೆಯಲ್ಲಿಯೇ ಗೋಪಿ ಮನೆಗೆ ಹಿಂದಿರುಗಿದ್ದ.

* * *

ಮದುವೆಯಾಗಿ ಹತ್ತು ದಿನವಾಗಿತ್ತು. ಶಾಂತಳೊಡನೆ ರಂಗಧೂಳಿಗೆ ಯಾವಾಗ ಹೋದೇನೆಂಬ ತವಕ ಗೋಪಿಗೆ ಹಿಡಿಸಲಾರದಾಗಿತ್ತು. ಕಮಲಮ್ಮ ನವರು, ಅವರ ಹಾಗೆಯೆ ಶಾಸ್ತ್ರಿಗಳ ಮನೆಯವರು ಒಂದಿಲ್ಲೊಂದು ನೆಪ ಹೂಡಿ ಹೋಗುವುದಕ್ಕೆ ತಡೆ ಮಾಡುತ್ತಿದ್ದರು. ಮದುವೆಯಾದ ಹದಿನಾರ ನೆಯ ದಿನದವರೆಗೆ ಊರಹೊರಕ್ಕೆ ಎಲ್ಲಿಗೂ ಹೋಗಕೂಡದೆಂದು ಎಲ್ಲರೂ ಹೇಳುತ್ತಿದ್ದರು. ಆದರೆ ಮುಂದೆ ಒಂದೆರಡು ದಿನಗಳಲ್ಲಿಯೇ ಮಾಘದ ಹುಣ್ಣಿಮೆ. ಆಗಲೆ ಬೆಳುದಿಂಗಳು ಹುಚ್ಚು ಹಿಡಿಸುವ ಹಾಗೆ ಹರಡುತ್ತಿತ್ತು. ಅಂಥ ಬೆಳುದಿಂಗಳ ಬೆಡಗಿನಲ್ಲಿ ರಂಗಧೂಳಿಯನ್ನು ನೋಡದಿದ್ದರೆ ಈ ಕಣ್ಣು ಗಳು ಯಾತಕ್ಕೆ ? ಎಂದುಕೊಳ್ಳುತ್ತಿದ್ದ ಗೋಪಿ. ಅದೂ ಶಾಂತಾ ತನ್ನವ ಳಾಗಿದ್ದಾಗ, ಅಂಥ ಚೆಲುವಿನ ಮಧ್ಯದಲ್ಲಿ ಚೆಲುವಿನ ರಾತ್ರಿಯೊಂದನ್ನು ಕಳೆ ಯುವ ಹಂಬಲ ಗೋಪಿಗೆ ತಡೆಯದಾಯಿತು. ಹುಣ್ಣಿಮೆಯ ಮುನ್ನಾದಿನ ತಾಯಿಯೆದುರು ಪ್ರಸ್ತಾಪವನ್ನೆತ್ತಿದ.

"ಒಮ್ಮೆ ಏನು ಹೇಳಿದ್ದೆ, ಜ್ಞಾಪಕವಿದೆಯೆ, ಅಮ್ಮ ? ರಂಗಧೂಳಿ ಯಲ್ಲಿರಬೇಕಾದರೆ ಮದುವೆಯಾಗಬೇಕು ಎಂದಿರಲಿಲ್ಲವೆ ? "

"ಹೌದು. ಈಗೇನಾಯಿತು ? "

"ಆಗುವುದೇನು ? ಈ ನಾಲ್ಕು ದಿನದಿಂದಲೂ ಹೋಗುತ್ತೇನೆ ಎಂದರೆ ಏನಾದರೊಂದು ಮಾತು ಹೇಳಿ ಮುಂದೂಡುತ್ತಿದ್ದೀಯೆ. ನಾನು ಮದುವೆ ಮಾಡಿಕೊಂಡಿದ್ದೆ ವ್ಯರ್ಥ ಎನಿಸುವಂತಾಗಿದೆ ನನಗಂತೂ—"

"ಸರಿಯಾಯಿತು. ನಿನ್ನ ಮಾತು ಕೇಳಿದರೆ—ಹೋಗುವಿಯಂತೆ. ಈಗಲೆ ಏನು ಅಂಥ ಅವಸರ ? "

"ಈಗಲೆ ಏನು ಅವಸರವೆ ? ಸರಿ—ಎಂಥ ಬೆಳುದಿಂಗಳು ! ಈ ಸಮಯದಲ್ಲಿ ಅಲ್ಲಿರದಿದ್ದರೆ ಮತ್ತೆ ಯಾವಾಗ ? "

"ಎಲ್ಲಿ ಹೋಗುತ್ತದೆ ನಿನ್ನನ್ನು ಬಿಟ್ಟು ರಂಗಧೂಳಿ ? ಬೆಳುದಿಂಗಳೂ

ಹೋಗುವುದಿಲ್ಲ. ಮತ್ತೆ ಬಂದೇ ಬರುತ್ತದೆ !"

"ಏನಿದ್ದರೂ ನಾನಂತೂ ನಾಳೆ ದಿನ ಹೋಗುವವ. ನೀನು ಶಾಂತಳನ್ನು ಬೇಕಾದರೆ ಕಳಿಸು, ಬೇಡವಾದರೆ ಬಿಡು."

ಹೀಗೆ ಹೇಳಿದರೂ ತಾನು ಹೊರಟು ನಿಂತಾಗ ಶಾಂತಳನ್ನು ತಾಯಿ ತಡೆದು ನಿಲ್ಲಿಸಲಾರಳೆಂಬ ಖರವಸೆ ಇದ್ದಿತು. ಶಾಂತಳಿಲ್ಲದೆ ತಾನು ರಂಗಧೂಳಿಗೆ ಹೋಗಬೇಕಿದ್ದರೆ ಯಾವಾಗಲೊ, ಯಾರಿಗೂ ಹೇಳದೆಯೆ ಹೋಗಬಹುದಿತ್ತು.

"ಹಾಗೆಲ್ಲ ಈಗಲೆ ಹೋಗಬಾರದು, ಗೋಪಿ."

"ಯಾಕೆ ? ದೃಷ್ಟಿ ತಗಲುತ್ತದೆಯೆ ?"

"ಏನೋಪ್ಪ. ಹೋಗಬಾರದು ಎನ್ನುತ್ತಾರೆ. ಇಷ್ಟೇ ನನಗೆ ಗೊತ್ತು. ಮೈಮೇಲಿನ ಸುರಿಗೆಯ ನೀರು ಕೂಡ ಆರಿಲ್ಲ, ಅರಿಶಿನ ಮಾಸಿಲ್ಲ. ಇಷ್ಟರಲ್ಲಿಯೇ ಆ ಕಾಡಿನಲ್ಲಿ ಆಕೆಯನ್ನು ಕರೆದೊಯ್ಯುತ್ತೇನೆ ಎಂದರೆ ಹೇಗೆ ?"

ಗೋಪಿಯ ಯಾವ ಯುಕ್ತಿವಾದವೂ ಕಮಲಮ್ಮನವರ ಮನಸ್ಸನ್ನು ಒಲಿಸಲು ಸಮರ್ಥವಾಗಲಿಲ್ಲ. "ನಾಳೆ ಹುಣ್ಣಿಮೆ. ನಾನಂತೂ ಹೋಗುವವ. ಆಕೆ ಬಂದರೆ ಬರಲಿ, ಬೇಡವಾದರೆ ಬಿಡಲಿ" ಎನ್ನುವ ಗೋಪಿಯ ಹಟ ಕಮಲಮ್ಮನವರ ಮುಖಾಂತರ ರಾಯರವರೆಗೂ ಹೋಯಿತು. ರಾಯರು ಹೆಂಡತಿಯನ್ನು ಕೇಳಿದ್ದರು.

"ಯಾಕೆ ಸುಮ್ಮನೆ ಬೇಡ ಎನ್ನುತ್ತೀ ? ಅವರು ಸಂತೋಷದಿಂದಿರುವ ಹಾಗೆ ಸುಮ್ಮನೆ 'ಆಗಲಿ' ಎಂದುಬಿಡಬಾರದೆ ?"

"ನಾನೆಲ್ಲಿ ಬೇಡ ಎಂದೆ ? ಈಗಲೆ ಯಾಕೆ, ಮತ್ತೊಮ್ಮೆ ಹೋಗಲಾಗುವುದಿಲ್ಲವೆ ? ಎಂದೆ."

"ಈಗಲೆ ಯಾಕೆಯೆ ? ಸರಿ. ಈಗ ಹೋಗದಿದ್ದರೆ ಯಾವಾಗ ಹೋಗುವುದು ? ಮುದುಕರಾದ ಮೇಲೆಯೆ ?"

"ಅಷ್ಟೇನು ತಡೆಯಬೇಕಿಲ್ಲ. ಹದಿನಾರನೆಯ ದಿನವಾದರೂ ಕಳೆಯಲಿ ಎಂದೆ."

"ನಾನು ನೀನು ಮೊದಲು ಸಲ ಅಲ್ಲಿಗೆ ಹೋದಾಗ ಮದುವೆಯಾಗಿ ಹದಿನಾರು ದಿನವಾಗಿತ್ತೆ ? ಜ್ಞಾಪಕವಿದೆಯೆ ?"

" ಎಲ್ಲ ಜ್ಞಾಪಕವಿದೆ. ಇರದೆ ಏನು ? "

" ಅಂದೂ ಹುಣ್ಣಿಮೆಯೆ-ಚೈತ್ರದ ಹುಣ್ಣಿಮೆ. ಅಲ್ಲವೆ ? "

" ಹೌದು. ಏನು ಬೆಳದಿಂಗಳು ಅಂದು ? "

ಕಮಲಮ್ಮನವರ ಮನಸ್ಸು ಮೂವತ್ತು ವರ್ಷಗಳಾಚೆ ಓಡಿತ್ತು. ಆ ಮನಃಸ್ಥಿತಿಯಲ್ಲಿ ಅವರು ಶಾಂತಾ ಗೋಪಿಯರನ್ನು ರಂಗಧೂಳಿಗೆ ಮರುದಿನ ಹೋಗಬೇಡಿರೆನ್ನುವುದು ಸಾಧ್ಯವೆ ಇರಲಿಲ್ಲ. ಗೋಪಿಗೆ ಅನುಮತಿ ಸಿಕ್ಕಿತು. ಸ್ವರ್ಗಸುಖ ಅಂಗೈಯಲ್ಲಿ ಸಿಕ್ಕ ಸುಖವನ್ನು ಅನುಭವಿಸಿದ.

*　　*　　*

ಶಾಂತಾ ಗೋಪಿಯರು ರಂಗಧೂಳಿಗೆ ಬಂದಾಗ ಸಂಜೆಯ ಐದು ಗಂಟೆಯಾಗಿರಬೇಕು. ನಡೆದುಕೊಂಡೇ ಬಂದಿದ್ದರು. " ಸಿದ್ದಪ್ಪನಿಗೆ ಬಂಡಿ ಯನ್ನಾದರೂ ಕಳಿಸಿಕೊಡಲು ಹೇಳಬಹುದಿತ್ತು. ನೀನೇನೋ ನಡೆಯ ಬಹುದು. ಪಾಪ, ಇಂಥ ಬಿಸಿಲಲ್ಲಿ ಐದು ಮೈಲಿ ನೆಲ ತುಳಿಯಬೇಕೆ ಆಕೆ ?" ಎಂದು ಕಮಲಮ್ಮನವರು ಆಕ್ಷೇಪವೆತ್ತಿದ್ದರೂ ಗೋಪಿ ತಡೆಯುವ ಹಾಗಿರ ಲಿಲ್ಲ. " ಬಂಡಿಯಲ್ಲಿ ಕುಳಿತೇನು ಹೋಗುವುದು ? ಅಷ್ಟೂ ನಡೆಯಲಿಕ್ಕಾ ಗುವುದಿಲ್ಲವೆ ? ಭಾರಿ ನಾಜೂಕಾಯಿತು ! " ಎಂದು ಗೋಪಿ ಹೇಳಿದ್ದನ್ನು ಶಾಂತಾ ನಡುಮನೆಯಿಂದ ಕೇಳಿದ್ದಳು. ರಂಗಧೂಳಿಯ ಚೆಲುವನ್ನು ಕುರಿತು ಶಾಂತಾ ಎಲ್ಲರಿಂದಲೂ ಬಣ್ಣನೆಯ ಮಾತನ್ನೇ ಕೇಳಿದ್ದಳು. ಅಲ್ಲಿಗೆ ಹೋಗ ಬೇಕೆಂಬ ಕುತೂಹಲವಿದ್ದಷ್ಟೂ ಹೊರಡುವಾಗ ಸಂಕೋಚವೆನಿಸಿತ್ತು. ಗೋಪಿಯ ಕೂಡ ಸದಾಕಾಲವೂ ಮಾತನಾಡುತ್ತಿರಬೇಕು; ಸದಾಕಾಲವೂ ಆತನ ಹತ್ತಿರದಲ್ಲಿಯೇ ಇರಬೇಕು ಎಂದೆನಿಸುತ್ತಿದ್ದಷ್ಟೂ ಆಕೆಯ ಸ್ವಭಾವ ದಲ್ಲಿಯ ಸಹಜ ಶಾಲೀನತೆ ಯಾವಾಗಲೂ ಅಡ್ಡ ಬರುತ್ತಿತ್ತು. ಗೋಪಿ ಮಾತ ನಾಡಿಸಿದಾಗ ನಾಲಗೆಯೇ ಏಳುತ್ತಿರಲಿಲ್ಲ. ಯಾವುದೊ ಒಂದು ಅನಿರ್ವ ಚನೀಯವಾದ ಭಾವ ಬಾಯಿಕಟ್ಟುತ್ತಿತ್ತು. ಅದೇ ಒಂದು ಸಂತಸದ ಅನು ಭವ. ಎಲ್ಲಿಲ್ಲದ ಸುಖ. ಮನೆಯಲ್ಲಿದ್ದಾಗ ಹಿರಿಯರೆದುರು ಮಾತನಾಡುವು ದಂತೂ ದೂರವೆ. ಆದರೆ ಎಲ್ಲರಿಂದಲೂ ದೂರವಾಗಿ ತಾವೇ ತಾವಾಗಿ ಹೊರ ಟಾಗಲೂ ಅದೇ ಶಾಲೀನತೆ. ಗೋಪಿಯ ಜೊತೆಯಲ್ಲಿ ದಾರಿ ಹೇಗೆ ಸರಿ ಯಿತೊ ಆಕೆಗೆ ತಿಳಿಯಲಿಲ್ಲ. ಹತ್ತಾರು ಬಗೆಯಲ್ಲಿ ಗೋಪಿ ಮಾತನಾಡಿಸಿದ್ದ.

ಆಗೀಗ ಒಂದು ಉತ್ತರ ಹೇಳುತ್ತಿದ್ದಳು. ಆ ಮಾತುಗಳು ಗೋಪಿಯ ಪಾಲಿಗೆ ಅಮೃತ ಬಿಂದುಗಳಾಗಿದ್ದವೆಂಬುದನ್ನು ಬೇರೆಯಾಗಿ ಹೇಳಬೇಕೆ? ರಂಗಧೂಳಿಯನ್ನು ತಲುಪಿದಾಗ ಶಾಂತಾ ನಿಜವಾಗಿಯೂ ದಣಿದಿದ್ದಳು. ಬಾಯಿಯಿಂದ ಹೇಳಲಿಲ್ಲ. ಗೋಪಿ ಎಷ್ಟು ಬಾರಿ ಕೇಳಿದರೂ—ಶಾಂತಾ ಒಪ್ಪಿದ್ದರೆ ಗೋಪಿ ಆಕೆಯ ಪಾದಸೇವೆಯನ್ನೂ ಮಾಡಬಹುದಿತ್ತು. ಶ್ರೀರಾಮಚಂದ್ರನು ಸೀತೆಯನ್ನು ಕೇಳಲಿಲ್ಲವೆ "ಸಂವಾಹಯಾಮಿ ಚರಣಾವುತ ಪದ್ಮತಾಮ್ರೌ" ಎಂದು? ಆದರೆ ಶಾಂತಾ ಒಪ್ಪುತ್ತಾಳೆಯೆ? ಸಾಧ್ಯವೆ ಇರಲಿಲ್ಲ.

ರಂಗಧೂಳಿಯ ಶಾಂತ ಸೌಂದರ್ಯವನ್ನು ಗೋಪಿ ಅಂದಿನಂತೆ ಎಂದಿಗೂ ಶಾಂತಳ ಮುಖದಲ್ಲಿ ಕಂಡಿದ್ದರೆ ಅದು ಸರಿಯೆ ಎಂದು ಶಾಂತಳನ್ನು ಆ ಸಾಯಂಕಾಲ ನೋಡಿದ ಯಾರೂ ಹೇಳಬಹುದಿತ್ತು. ಆಕೆಯ ಅಂತರಂಗವನ್ನಾಗಲಿ, ಅದರಲ್ಲಿ ನಡೆದ, ನಡೆಯುತ್ತಿದ್ದ ಸ್ಥಿತ್ಯಂತರಗಳನ್ನಾಗಲಿ ವಿವರಿಸುವುದು ಅಸಾಧ್ಯ. ಊಹಿಸುವುದೇ ಒಳ್ಳೆಯದು. ಅಂದಿನ ಸಾಯಂಕಾಲದ ಸೊಬಗನ್ನು ವರ್ಣಿಸುವುದೂ ಅಸಾಧ್ಯ. ಸೃಷ್ಟಿಯ ಒಡಲನ್ನು ಒಳಹೊಕ್ಕು ಅಲ್ಲಿ ಅವಿತುಕೊಂಡಿರಬಹುದಾದ ಗುಟ್ಟುಗಳನ್ನು ತಿಳಿಯಲು ಸಾಧ್ಯವೆ? ಆ ಗುಟ್ಟುಗಳ ಆವಿರ್ಭಾವವೆ ನಿಸರ್ಗದಲ್ಲಿಯ ಶಾಂತ ಗಂಭೀರತೆ ಎಂದು ಮಾತ್ರ ಹೇಳಬಹುದು.

ಸುತ್ತಲೂ ಸಂಜೆಯ ಹೊನ್ನಬಿಸಿಲು ಹೂವಾಗಿ ಗಿಡಗಳ ಮೇಲೆ ತಂಗಿತ್ತು. ಶರತ್ಕಾಲದ ಕ್ರೂರ ಕೊರೆತವನ್ನು ತಾಳ್ಮೆಯಿಂದ ತಾಳಿ ಇದೇ ಬಾಳ್ವಿಕೆಯ ದಾರಿಯೆಂದು ಮನಗಂಡ ಮಹಾನುಭಾವರಂತೆ ಗಿಡಮರಗಳು ಧೀರವಾಗಿ ನಿಂತಿದ್ದವು. ಕಾಡು ಹೆಚ್ಚು ಕಡಿಮೆ ಬರಡಾಗಿ ಕಾಣುತ್ತಿದ್ದರೂ ಸಂಜೆ ಬೆಳಕಿನ ಬಟ್ಟೆಯನ್ನು ಹೊದ್ದು ನಿಂತ ನಿಸರ್ಗದ ನಿರಾಭರಣ ಸುಂದರಿ ತನ್ನ ಬಡತನದಲ್ಲಿಯೂ ಬೆಡಗನ್ನು ಸೂರೆಮಾಡುತ್ತಿದ್ದಳು. ಆದರೆ ಆ ಬಡತನದಲ್ಲಿ ಭವಿಷ್ಯದ ಬಗೆಯಲ್ಲಿರು ಭವ್ಯ ಭರವಸೆಯಿದ್ದಿತು. "ಈ ಚಳಿಗಾಲದ ಗಾಳಿ ಏನು ಮಾಡೀತು? ಎಷ್ಟು ಎಲೆ ಉದುರಿಯಾವು? ಒಮ್ಮೆ ನಾನು ಬಂದೆನೆಂದರೆ ಒಂದಕ್ಕೆ ಹತ್ತರಂತೆ ಬೆಳೆಯಿಸೇನು!" ಎಂದು ಆಸೆ ತಳೆದಿದ್ದ ವಸಂತದ ಸತ್ವ ಗಿಡಮರಗಳ ಬೇರುಗಳಲ್ಲಿ ಒದಗಬೇಕಾದ ಕಾಲಕ್ಕಾಗಿ ಕಾಯುತ್ತಿದ್ದ ಹಾಗಿತ್ತು. ಸುತ್ತಲಿನ ಸೃಷ್ಟಿಯೆಲ್ಲವೂ ಹಳೆಯ ನೋವಿನ ನೆನಹನ್ನು

ತಂದುಕೊಡುತ್ತಿದ್ದರೂ ಮುಂಬರುವ ಉತ್ಸವಕ್ಕಾಗಿ ಕಾಯುತ್ತಿದ್ದ ಹಾಗಿತ್ತು. ಅಷ್ಟರಮಟ್ಟಿಗೆ ಆ ನಿಸರ್ಗದ ದೃಶ್ಯವೆಲ್ಲವೂ ಗೋಪಿಯ ಅಂತರಂಗದ ಪ್ರತೀಕವಾಗಿತ್ತು. ಆತನಲ್ಲಿ—ದೇಹಮನಸ್ಸುಗಳೆರಡರಲ್ಲಿಯೂ—ನಿರಾಶೆ ನಿರುತ್ಸಾಹಗಳು ಮಾಡಿದ ಕೇಡೆಲ್ಲವೂ ಒಂದು ಕನಸಿನಂತೆ ಮಾಯವಾಗುವುದರಲ್ಲಿತ್ತು. ಮಾಸುತ್ತಿದ್ದ ನೆನಹೇ ಸದ್ಯದಲ್ಲಿಯ ಸಂತಸಕ್ಕೊಂದು ಉತ್ಕಟತೆಯನ್ನು ಕೊಡುತ್ತಿತ್ತು. ಗೋಪಿಗೆ ಎತ್ತ ನೋಡಿದರೂ ಶಾಂತತೆ-ಸುಖ-ಸಮಾಧಾನಗಳು ಕಾಣುತ್ತಿದ್ದವು. ಎತ್ತ ನೋಡಿದರೂ ಶಾಂತಾ ಕಾಣುತ್ತಿದ್ದಳು. ಆತನ ಅಂತರಂಗ ಪ್ರಪಂಚವನ್ನೇ ಆಕೆ ಸಂಪೂರ್ಣವಾಗಿ ಆಕ್ರಮಿಸಿ ಬಿಟ್ಟಿದ್ದಳೆಂದ ಮೇಲೆ ?

ಕೆರೆಯ ನೀರು ಕನ್ನಡಿಯಾಗಿತ್ತು. ಮಾರ್ಕಂಡೇಯನ ದನಿ ನಿಜವಾಗಿದ್ದೂ ಮಂಜುಳವಾಗಿ ಕೇಳಬರುತ್ತಿತ್ತು. ಮಳೆಗಾಲದ ಅಬ್ಬರ ಕಳೆದು ನೀರು ಮುನ್ನಡೆಯುತ್ತಿತ್ತು. ಯೌವನದ ಆರ್ಭಟೆ ಕಳೆದು ಒಂದೆರಡು ಮಕ್ಕಳನ್ನು ಹೆತ್ತ ಪ್ರಮದೆಯ ಚೆಲುವು ನದಿಯ ನೀರ ಮೇಲೆ ನಲಿಯುತ್ತಿತ್ತು. ನೀರ ದಂಡೆಗೆ ಬಂದಾಗ ವಸಂತದ ಮುನ್ಸೂಚನೆಯನ್ನು ಎಲ್ಲಕ್ಕೂ ಮೊದಲಿಗೆ ಹೊತ್ತು ತಂದ ತಮಾಲವನ್ನು ನೋಡಿದಾಗ—ಅದರ ಸುಖಶೀತಲ ಛಾಯೆಯನ್ನು ನೆನೆದಾಗ—ಹತ್ತಿರದಲ್ಲಿಯೇ ಇದ್ದ, ಎಲ್ಲವನ್ನೂ ಬೆರಗುಗಣ್ಣಿನಿಂದ ನೋಡುತ್ತಿದ್ದ ಶಾಂತಳನ್ನು ಕಣ್ಣು ತುಂಬ ನೋಡಿ ಆಕೆಯನ್ನು ಹತ್ತಿರಕ್ಕೆ ಕರೆದಾಗ ಗೋಪಿ ಈ ಪ್ರಪಂಚದಲ್ಲಿದ್ದನೆ ? ಆತನನ್ನು ಯಾರಾದರೂ ಕೇಳಿದ್ದರೆ ಇದು ಮರ್ತ್ಯ ಅಲ್ಲವೇ ಅಲ್ಲ. ಇದೇ ಸ್ವರ್ಗ ಎಂದೇ ಹೇಳಬಹುದಾಗಿತ್ತು. ಆದರೆ ಕೇಳಲು ಅಲ್ಲಿ ಯಾರೂ ಇರಲಿಲ್ಲ. ಯಾರು ಕೇಳಿದ್ದರೂ ಉತ್ತರ ಹೇಳಬೇಕೆಂಬ ಎಚ್ಚರವೂ ಗೋಪಿಗೆ ಇರಲಿಲ್ಲ. ಪ್ರಪಂಚದ ಬುನಾದಿಯಿಂದ ಗಿಡ ಮರಗಳನ್ನು ಗಾಳಿ ನೀರು ನೆಲಗಳನ್ನು ಆಶ್ರಯಿಸಿ, ಯಾವ ಆತಂಕವೂ ಇಲ್ಲದೆ, ಯಾವ ಆಸೆ, ಭರವಸೆ, ನೆನಹುಗಳಿಲ್ಲದೆ ತಾವೇ ತಾವಾಗಿ ತಮ್ಮ ಎದೆಯ ಸಂತೋಷಕ್ಕೆಂದು ಹಾಡಿಕೊಂಡಿರುವ ಎರಡು ಹಕ್ಕಿಗಳಂತೆ ಶಾಂತಾ ಗೋಪಿಯರು ಆ ಕಾಡಿನ ಕಡುಬೆಡಗಿನ ಮಧ್ಯದಲ್ಲಿ ನಡೆದರು-ನಲಿದರು.

ಸೂರ್ಯಾಸ್ತವಾಯಿತು. ಶಾಂತಳ ಜೊತೆಯಲ್ಲಿ ನಡೆದುಕೊಂಡು ನಿಧಾನವಾಗಿ ನದಿಯ ನೀರ ದಂಡೆಯಿಂದ ಮೇಲಕ್ಕೇರಿ ಮನೆಯೆದುರು ಬಂದರು.

ಸಿದ್ದಪ್ಪ ಅಲ್ಲಿಯೇ ಏನೋ ಕೆಲಸದಲ್ಲಿ ತೊಡಗಿದ್ದ. ಗೋಪಿ ಶಾಂತಳಿಗೆ ಕೆರೆಯ ಮಧ್ಯದಲ್ಲಿ ಹರಹಿನಿಂತ—ಕೆಲಮಟ್ಟಿಗೆ ಬಾಡಿದ ಹಾಗಿದ್ದ ನೈದಿಲೆಗಳ ಬಳ್ಳಿಯನ್ನು ತೋರಿಸುತ್ತ, ಮಳೆಗಾಲದಲ್ಲಿ ಅದು ಭವ್ಯವಾಗಿ ಬೆಳೆದು ನಿಂತಿರುವಾಗಿನ ಸೊಬಗನ್ನು ವರ್ಣಿಸುತ್ತಿದ್ದ. ಎಲ್ಲಿಯೊ ಅಲ್ಲೊಂದು ಇಲ್ಲೊಂದು ಮೊಗ್ಗುಗಳು ಕಾಣುತ್ತಿದ್ದವು. ಕೊಳದ ತುಂಬಿ ಕಮಲಗಳು ಅರಳಿ ನಿಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂಬ ಅಸಮಾಧಾನ ಆತನಲ್ಲಿ ಆ ಕ್ಷಣಕ್ಕೆ ಮೂಡಿತು. ಆ ಅಸಮಾಧಾನದ ದನಿಯಲ್ಲಿಯೇ ಸಿದ್ದಪ್ಪನನ್ನು ಕೇಳಿದ.

“ ಏನು ಸಿದ್ದಪ್ಪ, ಕಮಲದ ಬಳ್ಳಿ ಏನೋ ಒಂದುತರಹ ಆಗಿದೆಯಲ್ಲೊ? ಹಿಂದಿನ ಸಲ ನಾನು ಬಂದಾಗ ಎಷ್ಟು ದೊಡ್ಡದಾಗಿ ಕಾಣುತ್ತಿತ್ತು ? ”

“ ಅದಕ್ಕೇನು ಧಾಡಿಯಾಕ್ಕೈತ್ರಿ ? ನೀರಾಗ ಅಡಿವಿ ಬೆಳದ್ಹಾಂಗ ಬೆಳದೈತಿ. ಮೊನ್ನೆ ನಾನs ಒಂದಿಟ್ಟು ಮುಂದಕ್ಕ ಬಂದದ್ದನ್ನ ಕಡಿದು ಹಾಕೀನ್ರಿ. ”

“ ಕಡಿದು ಹಾಕಿದೆಯೊ ? ಯಾರು ಹೇಳಿದರೊ ಅದನ್ನು ಕಡಿಯಲಿಕ್ಕೆ?”

ಗೋಪಿಯ ದನಿಯಲ್ಲಿಯ ಅಸಮಾಧಾನ ಸ್ಪಷ್ಟವಾಗಿತ್ತು. ಆದರೆ ಸಿದ್ದಪ್ಪ ಅದಕ್ಕೆ ಬೆದರಬೇಕಿರಲಿಲ್ಲ. ಕಡಿದು ಹಾಕಲಿಕ್ಕೆ ಆತನಮಟ್ಟಿಗೆ ಸ್ಪಷ್ಟವಾದ ಕಾರಣಗಳಿದ್ದುವು.

“ಯಾರ ಯಾಕ ಹೇಳಾಕ ಬೇಕ್ರಿ, ಧಣೇರ ? ಈ ಹಾಳ ಬಳ್ಳಿನ್ನ ಹೀಂಗ ಬಿಟ್ರ ಯಾರದರ ಜೀವಾ ತೊಗೊಳ್ಳೋದು. ಯಾಕಾರ ದೊಡ್ಡ ಧಣೇರ್ರು ತಂದು ಹಚ್ಚಾಕ ನನಗ ಹೇಳಿದರೊ ಅಂತೀನಿ—ನನಗ ಕೇಳಿದರ, ಧಣೇರ, ಈ ಬ್ಯಾಸಿಗ್ಯಾಗ ಅದನ್ನು ಪೂರಾ ಸವರಿ ಒಗದು ಬಿಡಬೇಕರಿ. ಇಲ್ಲಾಂದ್ರ—”

“ ಅಲ್ಲೊ, ಸಿದ್ದಪ್ಪಾ, ಎಷ್ಟು ಚೆಂದಾಗಿ— ”

“ ಬಿಡ್ರಿ ನಿಮ. ಅದನ್ಯಾನು ಹೇಳ್ತೀರಿ. ಮಳಿ ಬಿದ್ದವ್ಯಾಗ ಚೆಂದಾಗಿ ನಾಕ ಹೂವೇನೊ ಆಗ್ತಾವರಿ. ಆದರ ಕಾಲ್ತೊಡಕ ಆಗಿ ಎಲ್ಲ್ಯಾರ ಮಂದಿನ್ನ ಕೊಂದು ಹಾಕೂದರಿ. ಮೊನ್ನೆ ಹೀಂಗs ಆತರಿ. ಏನೋ ಮದ್ಯಾನತನಾ ಕೆಲಸಾಮಾಡಿ ಜಳಕಾ ಮಾಡಿ ಹೋಗೂಣು ಅಂತ ಈಸ ಬಿದ್ದರ ಕಾಲಾಗ ಬಳ್ಳಿ ಸಿಕ್ಕು ಬಿಡಸಿಕೊಂಡು ಬರಬೇಕಾದ್ರ ಸಾಕಾಗಿ ಹೋತು. ಆಗೇ ಅಂದು ಕೊಂಡಿನ್ರಿ-ಯಾನಾದರೂ, ಈ ಬ್ಯಾಸಿಗ್ಯಾಗ ಇದನ್ನು ಮುಗಿಸೇ ಬಿಡೂದು.”

"ಬಲು ಹೇಳುವವ ಬಿಡು ನೀನೂ, ಸಿದ್ದಪ್ಪ. ಹತ್ತು ಸಾರೆ ನಾನೇ ಈಜು ಬಿದ್ದಿದ್ದೇನೆ. ನನಗೆ ಒಂದು ಸಲವೂ ತಾಕಲಿಲ್ಲ ಬಳ್ಳಿ. ಏನಾದರೊಂದು ಹೇಳಿದರೆ ಆಯಿತೆ ?"

"ಅದ್ಯಾಂಗ ಆದೀತರಿ. ಈ ವರ್ಸಂತೂ ಹೂಂಅಂತ ಬೆಳದು ಬಿಟ್ಟೈತಿ. ಕಡೀಲಾಕ್ಬೇಕ ಅದನ್ನ. ದೊಡ್ಡ ಧಣೇರಿಗೆ ಹೇಳಿದಮ್ಯಾಗೆ ಕಡೀಬೇಕು ಅಂತ ಬಿಟ್ಟೇನರಿ—"

"ದೊಡ್ಡ ಧಣೇರನ್ನು ಏನು ಕೇಳುತ್ತೀ ? ನಾನೇ ಹೇಳುತ್ತೇನೆ. ಅದನ್ನೇನೂ ಕಡಿಯುವ ಹಾಗಿಲ್ಲ. ಎಂಥ ಕಟುಕನೋ ನೀನು ? ಇಷ್ಟು ಸೊಗಸಾಗಿ ಬೆಳೆದು ನಿಂತ ಬಳ್ಳಿಯನ್ನು ಕಡಿದು ಹಾಕುವೆ ಎನ್ನುತ್ತೀಯಲ್ಲೊ ?"

"ಬ್ಯಾಡಾಂದ್ರ ಬಿಡ್ರಿ ಧಣೇರ. ಆದರ—ನನ್ನ ಮಾತ ಕೇಳಿದರ, ಇದನ್ನ ಇಲ್ಲಿ ತಂದು ಹಚ್ಬಾರದಾಗಿತ್ತರಿ. ಮೂವತ್ತು ವರ್ಸ ಆಯ್ತರಿ ಇದನ್ನ ಹಚ್ಚಿ. ನಾನೇ ತಂದಿದ್ನಿ ಭೀಮನ ಕೊಪ್ಪದ ಕೆರ್ಯಾಗಿಂದ—ಏನೋ ಇರ್ಲಿ ಅಂತ ಹಚ್ಚಿದರ ಕಾಡು ಬೆಳದೈತಿ—"

"ನೀನೇ ಹಚ್ಚಿ ಬೆಳೆಯಿಸಿದ್ದನ್ನು ನೀನೇ ಕಡಿಯಬೇಕೆನ್ನುತ್ತೀಯಲ್ಲೊ ?"

"ಅಂದ್ರೇನು ಮಾಡೂದರಿ ಮತ್ತ—ಕೈ ಮೀರಿತಂದ್ರ—ಮಾಡಿಕೊಂಡ ಹೆಣತಿನ್ನ ಬಿಡೋ ಮನಸ್ಯಾಗ ಹಚ್ಚಿದ ಬಳ್ಳೀ ಕಿತ್ತಿ ಹಾಕೊದ್ಯಾನು ದೊಡ್ಡ ಕೆಲಸ ಬಿಡ್ರಿ—"

ಎಂದು ಸಿದ್ದಪ್ಪ ನಕ್ಕುಬಿಟ್ಟ. ಸಿದ್ದಪ್ಪನ ಮಾತು ಗೋಪಿಗೆ ಸೋಜಿಗೆನಿಸಿತು. ಸಿದ್ದಪ್ಪ ಯಾವುದೊ ಒಂದು ಕಾಲಕ್ಕೆ ತನ್ನ ಹೆಂಡತಿಯನ್ನು ಹೊರದೊಡಿದ್ದ. ಆಕೆಯೇನೊ ಕೆಟ್ಟವಳಂತೆ. ಹಳೆಯ ಕಾಲದ ಕತೆ. ಕೆರೆಯನ್ನು ಕಟ್ಟುವ ಕೆಲಸ ನಡೆದಾಗ ಕೆಲಸಕ್ಕೆ ಬರುತ್ತಿದ್ದ ಯಾವನೊ ಒಬ್ಬ ಯುವಕನೊಡನೆ ಸಲಿಗೆ ಬೆಳಸಿದ್ದಳಂತೆ. ಒಂದು ದಿನ ಮುಚ್ಚಂಜೆಯ ಸಮಯದಲ್ಲಿ ಆ ಕಾಡಿನ ಗಿಡಗುಂಪೊಂದರಲ್ಲಿ ಸರಸಕ್ಕೆಳೆದ ಅವರಿಬ್ಬರನ್ನು ಸಿದ್ದಪ್ಪ ಕಣ್ಣಾರೆ ಕಂಡು ಇಬ್ಬರನ್ನು ಹಿಡಿದು ಚೆನ್ನಾಗಿ ಥಳಿಸಿ ಓಡಿಸಿದ್ದನಂತೆ. ಆ ವಿಷಯವನ್ನು ಕುರಿತು ಮೊದಮೊದಲು ಸಿದ್ದಪ್ಪ ಮಾತನಾಡುತ್ತಲೇ ಇರಲಿಲ್ಲ. ಆದರೆ ದಿನ ಕಳೆದ ಹಾಗೆ ಆ ಹಳೆಯ ಕತೆಯನ್ನು ಹೇಳಿದಾಗಲೆಲ್ಲವೂ ಕೊನೆಯಲ್ಲಿ

ಒಂದು ಮಾತನ್ನು ಸೇರಿಸುತ್ತಿದ್ದ. “ ಹೆಣ್ಣಿನ ಹಣೇಬಾರಾನ ಇಷ್ಟುರಿ. ಹೆಣ್ಣಿನ್ನ ನಂಬೂದೂಂದ್ರ ಹಾವಿನ್ನ ನಂಬಿದ್ಹಾಂಗರಿ ” ಎಂದು. ಸಿದ್ದಪ್ಪ ರಂಗಧೂಳಿಯ ಪರಿಸರದಲ್ಲಿ ಮೂವತ್ತು ವರ್ಷಗಳಿಗೂ ಮೀರಿ ವಾಸಿಸಿದ್ದ. ದುಡಿದಿದ್ದ. ಅದರ ಚೆಲುವನ್ನು ನೂರ್ಮಡಿಯಾಗಿ ಬೆಳೆಯಿಸಿದ್ದ. ಆದರೆ ಆ ಚೆಲುವೆಲ್ಲವೂ ಆತನ ತತ್ವಜ್ಞಾನವನ್ನು ಬದಲಾಯಿಸಿರಲಿಲ್ಲ. ಈ ಚೆಲುವಿನ ಮಧ್ಯದಲ್ಲಿ ಹೀಗೂ ಇರಬಹುದೆ? ಎಂದುಕೊಂಡ ಗೋಪಿ. ಆದರೆ ಆತನ ಮನಸ್ಸು ಆಗಲೆ ಸಿದ್ದಪ್ಪನಿಂದ ಆತನ ಆ ಹೆಂಡತಿಯೆಡೆಗೆ ಓಡಿತ್ತು. ಆ ಕಾಲದಲ್ಲಿ ಆಕೆ ಯುವತಿಯಾಗಿರಬೇಕಲ್ಲವೆ? ರಸಿಕಳೂ ಹೌದು. ರಂಗಧೂಳಿಯ ಚೆಲುವೆ ಆಕೆಯಲ್ಲಿ ಸರಸಜೀವನದ ಆಸೆಯನ್ನು ಚಿಗುರಿಸಿರಬೇಕು. ಹಗಲೆಲ್ಲವೂ ದುಡಿದು ರಾತ್ರಿಯೆಲ್ಲವೂ ಮರುದಿನದ ಕೆಲಸಗಳನ್ನು ಚಿಂತಿಸುವುದರಲ್ಲಿಯೇ ಬದುಕನ್ನು ಸಾಗಿಸುತ್ತಿದ್ದ ಅರಸಿಕ ಸಿದ್ದಪ್ಪನಿಂದ ಆಕೆಯ ಮನಸ್ಸು ಬೇರೆಡೆ ಓಡಿದ್ದರೆ ಆಶ್ಚರ್ಯವಲ್ಲ. ಸಿದ್ದಪ್ಪ ಕಮಲದ ಬಳ್ಳಿಯನ್ನು ಕಡಿಯಲು ಸಿದ್ಧವಾದದ್ದು ಸೋಜಿಗವಲ್ಲ ಎಂದುಕೊಂಡ ಮನೆಯನ್ನು, ಮನಸ್ಸನ್ನು ಬೆಳಗಿಸ ಬಂದ ಮಡದಿಯನ್ನು ಹೀಗೂ ನಡೆಯಿಸಿಕೊಳ್ಳಬಹುದೆ? ತನ್ನ ಹತ್ತಿರದಲ್ಲಿಯೆ ನಿಂತಿದ್ದ ಶಾಂತಳನ್ನು ನೆನೆದಾಗ, ತನ್ನ ಬಗೆಯನ್ನು ಆಕೆ ವ್ಯಾಪಿಸಿದ್ದನ್ನು ನೆನೆದಾಗ ಇಂಥ ಪರಿಸ್ಥಿತಿಯ ವಿಪರ್ಯಾಸ ಆತನಿಗೆ ಗೋಚರಿಸಿರಬೇಕು. ಈ ಸುತ್ತಲಿನ ಚೆಲುವಿನಿಂದಲೇ ಸಿದ್ದಪ್ಪನ ಅಂದಿನ ಹೆಂಡತಿ ಗಂಡನನ್ನು ಬಿಟ್ಟು ನಲ್ಲನನ್ನು ಕೂಡುವಂತಾಗಿದ್ದರೆ ಈ ಚೆಲುವೆ ಸಿದ್ದಪ್ಪನ ಮನೆಯನ್ನು, ಆತನ ಜೀವನದಲ್ಲಿಯ ಸುಖವನ್ನು ಮುರಿದಂತಾಗಲಿಲ್ಲವೆ? ಎಂದು ಕೇಳಿಕೊಂಡ. ಆದರೆ ಮರುಕ್ಷಣದಲ್ಲಿಯೇ ಬೇರೆ ಯೋಚನೆ ತಲೆದೋರಿತು. ಈ ವಿಶಾಲ ಪ್ರಪಂಚದಲ್ಲಿ ಯಾವುದರಿಂದ ಏನು ನಡೆದೀತು ಹೇಳಲಿಕ್ಕಾಗುತ್ತದೆಯೆ? ಚೆಲುವಿನಿಂದ ಸರಸ ಬೆಳೆಯಬಹುದು. ಬೆಳೆಯುತ್ತದೆ. ಶಾಂತಳ ಸಾನ್ನಿಧ್ಯವೆ ಅದಕ್ಕೆ ಸಾಕ್ಷಿ. ಆದರೆ ಸಿದ್ದಪ್ಪ? ಅವನ ಬದುಕು ಏನೆಂದು ಹೇಳುತ್ತಿತ್ತು? ಆದರೆ ಆ ಯೋಚನೆಯೆ ಗೋಪಿಗೆ ಬೇಡವಾಯಿತು. ಬೇಡವಾದ ಯೋಚನೆ ಯಾವಾಗಲೂ ಬೆನ್ನಟ್ಟಿಕೊಂಡೇ ಬರುತ್ತದೆ. ಮನೆಗೆ ಹಿಂದಿರುಗುವಾಗಲೆಲ್ಲ ಅದೇ ಯೋಚನೆಯೆ. ಸಂಜೆಯ ನಸುಬೆಳಕಿನಲ್ಲಿ ಶಾಂತಳನ್ನು ತಾನು ಕೈ ಹಿಡಿದುಕೊಂಡು ನಡಸಿಕೊಂಡು ಹೋಗುತ್ತಿದ್ದ ಹಾಗೆ ಸಿದ್ದಪ್ಪನೂ ತನ್ನ

ಹೆಂಡತಿಯೊಡನೆ ಸುಖವಾಗಿರುವುದು ಸಾಧ್ಯವಾಗಿದ್ದರೆ ? ಆಗಿದ್ದರೆ ಬಹುಶಃ ಇಂದು ಸಿದ್ದಪ್ಪ ಆ ಕಮಲದ ಬಳ್ಳಿಯನ್ನು ಕಡಿಯುತ್ತೇನೆ ಎಂದಿರುತ್ತಲೇ ಇರಲಿಲ್ಲ. ಆ ಬಳ್ಳಿಯ ಹಾಗೆಯೇ ಆತನ ವಂಶವೃಕ್ಷ ಬೆಳೆಯುತ್ತಿತ್ತು. ಆದರೆ ರಂಗಧೂಳಿಯ ಚೆಲುವು ಹುಟ್ಟಿಕೊಳ್ಳುತ್ತಿರುವಾಗಲೆ ಆತನ ಬದುಕಿನಲ್ಲಿಯ ಚೆಲುವು ಮಾಯವಾಗಿತ್ತು.

ತಾವು ತಿರುಗಿ ಹೋಗಲು ಬಂಡಿ ಬೇಕೆಂದು ಸಿದ್ದಪ್ಪನಿಗೆ ಹೇಳಿ ಕೆರೆಯ ಎದುರಿನ ದಂಡೆಗೆ ಬರುವಷ್ಟರಲ್ಲಿ ಸಂಜೆಬೆಳಕು ಬಾಡುತ್ತಿತ್ತು. ಹತ್ತಾರು ಹೆಜ್ಜೆ ನಡೆಯುತ್ತಿರುವಾಗಲೆ ಗೋಪಿಯ ಕಣ್ಣು ಬಲಗಡೆಯ ಗಿಡಗಳ ಗುಂಪಿನಾಚೆ ಹೊರಳಿತು. ಆತನ ಹೆಜ್ಜೆಯೆ ತಡೆಯಿತು. ಹುಣ್ಣಿಮೆಯ ಚಂದಿರ ! ಗಿಡಗಳ ಅಂಚಿನಲ್ಲಿ, ಅಚ್ಚ ನೀಲಿಯ ಗಗನಾಂತ್ಯದಲ್ಲಿ ಚಿನ್ನದ ಥಾಲೊಂದನ್ನು ತೂಗುಬಿಟ್ಟ ಹಾಗೆ ಚಂದ್ರ ನಿಂತಿದ್ದ. "ಅಲ್ಲಿ ನೋಡಿದೆಯಾ ?" ಎಂದು ಶಾಂತಳನ್ನು ಕೇಳಿದ. ಶಾಂತ ನೋಡಿದಳು. ಆ ಚಂದ್ರನ ಮುಖದ ಮೇಲಿದ್ದಂಥ ತಿಳಿನಗೆಯೊಂದು ಆಕೆಯ ತುಟಿಗಳಂಚಿನಲ್ಲಿ ಮಿನುಗಿತು. ಆಕೆ ಏನು ಯೋಚಿಸುತ್ತಿದ್ದಳೊ !

ಅವರಿಬ್ಬರೂ ಎದುರಿನ ಕಲ್ಲುಕಟ್ಟೆಯ ಮೇಲೆ ಬಂದು ಕುಳ್ಳಿರುವಾಗ ಚಂದ್ರ ಆಗಲೆ ಇನ್ನೂ ಮೇಲಕ್ಕೇರಿದ್ದ. ಮುಗಿಲ ನೀಲಿ ಕಡುನೀಲಿಯಾಗಿತ್ತು. ಚಿನ್ನದ ಚಂದಿರ ತೀಡಿದ ಬೆಳ್ಳಿಯಾಗಿದ್ದ. ಕೊಳದ ನೀರಮೇಲೆ ಬೆಳುದಿಂಗಳು ಅಲ್ಲಿ ಇಲ್ಲಿ ಎಂದು ಎಲ್ಲ ಕಡೆಯಲ್ಲಿಯೂ ಹುಡುಕಿ "ಈ ಸ್ಥಳ ಚೆನ್ನಾಗಿದೆಯಲ್ಲ ! ಇದುವರೆಗೆ ಹೇಗೆ ನೋಡಲಿಲ್ಲ ?" ಎಂದು ಅಚ್ಚರಿಯಿಂದ, ಆನಂದದಿಂದ ತಂಗುತ್ತಿದ್ದಹಾಗಿತ್ತು. ಗೋಪಿ ಶಾಂತಳ ಮುಖವನ್ನು ನೋಡಿದ. ಕವಿಗಳು ಚೆಲುವೆಯರ ಮುಖವನ್ನು ಚಂದ್ರಬಿಂಬಕ್ಕೆ ಹೋಲಿಸುವುದು ಕೇವಲ ಕವಿಸಮಯವಲ್ಲ. ಮುಖವನ್ನು ಹಾಗೆ ಕಾಣುವ ದೃಷ್ಟಿ ವಾಸ್ತವ ಎಂದೆನಿಸಿರಬೇಕು ಗೋಪಿಗೆ. "ಶಾಂತಾ" ಎಂದು ಉಸಿರಿದ. ಪರಮ ಸಂತೃಪ್ತಿಯ ಉಸಿರು ಅದು. ಶಾಸ್ತ್ರಿಗಳೆದುರು "ಧನ್ಯನಾದೆ" ಎಂದು ಆ ದಿನ ಇದೇ ಸ್ಥಳದಲ್ಲಿಯಲ್ಲವೆ ತಾನು ಹೇಳಿದ್ದು ? ಅಂದಿನ ಮಾತು ಇಂದು ಸಾರ್ಥಕವಾಯಿತು, ಎಂದುಕೊಂಡ. ಶಾಂತಳ ಮುಖವನ್ನೇ ನೋಡುತ್ತ "ಶಾಂತಾ" ಎಂದು ಮತ್ತೆ ಮತ್ತೆ ಉಸಿರಿದ. ಆತನ ತೋಳಸೆರೆಯಲ್ಲಿದ್ದ ಆಕೆಗೆ ತಾನಿದ್ದದ್ದು

ಎಲ್ಲಿ ಎಂಬುದರ ಅರಿವೂ ಇದ್ದ ಹಾಗಿರಲಿಲ್ಲ. ಕಣ್ಣುಗಳು ಒಮ್ಮೆ ಗೋಪಿಯನ್ನಾದರೆ ಒಮ್ಮೆ ಚಂದ್ರಬಿಂಬವನ್ನು ನೋಡುತ್ತಿದ್ದವು.

* * *

ಅದೇನೊ ಅದೇ ಸಾಯಂಕಾಲ ಕಟ್ಟೆಯಮೇಲೆ ಕುಳಿತ ಬಂಡೇರಾಯ ಒಳ್ಳೆ ರಸಿಕ ಮನಃಸ್ಥಿತಿಯಲ್ಲಿದ್ದ. ಅಂತೆಯೆ ತನ್ನ ಸಂಗಡಿಗರಿಗೆ ಹೇಳಿದ.

" ಏನು ಚೆನ್ನಾಗಿ ಬಿದ್ದಿದೆ ಬೆಳುದಿಂಗಳು ಈ ಹೊತ್ತು—ಅಲ್ಲ—ಅಂದರೆ—"

" ಬಂಡೇರಾಯ ಒಳ್ಳೆ ಖುಷಿಯಲ್ಲಿದ್ದ ಹಾಗಿದೆಯಲ್ಲ. ಯಾಕೆ, ಬಂಡೇರಾಯ, ಬೆಳುದಿಂಗಳ ಮಾತು ಬರುತ್ತಿದೆ ಇಂದು ? " ಎಂದು ವಾಮನಪ್ಪ ನಕ್ಕ.

" ಏನೂ-ಇಲ್ಲ. ಮನೆಗೆ ಹೋಗಿ ಏಟು ತಿನ್ನುವ ಹಾದಿ ಇದೆಲ್ಲ. ಅಥವಾ, ಆ ಗೋಪಿಯನ್ನು ನೋಡಿ ಸ್ಫೂರ್ತಿ ಬಂದಿದೆಯೊ ? ನಿನಗೇನು ಹರಿಯ ತಿರುಗಿತೊ ? "

ಎಂದು ಶಂಕ್ರಪ್ಪ ಹೇಳಿದ್ದಕ್ಕೆ ಇಬ್ಬರೂ ನಕ್ಕುಬಿಟ್ಟರು. ಎದುರಿಗೆ ಭವ್ಯವಾಗಿ ಕಂಗೊಳಿಸುತ್ತಿದ್ದ ಚಂದ್ರಬಿಂಬವನ್ನು ನೋಡಿದ ಯಾರೂ ಆ ಮಾತನ್ನು ಹೇಳುತ್ತಿದ್ದರು. ಆದರೆ ಬಂಡೇರಾಯ ಯಾವಾಗಲೂ ಮಾತಿನಿಂದ ಬಡವ. ಹೀಗೆಂವೇ ಇಬ್ಬರೂ ಗೆಳೆಯರ ಅಪಹಾಸ್ಯಕ್ಕೆ ಆತನಿಗೆ ಗುರಿಯಾಗಬೇಕಾಗುತ್ತಿತ್ತು.

" ಯಾಕೆ, ಶಂಕ್ರಪ್ಪ ? ನಾನು ಹೇಳಿದ ಹಾಗಾಯಿತೊ ನೀನು ಹೇಳಿದ ಹಾಗೆಯೊ ? ಶೀನಪ್ಪ ಯಾರ ಕೈಯನ್ನು ಯಾರ ಕೈಯಲ್ಲಿಟ್ಟ ? " ಎಂದು ವಾಮನಪ್ಪ ಕೇಳಿದ ಒಳ್ಳೆ ಗೆಲುವಿನಿಂದ

" ಮಹಾಕಾರಸ್ಥಾನಿ ಬಿಡು ಆ ಶಾಸ್ತ್ರಿ. ನನ್ನ ಮುಂದೆಲ್ಲ ನನ್ನ ಹಾಗೆಯೆ ಮಾತನಾಡಿ ಬೆನ್ನ ಹಿಂದೆ ಬೇಕಾದುದನ್ನು ಸಾಧಿಸಿಯೇ ಬಿಟ್ಟ. ಶೀನಪ್ಪ ಹೀಗೆ ಮಾಡಿಯಾನು ಎಂದು ನನಗಂತೂ ಕನಸುಮನಸಿನಲ್ಲೂ ಇರಲಿಲ್ಲ. ಆಯಿತು, ಊರಲ್ಲಿ ಶಾಸ್ತ್ರಿಯ ಪ್ರಸ್ಥ ಬೆಳೆದ ಹಾಗಾಯಿತು—"

" ನೀನು ಏನು ಬೇಕಾದುದನ್ನು ಹೇಳು, ಶಂಕ್ರಪ್ಪ. ಶಾಸ್ತ್ರಿ ದೊಡ್ಡ ಮನುಷ್ಯ. ದೈವಭಕ್ತಿ ಇದ್ದವ. ಅಂತೆಯೇ ಹೀಗೆಲ್ಲ ಕೂಡಿಬಂದಿತು. ಇಲ್ಲ

ವಾದರೆ ಹೀಗೆಲ್ಲಾದರೂ ಆಗುವುದೆ ? "

" ಸರಿಯಾಯಿತು. ನಿನ್ನ ಮೇಲೆ ಒಳ್ಳೆ 'ಛಾಪು' ಹಾಕಿದ ಹಾಗಿದೆ. ನನಗೆಲ್ಲಾ ಗೊತ್ತು, ಈ ದೈವಭಕ್ತಿ, ಈ ಮಡಿವಂತಿಕೆ. ಅಂಥ ಸಂಪ್ರದಾಯವಂತ ಈಗ ಮಗಳು ಆತನ ಕೈಯಲ್ಲಿ ಕೈ ಸಿಕ್ಕಿಸಿಕೊಂಡು ಹಗಲು ಇರಳು ಬೇಕಾದಲ್ಲಿ ಬೇಕಾದ ಹಾಗೆ ತಿರುಗಾಡುವುದನ್ನು ಹೇಗೆ ತಡೆಯುತ್ತಾನೆ ? "

" ಅದಕ್ಕೆ ಆತನೇನು ಮಾಡಬೇಕು ? ಗಂಡನ ಇಚ್ಛೆಗೆ ಸರಿಯಾಗಿ ಆಕೆ ನಡೆಯಬೇಡವೆ ? ಅದಕ್ಕೆ ಶಾಸ್ತ್ರಿ ಏನು ಮಾಡಬೇಕು ? "

" ಏನು ಗಂಡನೋ, ಏನು ಹೆಂಡತಿಯೊ ? ಹೆಚ್ಚಾಯಿತು ಇದೆಲ್ಲ. ನಾವು ಯಾರೂ ಮದುವೆಯನ್ನೇ ಮಾಡಿಕೊಳ್ಳಲಿಲ್ಲವೆ ? "

" ಹೌದು—ಅದೇ ಅಂದೆ ನಾನೂ—ಅಲ್ಲ—ಅಂದರೆ—"

" ನಿನಗೇಕೋ ಇಷ್ಟು ಅಸಮಾಧಾನ ? ನೀನು ನಾವು ಮದುವೆಮಾಡಿಕೊಂಡ ಕಾಲ ಯಾವುದು ? ಈ ಕಾಲ ಯಾವುದು ? '

" ಅದಕ್ಕೆ ಈ ಪರಿಯಾಗಿ ಕಾಲು ಬಿಟ್ಟು ಕಾಡುಕಾಡು ತಿರುಗುವುದೆ ?"

" ನಿನೇನು ಬೇಕಾದುದನ್ನು ಹೇಳು, ಶಂಕ್ರಪ್ಪ ಶಾಸ್ತ್ರಿಗಳ ಮಗಳ ಭಾಗ್ಯ ತೆರೆದದ್ದನ್ನು ನೋಡಿ ನನಗಂತೂ ತುಂಬಾ ಸಂತೋಷ. ಅಂಥ ಒಳ್ಳೆಯ ಮನುಷ್ಯನಿಗೆ ದೇವರೆ ಸಹಾಯಮಾಡುತ್ತಾನೆ—"

" ಹುಂ—ಮಾಡದೆ ಏನು ? ವರದಕ್ಷಿಣೆ ಇಲ್ಲದೆ ವರ ಸಿಕ್ಕ. ಅದು ಹುಚ್ಚು ಎಂದು ಎಂದೂ ಹೇಳಿದ್ದಿಲ್ಲವೆ ? ಹುಚ್ಚಲ್ಲದಿದ್ದರೆ ಆ ಹುಡಿಗೆಯನ್ನು ಮದುವೆಯಾಗುತ್ತಿತ್ತೆ ? ಈಗಂತೂ ಕೇಳುವುದೇನು, ಹುಚ್ಚು ತಲೆಗೇರಿ ಬಿಟ್ಟಿದೆ."

" ಹೌದೆ ? ಹುಚ್ಚು ಹೆಚ್ಚಾಗಿದೆಯೆ ? ಅಲ್ಲ—ಅಂದರೆ—ಪಾಪ ! "

" ಹುಚ್ಚು ಅವನಿಗಲ್ಲ—ನಿನಗೆ, ಬಂಡೇರಾಯ."

ಅವರ ಮಾತು ನಡೆದೇ ಇತ್ತು. ಆ ಕಡೆಯಿಂದ ಶಾಸ್ತ್ರಿಗಳು ರಾಯರು ಇಬ್ಬರೂ ಬಂದದ್ದನ್ನು ಅವರು ನೋಡಿರದಿದ್ದರೆ ಇನ್ನೂ ಎಲ್ಲೆಲ್ಲಿಯವರೆಗೆ ಅವರ ನಾಲಗೆ ಹರಿಯುತ್ತಿದ್ದಿತೊ ! ಗೋಪಿಯ ಮದುವೆ ಗೊತ್ತಾದನಂತರ ಶಾಸ್ತ್ರಿಗಳನ್ನು ಎದುರಿಸಲಿಕ್ಕೆ ಶಂಕ್ರಪ್ಪನಿಗೆ ಧೈರ್ಯವೇ ಆಗುತ್ತಿರಲಿಲ್ಲ. ಅವರಾಗಿಯೆ ಒಮ್ಮೆ ಮಾತನಾಡಿಸಿ ಆತ ತಂದ ಆ ಜಾತಕದ ವಿಚಾರವಾಗಿ, ನಡೆ

ಯಲಿದ್ದ ಮದುವೆಯ ವಿಚಾರವಾಗಿ ವಿಚಾರಿಸಿದ್ದರು. ಎಲ್ಲವೂ ಕಟ್ಟುಕತೆಯಾಗಿದ್ದರಿಂದ ಶಂಕ್ರಪ್ಪ ಏನೆಂದು ಹೇಳಬೇಕು ? ಏನೊ, ಆ ಜಾತಕದಿಂದಾಗಿಯೆ ಆ ಮದುವೆಯ ಮಾತುಕತೆ ನಿಂತುಹೋದವು ಎಂದು ಹೇಳಿ ಪಾರಾಗಿದ್ದ. ಏನಿದ್ದರೂ ಅಂದು ತಾನು ಆಡಿದ ಮಾತಿನಿಂದಾಗಿ ತಾನು ಶಾಸ್ತ್ರಿಗಳ, ಅವರ ಮುಖಾಂತರ ರಾಯರ ಎಣಿಕೆಯಲ್ಲಿ ಇಳಿದುಹೋಗಿರಬೇಕೆಂಬ ಸಂದೇಹ ಮಾತ್ರ ಶಂಕ್ರಪ್ಪನನ್ನು ಸದಾಕಾಲವೂ ಕಾಡುತ್ತಿತ್ತು. ವಾಮನಪ್ಪ ಮಾತ್ರ ಗೋಪಿಯ ಮದುವೆಯ ಪ್ರಸ್ತಾಪ ಬಂದಾಗಿನಿಂದ ಶಾಸ್ತ್ರಿಗಳನ್ನು ಸೂಕ್ಷ್ಮವಾಗಿ ನೋಡಿದ್ದ. ಅವರ ನಡೆ ನುಡಿ ಶಾಂತ ಸ್ವಭಾವಗಳನ್ನು ತಿಳಿಯುವಂತಾಗಿದ್ದ. ಹೀಗಾಗಿ ಅವರನ್ನು ಕುರಿತು ಹೊಸದಾದ ಒಂದು ಆದರ ಭಾವವನ್ನು ತಾಳುವಂತಾಗಿದ್ದ. ಬಂಡೇರಾಯ ಮಾತ್ರ-ಶಂಕ್ರಪ್ಪನೂ ಅಲ್ಲದೆ ವಾಮನಪ್ಪನೂ ಅಲ್ಲದೆ—ತನ್ನದೇ ಆದ ಒಂದು ವ್ಯಕ್ತಿತ್ವವನ್ನು ಅಥವಾ ವ್ಯಕ್ತಿತ್ವಹೀನತೆಯನ್ನು ಕಾಯ್ದುಕೊಂಡಿದ್ದ.

* * *

ಸುತ್ತಲಿನ ಸೃಷ್ಟಿಯಲ್ಲೆಲ್ಲವೂ ಚೈತ್ರದ ಚೆಲುವು ಚೆಲ್ಲವರಿಯುತ್ತಿತ್ತು. ಎತ್ತ ನೋಡಿದರೂ ಚಿಗುರು. ಮಾಮರದ ಸೊಂಪು ಗಾಳಿಗುಂಟ ತೇಲಿ ಬರುತ್ತಿತ್ತು. ಮನೆಯೆದುರಿನ ಮಲ್ಲಿಗೆ ಮೆರೆಯುತ್ತಿದ್ದವು. ಅಶ್ವತ್ಥದ ಕೆಂದಳಿರ ಬೆರಳುಗಳು ನಿಸರ್ಗದ ಜೀವನಾಡಿಯ ಆವಿಷ್ಕಾರವಾಗಿ ನಿಂತಿದ್ದವು. ಬೆಟ್ಟ ಹೊಸ ಜೀವವನ್ನು ಪಡೆಯುತ್ತಿದ್ದ ಹಾಗಿತ್ತು. ಎತ್ತ ನೋಡಿದರೂ ಚೆಲುವೇ ಚೆಲುವು. ನೀರ ತಂಪಿನಲ್ಲಿ, ಗಾಳಿ ಸೂಸುತ್ತ ತಂದ ಸಾವಿರ ಸುಗಂಧಗಳಲ್ಲಿ, ಕಡುಬೇಸಗೆಯ ಬಿಸಿಲಿನಲ್ಲಿ ಬಿಸುಸುಯ್ಯುವ ನೆಲದ ನೋವಿನಲ್ಲಿ ಕೂಡ ಹೊಸ ಚೇತನ ಕಾಣುತ್ತಿತ್ತು. ಗೋಪಿಯ ಹೃದಯದಲ್ಲಿಯ ನಲಿವಿನ ನೂರಾರು ವಿನ್ಯಾಸಗಳ ತರಹದಲ್ಲಿ ಸುತ್ತಲಿನ ಸೃಷ್ಟಿ ಸೌಭಾಗ್ಯವನ್ನು ಸೂರೆ ಮಾಡುತ್ತಿತ್ತು. ಈಗ ಎಂಟು ಹತ್ತು ದಿನಗಳಿಂದ ಆತ ಶಾಂತಳೊಡನೆ ತಾವೇ ತಾವಾಗಿ ಆಕೆ ತಾನಾಗಿ, ತಾನು ಆಕೆಯಾಗಿ, ಇಬ್ಬರೂ ಒಂದಾಗಿ ಈ ಸೃಷ್ಟಿಯಲ್ಲಿಯ ಮೊದಲ ಗಂಡುಹೆಣ್ಣುಗಳ ಹಾಗೆ ರಂಗಧೂಳಿಯಲ್ಲಿಯೆ ಇರುತ್ತಿದ್ದಾರೆ. ಹಿಂದಿನದರ ನೆನಹಿಲ್ಲದೆ, ಮುಂದಿನದರ ಚಿಂತೆಯಿಲ್ಲದೆ ಹಕ್ಕಿಗಳ ಹಾಗೆ ನಲಿಯುತ್ತಿದ್ದಾರೆ. ಅವರು ಅಡ್ಡಾಡದ ಸ್ಥಳವಿಲ್ಲ. ಅವರು ಕೂಡದ ಸ್ಥಾನವಿಲ್ಲ.

ಅವರು ನಿಂತು ನೋಡಿ ನಲಿಯದ ನೆಲವಿಲ್ಲ—ರಂಗಧೂಳಿಯು ಆ ನಿಸರ್ಗ ರಂಗಮಂಟಪದಲ್ಲಿ. ಬೆಳಗಿನ ಎಳೆಬಿಸಿಲ ಮಾಯೆಯಲ್ಲಿ, ನಡುಹಗಲಿನ ಸುಡುಬೆಡಗಿನಲ್ಲಿ, ಸಂಧ್ಯಾರುಣ ರಮಣೀಯತೆಯಲ್ಲಿ, ಬೆಳುದಿಂಗಳ ಲೀಲೆಯಲ್ಲಿ, ಕಡುರಾತ್ರಿಯ ಶಾಂತಗಂಭೀರತೆಯಲ್ಲಿ ಅವರ ಹೃದಯಗಳು ಅನುಭವಿಸಿದ ಸರಸದ ಪರಮಾವಧಿ ಊಹೆಗೆ ಮೀರಿದ ವಿಷಯ. ಕಿನ್ನರ ದಂಪತಿಗಳ ಹಾಗೆ ಕಾಡಿನಲ್ಲಿ ಅವರು ಅಲೆದಾಡಿದ ಸಂಜೆಗಳೆಷ್ಟೋ! ಜಲದೇವತೆಯರ ಹಾಗೆ ಅವರು ಕೊಳದಲ್ಲಿ ನಲಿದಾಡಿದ ನಡು ಹಗಲುಗಳೆಷ್ಟೋ! ಗಂಧರ್ವ ಅಪ್ಸರೆಯರಾಗಿ ಆಡಿದ ಕೂಡಿದ ಹಾಡಿದ ರಾತ್ರಿಗಳೆಷ್ಟೋ! ಗೋಪಿಗೆ ಜೀವನ ಸಾರ್ಥಕವೆನಿಸಿತು. ಈ ಚೆಲುವೆಂಬ ಮಾಯೆಯ ಸಾರಸರ್ವಸ್ವವನ್ನೇ ಈ ಕೈಗಳಿಂದ, ಈ ಹೃದಯದಿಂದ ಬಂಧಿಸಿ ನನ್ನದನ್ನಾಗಿ ಮಾಡಿಕೊಂಡೆ ಎಂದೆನಿಸಿತು. ಇದಲ್ಲವೆ ಜೀವನದ ಧನ್ಯತೆ ಎಂದುಕೊಂಡ. ಇನ್ನಾವುದೂ ಬೇಡ. ಇನ್ನು ಮುಂದೆ ಇದ್ದರೂ ಆಯಿತು, ಇರದಿದ್ದರೂ ಆಯಿತು. ಇದಕ್ಕೂ ಹೆಚ್ಚಿನದು ಇನ್ನೇನು ಸಿಕ್ಕಬೇಕಾಗಿದೆ? ಎಂದು ಕೇಳಿಕೊಳ್ಳುವಂತಾದ—

ಇಂದು ಚೈತ್ರ ಪೌರ್ಣಿಮೆ. ವಸಂತನ ಜೈತ್ರಯಾತ್ರೆ ಕಾಡು ಗೂಡುಗಳಲ್ಲಿಯೂ ಹಾಯ್ದು ಹೊರಟಿದೆ. ಬೆಳುದಿಂಗಳು ರಾತ್ರಿಯ ನಿಶ್ಶಬ್ದತೆಯ ಮೇಲೆ ತೇಲಾಡುತ್ತಿದೆ. ವಾಡಿಕೆಯಾಗಿ ಗೋಪಿ ಬಂದು ಕೂಡುತ್ತಿದ್ದ ಕಲ್ಲುಕಟ್ಟೆ ಇಂದು ಗೋಪಿಯ ಶಯ್ಯಾಗೃಹವಾಗಿದೆ. ಹತ್ತಿರದಲ್ಲಿಯೆ ಶಾಂತಾ ಕುಳಿತಿದ್ದಾಳೆ. ಆಕೆಯ ಹತ್ತಿರದಲ್ಲಿಯೆ ವೀಣೆ ಇದೆ. ಅಂದಿನ ಆ ಬೆಳುದಿಂಗಳ ರಾತ್ರಿಯಲ್ಲಿ ಆಕೆ ವೀಣೆಯನ್ನು ನುಡಿಸಬೇಕೆಂದು ಮೂರು ದಿನಗಳಿಂದಲೂ ಗೋಪಿ ಕಾರ್ಯಕ್ರಮವನ್ನು ಗೊತ್ತುಮಾಡಿಕೊಂಡಿದ್ದಾನೆ.

ರಾತ್ರಿಯ ಹತ್ತು ಗಂಟೆಯಾಗಿರಬೇಕು. ಬೆಳುದಿಂಗಳ ಬಣ್ಣವನ್ನು ಹೊತ್ತ ಆ ಕಾಡಿನ ಆ ನಿಶ್ಶಬ್ದತೆಯಲ್ಲಿ ಅಲೆಯಲೆಯಾಗಿ, ತೆರೆತೆರೆಯಾಗಿ, ಆಮೇಲೆ ಪ್ರಸನ್ನ ಗಂಗಾಪ್ರವಾಹವಾಗಿ ವೀಣಾವಿತಾನ ತೇಲಿ ಬರುತ್ತಿದೆ. ಗೋಪಿ ಕಣ್ಣು ಮುಚ್ಚಿ ಕೇಳುತ್ತಿದ್ದಾನೆ. ಶಾಂತಳು ಶಾಂತತೆಯ ಸಮಾಧಿಯಲ್ಲಿಯೆ ವೀಣೆಯನ್ನು ನುಡಿಸುತ್ತಿದ್ದ ಹಾಗಿದೆ. ಬೆರಳುಗಳು ಸರಿಯುತ್ತಿವೆ. ತಡೆಯುತ್ತಿವೆ, ಓಡುತ್ತಿವೆ. ರಾಗಪರಿವಾಹಿಯಾಗಿ ರಂಗಧೂಳಿ ಪ್ರತಿಧ್ವನಿಸುತ್ತಿದೆ, ಆ ನಾದ ಮಾಧುರ್ಯವನ್ನು. ನುಡಿಸುತ್ತಿದ್ದುದು ವೀಣೆಯಾದರೂ ಮಾತು

ಸ್ಪಷ್ಟವಾಗಿ, ಮಧುರಗಂಭೀರವಾಗಿ, ಶಾಂತಳ ಹೃದಯವೇ ಹಾಡಾಗಿ, ರಾಗವಾಗಿ, ನಾದವಾಗಿ ಕೇಳಬರುತ್ತಿದೆ.

ಈ ಪರಿಯ ಸೊಬಗಾನ ದೇವರಲಿ ಕಾಣೆ
ಗೋಪೀ ಜನಪ್ರಿಯ ಗೋಪಾಲಗಲ್ಲದೆ—
ದೊರೆತನದಿ ಈಕ್ಷಿಸಲು ಧರಿಣಿದೇವಿಯ ರಮಣ
ಸಿರಿತನದಿ ನೋಡೆ ಲಕ್ಷ್ಮೀಕಾಂತನು
ಹಿರಿತನದಿ ನೋಡೆ ಕಮಲಸಂಭವನಯ್ಯ
ಗುರುತನದಿಲೀಕ್ಷಿಸಲು ಗುರು ಮಧ್ವಜನಕ—
—ಈ ಪರಿಯ ಸೊಬಗಾನ— ಈ ಪರಿಯ—.

ಶಾಂತಾ ವೀಣೆಯನ್ನು ನುಡಿಸುತ್ತಲೇ ಇದ್ದಳು. ಆಕ್ಷಣಕ್ಕೆ ಆಕೆ ಗೋಪಿಯನ್ನು ದೇವತೆಯಾಗಿ, ರಮಣನಾಗಿ, ಕಮಲಸಂಭವನಾಗಿ ಕಾಣದಿದ್ದಿದ್ದರೆ ಆ ತೆರದ ನಾದಮಾಧುರ್ಯವನ್ನು ಸೂರೆ ಮಾಡುವುದು ಸಾಧ್ಯವೆ? ಆ ಕ್ಷಣಕ್ಕೆ ಗೋಪಿ ಎಲ್ಲಿದ್ದ? ಶಾಂತಾ ಎಲ್ಲಿದ್ದಳು? ಅಮರಾವತಿಯಲ್ಲಿಯೆ? ಯಾರು ಹೇಳಬೇಕು?

ವಚನ ಕೊಟ್ಟಂತೆ ವತ್ಸಲೆ ಜೂನ್ ತಿಂಗಳ ಮೊದಲ ವಾರದಲ್ಲಿ ಬಂದಿದ್ದಳು ಆಕೆಯ ಶಿಷ್ಯವೃತ್ತಿ ಮರುತಿಂಗಳಿಂದ ಮುಂದುವರಿಯುವುದಿತ್ತಾದ್ದರಿಂದ ಒಂದು ತಿಂಗಳು ಪೂರ್ತಿಯಾಗಿ ಬಿಡುವಿತ್ತು. ಬಂದಾಗಿನಿಂದ ಗೋಪಿ ಹೇಳಿದ ಮಾತಿನ ನೆನಹು ಕೊಡುತ್ತಲೇ ಇದ್ದಳು. ಆಕೆ ರಂಗಧೂಳಿಯನ್ನು ನಾಲ್ಕಾರು ಬಾರಿ ನೋಡಿದ್ದಳೇನೊ ನಿಜ. ಆದರೆ ಅಲ್ಲಿಯೇ ಇದ್ದಿರಲಿಲ್ಲ. ಗೋಪಿಯ ಜೊತೆಯಲ್ಲಿ ಆತನ ಪ್ರೇಯಸಿಯಾಗಿ ಅಲ್ಲಿಯೇ ನಲಿದಾಡುವ ಭಾಗ್ಯ ತನ್ನದಾಗಲಿಲ್ಲ. ಹೀಗಿರುವಾಗ ಅಲ್ಲಿ ಹೋಗಿಯಾದರೂ ಏನು ಎಂದು ಒಂದೊಂದು ಸಲ ನಿರುತ್ಸಾಹವೆನಿಸುತ್ತಿತ್ತಾದರೂ ಗೋಪಿಯ ಸಹವಾಸದಲ್ಲಿ ಅಲ್ಲಿ ಕೆಲವು ದಿನಗಳನ್ನು ಕಳೆಯಬೇಕೆಂಬ ಆಕೆಯ ಹಂಬಲ ಮಾತ್ರ ತಗ್ಗಿರಲಿಲ್ಲ. ಆಕೆಯ ಅಂತರಂಗದಲ್ಲಿ ಗೋಪಿಯ ಬಗೆಯಲ್ಲಿಯ ಆಸೆ ಇನ್ನೂ ಉಳಿದಿತ್ತೆ? ಯಾರು ಬಲ್ಲರು? ಬಹಿರಂಗವಾಗಿ ಅಂಥ ಸಂದೇಹಕ್ಕೆ ಆಸ್ಪದವಿರಲಿಲ್ಲ. ಆಕೆ ತಾನಾಗಿಯೇ ಹಿಂದಕ್ಕೆ ಸರಿದು ಗೋಪಿಯ ಮದುವೆಯ ಮಾರ್ಗವನ್ನು ಸುಗಮವಾಗಿಸಿರಲಿಲ್ಲವೆ? ಹೀಗಿದ್ದರೂ ವತ್ಸಲೆಗೆ ತನಗೆ ತಿಳಿಯದಲೆ ಏನಾದರೂ ಆಯಿತು, ಗೋಪಿಯ ಹತ್ತಿರವಿರಬೇಕು; ಆತನೊಡನೆ ಮಾತನಾಡುತ್ತಿರಬೇಕು, ಎಂದೇ ಅನಿಸುತ್ತಿತ್ತು. ಆತನ ಹತ್ತಿರದಲ್ಲಿದ್ದಾಗ ಹೃದಯ ಯಾವ ಸ್ಪಷ್ಟವಾದ ಬಯಕೆಗಳನ್ನು ತಳೆಯದಿದ್ದರೂ ಯಾವುದೊ ಒಂದು ಬಗೆಯ ಸಂತಸವನ್ನು ಅನುಭವಿಸುತ್ತಿದ್ದಿರಬೇಕು. ಸ್ಪಷ್ಟವಾದ ಯಾವ ಅಪೇಕ್ಷೆಯೂ ಇರದ್ದರಿಂದ ಆತನ ಸಾನ್ನಿಧ್ಯವನ್ನು ಬಯಸುವುದು ತಪ್ಪೆಂದಾಗಲಿ, ಹಾಗೆ ತಾನು ಬಯಸಬಾರದೆಂಬುದಾಗಲಿ ವತ್ಸಲೆಯ ಯೋಚನೆಗೆ ಹೊಳೆಯುತ್ತಲೆ ಇರಲಿಲ್ಲ. ನೆಲದ ಮೇಲೆ ಬೆಳೆದ ಗರಿಕೆಯನ್ನು ಕಡಿದು ಹಾಕಿದರೂ ನೆಲದ ಒಡಲಲ್ಲಿ ಆಳವಾಗಿ, ದೂರವಾಗಿ ಹಬ್ಬಿಕೊಂಡು ನಿಂತ ಬೇರುಗಳು ಮತ್ತೆ ಚಿಗಿಯುವುದಿಲ್ಲವೆ? ಹಾಗೆ ವತ್ಸಲೆಯ ಅಂತರಂಗವನ್ನೆಲ್ಲ ವ್ಯಾಪಿಸಿ ನಿಂತ ಹಳೆಯ ಹಂಬಲದ ಬೇರುಗಳು ಮತ್ತೆ ಚಿಗಿಯುವುದರಲ್ಲಿದ್ದವೆ? ಹಾಗೆ

ಸ್ಪಷ್ಟವಾಗಿ ಹೇಳುವುದು ಕಷ್ಟ. ಆದರೆ ಒಳಗಡೆಯಲ್ಲಿ ಬೇರುಗಳು ಉಳಿದದ್ದು ಮಾತ್ರ ನಿಜ ಆ ಬೇರುಗಳಲ್ಲಿಯ ಜೀವಸತ್ವವೇ ಆಕೆ ಗೋಪಿಯನ್ನು ರಂಗಧೂಳಿಯ ಕಡೆಗೆ ಕರೆದೊಯ್ಯುವಂತೆ ಒತ್ತಾಯ ಪಡಿಸುತ್ತಿದ್ದರೂ ಇರಬಹುದು. ಆಕೆ ಊರಿನಿಂದ ಬಂದಾಗಿನಿಂದ ಗೋಪಿಯನ್ನು ಕೇಳುತ್ತಲೇ ಇದ್ದಳು. " ಎಂದಿಗೆ ಹೋಗುವುದು ? " ಎಂದು

ಶಾಂತಳ ಸಹವಾಸ ಸುಖದಲ್ಲಿ ಗೋಪಿ ನಿಶ್ಶಂಕನಾಗಿದ್ದ. ರಂಗಧೂಳಿಗೆ ಹೋಗುವುದು ಆತನಿಗೆ ಬೇಡವಾಗಿರಲಿಲ್ಲ. ಹಾಗೆಯೆ ಹೋಗಿಬರುವ ಮಾತಾಗಿದ್ದರೆ ಬೇಕಾದ ಒಂದು ಸಾಯಂಕಾಲದ ಮಟ್ಟಿಗೆ ಹೋಗಿ ಅಲೆದಾಡಿಕೊಂಡು ಬರಬಹುದಾಗಿತ್ತು. ಕನಿಷ್ಠಪಕ್ಷ ಒಂದು ವಾರವಾದರೂ ಅಲ್ಲಿಯೇ ಇರಬೇಕೆಂದು ವತ್ಸಲೆಯ ಒತ್ತಾಯ. ಚೈತ್ರ ವೈಶಾಖಗಳ ಬಹುಭಾಗವನ್ನು ಹೆಚ್ಚು ಕಡಿಮೆ ಅಲ್ಲಿಯೇ ಕಳೆದಿದ್ದ ಗೋಪಿ ವತ್ಸಲೆ ಬರುವ ಮುನ್ನ ನಾಲ್ಕೆಂಟು ದಿನ ಮಾತ್ರ ರಂಗಧೂಳಿಯಿಂದ ಹಿಂದಿರುಗಿದ್ದ. ಮತ್ತೆ ಇಷ್ಟು ಬೇಗನೆ ಅಲ್ಲಿರಲು ಹೋಗುವುದೆ ? ಎಂಬ ಯೋಚನೆ ಒಂದು ಕಡೆಯಾದರೆ ತಾವಿಬ್ಬರೇ ಇದ್ದಾಗ ಹೇಗಿದ್ದರೂ ಆಯಿತು; ಅನನುಕೂಲಗಳೂ ಅನುಕೂಲಗಳಾಗಿಯೇ ಪರಿಣಮಿಸುತ್ತವೆ. ಆದರೆ ಇನ್ನೊಬ್ಬರು ಬಂದಾಗ ? ಎಲ್ಲವೂ ಬೇರೆಯಾಗಿ ಬಿಡುತ್ತದೆ ವತ್ಸಲೆ ಬಂದರೆ ತಮ್ಮಿಬ್ಬರಿಗೆ ಖಂಡಿತವಾಗಿಯೂ ಆತಂಕವೆಂಬ ಯೋಚನೆಯೂ ಬಾರದಿರಲಿಲ್ಲ. ಹೀಗಾಗಿ ಗೋಪಿ ಅಷ್ಟೊಂದು ಉತ್ಸಾಹವನ್ನು ತೋರಿರಲಿಲ್ಲ. ಆದರೆ ವತ್ಸಲೆಯನ್ನು ನಿರಾಶೆಗೊಳಿಸುವುದೂ ಆತನಿಗೆ ಬೇಡವಾಗಿತ್ತು. ಅದಕ್ಕೆ ಸರಿಯಾಗಿ ಇಂದು ವತ್ಸಲೆ ಹಟವನ್ನೇ ಹಿಡಿದ ಹಾಗಿತ್ತು

" ಯಾಕೆ, ಗೋಪಿ, ಹೋಗುವ ಹಾಗಿಲ್ಲವೆ ? ರಂಗಧೂಳಿಯಲ್ಲಿ ಒಂದು ವಾರ ಇರುವುದು ಸಾಧ್ಯವಿರದಿದ್ದರೆ ನಾನು ನಾಳೆ ನಾಡಿದ್ದು ಹೊರಟುಬಿಡುತ್ತೇನೆ. ಇಲ್ಲಿ ಇದ್ದು ಏನು ? ತೀರ ಬೇಸರವಾಗಿದೆ ನನಗಂತೂ. ಸುಮ್ಮನೆ ಊರಿಗೆ ಹೊರಟು ಹೋದರೆ ಏನಾದರೂ ಕೆಲಸವಾದರೂ ಆದೀತು. ಏನಾದರೊಂದು ಕಾರ್ಯಕ್ರಮ ಎಂದು ಮಾಡಿಕೊಳ್ಳದಿದ್ದರೆ ಇಲ್ಲಿ ಹೊತ್ತು ಸರಿಯುವುದೇ ಕಷ್ಟವಾಗುತ್ತದೆ. ಏನೆಂಬುದನ್ನು ಇಂದು ನೀನು ನಿರ್ಧಾರವಾಗಿ ಹೇಳಲೇಬೇಕು— "

" ಹೋಗುವಾ. ಯಾಕೆ ಇಷ್ಟು ಅವಸರ ? "

" ಅವಸರ ಇಲ್ಲ—ಆದರೆ ಬೇಸರ ಇದೆ ! "

" ನಾವು ಅಲ್ಲಿಂದ ಬಂದು ಇನ್ನೂ ಎಂಟು ದಿನವಾದರೂ ಆಯಿತೊ ಇಲ್ಲವೊ ! ಇಷ್ಟರಲ್ಲಿ ಮತ್ತೆ ಹೋಗುತ್ತೇವೆಂದರೆ— "

" ಯಾಕೆ, ಮಾವ ಬೇಡ ಎನ್ನುತ್ತಾರೆಯೆ ? ನಿನಗೆ ಹೋಗಬೇಕೆನಿಸಿದಾಗ ಅವರು ಬೇಡ ಎಂದರೂ ಒಳ್ಳೆ ಕೇಳುವವ ! ಅಲ್ಲಿಂದ ಬಂದು ಎಂಟೇ ದಿನ ಆದರೆ ಏನಾಯಿತು ? ಮತ್ತೆ ಹೋಗಬಾರದೆಂದಿಯೆ ? ನಾನು ಅತ್ತೆಗೇ ಹೇಳಿಬಿಡುತ್ತೇನೆ—ಬೇಕಾದರೆ. "

" ಹೋಗುವಾ ಎಂದರೆ ಆಕೆ ಬೇಡ ಎನ್ನುತ್ತಾಳೆಯೆ ? "

" ಹಾಗಿದ್ದರೆ ಯಾಕೆ ಮುಂದೂಡುತ್ತಿದ್ದೀ ? "

" ಕಾರಣ ಇಷ್ಟೆ. ನಿನ್ನೆ ಬೆಳಿಗ್ಗೆ ಶಾಸ್ತ್ರಿಗಳು ಬಂದಿದ್ದರಂತೆ. ನಾಳಿದ್ದು ವಟಪೌರ್ಣಿಮೆ, ಸಾವಿತ್ರಿಯ ಪೂಜೆಗಾಗಿ ಎಂದು ಶಾಂತಳನ್ನು ಎರಡು ದಿನದ ಮಟ್ಟಿಗೆ ಕಳಿಸಿಕೊಡಬೇಕು ಎಂದು ಹೇಳಿದರಂತೆ— "

" ಅದಕ್ಕೇನಾಯಿತು ? "

" ಆಗುವುದೇನು ? ಶಾಂತಾ ಅಲ್ಲಿಗೆ ಹೋದರೆ ಆಕೆ ಬಂದ ಮೇಲಲ್ಲವೆ ನಾವು ಹೋಗಬೇಕಾದದ್ದು ? ಅದಕ್ಕೆ ಹೇಳಿದೆ, ಆಮೇಲೆ ಹೋಗುವಾ ಎಂದು. "

" ಆಮೇಲೆ ಯಾತಕ್ಕೆ ಹೋಗುವುದು ? ಹುಣ್ಣಿಮೆ ಇದೆ ಎಂದೇ ಹೋಗಬೇಕಾದದ್ದು. ಕತ್ತಲು ದಿನ ಪ್ರಾರಂಭವಾದ ಮೇಲೆ ಹೋಗಬೇಕಾದರೆ ಹೋಗುವುದೇ ಬೇಕಿಲ್ಲ. "

ವತ್ಸಲೆಯ ಮಾತು ನಿಜ ಎನಿಸಿತು ಗೋಪಿಗೆ. ಆದರೆ ಶಾಂತಳನ್ನು ಕರೆದುಕೊಂಡು ಹೋಗಲು ಆಗಲೆ ಒಪ್ಪಿಗೆಯನ್ನಿತ್ತಿದ್ದ. ಅಂದೇ ಸಾಯಂಕಾಲ ಆಕೆ ತವರಿಗೆ ಹೋಗುವವಳಿದ್ದಳು. ಇದನ್ನು ಹೇಗೆ ಬಗೆಹರಿಯಿಸಬೇಕೆಂಬುದು ತಿಳಿಯದೆ ಕೇಳಿದ.

" ನೀನು ಇನ್ನು ಎಷ್ಟು ದಿನ ಇರುವವಳು ? "

" ಹೆಚ್ಚಾದರೆ ಇನ್ನು ಹದಿನೈದು ದಿವಸ. ಆಗಲೆ ಬಂದು ಹತ್ತು ದಿನವಾಯಿತು. ಹೋದರೆ ನಾಳೆ ನಾಡಿದ್ದು ಇಷ್ಟರಲ್ಲಿ ಹೋಗಿ ಒಂದೆರಡು ದಿನ ಇದ್ದು

ಬಂದರೂ ಆಯಿತು."

"ನಾಳೆಗೇ ಹೋಗಬೇಕಾದರೆ ಸಾವಿತ್ರಿಯ ಪೂಜೆ ?"

ವತ್ಸಲೆ ಯೋಚಿಸಿದಳು. ಅಲ್ಲಿಗೆ ಹೋಗಲೇಬೇಕೆಂಬ ಹಟದಿಂದಲೇ ಆಕೆ ಯೋಚಿಸುತ್ತಿದ್ದಳಾದ್ದರಿಂದ ತನ್ನ ಇಚ್ಛೆ ಸಫಲವಾಗಬೇಕಾದ ಹಾಗೆಯೆ ಹಂಚಿಕೆ ಹಾಕುತ್ತಿದ್ದಳು. ಕೊನೆಗೆ ವತ್ಸಲೆಗೆ ಒಂದು ಯೋಜನೆ ಹೊಳೆಯಿತು.

"ಹಾಗಿದ್ದರೆ ಒಂದು ಕೆಲಸ ಮಾಡಿಬಿಡಬಹುದು. ನಾವೆಲ್ಲರೂ ಸೇರಿಯೆ ಅಲ್ಲಿಗೆ ಯಾಕೆ ಹೋಗಬಾರದು ?"

"ಎಲ್ಲರೂ ಅಂದರೆ ?"

"ನಮ್ಮ ಮನೆಯವರು, ಶಾಸ್ತ್ರಿಗಳ ಮನೆಯವರು. ಅಲ್ಲಿಗೇ ಹೋಗಿಬಿಟ್ಟರೆ ಪೂಜೆಯನ್ನೂ ಅಲ್ಲಿಯೆ ಮಾಡಿಬಿಡಬಹುದು. ಎಲ್ಲರೂ ಸೇರಿ ಒಂದು ಕಡೆ ಸಂತೋಷವಾಗಿ ಎರಡು ದಿನ ಇದ್ದ ಹಾಗೂ ಆಗುತ್ತದೆ. ಹಾಗೆ ಯಾಕೆ ಮಾಡಬಾರದು ?"

ಗೋಪಿಯ ಮನಸ್ಸನ್ನು ಆ ಯೋಜನೆ ಹಿಡಿಯಿತು. ಎರಡೂ ಮನೆಯವರು ಸೇರಿ ರಂಗಧೂಳಿಗೆ ಇನ್ನೂವರೆಗೆ ಹೋಗಿರಲೇ ಇಲ್ಲ. ತನ್ನ ಅತ್ತೆ ರಂಗಧೂಳಿಯನ್ನು ನೋಡಿದ್ದಾರೆಯೊ ಇಲ್ಲವೊ ! ಹೌದು. ವತ್ಸಲೆಯ ಯೋಜನೆ ಸರಿಯಾದದ್ದೆ. ಆದರೆ ತಾಯಿ, ತಂದೆ, ಶಾಸ್ತ್ರಿಗಳು ಒಪ್ಪುತ್ತಾರೆಯೆ ?

"ವಿಚಾರವೇನೊ ಚೆನ್ನಾಗಿದೆ. ಆದರೆ ಅವರೆಲ್ಲರೂ ಒಪ್ಪಬೇಕಲ್ಲ ?"

"ಅತ್ತೆಯನ್ನು ಒಪ್ಪಿಸುವುದು ನನ್ನ ಕೆಲಸ. ಶಾಸ್ತ್ರಿಗಳನ್ನು ಒಪ್ಪಿಸುವುದು ನಿನ್ನ ಕೆಲಸ. ನೀನು ಹೇಳಿದರೆ ಅವರು ಬೇಡ ಎನ್ನುತ್ತಾರೆಯೆ ?"

"ಯಾರಿಗೆ ಗೊತ್ತು ?"

"ಏನೂ ಅನ್ನುವುದಿಲ್ಲ. ಅಷ್ಟನ್ನು ಮಾಡಿಬಿಡು."

"ಹಾಗಿದ್ದರೆ ನೀನು ಮೊದಲು ಅಮ್ಮನನ್ನು ಕೇಳು. ಆಕೆ ಒಪ್ಪಿದರೆ ನಾನು ಶಾಸ್ತ್ರಿಗಳೆದುರು ಪ್ರಸ್ತಾಪ ಹೂಡುವೆ"

ವತ್ಸಲೆ ತನ್ನ ಬಯಕೆಯನ್ನು ಸಾಧಿಸಿದ ಗೆಲುವಿನಲ್ಲಿಯೇ ಸೋದರತ್ತೆಯ ಕಡೆಗೆ ಓಡಿದಳು. ಆಕೆ ಎಣಿಸಿದ ಹಾಗೆ ಅವರನ್ನು ಮನವೊಲಿಸುವುದು ಕಷ್ಟವೇನೂ ಆಗಲಿಲ್ಲ.

" ಇದೆಲ್ಲ ನಿನ್ನ ಆಟವ್ರೊ, ಗೋಪಿಯದೊ? ಗೋಪಿಯದೇ ಇರಬೇಕು. ಎರಡು ದಿನವೂ ಆಕೆಯನ್ನು ಬಿಟ್ಟಿರಲಾರದಕ್ಕೆ ಇದೆಲ್ಲ ಹಂಚಿಕೆ. ನನಗೆ ಅಷ್ಟೂ ಗೊತ್ತಾಗುವುದಿಲ್ಲವೆ ? " ಎಂದಿದ್ದರು ಕಮಲಮ್ಮನವರು. ಅವರ ಮುಖಾಂತರ ರಾಯರವರೆಗೂ ಸಮಾಚಾರ ಹೋಗಿ ಅವರ ಮನ್ನಣೆಯನ್ನು ಪಡೆದಿತ್ತು. ಶಾಸ್ತ್ರಿಗಳೊಬ್ಬರು ಒಪ್ಪಿದರೆ ವತ್ಸಲೆಯ ಯೋಜನೆ ಕೈಗೂಡಿದ ಹಾಗೆಯೆ. ರಾಯರು ವತ್ಸಲೆಯನ್ನು ಕಂಡಾಗ ಕೇಳಿದ್ದರು.

" ಏನೇನು ಆಟಗಳನ್ನು ಹುಡುಕುತ್ತೀರೊ ? ನಮ್ಮನ್ನು ಬೇರೆ ಸೇರಿಸಿ ಬಿಡುತ್ತೀರಿ ಅದರಲ್ಲಿ. ಹೋಗಬೇಕಿದ್ದರೆ ನೀವಷ್ಟೇ ಹೋಗಿ ಬರಲಾಗುವುದಿಲ್ಲವೆ ? ನಾವು ಹೊರಡುವುದೆಂದರೆ ' ಸಹಕುಟುಂಬ ಸಹಪರಿವಾರ ' ಎಂದು ಹೇಳುತ್ತಾರಲ್ಲವೆ ಹಾಗೆ. ನಮ್ಮನ್ನು ಕಟ್ಟಿಕೊಂಡು ಏನು ಮಾಡುತ್ತೀರಿ ? " ವತ್ಸಲೆ ಉತ್ತರ ಹೇಳಿದ್ದಳು. " ಅದೇನಿಲ್ಲ. ಎಲ್ಲರೂ ಕೂಡಿ ಹೋಗುವುದೇ ಮೋಜು. ಗ್ರ್ಯಾಂಡ್ ಪಿಕ್‌ನಿಕ್ ಆಗುತ್ತದೆ. " ರಾಯರು ನಕ್ಕು ಹೇಳಿದ್ದರು " ಸರಿ-ಸರಿ. ನೀನು ಪುಣೆ ಮುಂಬಯಿಗಳಲ್ಲಿಯಲ್ಲವೆ ಇರುತ್ತಿದ್ದದ್ದು ? ಹಳ್ಳಿಗೆ ಬಂದರೂ ನಿನಗೆ ಪಿಕ್‌ನಿಕ್ ಬಿಡಲಿಕ್ಕಾಗುತ್ತದೆಯೆ ? " ಎಂದು.

ಮಧ್ಯಾಹ್ನದಲ್ಲಿ ಗೋಪಿ ಶಾಸ್ತ್ರಿಗಳ ಮನೆಗೆ ಹೋಗಿ ವತ್ಸಲೆಯ ಯೋಜನೆಯನ್ನು ವಿವರಿಸಿದ್ದ. ಕಮಲಮ್ಮನವರ ಮಾತನ್ನೇ ಶಾಸ್ತ್ರಿಗಳು ಗೋಪಿಗೆ ನಕ್ಕು ಆಡಿದ್ದರು. ಆದರೆ ಕೂಡಲೆ ಒಪ್ಪಲು ಮನಸ್ಸಾಗಲಿಲ್ಲ. ಬೇಡ ಎನ್ನಲಿಕ್ಕೆ ಸ್ಪಷ್ಟವಾದ ಕಾರಣಗಳಿರಲಿಲ್ಲ. ಆದರೆ ಬೇಡ ಎನಿಸುತ್ತಿತ್ತು. ರಾಯರ ಹತ್ತಿರವೇ ಹೋಗಿ ಮಾತು ಮುಗಿಯಿಸಿದರಾಯಿತು ಎಂದು ಗೋಪಿಯೊಡನೆ ಬಂದೇ ಬಿಟ್ಟಿದ್ದರು.

ಶಾಸ್ತ್ರಿಗಳಿಗೆ ಹೊರಡುವ ಮನಸ್ಸಿರಲಿಲ್ಲ. ರಾಯರು ಅರ್ಧ ಹಾಗೆ, ಅರ್ಧ ಹೀಗೆ, ಹೋಗಿಬಂದರೂ ಆಯಿತು ಎನ್ನುವ ಮನಃಸ್ಥಿತಿಯಲ್ಲಿದ್ದರು. ಈ ಯೋಜನೆ ವತ್ಸಲೆಯಿಂದ ಪುರಸ್ಕೃತವಾಗಿರದಿದ್ದರೆ ಕಮಲಮ್ಮನವರು ಉತ್ಸಾಹ ತೋರುತ್ತಿರಲಿಲ್ಲ. ಆದರೆ ಆಕೆಗಾಗಿ ಅವರು ಏನನ್ನೂ ಮಾಡಲು ಸಿದ್ಧರಿದ್ದರು. ರಂಗಧೂಳಿಗೆ ಹೋಗಿಬರುವುದು ಯಾವ ದೊಡ್ಡ ಕೆಲಸ ? ಅದರಿಂದಾಗಿ ವತ್ಸಲೆಗೆ ಸಂತೋಷವೆನಿಸುತ್ತಿದ್ದರೆ ಅವರು ಅದಕ್ಕಾಗಿ ಸಿದ್ಧರಾಗಿಯೆ ಇದ್ದರಲ್ಲದೆ ರಾಯರ, ಶಾಸ್ತ್ರಿಗಳ ಆಕ್ಷೇಪಣೆಗಳನ್ನೆಲ್ಲ ಎದುರಿಸಿ ಸಮಾಧಾನ

ಹೇಳಲೂ ಮುಂದುವರಿದಿದ್ದರು. ಕಮಲಮ್ಮನವರ ಮುಂದಾಗಿರುವಾಗ ಶಾಸ್ತ್ರಿಗಳ ಹೆಂಡತಿಯನ್ನು ಕೇಳಬೇಕೆ? ಗೋಪಿ ಮಾತ್ರ ತೋರಿಕೆಯ ತಾಟಸ್ಥ್ಯವನ್ನು ತಾಳಿದ್ದ. ಹೀಗಾಗಿ ಕೊನೆಗೆ ರಾಯರು ಶಾಸ್ತ್ರಿಗಳು ಇಬ್ಬರೂ ಒಪ್ಪಬೇಕಾಯಿತು. ಹೆಂಡತಿಯ ಉತ್ಸಾಹವನ್ನು ನೋಡಿ ರಾಯರು "ನಿನಗೇನು ಉತ್ಸಾಹ ಬಂದಿದೆಯೆ ? ಹೆಂಗಸರಿಗೆ ವಯಸ್ಸಾದ ಹಾಗೆ— " ಎಂದು ನಕ್ಕು ಬಿಟ್ಟಿದ್ದರಾದರೆ ಶಾಸ್ತ್ರಿಗಳು ಮನೆಯಲ್ಲಿ "ಶುದ್ಧ ಅವಿವೇಕ. ನಿನಗೇನು ಬಂದಿದೆಯೆ, ಹೀಗೆ ಮಕ್ಕಳ ಹಾಗೆ ಕುಣಿದಾಡಲಿಕ್ಕೆ ? " ಎಂದಿದ್ದರು. ಏನಿದ್ದರೂ ಕಾರ್ಯಕ್ರಮ ಗೊತ್ತಾಯಿತು. ಮರುದಿನ ಮುಂಜಾನೆ ಗೋಪಿ-ಶಾಂತಾ-ವತ್ಸಲೆಯರು ಹೊರಟು ಮಧ್ಯಾಹ್ನಕ್ಕೆ ಸಿದ್ದಪ್ಪನ ಬಂಡಿಯನ್ನು ಕಳಿಸುವುದೆಂದೂ, ಸಾಯಂಕಾಲಕ್ಕೆ ಹಿರಿಯರೆಲ್ಲರೂ ಎರಡು ಮೂರು ದಿನಕ್ಕೆ ಬೇಕಾಗುವ ಸಾಮಗ್ರಿಗಳೆಲ್ಲವನ್ನೂ ತೆಗೆದುಕೊಂಡು ಬಂಡಿಯಲ್ಲಿ ಬರುವುದೆಂದೂ ಗೊತ್ತಾಯಿತು.

*　　*　　*

ಮರುದಿನ ಮುಂಜಾನೆ ಒಂಬತ್ತೂವರೆಯ ಸುಮಾರಿಗೆ ಮೂವರೂ ಹೊರಟರು. ಗೋಪಿ ಅಷ್ಟೊಂದು ಉಲ್ಲಾಸದಲ್ಲಿರಲಿಲ್ಲ. ಶಾಂತಳೂ ಅಷ್ಟೆ. ಈ ಎಲ್ಲ ಗೊಂದಲದಿಂದ ದೂರವಾಗಿದ್ದು ತಾಯಿ ತಂದೆಗಳ ಹತ್ತಿರ ಒಂದೆರಡು ದಿವಸ ಇರುವುದು ಆಕೆಗೆ ಇಷ್ಟವಿತ್ತೆಂದು ಕಾಣುತ್ತದೆ. ಆದರೆ ಗೋಪಿಯಿಂದ ದೂರವಾಗಿರಲೂ ಮನಸ್ಸಾಗುತ್ತಿರಲಿಲ್ಲ. ಇಷ್ಟಕ್ಕಾಗಿಯೆ ಆಕೆ ಇವರ ಜೊತೆಯಲ್ಲಿ ಹೊರಟಹಾಗಿತ್ತು. ಆದರೆ ಇವರಿಬ್ಬರ ಉತ್ಸಾಹಾಭಾವವನ್ನು ಮೀರಿಸುವ ಉಲ್ಲಾಸ ವತ್ಸಲೆಯಲ್ಲಿದ್ದಿತು. ಆಕೆಯ ನಡೆನುಡಿಗಳೇ ಅದನ್ನು ಹೇಳುತ್ತಿದ್ದವು. ದಾರಿಗುಂಟ ಮಾತನಾಡುತ್ತಿದ್ದವಳು ಆಕೆ. ಗೋಪಿ ಉತ್ತರ ಹೇಳುತ್ತಿದ್ದ. ಶಾಂತಾ ಮಾತ್ರ ಸುಮ್ಮನಿದ್ದು ಕೇಳುತ್ತ ಹೊರಟಿದ್ದಳು-ವತ್ಸಲೆಯ ಬೆಡಗು ಬಿನ್ನಾಣಗಳನ್ನು ನೋಡಿ ಅಚ್ಚರಿಪಡುತ್ತಿದ್ದವಳಂತೆ.

"ಅಲ್ಲ ಗೋಪಿ, ಮದುವೆಯಾಗಿ ಇಷ್ಟು ದಿವಸವಾದರೂ ಶಾಂತಾ ಮಾತೇ ಆಡುವುದಿಲ್ಲವಲ್ಲ ? ನಾವು ಶಾಲೆಯಲ್ಲಿದ್ದಾಗ ಎಷ್ಟು ಮಾತನಾಡುತ್ತಿದ್ದವಳು ಈಗ ಮೂಕಳಾಗಿದ್ದಾಳೆ. ಅದೇನು ? ನಿನ್ನ ಜೊತೆಯಲ್ಲಾದರೂ ಮಾತನಾಡುತ್ತಾಳೆಯೆ ? "

" ಹತ್ತು ಮಾತನಾಡಿಸಿದರೆ ಒಂದು ಉತ್ತರ ಹೇಳುತ್ತಾಳೆ ! "

" ಯಾಕೆ ಎಂದು ಕೇಳುವುದಿಲ್ಲವೆ ನೀನು ? "

" ನಾಚಿಕೆಯಾಗುತ್ತದಂತೆ ! "

" ಮದುವೆಯಾದರೂ ? "

" ಆಕೆಯನ್ನೇ ಕೇಳು. ನಾನೇನು ಹೇಳಲಿ ? "

ಈ ಮಾತಿನಿಂದಾಗಿ ವತ್ಸಲೆ ಆಕೆಯನ್ನೇ ನೇರವಾಗಿ ಕೇಳಿದ ಪ್ರಶ್ನೆಯಿಂದ ಶಾಂತಾ ಇನ್ನೂ ಹೆಚ್ಚಾಗಿ ನಾಚಿಕೊಂಡು ಸುಮ್ಮನಾದಳೇ ಹೊರತು ಉತ್ತರ ಹೇಳಲಿಲ್ಲ. ವತ್ಸಲೆ ಮತ್ತೆ ಕೇಳಿದಳು.

" ಅಥವಾ ನಾನಿದ್ದೇನೆಂದು ಈ ಮೂಕತನವೊ ? ಹಾಗಿದ್ದರೆ ಹೇಳಿಬಿಡಿರಿ ಇಬ್ಬರೂ ನಾನು ಹೊರಟು ಬಿಡುತ್ತೇನೆ. "

" ಎಲ್ಲಿಗೆ ? " ಗೋಪಿ ಕೇಳಿದ.

" ಎಲ್ಲಿ ಏನು ? ತಿರುಗಿ ಹೋಗಿ ಮಧ್ಯಾಹ್ನ ಅವರೆಲ್ಲರ ಜೊತೆಯಲ್ಲಿ ಮತ್ತೆ ಬರುತ್ತೇನೆ. "

" ಅಷ್ಟೊಂದು ಅವರ ಜೊತೆಯಲ್ಲಿಯೇ ಇರಬೇಕಾಗಿದ್ದರೆ ಈ ಎಲ್ಲ ಕಾರ್ಯಕ್ರಮ ಯಾತಕ್ಕೆ ಬೇಕಿತ್ತು ? ಅಲ್ಲದ, ಸಂಜೆ ಅವರೊಡನೆ ಬಂದ ಮೇಲಾದರೂ ಮತ್ತೆ ನಮ್ಮ ಹತ್ತಿರವೇ ಇರಬೇಕು. ಈಕೆಯ ಹತ್ತಿರ ನಾನಿರಬೇಕು. ನನ್ನ ಹತ್ತಿರ ಈಕೆ ಇರಬೇಕು. ಒಬ್ಬರನ್ನು ಬಿಟ್ಟು ಒಬ್ಬರು ಇರುವ ಹಾಗಿಲ್ಲ. ಅಂದಮೇಲೆ ಈ ಮೂಕತನವೂ ಇದ್ದದ್ದೇ ! "

ಎಂದು ಗೋಪಿ ನಕ್ಕ. ಶಾಂತಾ ನಾಚಿ ಮುಖ ತಿರುವಿದಳು.

" ಒಬ್ಬರನ್ನೊಬ್ಬರು ಬಿಟ್ಟು ಇರುವ ಹಾಗಿಲ್ಲ ಅನ್ನು, ಹಾಗಾದರೆ. "

" ಇಷ್ಟು ದಿವಸ ಬಿಟ್ಟು ಬೇರೆಬೇರೆಯಾಗಿ ಇದ್ದದ್ದಾಯಿತಲ್ಲವೆ ? "

" ಬಹಳ ಬಿಟ್ಟು ಇದ್ದವ. ಮದುವೆಯಾದಾಗಿನಿಂದ ಒಂದು ದಿನದ ಮಟ್ಟಿಗೂ ತವರುಮನೆಗೆ ಹೋಗಿಲ್ಲವಂತೆ— "

" ಮದುವೆಯಾದ ಮೇಲೆ ಬಿಟ್ಟು ಇಲ್ಲ ನಿಜ. ಆದರೆ ಮದುವೆಗೆ ಮೊದಲು ? ವರ್ಷಾನುವರ್ಷವೂ ಬೇಕಾದಷ್ಟು ದೂರವಾಗಿ ಇದ್ದುದಾಗಿದೆಯಿಲ್ಲ ! "

" ಓ, ಹಾಗೊ ? ಸರಿಯಾಯಿತು ! "

ಎಂದು ವತ್ಸಲೆ ಹೇಳಿದ್ದಕ್ಕೆ ಮೂವರೂ ನಕ್ಕುಬಿಟ್ಟರು. ಇಂಥ ಮಾತು ಗಳಲ್ಲಿ ದಾರಿ ಸರಿಯುತ್ತಿತ್ತು. ರಂಗಧೂಳಿಯನ್ನು ಸೇರಿದಾಗ ನಡುಮಧ್ಯಾಹ್ನ ವಾಗಿತ್ತು. ನಾಲ್ಕೆಂಟು ದಿನ ಮೊದಲು ಮಳೆಗಾಲದ ಮೊದಲ ಮಳೆ ಬಿದ್ದು ಅಲ್ಲಲ್ಲಿ ನೆಲ ಚಿಗುರೊಡೆದಿತ್ತು. ವಸಂತದಲ್ಲಿ ಚಿಗಿತ ತಳಿರುಗಳೆಲ್ಲವೂ ಈಗ ಹಸಿರಾಗಿ ಮೆರೆಯುತ್ತಿದ್ದವು. ಮುಂಬರುವ ಮಳೆಯ ರಭಸಕ್ಕೆ ಸನ್ನದ್ಧವಾ ದ್ದಂತೆ ಬೆಟ್ಟಬಾನುಗಳೆರಡೂ ಸಡ್ಡು ಹೊಡೆದು ನಿಂತ ಹಾಗಿದ್ದವು. ಜೇಷ್ಠದ ಬಿಸಿಲು ಸಮರಸನ್ನಾಹದ ಚುರುಕಿನಿಂದ ಉರಿಯುತ್ತಿತ್ತು. ಪಶ್ಚಿಮದಾಚೆ ಯಿಂದ ಬರಲಿದ್ದ ಮೇಘಮಾಲಿಕೆಗೆ ಪೂರ್ವಭಾವಿಯಾಗಿ ಒಂದೆರಡು ಕಿರು ಮೋಡಗಳು ಬಾನಿನಂಚಿನಲ್ಲಿ ತೂಗಾಡುತ್ತಿದ್ದವು. ಕೆರೆಯಲ್ಲಿಯ ನೀರು ನಿರಭ್ರವಾದ ನೀಲಾಕಾಶಕ್ಕೆ ಕನ್ನಡಿ ಹಿಡಿದ ಹಾಗೆ ನಿಂತಿತ್ತು. ನಡುವೆ ವಿಸ್ತಾರ ವಾಗಿ, ಗೆಲುವಾಗಿ ಹರಹಿ ನಿಂತ ಕಮಲಗಳ ಬಳ್ಳಿ ಹೂವುಮೊಗ್ಗುಗಳ ಭಾರ ವನ್ನು ತಡೆಯಲಾಗದೆಂಬಂತೆ ಓಲಾಡುತ್ತಿತ್ತು. ಅಂಥ ಬಿಸಿಲಲ್ಲಿಯೂ ಗೋಪಿಯ ಕಾಲುಗಳು ಆ ಬಳ್ಳಿಯ ಸೊಬಗನ್ನು ನೋಡಿ ತಡೆದುವು. "ಏನು ಇದರ ಚೆಲುವು ?" ಎಂದು ಉಸಿರಿದ ಇನ್ನೆಲ್ಲಿಯೊ ನೋಡುತ್ತಿದ್ದ ವತ್ಸಲೆಯ ದೃಷ್ಟಿಯೂ ಆ ಕಡೆಗೆ ಹರಿಯಿತು.

"ಎಷ್ಟು ಸೊಗಸಾಗಿ ಬೆಳೆದಿದೆಯಲ್ಲವೆ ಬಳ್ಳಿ ! ಎಷ್ಟು ಕಮಲ ಅರ ಳಿವೆ ! ಇನ್ನೂ ಎಷ್ಟು ಅರಳಲಿವೆ ! ಓಹ್, ಚೆಲುವಿನ ಹೂವೆನ್ನಬೇಕು ಇದಕ್ಕೆ— "

ವತ್ಸಲೆ ತನ್ನಷ್ಟಕ್ಕೆಯೆ ಮಾತನಾಡಿಕೊಳ್ಳುತ್ತಿದ್ದ ಹಾಗಿತ್ತು. ಕಮಲಗಳ ಚೆಲುವು, ಸುತ್ತಲಿನ ವನರಾಜಿಯ ಬೆಡಗು ಆಕೆಯ ಚಿತ್ತವನ್ನು ಸೂರೆಗೊಂ ಡಿತ್ತು. ಬಿಸಿಲಿನ ಪರಿವೆಯೆ ಅವರಿಬ್ಬರಿಗೂ ಇದ್ದ ಹಾಗಿರಲಿಲ್ಲ. ಶಾಂತಾ ಬೇಸರಪಡುತ್ತಿದ್ದಳೆ ? ಬಿಸಿಲು ತಾಗುತ್ತಿತ್ತು ನಿಜ ಆದರೆ ಗೋಪಿಯ ಮುಖ ದಲ್ಲಿಯ ಸಂತೃಪ್ತಿಯನ್ನು ನೋಡುವುದೇ ಆಕೆಗೆ ಒಂದು ಸಂತೃಪ್ತಿ. ಗೋಪಿ ಕಮಲಗಳನ್ನು ನೋಡುತ್ತಿದ್ದನಾದರೆ ಶಾಂತಾ ಗೋಪಿಯ ಮುಖವನ್ನು ನೋಡುತ್ತಿದ್ದಳು. ಆಕೆಯಲ್ಲಿ ಕವಿತ್ವವಿದ್ದರೆ ಆನಂದದಿಂದ ಅರಳಿದ ಗೋಪಿಯ ಆ ಮುಖವೂ ಕಮಲದ ಹಾಗೆಯೆ ಕಾಣುತ್ತಿತ್ತೆಂದು ಹೇಳಬಹುದಾಗಿತ್ತು. ವತ್ಸಲೆ ಕೇಳಿದಳು.

" ಕಮಲದ ಹೂವು ಇಷ್ಟು ಚೆಲುವಾಗಿದ್ದರೂ ಹೆಂಗಸರು ಅದನ್ನು ಮುಡಿಯುವುದಿಲ್ಲವೇಕೆ ಗೋಪಿ ? "

" ಅದು ಅವರಿಗೆ ಚೆಂದಾಗಿ ಕಾಣಿಸುತ್ತಿರಲಿಕ್ಕಿಲ್ಲ ! ರಿಬ್ಬನ್ನುಗಳಲ್ಲಿಯೆ ರಮಣೀಯತೆಯನ್ನು ಕಾಣುವವರಿಗೆ ಕಮಲದ ಕಮನೀಯತೆಯೇನು ಕಂಡೀತು ? "

" ಸಾಕು, ಸಾಕು. ನನ್ನ ರಿಬ್ಬನ್ ಮ್ಯಾಲೆ ಯಾಕೆ ಇಷ್ಟು ಕಣ್ಣು ? "

" ಅಲ್ಲ, ಕೇಳಿದೆ–ಹೇಳಿದೆ. " ಎಂದು ಗೋಪಿ ನಕ್ಕುಬಿಟ್ಟ.

" ಯಾಕೆ, ಹೇಳಬಾರದೆ ? "

" ಯಾಕೆ, ನನಗೇನು ಗೊತ್ತು ! ಹೆಂಗಸರ ಬೇಕು ಬೇಡಗಳು ಗಂಡಸರಿಗೆ ತಿಳಿಯುತ್ತವೆಯೆ ? ಅದೂ ಈಗಿನ ಕಾಲದಲ್ಲಿ ?—ಅಥವಾ ಹೀಗೂ ಇರಬಹುದು. ದೇವತೆಗಳಿಗೆ ಬೇಕಾದದ್ದು ಮನುಷ್ಯರಿಗೆ ಬೇಡವಾಗುತ್ತಿರಬೇಕು!"

" ಅಂದರೆ—? "

" ಸರಸ್ವತಿಗೆ ಕಮಲ ಇಷ್ಟ. ಲಕ್ಷ್ಮಿಯಂತೂ ಕಮಲದಲ್ಲಿಯೆ ಇರತಕ್ಕವಳು. ಕಮಲ ಬೇಡವಾದ ಹೆಂಗಸರಿಗೆ ಲಕ್ಷ್ಮೀ ಸರಸ್ವತಿಯರಿಬ್ಬರೂ ಬೇಡ ಎಂದಾಯಿತಲ್ಲವೆ ? "

" ಹೆಂಗಸರಿಗೆ ಲಕ್ಷ್ಮೀ ಸರಸ್ವತಿಯರಿಗೆ ಸಂಬಂಧವಿಲ್ಲದ ಹಾಗಾಯಿತು—ನಿನ್ನ ಮಾತು ನಿಜವಿದ್ದರೆ. ಆದರೆ ಹೆಂಗಸರಿಗೆ ಕಮಲ ಬೇಡವಾಗುತ್ತದೆ ಎನ್ನುವುದು ನಿನ್ನ ಅಭಿಪ್ರಾಯ, ಹೆಂಗಸರದಲ್ಲ. "

" ಅಥವಾ— "

" ಸಾಕು, ಸಾಕು ನಿನ್ನ ಊಹೆ. ನನಗಂತೂ ತುಂಬಾ ಸೇರಿಕೆಯಾಗುತ್ತದೆ. ಆದರೆ ನಮಗೆ ಯಾರು ತಂದು ಕೊಡುತ್ತಾರೆ ? "

" ಬೇಡಿದರೆ ಬೇಕಾದವರು ತಂದುಕೊಡುತ್ತಾರೆ ! "

" ಅಂತೂ ಬೇಡಬೇಕು ! "

" ಬೇಡದೆ ಬಯಕೆ ಹೇಗೆ ಗೊತ್ತಾಗಬೇಕು ? ನಿನಗೆ ಬೇಕಾಗಿದ್ದರೆ ಹೇಳು, ತಂದುಕೊಡುತ್ತೇನೆ. "

" ನೀರು ಆಳವಾಗಿಲ್ಲವೆ ? "

" ಆಳವಿದ್ದರೇನಾಯಿತು ? ನನಗೆ ಈಜು ಬರುವುದಿಲ್ಲವೆ ? ಈಕೆಯನ್ನು

ಕೇಳು, ಎಷ್ಟು ಸಲ ತಂದು ಕೊಟ್ಟಿದ್ದೇನೆ."

"ಈಗ ಬೇಡ. ನಾಳೆ ಬೆಳಿಗ್ಗೆ ತರುವಿಯಂತೆ. ನಾಳೆಯ ಪೂಜೆಗೂ ಆಗುತ್ತದೆ."

ಹಿರಿಯರೆಲ್ಲರೂ ಬರುವ ಸುಮಾರಿಗೆ ಹೊತ್ತು ಮುಳುಗಿತ್ತು. ಚತುರ್ದಶಿಯ, ಬೆಳುದಿಂಗಳು ನೋಡಿದತ್ತೆಲ್ಲ ಅರಳುವುದರಲ್ಲಿತ್ತು. ವತ್ಸಲೆ ಆ ದಿನದ ಪ್ರತಿಯೊಂದು ಕ್ಷಣವನ್ನು, ಸುತ್ತಿನದರಲ್ಲಿಯ ಪ್ರತಿಯೊಂದು ಅಂಶವನ್ನು ಸುಖವಾಗಿ ಅನುಭವಿಸುತ್ತಿದ್ದಳು. ಸಿದ್ದಪ್ಪ ಮನೆಯನ್ನು ಸಿದ್ಧವಾಗಿಸಿಯೇ ಇಟ್ಟಿದ್ದ. ಬಂಡಿಯಿಂದಿಳಿದು ಕಮಲಮ್ಮನವರು ಶಾಸ್ತ್ರಿಗಳ ಹೆಂಡತಿಗೆ ಆಸುಪಾಸಿನ ಜಾಗಗಳೆಲ್ಲವನ್ನೂ ತೋರಿಸಿದರು. ಸಂಜೆಯ ಅಡಿಗೆಯನ್ನು ಮಾಡಬೇಕಿರಲಿಲ್ಲ. ಎಲ್ಲವನ್ನೂ ಸಿದ್ಧವಾಗಿಸಿಕೊಂಡೇ ಬಂದಿದ್ದರಾದ್ದರಿಂದ ಮನೆಯೆದುರಿನಲ್ಲಿಯ ಬಯಲಲ್ಲಿ ಹಾಸಿಟ್ಟ ಗುಡಾರಗಳ ಮೇಲೆ ಎಲ್ಲರೂ ಕುಳಿತು ಹರಟೆಗೆ ತೊಡಗಿದರು. ಶಾಸ್ತ್ರಿಗಳು ಕೊಳದ ದಂಡೆಯಲ್ಲಿ ತಮ್ಮ ಸಂಧ್ಯಾವಂದನೆಯನ್ನು ಸಲ್ಲಿಸುತ್ತಿದ್ದರು. ಅವರು ಹಿಂದಿರುಗಿ ಬಂದಾಗಲೂ ಹರಟೆ ನಡೆದೇ ಇತ್ತು. ವತ್ಸಲೆಯ ದನಿಯೇ ಎಲ್ಲರಿಗಿಂತಲೂ ಎತ್ತರವಾಗಿ ಕೇಳಬರುತ್ತಿತ್ತು. ಆಕೆಯ ನಗೆಯೂ ಅಷ್ಟೇ. ಅಕ್ಕರೆಯಿಂದ ಬೆಳೆದ ಮಗಳಲ್ಲವೆ? ಆದರೆ ಅದಕ್ಕೂ ಹೆಚ್ಚಾಗಿ ಆಕೆಯ ಹೃದಯದಲ್ಲಿ ಅಂದು ಸಾಯಂಕಾಲ ಚೆಲ್ಲಾಟ ವಾಡುತ್ತಿದ್ದ ಸುಮಧುರ ಭಾವನೆಗಳಿಗೆ ಬಾಯಿ ಬಂದ ಹಾಗಿತ್ತು. ಆಕೆ ಏನೇನು ಚಿಂತಿಸುತ್ತಿದ್ದಳೊ! ಅಥವಾ ಗೋಪಿಯ ಸಾನ್ನಿಧ್ಯ ಆಕೆಯನ್ನು ಅಷ್ಟೊಂದು ಉತ್ತೇಜಿಸಿತ್ತೊ!

ಶಾಸ್ತ್ರಿಗಳು ಫಲಾಹಾರವನ್ನು ಮುಗಿಯಿಸಿ ಒಂದರ್ಧ ಗಂಟೆ ಸಾರ್ವತ್ರಿಕವಾದ ಸಲ್ಲಾಪಗಳಲ್ಲಿ ಭಾಗವಹಿಸಿ ವಿಶ್ರಮಿಸಿದರು. ಆ ರಾತ್ರಿಯ ಕಡು ಬೆಡಗಿನಲ್ಲಿ ಶಾಂತಳೊಡನೆ ಒಂದರ್ಧ ಗಂಟೆ ಸರಸವಾಡಬೇಕೆಂಬ ಗೋಪಿಯ ಬಯಕೆ ಬಯಕೆಯಾಗಿಯೆ ಉಳಿಯಿತು–ವತ್ಸಲೆಯಿಂದಾಗಿ. ಆಕೆ ಗೋಪಿಯ ಬೆನ್ನು ಬಿಡಲೇ ಇಲ್ಲ. ಶಾಂತಳಕಿಂತಲೂ ಹೆಚ್ಚಾಗಿ ಗೋಪಿಯ ಹತ್ತಿರದಲ್ಲಿ ಆಕೆಯೆ ಇರುತ್ತಿದ್ದಳು. ಶಾಂತಳಿಗೆ ಶಾಲೀನತೆ, ವತ್ಸಲೆಗೆ ಯಾವ ಆತಂಕವೂ ಇರಲಿಲ್ಲ. ನಡುರಾತ್ರಿಯವರೆಗೆ ಕಲ್ಲುಕಟ್ಟೆಯ ಮೇಲೆ ಕುಳಿತು ಹಿಂದಿರುಗಿದರು. ಹಿರಿಯರು ಯಾವಾಗಲೊ ನಿದ್ರೆ ಹೋದಹಾಗಿತ್ತು.

* * *

ಮರುದಿನ ಬೆಳಗಿನ ಹತ್ತು ಗಂಟೆಯ ಸಮಯ. ಬಿಸಿಲು ಬಲಿಯುತ್ತಿತ್ತು. ಶಾಸ್ತ್ರಿಗಳ ಹೆಂಡತಿ ಅಡುಗೆಯಲ್ಲಿ ತೊಡಗಿದ್ದರು ಕಮಲಮ್ಮನವರು ಅದು ಇದು ಎಂದು ಮೇಲ್ವಿಚಾರಣೆಯಲ್ಲಿದ್ದರು. ಶಾಸ್ತ್ರಿಗಳು ಇನ್ನು ನಡೆಯಬೇಕಿದ್ದ ಪೂಜೆಯ ಸಿದ್ಧತೆಗಳಲ್ಲಿ— ಹೂವುಗರಿಕೆಗಳನ್ನು ಕಲೆಹಾಕುವುದರಲ್ಲಿ, ಎಳೆಬಾಳೆಯ ಮರಿಗಳನ್ನು ಕಟ್ಟಿ ಅರ್ಚನೆಗೆ ಮಂಟಪವನ್ನು ಹತ್ತಿರದಲ್ಲಿಯೇ ಇದ್ದ ಆಲದ ಮರದಡಿಯಲ್ಲಿ ಸಿದ್ಧಗೊಳಿಸುತ್ತಿದ್ದರು. ರಾಯರು ಆಚೆಯ ಕೋಟದಲ್ಲಿ ಬಿತ್ತಿಗೆಯನ್ನು ಕುರಿತು ಮಾತನಾಡುತ್ತಿದ್ದ ಹಾಗಿತ್ತು. ಗೋಪಿ-ಶಾಂತಾ-ವತ್ಸಲೆಯರು ಮುಂಜಾನೆಯ ಫಲಾಹಾರವನ್ನು ಮುಗಿಯಿಸಿಕೊಂಡು ಅತ್ತಿತ್ತ ಅಡ್ಡಾಡಿಕೊಂಡು ಬರುತ್ತೇವೆಂದು ಹೊರಟುಹೋಗಿದ್ದರು.

ಬಿಸಿಲು ಬಲಿಯುತ್ತಿದ್ದ ಹಾಗೆ ಮೂವರೂ ಕೆರೆಯ ಆಚೆಯ ದಂಡೆಗೆ ಬಂದು ಕಲ್ಲುಕಟ್ಟೆಯ ಹತ್ತಿರ ನಿಂತು ಅರಳಿನಿಂತ ನೂರಾರು ಕಮಲಗಳನ್ನು ನೋಡುತ್ತಿದ್ದರು. "ನೋಡಿದಿರಾ ನಮ್ಮ ಚೆಲುವನ್ನು ? ನಮ್ಮ ಈ ಚೆಲುವು ಮಾನವ ಪ್ರಪಂಚಕ್ಕೆಲ್ಲಿಂದ ಬಂದೀತು ? ನಾವು ಬೇರೆ, ನೀವು ಬೇರೆ" ಎಂದು ಸಾರಿ ಹೇಳುತ್ತಿರುವಂತೆ ಕೆರೆಯ ಮಧ್ಯದಲ್ಲಿ ಕಮಲಗಳು ಮೆರೆಯುತ್ತಿದ್ದವು. ಅವನ್ನು ಹೊಳೆಯುವ ಆ ಬಿಸಿಲ ಬೆಳಕಿನಲ್ಲಿ ನೋಡಿ ಗೋಪಿಯ ಅಂತರಂಗ ತಣಿಯಿತು. ಮುನ್ನಾದಿನ ವತ್ಸಲೆಗೆ ತಾನು ಕೊಟ್ಟ ಮಾತಿನ ನೆನಪಾಯಿತು. ಆದರೆ ಅಪ್ಸರಿಯ ಸೊಬಗನ್ನು ಬೀರುತ್ತ ನಿಂತ ಆ ಅರಳಿದ ಹೂವುಗಳನ್ನು ಮುಟ್ಟುವ ಮನಸ್ಸಾಗಲಿಲ್ಲ. ಅವು ಹಾಗೆಯೆ ನಿಂತಿರಬೇಕು; ತಾನು ನೋಡುತ್ತಲೇ ಇರಬೇಕು; ಯಾವುದೂ ಪ್ರಪಂಚದ ಕೊನೆಯವರೆಗೂ ಬದಲಾಗದೆ ಹಾಗೆಯೆ ಉಳಿಯಬೇಕು, ಎಂದು ಬಯಸುತ್ತಿದ್ದ. ಆದರೆ ಪ್ರಪಂಚ ಒಂದು ಕ್ಷಣದ ಮಟ್ಟಿಗಾದರೂ ಇದ್ದ ಹಾಗೆಯೆ ನಿಲ್ಲುವದು ಸಾಧ್ಯವೆ ? ಹಾಗೆ ನಿಲ್ಲುವದು ಅಸಾಧ್ಯವಿದ್ದಷ್ಟು ಕ್ರಮವಿರುದ್ಧ, ಅಲ್ಲವೆ ?.... ನೋಡುತ್ತಿದ್ದ ಹಾಗೆ ಗೋಪಿ ಯೋಚಿಸುತ್ತಿದ್ದ. "ಇಷ್ಟು ಸೊಗಸಾಗಿ ಬೆಳೆದು ನಿಂತ ಸೊಬಗನ್ನು ನನ್ನ ಕೈಯಿಂದ ಹಾಳು ಮಾಡಲೆ ?" ಎಂದು. ಕಮಲಗಳು ಹೇಳುತ್ತಿದ್ದ ಹಾಗಿತ್ತು. "ಬೇಡ, ನಮ್ಮ ಹತ್ತಿರಕ್ಕೆ ಬರಬೇಡ. ನಮ್ಮನ್ನು ಕೊಲ್ಲಬೇಡ. ನೀನು ಅಲ್ಲಿಯೆ ಇರು. ನಾವು ಇಲ್ಲಿಯೇ ಇರುತ್ತೇವೆ" ಎಂದು. ಕೊನೆಗೆಂದುಕೊಂಡ. "ನೂರಾರು ಕಮಲಗಳು ಬೆಳೆದಿವೆ. ಅದರಲ್ಲಿಂದ ನಾಲ್ಕೆಂಟು

ಕಿತ್ತುತಂದರೆ ಅಲ್ಲಿ ಕಡಿಮೆಯಾಗುತ್ತದೆಯೆ ? ವತ್ಸಲೆ ಆಸೆಪಟ್ಟು ಹೇಳಿರಲಿಲ್ಲವೆ ? ಆಕೆಯ ಹಿರಿಯಾಸೆಯನ್ನೇ ಈಡೇರಿಸದ ತಾನು ಈ ಒಂದು ಸಣ್ಣ ಮಾತನ್ನು ನಡಸಬಾರದೆ ? ಇದು ಯಾವ ದೊಡ್ಡ ಮಾತು ? " ಎಂದು ವತ್ಸಲೆಯನ್ನು ಕೇಳಿದ

" ಕಮಲ ಬೇಕು ಎಂದಿದ್ದೆಯಲ್ಲವೆ ನಿನ್ನೆ ? ತಂದು ಕೊಡಲಾ ? "

" ಯಾತಕ್ಕೆ ಬಿಡು. ಕೊಡುವೆ ಎಂದದ್ದು ಕೊಟ್ಟಕಿಂತಲೂ ಹೆಚ್ಚು."

" ಸರಿ. ಈಗ ಹೀಗೆ ಹೇಳಿ ಆಮೇಲೆ ನೀನೆಂದು ತಂದುಕೊಟ್ಟಿದ್ದೆ ? ಬರೀ ಮಾತು ನಿನ್ನದು ಎನ್ನುತ್ತೀ. ತಂದೇ ಬಿಡುತ್ತೇನೆ. ಅದಕ್ಕೆಷ್ಟು ಹೊತ್ತಾಗುತ್ತದೆ ? ಪೂಜೆಗೂ ಆಯಿತು."

ಎಂದವನೆ ನೀರಿಗಿಳಿದ. ಇಳಿಯುತ್ತಿರುವಾಗಲೆ ಹೇಳಿದ.

" ನೀವಿಬ್ಬರೂ ಆಚೆಯ ದಡಕ್ಕೆ ಮನೆಯ ಹತ್ತಿರದ ಕಟ್ಟೆಗೆ ಬನ್ನಿರಿ. ನಾನು ಅಲ್ಲಿಗೆ ಬರುತ್ತೇನೆ. ಎಂದರೆ ಬಟ್ಟೆ ಬದಲಾಯಿಸಲಿಕ್ಕೆ ಅನುಕೂಲ."

ಎಂದು ಮುಂದೆ ಈಜುಬಿದ್ದ. ಏರುತ್ತಿದ್ದ ಆ ಬಿಸಿಲಲ್ಲಿ ನೀರಿನ ಸ್ಪರ್ಶ ಸುಖಶೀತಲವಾಗಿತ್ತು. ನೀರಲ್ಲಿ ಕೈಯಾಡಿಸುತ್ತ ನಿಧಾನವಾಗಿ ಅಲೆಗಳೊಡನೆ ಆಟವಾಡುತ್ತಿದ್ದ ಹಾಗೆ ಮುಂದಕ್ಕೆ ಸಾಗುತ್ತಿದ್ದಾಗ " ಏನು ವಿಚಿತ್ರ ಈ ನೀರು ಎಂದರೆ ? ಆದಿಸೃಷ್ಟಿಯ ಮಾಯೆ ಇದರಲ್ಲಿದೆ. ಎಲ್ಲಕ್ಕೂ ಮೊದಲು ಇದು ಸೃಷ್ಟಿಯಾದ ಹಾಗೆ ಎಲ್ಲದರ ಕೊನೆಯೂ ಇದರಲ್ಲಿಯೇ ಎಂದು ಹೇಳುತ್ತಾರೆ. ಈ ನೀರು ಅನಾದ್ಯನಂತವಲ್ಲವೆ ? " ಈಜು ಬಿದ್ದಾಗ ಕೆರೆಯ ನೀರು ಕಣ್ಣೆದುರು ಅನಾದ್ಯನಂತವಾಗಿಯೇ ಕಾಣುತ್ತಿತ್ತು. ಕೆರೆಯ ದಂಡೆಗುಂಟ ಶಾಂತಾ ವತ್ಸಲೆಯರು ಮಾತನಾಡುತ್ತ ಮನೆಯೆಡೆಗೆ ಸಾಗಿದ್ದರು. ಗೋಪಿ ಕಮಲದ ಬಳ್ಳಿಯ ಹತ್ತಿರ ಬಂದ. ಮುಂಗಡೆಯಲ್ಲಿ ಹೂವುಗಳು ಕಡಿಮೆ. ಆಚೆ ಕಡೆಯಲ್ಲಿ ಗುಂಪುಗಟ್ಟಿ ನಿಂತಿದ್ದವು. ಅಲ್ಲಿಂದಲೇ ಕಿತ್ತುಕೊಳ್ಳುವುದೆಂದು ಆ ಕಡೆಗೆ ಸಾಗಿದ. ಮುಂದೆ ಸಾಗಿದ ಹಾಗೆ ಬಳ್ಳಿ ನಿಬಿಡವಾಗಿದ್ದ ಹಾಗಿತ್ತು. ಮುಖಕ್ಕೆ ಎದುರಾಗಿ ಬರುತ್ತಿದ್ದ ದೊಡ್ಡ ದೊಡ್ಡ ಎಲೆಗಳನ್ನು ಎಡಗೈಯಿಂದ ಬದಿಗೆ ಸರಿಸಿ ನಡುವೆ ಬಂದಿದ್ದ. ಕೈಚಾಚಿ ಒಂದೆರಡು ಕಮಲಗಳನ್ನು ಕಿತ್ತುಕೊಂಡ. ಕಿತ್ತುಕೊಳ್ಳುವುದು ಅಷ್ಟೇನೂ ಸುಲಭಸಾಧ್ಯವಾಗಿ ಕಾಣಲಿಲ್ಲ. ಮೂರನೆಯ ಕಮಲವನ್ನು ಕಿತ್ತುವುದರಲ್ಲಿದ್ದ. ಕಾಲಿಗೆ ಏನೋ ತೊಡಕಿಕೊಂಡ ಹಾಗೆನಿ

ಸಿತು. ಜೋರಾಗಿ ಬಲಗೈಯನ್ನು ಬೀಸಿ ಮುಂದಕ್ಕೆ ಸರಿಯಬೇಕೆಂದ. ಕಾಲಿಗೆ ಸಿಕ್ಕ ಬಳ್ಳಿ ಬಲವಾಗಿ ಹಿಂದಕ್ಕೆಳೆಯಿತು. ಆ ಎಳೆತಕ್ಕೆ ಗೋಪಿಯ ಎಡಗೈಯಲ್ಲಿಯ ಕಮಲಗಳು ಕೈಬಿಟ್ಟುವು. ಒಮ್ಮೆ ತಾನಾಗಿಯೆ ಮುಣುಗು ಹಾಕಿ ಬಲಗೈಯಿಂದ ಕಾಲಿಗೆ ಸಿಕ್ಕ ಬಳ್ಳಿಯನ್ನು ಬಿಡಿಸಬೇಕೆಂದು ನೀರ ಒಳಕ್ಕೆ ಹೋದವನ ಕೈಯೂ ಬಳ್ಳಿಯಲ್ಲಿ ಎಲ್ಲಾದರೂ ಸಿಲುಕಿರಬೇಕು—

ಗೋಪಿ ಕಮಲಗಳನ್ನು ಕಿತ್ತುತ್ತಿದ್ದಾಗ ಶಾಂತಾ ಆತನನ್ನು ನೋಡುತ್ತಲೇ ಇದ್ದಳು. ಆತ ಮುಂದೆ ಮುಂದೆ ಸರಿದು ಮತ್ತೆರಡನ್ನು ಕಿತ್ತಿದ್ದನ್ನು ನೋಡಿದ್ದಳು. ಆತ ನೀರಲ್ಲಿ ಮುಳುಗು ಹಾಕಿದ್ದನ್ನು ನೋಡಿದ್ದಳು. ಆತ ನೀರಲ್ಲಿ ಮುಳುಗು ಹಾಕಿದ್ದನ್ನು ತಡೆದ ಹೆಜ್ಜೆಯೊಡನೆ ತಡೆದು ನಿಂತ ಹೃದಯದಿಂದೆಂಬಂತೆ ನೋಡಿದ್ದಳು. ಆತ ಮೇಲಕ್ಕೆ ಬರುವುದನ್ನೇ ಕಾಯುತ್ತಿದ್ದಳು.

ಒಂದು ಕ್ಷಣ, ಎರಡು ಕ್ಷಣ, ಮೂರು ಕ್ಷಣ, ಗೋಪಿ ಮೇಲಕ್ಕೆ ಬರಲಿಲ್ಲ.

ಶಾಂತಾ ವತ್ಸಲೆಯರು ಗಾಬರಿಯಾಗಿ ನೋಡುತ್ತಲೇ ಇದ್ದರು.

ಒಂದು ಸಲ ನೀರು ಬಲವಾಗಿ ಅಲುಗಾಡಿತು. ಗೋಪಿಯ ತಲೆ ನೀರ ಮೇಲಕ್ಕೆ ಕಾಣಿಸಿಕೊಂಡಿತು. ಆದರೆ ಮೇಲಕ್ಕೆ ಬಂದದ್ದು ಒಂದು ಅರೆಕ್ಷಣವೂ ಇರಲಿಕ್ಕಿಲ್ಲ. ಆ ಅರೆಕ್ಷಣದಲ್ಲಿಯೆ ಗೋಪಿ ಅತ್ತಿತ್ತ ನೋಡಿಕೊಂಡು ಗಂಟಲು ಹರಿಯುವ ಹಾಗೆ, ಎದೆ ಬಿರಿಯುವ ಹಾಗೆ "ಶಾಂತಾ— " ಎಂದು ಗಟ್ಟಿಯಾಗಿ ಚೀರಿದ. ಮರುಕ್ಷಣಕ್ಕೆ ಮತ್ತೆ ನೀರಿನಲ್ಲಿ ಮುಳುಗಿದ.

ವತ್ಸಲೆ ದಿಗ್ಭ್ರಾಂತಳಾದಳು. ಶಾಂತಾ ಕಣ್ಣು ಮುಚ್ಚಿಕೊಂಡು ಎರಡೂ ಕೈಗಳಿಂದ "ಗೋಪೀ—" ಎಂದು ಗಟ್ಟಿಯಾಗಿ ಚೀರಿ ನೆಲಕ್ಕೆ ಬಿದ್ದುಬಿಟ್ಟಳು. ವತ್ಸಲೆ ಗಟ್ಟಿಯಾಗಿ ಅರಚಿಕೊಳ್ಳುತ್ತಿದ್ದಳು.

"ಸಿದ್ದಪ್ಪಾ—ಶಾಸ್ತ್ರಿಗಳೆ—ಮಾವಯ್ಯಾ— ಅಯ್ಯೊ—ಅಯ್ಯೊ— "

ಗೋಪಿ ಮೇಲಕ್ಕೆ ಬರಲಿಲ್ಲ. ವತ್ಸಲೆ ದಿಕ್ಕುಕೆಟ್ಟು ಮನೆಯ ಕಡೆಗೆ ಚೀರುತ್ತ ಅರಚುತ್ತ ಓಡಿದಳು. ಆಲದ ಮರದಡಿಯಲ್ಲಿದ್ದ ಶಾಸ್ತ್ರಿಗಳು ಓಡುತ್ತ ಬಂದರು. "ಅಯ್ಯೊ-ಘಾತವಾಯಿತು" ಎಂದವರೆ ನೀರಿಗೆ ಧುಮುಕಿದರು. ಕಮಲಮ್ಮನವರು ಶಾಸ್ತ್ರಿಗಳ ಹೆಂಡತಿ ಎದೆಎದೆ ಬಡಿದುಕೊಂಡು ಒರಲಿದರು. ಗೋಪಿ ಮೇಲಕ್ಕೆ ಬರಲಿಲ್ಲ. ವತ್ಸಲೆ ಹುಚ್ಚಿಯಂತೆ ಹರಿದಾಡಿದಳು. ಒಂದೆರಡು ನಿಮಿಷಗಳಲ್ಲಿ ರಾಯರು, ಸಿದ್ದಪ್ಪ, ಇನ್ನು ಇಬ್ಬರು ಆಳುಗಳು ನೀರಿಗೆ

ದುಮುಕಿದರು. ಎತ್ತ ನೋಡಿದತ್ತ ಕೋಲಾಹಲ, ಆರ್ತಸ್ವರ, ಆಕ್ರೋಶ. ಆದರೆ ಗೋಪಿಗೆ ಯಾವುದೂ ಕೇಳಬರುತ್ತಿರಲಿಲ್ಲ. ನೀರ ಹಾಸಿಗೆಯ ಮೇಲೆ ನೀರ ಹೊದ್ದಿಕೆಯನ್ನು ಹೊದ್ದು ಕಮಲಗಳ ಮಂಟಪದಲ್ಲಿ ಮಲಗಿದ್ದ. ಮಲಗಿದವ ಮೇಲಕ್ಕೆ ಬರುತ್ತಾನೆಯೆ ? ಗೋಪಿ ಮೇಲಕ್ಕೆ ಬರಲೇ ಇಲ್ಲ....

ಮುಂದೆ ನಡೆದುದನ್ನೆಲ್ಲ ಹೇಳಬೇಕೆ ? ಹೇಳಲೇಬೇಕಾದುದಿಲ್ಲ. ಮೂರು ನಾಲ್ಕು ಜನ ಸುಮಾರು ಅರ್ಧ ಗಂಟೆ ಪರಿಶ್ರಮಪಟ್ಟಾಗ ಗೋಪಿಯ ದೇಹ ಮೇಲಕ್ಕೆ ಬಂದಿತು. ಯಾವ ಪ್ರಥಮೋಪಾಯವೂ ಉಪಯೋಗವಾಗಲಿಲ್ಲ. ಅಂಥದರಲ್ಲಿ ಯಾರಿಗೆ ಯಾರು ಸಮಾಧಾನ ಹೇಳಬೇಕು ? ಮೊದಲೆ ಎಚ್ಚರ ತಪ್ಪಿ ಬಿದ್ದಿದ್ದ ಶಾಂತಳನ್ನು ಯಾರೊ ನೋಡಿಕೊಳ್ಳುತ್ತಿದ್ದರು. ಗೋಪಿಯ ದೇಹವನ್ನು ದಂಡೆಯವರೆಗೆ ಸಾಗಿಸಿ ಆ ಕಲ್ಲು ಕಟ್ಟೆಯ ಮೇಲಿರಿಸಿದಾಗ ಶಾಸ್ತ್ರಿಗಳಿಗೆ ತಡೆಯದಾಯಿತು. ಆ ಅರೆದೆರೆದ ಕಣ್ಣುಗಳನ್ನು ನಿರ್ವಿಕಾರವಾದ ಮುಖವನ್ನು ಅವರಿಂದ ನೋಡುವುದಾಗಲಿಲ್ಲ. " ಅಯ್ಯೊ " ಎಂದು ನರಳಿದರು. ಮರುಕ್ಷಣದಲ್ಲಿ ಆ ಮುಖವನ್ನು ಮುಚ್ಚಿದರು. ಮುಖವನ್ನು ಮುಚ್ಚುತ್ತಿದ್ದಾಗ ಶಾಂತಾ ಚಿಟ್ಟೆಂದು ಚೀರಿ ಮತ್ತೆ ಮೂರ್ಛೆ ಹೋದಳು. ರಾಯರನ್ನು, ಕಮಲಮ್ಮನವರನ್ನು, ಶಾಸ್ತ್ರಿಗಳ ಹೆಂಡತಿಯನ್ನು ಸಮಾಧಾನ ಹೇಳುವುದೇ ಕಷ್ಟವಾಗಿತ್ತು. ಹೇಳಲಾದರೂ ಅಲ್ಲಿ ಯಾರಿದ್ದರು? ಮುಂದಿನ ಎಲ್ಲ ಕೆಲಸಗಳಿಗೂ ಶಾಸ್ತ್ರಿಗಳೇ ಮುಂದಾಗಬೇಕಾಯಿತು....

ಅಲ್ಲಿಗೆ ಗೋಪಿಯ ಕಥೆ ಮುಗಿಯಿತು. ಆ ಚೆಲುವಿನ ಬೀಡೇ ಆತನಿಗೆ ಚರಮ ಸಮಾಧಿಯಾಯಿತು. ರಂಗಧೂಳಿಯ ರಂಗಮಂಟಪವೇ ಆತನ ಸ್ಮಶಾನವಾಯಿತು. ಗೋಪಿ ಏನಾದ ? ಎಲ್ಲಿಗೆ ಹೋದ ? ಯಾಕೆ ಹೋದ ? ಯಾರು ಹೇಳಬೇಕು ?

ಎಲ್ಲವನ್ನು ಪೂರೈಸಿಕೊಂಡು ಶಾಸ್ತ್ರಿಗಳು ರಾಯರೊಡನೆ ಹಿಂದಿರುಗಬೇಕಾದರೆ ಇಳಿಹೊತ್ತಾಗಿತ್ತು. ಅಷ್ಟು ಹೊತ್ತಿಗೆ ಆಗಲೆ ಊರಲ್ಲಿಂದ ಜನ ಬರುವುದಕ್ಕಾರಂಭಿಸಿತ್ತು. ಬಂದು ಮಾತನಾಡಿಸುವವರು ಯಾವ ಸಮಾಧಾನದ ಮಾತುಗಳನ್ನು ಹೇಳಿದರೂ ಅದರಿಂದ ದುಃಖ ಉಕ್ಕಿ ಬರುತ್ತಿತ್ತಲ್ಲದೆ ಕಡಿಮೆಯಾಗುತ್ತಿರಲಿಲ್ಲ. ಶಾಸ್ತ್ರಿಗಳ ಹೆಂಡತಿ, ಕಮಲಮ್ಮ ನೆಲಕ್ಕೆ ಬಿದ್ದಿದ್ದರು. ಶಾಂತಾ ಗೋಡೆಗೆ ಆತುಕೊಂಡು ಕುಳಿತವಳು ಮಿಸುಕಿರಲಿಲ್ಲ. ಕಣ್ಣು

ಗಳನ್ನಾದರೂ ಆಕೆ ಪಿಳುಕುಸುತ್ತಿದ್ದಳೊ ಇಲ್ಲವೊ ! ಉಳಿದವರು ಆಗೀಗ ಮಾಡುತ್ತಿದ್ದ ಆಕ್ರೋಶ ಆಕೆಯಲ್ಲಿ ಇರಲಿಲ್ಲ. ಎಂಥ ಶಿಲಾಶಾಂತತೆಯೊ ಅದು ! ಆಕೆಯ ಮುಖವನ್ನು ನೋಡುವ ಧೈರ್ಯವೆ ಶಾಸ್ತ್ರಿಗಳಿಗಿರಲಿಲ್ಲ. ರಾಯರು ಮುಂದಿನ ತೊಟ್ಟಿಯಲ್ಲಿ ಕುಳಿತಿದ್ದರು—ಚಿಂತಾಮೂರ್ತಿಯಾಗಿ. ಕಣ್ಣೀರು ಹರಿಯುತ್ತಿತ್ತು. ಶೂನ್ಯದೃಷ್ಟಿಯಿಂದ ಕೊಳದ ನೀರನ್ನು ದಿಟ್ಟಿಸುತ್ತಿದ್ದರು. ಇಷ್ಟಕ್ಕಾಗಿಯೆ ಇದನ್ನು ನಾನು ಕಟ್ಟಿಸಿದೆನೆ ? ಎಂದು ನೂರು ಬಾರಿ ಕಣ್ಣೀರು ಹಾಕಿದರು.

ಹೇಳುವ ಸಮಾಧಾನವನ್ನು ಶಾಸ್ತ್ರಿಗಳು ಹತ್ತುಬಾರಿ ಹೇಳಿದ್ದರು. ಮಾತನಾಡಿಯಾದರೂ ಏನು ? ಯಾವ ಮಾತಿನಿಂದ ಈ ದುಃಖಕ್ಕೆ ಸಮಾಧಾನ ಬಂದೀತು ? ಎಂದು ಸುಮ್ಮನಾಗಿಯೆ ಇದ್ದರು. ಬೆಳಗಿನಲ್ಲಿ ತಾವು ಕಟ್ಟುತ್ತಿದ್ದ ಚಪ್ಪರದ ಮಂಟಪ, ಪೂಜಾ ಸಾಮಗ್ರಿಗಳೆಲ್ಲವೂ ಹಾಗೆಯೆ ಬಿದ್ದಿದ್ದವು. ಅವುಗಳನ್ನು ನೋಡುವುದಾಗಲಿಲ್ಲ.

ಸಾಯಂಕಾಲದ ಸುಮಾರಿಗೆ ಊರವರೆಲ್ಲರೂ ಬಂದಹಾಗಿತ್ತು. ಯಾರು ಎಷ್ಟು ಹೇಳಿದರೂ ರಾಯರು ಅಲ್ಲಿಂದ ಅಂದು ಕದಲಲು ಒಪ್ಪಲಿಲ್ಲ. ಕುಳಿತಲ್ಲಿಂದ ಅವರು ಏಳಲೇ ಇಲ್ಲ. " ಈ ಹೊತ್ತು ಹೊರಟರೆ ಏನು ? ಎಂದು ಹೊರಟರೆ ಏನು ?" ಎಂದು ಅಲ್ಲಿಂದ ಹೊರಡುವ ಯೋಚನೆಯನ್ನು ಮುಂದೂಡಿದರು. ಬಂದವರಲ್ಲಿಯೇ ಯಾರು ಯಾರೊ ನೀರು ಕಾಯಿಸಿ ಅಗತ್ಯವಾದ ಉಪಚಾರಗಳನ್ನು ಮಾಡಿದರು. ಆದರೆ ಯಾರಿಗೆ ಏನು ಬೇಕಿತ್ತು ?

ಮರುದಿನ ಮುಂಜಾನೆ ಏಳುವ ಹೊತ್ತಿಗೆ ಶಾಂತಾ ಮನೆಯಲ್ಲಿರಲಿಲ್ಲ.

ಮುಂಜಾವಿನಲ್ಲಿ ಹೊಸದೊಂದು ಕೋಲಾಹಲ. ಎಲ್ಲಿಗೆ ಹೋದಳು ? ಯಾವಾಗ ಹೋದಳು—ಯಾರಿಗೂ ಗೊತ್ತಿರಲಿಲ್ಲ. ಶಾಸ್ತ್ರಿಗಳ ಹೆಂಡತಿ ರಾತ್ರಿ ಆಕೆಯ ಹತ್ತಿರವೇ ಇದ್ದರು. ಆದರೆ ಯಾರಿಗೆ ಎಷ್ಟು ನಿದ್ರೆಯೊ, ಎಷ್ಟು ಎಚ್ಚರವೊ ? ನಡುರಾತ್ರಿಯಲ್ಲಿ ಅರೆನಿದ್ರೆ ಅರೆ ಎಚ್ಚರದಲ್ಲಿ ಏನೊ ಒಂದು ಸದ್ದಾದ ಹಾಗೆ ಶಾಸ್ತ್ರಿಗಳಿಗೆನಿಸಿತ್ತು. " ಯಾರವರು ? " ಎಂದು ಕೇಳಿಯೂ ಇದ್ದರು. ಆದರೆ ಯಾರಿಂದಲೂ ಉತ್ತರ ಬಂದಿರಲಿಲ್ಲ. ಸದ್ದೂ ಅಡಗಿತ್ತು. ಶಾಸ್ತ್ರಿಗಳು ಸುಮ್ಮನಾಗಿಬಿಟ್ಟಿದ್ದರು. ಮುಂದೆ ಯಾರಿಗೂ ಏನೂ ಗೊತ್ತಿರಲಿಲ್ಲ. ಬೆಳಗಾಗುವುದರಲ್ಲಿ ಆಕೆ ಇರಲಿಲ್ಲ. ಕೆರೆ, ನದಿ, ಕಾಡುಬೆಟ್ಟಗಳೆಲ್ಲವನ್ನೂ

ಹುಡುಕಿಯಾಯಿತು. ಶಾಂತಳ ಸುಳಿವೇ ಇರಲಿಲ್ಲ. ಹತ್ತು ದಿಕ್ಕಿನಲ್ಲಿ ಹತ್ತು ಜನ ಓಡಿದರು, ನೋಡಿದರು. ಎಲ್ಲಿಯೂ ಸಿಕ್ಕಲಿಲ್ಲ. ಬಿಸಿಲೇರಿತು. ನಡು ಮಧ್ಯಾಹ್ನವಾಯಿತು; ಬಿಸಿಲಿಳಿಯಿತು, ಸಂಜೆಯಾಯಿತು. ಶಾಂತಾ ಸಿಕ್ಕಲೇ ಇಲ್ಲ. ಶಾಸ್ತ್ರಿಗಳು ಕೈ ಚೆಲ್ಲಿ ಕುಳಿತರು. ಅವರ ಶಕ್ತಿಯೇ ಉಡುಗಿತು. ಶಾಂತಾ ಏನಾವಳೆಂಬುದು ಕೊನೆಯವರೆಗೂ ತಿಳಿಯಲಿಲ್ಲ....

ಮೂರನೆಯ ದಿನ ಸಾಯಂಕಾಲ ಸಿದ್ದಪ್ಪನ ಬಂಡಿ ಉಳಿದವರನ್ನು ಊರಿಗೆ ಕರೆದೊಯ್ಯಿತು. ಮೂರುದಿನದ ಕಾರ್ಯಕ್ರಮವೆಂದಲ್ಲವೆ ಅವರಿಲ್ಲ ಅಲ್ಲಿಗೆ ಬಂದದ್ದು ? ವೀಣೆಯನ್ನೆತ್ತಿ ಬಂಡಿಯಲ್ಲಿಡುವಾಗ ಶಾಸ್ತ್ರಿಗಳಿಗೆ ದುಃಖ ತಡೆಯದಾಗಿ ಈ ವೀಣೆ ಇನ್ನು ಯಾತಕ್ಕೆ ? ಇದೇ ಕೆರೆಯಲ್ಲಿ ಇದನ್ನು ಎಸೆದು ಬಿಡಲೆ ? ಎಂದುಕೊಂಡರು. ಆದರೆ ಮರುಕ್ಷಣದಲ್ಲಿಯೆ ಅಂದುಕೊಂಡರು. “ ಇದು ಶ್ರೀರಾಮಚಂದ್ರನ ವೀಣೆ; ಶಾಂತಾ ನುಡಿಸುತ್ತಿದ್ದಳು. ಇದರಿಂದಾಗಿಯೆ ಗೋಪಿ ಶಾಂತಳೆಡೆಗೆ ಬಂದಿದ್ದು. ಇದನ್ನು ಎಸೆದುಬಿಡುವುದೆ ? ಇದರಲ್ಲಿ ಶಾಂತಾ ಗೋಪಿಯರ ಜೀವನಗಳು ಅಡಕವಾಗಿವೆ. ಇದು ಪೂಜೆಗೆ ಅರ್ಹ ! ” ಎಂದು ಸಮಾಧಾನಹೇಳಿಕೊಂಡರು. ಹೊರಡುವಾಗ ಕೊನೆಯಾಗಿ ಎಂಬಂತೆ ರಂಗಧೂಳಿಯನ್ನು ನೋಡಿದರು.

ಕೆರೆಯ ನೀರು ನಿಂತ ಹಾಗೆಯೆ ನಿಂತಿತ್ತು. ಕಮಲಗಳು ಹಾಗೆಯೆ ನಿಂತಿದ್ದವು. ಆಚೆಯ ಕಡೆಯಲ್ಲಿಯ ಆಲದ-ತೆಂಗಿನಮರಗಳು ನಿಂತಹಾಗೆಯೆ ನಿಂತಿದ್ದವು. ಮನೆಯಾಚೆ ಮಾರ್ಕಂಡೇಯ, ಅದರಾಚೆ ಬೆಟ್ಟ, ಬೆಟ್ಟದಾಚೆ ಬಾನು ಯಾವುದೊಂದೂ ಅಣುಮಾತ್ರವೂ ಬದಲಾಗಿರಲಿಲ್ಲ. ಎಲ್ಲವೂ ಇದ್ದ ಹಾಗೆಯೆ ಇದ್ದಿತು. ಸೃಷ್ಟಿಯ ಆದಿಯಿಂದ ಪ್ರಳಯದವರೆಗೆ ಇವು ಹೀಗೆಯೆ ಇರತಕ್ಕವು, ಯಾರು ಬಂದರೇನು, ಯಾರು ಹೋದರೇನು ಎಂದು ಕೇಳುವಂತಿದ್ದವು.

* * *

ಈ ಮಾತಿಗೆ ಆರು ತಿಂಗಳು ಸಂದಿವೆ. ರಾಯರ, ಕಮಲಮ್ಮನವರ ದುಃಖದ ಉತ್ಕಟತೆ ಎಷ್ಟೋ ಕಡಿಮೆಯಾಗಿದೆ. ಆದರೆ ಈ ಆರು ತಿಂಗಳಲ್ಲಿ ರಾಯರು ಆಗಲೆ ಅರುವತ್ತು ವಯಸ್ಸನ್ನು ಕಂಡ ಹಾಗಿದೆ. ಮುಖದ ಮೇಲೆ ಚಿಂತೆವ್ಯಥೆಗಳು ಗೆರೆಗಳನ್ನು ಕೊರೆದಿವೆ. ಕಮಲಮ್ಮನವರ, ಶಾಸ್ತ್ರಿಗಳ ಹೆಂಡತಿಯ ಪಾಡನ್ನು ಅವರೇ ಬಲ್ಲರು. ಅವರಿಬ್ಬರ ಪಾಲಿಗೆ ಬದುಕು

ದುಃಖದ ಒರತೆಯಾಯಿತು. ಬಹುಮಟ್ಟಿಗೆ ಶಾಸ್ತ್ರಿಗಳಿಗಿದ್ದ, ಕೆಲಮಟ್ಟಿಗೆ ರಾಯರಿಗೆ ಸಿಕ್ಕುತ್ತಿದ್ದ ಬುದ್ಧಿಯ ಸಮಾಧಾನದಿಂದ ಆ ಎರಡು ಹೆಣ್ಣು ಜೀವಗಳು ಬಹಳ ದೂರವಾಗಿದ್ದವು....

ಅಂದು ಮಧ್ಯಾಹ್ನ ಶಾಸ್ತ್ರಿಗಳು ತದೇಕಚಿತ್ತರಾಗಿ ಓದುತ್ತಿದ್ದಾರೆ. ಎದುರಿನಲ್ಲಿ ಕುಳಿತು ರಾಯರು ಕೇಳುತ್ತಿದ್ದಾರೆ. ಶಾಸ್ತ್ರಿಗಳ ಪರಿಶುದ್ಧ ವಾಣಿ ತಿಳಿವಿನ ಆಶ್ವಾಸನವನ್ನು ಕೊಡುತ್ತಿದೆ. ಶಾಸ್ತ್ರಿಗಳು ಓದುತ್ತಲೇ ಇದ್ದರು.

"ಈಶ್ವರಸ್ತು ಪರ್ಜನ್ಯವದ್ದ್ರಷ್ಟವ್ಯಃ । ಯಥಾ ಹಿ ಪರ್ಜನ್ಯೋ ವ್ರೀಹಿಯವಾದಿಸೃಷ್ಟೌ ಸಾಧಾರಣಂ ಕಾರಣಂ ಭವತಿ, ವ್ರೀಹಿಯವಾದಿ ವೈಷಮ್ಯೇತು ತತ್ತದ್ಬೀಜಗತಾನ್ಯೇವಾಸಾಧಾರಣಾನಿ ಸಾಮರ್ಥ್ಯಾನಿ ಕಾರಣಾನಿ ಭವಂತಿ । ಏವಮೀಶ್ವರೋ ದೇವಮನುಷ್ಯಾದಿಸೃಷ್ಟೌ ಸಾಧಾರಣಂ ಕಾರಣಂ ಭವತಿ । ದೇವಮನುಷ್ಯಾದಿ ವೈಷಮ್ಯೇತು ತತ್ತಜ್ಜೀವಗತಾನ್ಯೇವಾಸಾಧಾರಣಾನಿ ಕರ್ಮಾಣಿ ಕಾರಣಾನಿ ಭವಂತಿ । ಏವಮೀಶ್ವರಃ ಸಾಪೇಕ್ಷತ್ವಾನ್ನ ವೈಷಮ್ಯನೈರ್ಘೃಣ್ಯಾಭ್ಯಾಂ ದುಷ್ಯತಿ— "